
# ವಸಂತಗಾನ

ತ್ರಿವೇಣಿ



894.814 3083
TRI N86
ಗ್ರಂಥ ಸ್ವಾಮ್ಯ ವಿಭಾಗ

# ವಸಂತಗಾನ

[illegible] COPY RIGHT [illegible]
[illegible] CENTRAL LIBRARY, [illegible]

ತ್ರಿವೇಣಿ

ತ್ರಿವೇಣಿ ಪಬ್ಲಿಕೇಷನ್ಸ್
ಚಾಮರಾಜಪುರಂ, ಮೈಸೂರು-4

"Vasanthagana", a Social Novel
by "TRIVENI" Published by Triveni Publications
Second Reprint 1986

*Copy Right :* ಮೀರಾ ಶಂಕರ್
೧೫೩೨, ಚಾಮರಾಜಪುರಂ, ಮೈಸೂರು-೪

ಮುದ್ರಕರು :
ಸುಗುಣ ಪ್ರಿಂಟರ್ಸ್, ಕೆ. ಜಿ. ಕೊಪ್ಪಲು
ಮೈಸೂರು-೫೭೦ ೦೦೪

# ಅರಿಕೆ

ವಸಂತಗಾನ ಸಿಹಿ ತಿಂಡಿಯಂತೆ : ಅತಿಯಾಗಿ ಸವಿದರೆ ಅಜೀರ್ಣ, ಅನಾಹುತ.

ವಸಂತ ಋತು ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುತ್ತದೆ. ನಿಜ. ಆದರೆ ವಸಂತಗಾನ ಪ್ರತಿ ವರ್ಷದ ವ್ಯವಹಾರವಾದರೆ ಅದು ಬುದ್ಧಿವಂತಿಕೆಯ ಲಕ್ಷಣವಲ್ಲ.

ಈ ಗಾನವನ್ನು ಹಿತವಾಗಿ, ಮಿತವಾಗಿ ಅನುಭವಿಸಿದ ದಂಪತಿಗಳ ಕಥೆ ಇದು.

ನನ್ನೀ ವಸಂತಗಾನ ಓದುಗರ ಪಾಲಿಗೆ ಹೇಮಂತಗಾನವಾಗದಿದ್ದರೆ ನನ್ನ ಪುಣ್ಯ.

ತ್ರಿವೇಣಿ

೧೧೫೩ ಚಾಮರಾಜಪುರಂ
ಮೈಸೂರು-೪

# ವಸಂತಗಾನ

ವಾಸು ಚಡಪಡಿಸುತ್ತಿದ್ದ. ಗಳಿಗೆಗೊಮ್ಮೆ ಎಡಗೈಗೆ ಕಟ್ಟಿದ್ದ ಗಡಿಯಾರದ ಕಡೆ ಕಣ್ಣು ಹೊರಳಿಸಿ ಒಂದು ಬಗೆಯ ಕಳವಳ, ಸಂಕಟದಿಂದ ಬಾಗಿಲಿನ ಕಡೆ ನೋಡುತ್ತಿದ್ದ. ಹೃದಯದಿಂದ ಬಾಯೊಳಗೆ ನುಗ್ಗಿ ಬಂದು ನಾಲಿಗೆಯ ತುದಿಯಲ್ಲಿ ಸೋರಲು ತವಕಿಸುತ್ತಿದ್ದ ಮಾತಿನ ಧಾರೆಯನ್ನು ಬಹಳ ಕಷ್ಟದಿಂದ ಹರಳೆಣ್ಣೆ ನುಂಗಿದಂತೆ ನುಂಗಿಕೊಳ್ಳುತ್ತಿದ್ದ. ಆಗಾಗ್ಗೆ ಮುಖದ ಮೇಲೆ ಮೂಡುತ್ತಿದ್ದ ಬೆವರಿನ ಹನಿಯನ್ನು ಕರವಸ್ತ್ರದಿಂದ ಒರೆಸುತ್ತಿದ್ದ.

ಒಳಗಿನಿಂದ ಬರುತ್ತಿದ್ದ ಸದ್ದನ್ನು ಕಾತರದಿಂದ ಆಲಿಸುತ್ತಿದ್ದ. ಅವನು ನಿರೀಕ್ಷಿಸುತ್ತಿದ್ದ ಸದ್ದು—ಅದಕ್ಕಾಗಿ ಅವನ ಕಿವಿಗಳು ಹಾತೊರೆಯುತ್ತಿದ್ದವು.

ಈಗ? ಇನ್ನೊಂದು ಗಳಿಗೆ?

ಊಹೂಂ. ವಾಸು ಖಿನ್ನಮುಖದಿಂದ ಗಡಿಯಾರದ ಕಡೆ ನೋಡಿದ.

ಯಾಕಿಷ್ಟು ತಡ?

ಅವನಿಗೆ ಯಾವುದೂ ಅರ್ಥವಾಗಲಿಲ್ಲ.

ತನ್ನ ಮನದೊಳಗಾಗುತ್ತಿದ್ದ ವಿಪ್ಲವವನ್ನು ಮಕ್ಕಳು ಕಹಿ ಔಷಧಿ ಕಾರಿಬಿಡುವಂತೆ ಕಾರುವ ಮನಸ್ಸಾಯಿತು ವಾಸುವಿಗೆ. ವಿಪ್ಲವದ ಪ್ರವಾಹ ಗಂಟಲಿನಲ್ಲಿ ಸಿಕ್ಕಿ ಏನೋ ಒಂದು ಬಗೆಯ ಅಧೈರ್ಯ ಅವನನ್ನು ಆವರಿಸಿತು. ಗಂಟಲಿನಲ್ಲಿ ಉಸಿರು ಸಿಕ್ಕಿಕೊಂಡಂತಾಗಿ ಅವನಿಗೆ ಕಣ್ಣಿನಲ್ಲಿ ನೀರು ಬರುವಂತಾಯಿತು.

ಕೊನೆಗೆ ವಾಸು ತನ್ನ ಉದ್ವೇಗವನ್ನು ಅಡಗಿಸಲಾರದೆ ಪಿಸುದನಿಯಲ್ಲಿ

"ಸರಳಾ"—ಎಂದ

ಒಳಗಿನಿಂದ ಸದ್ದು ಬರಲಿಲ್ಲ. ವಾಸು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಬೆಕ್ಕಿನಂತೆ ಒಳಗೆ ಪ್ರವೇಶಿಸಿದ.

ವಾಸುವಿನ ಮನೋರಮೆ ಸರಳಾ ಈಳಿಗೆಮಣೆಯ ಮೇಲೆ ಕುಳಿತಿದ್ದಳು. ಅವಳ ಮುಖ ಬಾಡಿ ಸೊರಗಿಹೋಗಿತ್ತು. ಅವಳ ಬಲಗೈನ ತೋರಬೆರಳಿನಿಂದ ರಕ್ತ ದಾರದ ಎಳೆಯಂತೆ ಹೊರಗೆ ಹರಿದು ಬರುತ್ತಿತ್ತು.

ವಾಸುವಿಗೆ ಈಗ ನಿಜವಾಗಿಯೂ ಗಾಬರಿಯಾಯಿತು

"ಏನಾಯಿತು ಸರಳಾ?"– ಎನ್ನುತ್ತಾ ಅವನು ಹೆಂಡತಿಯ ಬಳಿಗೆ ಧಾವಿಸಿ ಬಂದ.

"ಏನಿಲ್ಲ. ಕಾಯಿ ತುರಿಯುವಾಗ ಕೈಗೆ ಗಾಯವಾಯಿತು."

"ಒದ್ದೆ ಬಟ್ಟೆ ಕಟ್ಟಲೇ?"

"ಏನೂ ಬೇಡ, ಒಂದು ಗಳಿಗೆ ಬೆರಳು ಅದುಮಿ ಹಿಡಿದರೆ ರಕ್ತ ಬರುವುದು ನಿಂತುಹೋಗುತ್ತದೆ."

ವಾಸು ಧೈರ್ಯ ತಂದುಕೊಂಡು ಹೇಳಿದ "ನನಗೆ ಕಾಲೇಜಿಗೆ ಹೊತ್ತಾಗುತ್ತಾ ಬಂತು"

"ಅಯ್ಯೋ, ಅಡಿಗೆ ಆಗಿಹೋಯಿತು. ಸಾರಿಗೆ ಹುಳಿ ಕೊಂಚ ಕಿವುಚಿ ಹಾಕಿಬಿಡಿ ಕೈಗೆ ಗಾಯವಾಗಿರುವಾಗ ಹುಳಿ ಕಿವುಚಿದರೆ ಬೆರಳು ತುಂಬಾ ಉರಿಯುತ್ತೆ"—ಎಂದಳು ಸರಳಾ ಸಾವಕಾಶವಾಗಿ.

ಕಾಲೇಜಿಗಾಗಲೇ ಹೊತ್ತಾಗಿ ಹೋಗಿದ್ದುದರಿಂದ ವಾಸು ಅವಳು ಹೇಳಿದಂತೆ ಕೇಳಲೇಬೇಕಾಯಿತು.

"ಹುಣಿಸೇಹಣ್ಣಿನ ಡಬ್ಬ ಎಲ್ಲಿದೆ?"—ಎಂದ ವಾಸು-ಮನಸ್ಸಿನಲ್ಲೇ ಕುದಿಯುತ್ತಾ.

"ಬೀರುವಿನಲ್ಲಿದೆ ನೋಡಿ"

ವಾಸು ಬೀರುವಿನ ಬಾಗಿಲನ್ನು ತೆಗೆದ. ಅಲ್ಲಿ ಸಾಲಾಗಿರಿಸಿದ್ದ ಒಂದೇ ಮಾದರಿಯ ಡಬ್ಬಗಳನ್ನು ನೋಡಿ ಕಂಗೆಟ್ಟು ಮತ್ತೆ ಕೇಳಿದ

"ಯಾವ ಡಬ್ಬದಲ್ಲಿದೆ ಹಣ್ಣು ?"

"ನಿಮಗೆ ಓದೋಕೂ ಬರೋದಿಲ್ಲವೇ? ಡಬ್ಬದ ಮೇಲೆ ಅಚ್ಚಗನ್ನಡದಲ್ಲಿ 'ಹುಣಿಸೇಹಣ್ಣು' ಎಂದು ಬರೆದಿದೆ. ಆ ಡಬ್ಬದಿಂದ ಒಂದು ದಪ್ಪ ನಿಂಬೇಹಣ್ಣಿನ ಗಾತ್ರದ ಹುಣಿಸೇಹಣ್ಣು ತಗೊಂಡು ಅರ್ಧ ಚಟಾಕು ನೀರನ್ನು ಒಂದು ಪಾತ್ರೆಗೆ ಹಾಕಿಕೊಂಡು..."

ವಾಸು ಗಡಿಬಿಡಿಯಿಂದ ಡಬ್ಬ ತೆಗೆದು ಅದರೊಳಗೆ ಇಣುಕಿ ನೋಡಿ ಎರಡು ಬಾರಿ ಗಟ್ಟಿಯಾಗಿ ಸೀನಿ ಕೊಂಚ ರೇಗಿ ಹೇಳಿದ.

"ಹುಣಿಸೇ ಹಣ್ಣಿನ ಡಬ್ಬದಲ್ಲಿ ಮೆಣಸಿನಕಾಯಿದೆ. ಥೂ. ಘಾಟಿನಿಂದ ಸಾಕಾಯಿತು."

"ಹಾಗಾದರೆ 'ಮೆಣಸಿನಕಾಯಿ' ಎಂದು ಬರೆದಿರುವ ಡಬ್ಬದಲ್ಲಿ

ಹುಣಿಸೇ ಹಣ್ಣಿರಬೇಕು. ಬಹಳ ಸುಲಭವಾದ ತರ್ಕಶಾಸ್ತ್ರ ಇದು."

ವಾಸು ಮೆಣಸಿನ ಕಾಯಿಯ ಡಬ್ಬದಿಂದ ಹುಣಿಸೇಹಣ್ಣನ್ನು ತೆಗೆದು ಸರಳೆಯ ನಿರ್ದೇಶನದಂತೆ ಅದನ್ನು ಕಿವುಚಿ ಸಾರಿನ ಪಾತ್ರೆಯೊಳಗೆ ಸುರಿದ.

"ಇನ್ನಾದರೂ ಬಡಿಸೇ" ಎಂದ ವಾಸು.

"ಕೊಂಚ ಸಾರು ಕುದಿಯಬೇಕು."

"ಈಗಾಗಲೇ ನಾನು ಬೇಕಾದಷ್ಟು ಕುದ್ದುಹೋಗಿದೀನಿ. ಸಾರು ಕುದಿಯದಿದ್ದರೂ ಚಿಂತೆಯಿಲ್ಲ"—ಎನ್ನುತ್ತಾ ವಾಸು ಒಲೆಯ ಮುಂದೆಯೇ ತಟ್ಟೆ ಹಾಕಿಕೊಂಡ

"ಒಲೆಗೆ ಇಷ್ಟು ಹತ್ತಿರ ತಟ್ಟೆ ಹಾಕಿಕೊಳ್ಳಬೇಡಿ. ಎಂಜಲು, ಮುಸುರೆ "

''ಮಹಾ ಕಂಡಿದೀನಿ ನಿನ್ನ ಎಂಜಲು ಮುಸುರೆಯನ್ನು. ನೀನೇನು ಈಗ ಬಡಿಸುತ್ತೀಯೋ ಹೇಗೆ?"—ವಾಸು ಕೊಂಚ ಜಬರಿಸಿ ಕೇಳಿದ.

ಸರಳಾ ಮರುಮಾತನಾಡದೇ ಬಡಿಸತೊಡಗಿದಳು.

ವಾಸು ಸಾರನ್ನು ಕಲಸಿ ಒಂದು ತುತ್ತು ಬಾಯಿಗಿಟ್ಟುಕೊಂಡ. ಅವನ ಮುಖ ಚಿತ್ರ ವಿಚಿತ್ರವಾಯಿತು. ಗಂಡನ ಮುಖವನ್ನೇ ಪರೀಕ್ಷಿಸುತ್ತಿದ್ದ ಸರಳಾ

"ಸಾರು ಏನಾಗಿದೆ?" —ಎಂದಳು.

"ಉಪ್ಪಿನ ಮುದ್ದೆ" —ವಾಸು ಕಹಿಯಾಗಿ ಹೇಳಿದ.

"ಛೀ, ನಾನು ಉಪ್ಪು ಸರಿಯಾಗಿ ಹಾಕಿದೀನಿ. ಎಲ್ಲೋ ಹುಳಿ ಹೆಚ್ಚಾಗಿರಬೇಕು"

ಸಾರನ್ನು ಬಾಯಿಗೆ ಸಹ ಹಾಕದೆ ಸರಳಾ ನಿರಾತಂಕವಾಗಿ ಸಾರನ್ನು ವಿಮರ್ಶಿಸಿದಳು.

"ನನಗೆ ಹುಳೀಗೂ, ಉಪ್ಪಿಗೂ ವ್ಯತ್ಯಾಸ ಗೊತ್ತಾಗೋದಿಲ್ಲವೇ?"

"ಇಬ್ಬರ ಊಟಕ್ಕಾಗಿ ಮಾಡುವ ಸಾರಿಗೆ ಸುಮಾರು ನಾಲ್ಕು ಜನರಿಗೆ ಎಲೆಯ ತುದಿಗೆ ಬಡಿಸುವಷ್ಟು ಉಪ್ಪನ್ನು ಹಾಕಬೇಕು ಎಂದು ಪುಸ್ತಕದಲ್ಲಿ ಬರೆದಿದೆ. ಬೇಕಾದರೆ ಪುಸ್ತಕ ತಂದು ತೋರಿಸಲೇನು?"

"ಏನೂ ಬೇಡ. ನೀನು ಮರೆತು ನಾಲ್ಕು ಜನರಿಗೆ ಅನ್ನ ಬಡಿಸುವಷ್ಟು ಉಪ್ಪನ್ನು ಸಾರಿಗೆ ಹಾಕಿರಬೇಕು."

''ಏನೋ ಒಂದು ಹಿಡಿ ಹೆಚ್ಚು ಕಡಿಮೆ ..." ಎಂದು ಸರಳ ಪ್ರಾರಂ

ಧಿಸುವಷ್ಟರಲ್ಲಿ ವಾಸು ತಟ್ಟನೆ ಹೇಳಿದ.

"ಹಿಡಿಯಲ್ಲ. ಒಂದು ಬೊಗಸೆ ಅನ್ನ ಮೊಸರು ಹಾಕು"

ವಾಸುವಿನ ಊಟ ಬಹಳ ಬೇಗನೆ ಮುಗಿಯಿತು. ವಾಸು ಕೈತೊಳೆದು ಕೊಂಡು ಬರುವಷ್ಟರಲ್ಲಿ ಸರಳಾ ಮಂಚದ ಮೇಲೆ ಬಾಗಿ ಕುಳಿತು ಇಂಡಿಯಾದೇಶದ ಭೂಪಟವನ್ನು ತದೇಕಚಿತ್ತದಿಂದ ನೋಡುತ್ತಿದ್ದಳು.

ವಾಸು ಬಟ್ಟೆಹಾಕಿಕೊಳ್ಳುತ್ತಾ ಹೆಂಡತಿಯನ್ನು ಮಾತನಾಡಿಸಿದ. ಅವಳ ಅಡಿಗೆಯನ್ನು ತೆಗಳಿದುದರಿಂದ ಆಕೆಗೆ ಬಹು ಅಸಮಾಧಾನವಾಗಿರ ಬೇಕು ಎಂದವನ ಭಾವನೆ.

"ಏನು ಇದ್ದಕ್ಕಿದ್ದ ಹಾಗೆ ಇಷ್ಟೊಂದು ದೇಶಭಕ್ತಿ?"

"ದೇಶಭಕ್ತಿ!"

"ಹೂಂ. ಭೂಪಟ ನೋಡ್ತಿದೀಯಾ?"

"ಇದು ರೈಲ್ವೆ ಗೈಡು. ಬೆಂಗಳೂರಿನ ಮೇಲೆ ಉತ್ತರ ಇಂಡಿಯಾ ವರೆವಿಗೆ ಯಾವ ಯಾವ ಸ್ಟೇಷನ್ನು ಸಿಕ್ಕುತ್ತದೇಂತ ನೋಡ್ತಿದೀನಿ."

"ಭಲಾ, ಇದಕ್ಕಿಂತ ಉಪಯೋಗವಾದ ಕೆಲಸ ಬೇರೋದಿಲ್ಲ. ನಿಧಾನವಾಗಿ ನೋಡು. ನನ್ನದೇನೂ ಅಡ್ಡಿಯಿಲ್ಲ. ನಾನೂ ಕಾಲೇಜಿಗೆ ಹೋಗ್ತೀನಿ. ನಿಧಾನವಾಗಿ ನಿನ್ನ ಏಕಾಗ್ರತೇನೆಲ್ಲಾ .."

"ಅಯ್ಯೋ, ನನಗೆ ಯಾಕೋ ಬೇಜಾರು"—ಸರಳಾ ಅತ್ಯಂತ ಬೇಸರದಿಂದ ನುಡಿದಳು.

'ಯಾಕೆ?"

"ನೀವೇನೋ ಆ ಸಾರನ್ನು ಊಟ ಮಾಡಿದಿರಿ. ಆದರೆ ನಾನು ಹೇಗೆ ಮಾಡಲೀಂತ?"

"ಮಾಡಿದ್ದುಣ್ಣೋ ಮಹರಾಯ."

"ನಿಮಗೇನೋ ಕಾಲೇಜಿನಲ್ಲೋದುವಾಗ ಹಾಸ್ಟಲಿನಲ್ಲಿದ್ದುಕೊಂಡು ಎಂತೆಂತಹದೊ ತಿಂದು ಅಭ್ಯಾಸವಾಗಿದೆ. ಆದರೆ ನನಗೆ?"

"ಆದರೆ ನಾನು ಎಂದೂ ಇಂತಹದನ್ನು ತಿಂದಿರಲಿಲ್ಲ ಸರಳಾ."

"ಹೋಗಿ ಹೋಗಿ ಕಾಲೇಜಿಗೆ ಹೊತ್ತಾಗತ್ತೆ."

"ನೀನು ಮಾಡಿದ ಸಾರಿನ ವಿಷಯ ಚರ್ಚೆ ಮಾಡಲೋಸುಗ ವಾದರೂ ನಾನು ಈ ದಿನ ರಜ ಹಾಕೋಣ ಎಂದು ಮಾಡಿದೀನಿ."

ಸರಳ ಅವನ ಮಾತು ತನಗೆ ಕೇಳಿಸಲಿಲ್ಲವೆಂಬಂತೆ ನಟಿಸುತ್ತಾ "ಹುಬ್ಬಳ್ಳಿ, ಅಮ್ಮಿಂಗೋಳ, ಧಾರವಾಡ..." ಎನ್ನ ತೊಡಗಿದಳು. ವಾಸು ಹೆಂಡತಿಯನ್ನು ರೈಲ್ವೆ ಗೈಡಿನ ಜೊತೆ ಬಿಟ್ಟು ಹೊರಟುಹೋದ.

ವಾಸು ಕಾಲೇಜಿಗೆ ಬರುವಷ್ಟರಲ್ಲಿ ಗಂಟೆ ಬಾರಿಸಿತ್ತು. ವಾಸು ತನ್ನ ತರಗತಿಯನ್ನು ಮುಗಿಸಿಕೊಂಡು ಉಪಾಧ್ಯಾಯರಿಗಾಗಿಯೇ ಮೀಸಲಾಗಿರಿಸಿದ್ದ ಕೊಠಡಿಯೊಳಕ್ಕೆ ಬಂದ. ಎರಡನೆಯ ಪಿರಿಯಡ್ಡು ತರಗತಿಯಿಲ್ಲದ ಉಪಾಧ್ಯಾಯರೆಲ್ಲಾ ಅಲ್ಲಿ ಗುಂಪು ಸೇರಿ ಗಲಾಟೆ ಮಾಡುತ್ತಿದ್ದರು.

ವಾಸು ಒಳಗೆ ಬಂದ ಕೂಡಲೇ ಎಲ್ಲರೂ ಮೇಜು ಕುಟ್ಟಿ ಗದ್ದಲ ಮಾಡಿ 'ಸದ್ದು' ಎಂದು ಗಲಾಟೆ ಮಾಡಿ ಸದ್ದಡಗಿಸಲು ಪ್ರಯತ್ನಿಸಿದರು.

"ಹುಡುಗರಿಗಿಂತ ನಿಮ್ಮ ಗಲಾಟೆಯೇ ಹೆಚ್ಚಾಯಿತು" ಎನ್ನುತ್ತಾ ವಾಸು ಖಾಲಿಯಿದ್ದ ಕುರ್ಚಿಯ ಮೇಲೆ ಕುಳಿತ.

"ನೋಡಪ್ಪಾ, ಈಗ ನಮ್ಮ ಮುಂದೆ ಒಂದು ಯೋಜನೆಯಿದೆ. ಈ ಸಲದ ಬೇಸಿಗೆ ರಜದಲ್ಲಿ ನಾವು 'ಕುರುಕ್ಷೇತ್ರ' ನಾಟಕ ಆಡೋಣಾಂತ ಮಾಡಿದೀವಿ. ನೀನೇನು ಹೇಳ್ತೀಯಾ?"—ಎಂದು ಕೇಳಿದ ಕನ್ನಡದ ಉಪಾಧ್ಯಾಯ ಚಿಂತಾಮಣಿ.

"ಹೋ ಹೋ. ನಮ್ಮ ಸ್ಟಾಫ್ ರೂಮಿಗಿಂತಲೂ ಬೇರೊಂದು 'ಕುರುಕ್ಷೇತ್ರ' ಬೇಕೆ ಕನ್ನಡ ಪಂಡಿತರೇ?"—ಎಂದ ಚರಿತ್ರೆಯ ಗಣಪತಿ.

ಚಿಂತಾಮಣಿಗೆ ರೇಗಿತು.

"ಗಣಪತೀ, ನೀನು ಹೀಗೆ ಅಪಶಕುನ ನುಡೀಬೇಡಪ್ಪ. ನಿನ್ನ ಪೂಜೆ ಮಾಡೇ ಆಮೇಲೆ ನಾವು ನಾಟಕ ಆಡುತ್ತೇವೆ" ಎಂದು ಚಿಂತಾಮಣಿ ಸಮಾಧಾನ ಹೇಳಿದ.

ಮೂಲೆಯಲ್ಲಿ ಕುಳಿತು ಹುಡುಗರು ಬರೆದಿದ್ದ ಪ್ರಬಂಧಗಳನ್ನು ತಿದ್ದುತ್ತಿದ್ದ ನಂಜುಂಡಯ್ಯ ಕಿರುನಗೆ ಬೀರಿ

"ವಾಸು, ಚಿಂತಾಮಣಿ 'ಕುರುಕ್ಷೇತ್ರ' ಆಡೋಣಾಂತ ಯಾಕೆ ಪೀಠಿಕೆ ಹಾಕುತ್ತಿದ್ದಾರೆ ಗೊತ್ತೇ?" — ಎಂದ.

"ಯಾಕೆ?" —ವಾಸು ಕೇಳಿದ

"ಆ ನಾಟಕ ಬರೆದವರು ಯಾರು ಗೊತ್ತೆ?"

"ಗೊತ್ತಿಲ್ಲ."

"ಆ ನಾಟಕದ ಕರ್ತೃ ಶ್ರೀಮಾನ್ ಚಿಂತಾಮಣಿ ಎಂ. ಎ. ಅವರು

ಆ ನಾಟಕವನ್ನು ಯಾವ ಕಂಪನಿಯವರೂ ಆಡೋದಿಲ್ಲ ಎಂದು ಶಪಥ ಕೊಟ್ಟಂತೆ. ಯಾವ ಪ್ರಕಾಶಕರೂ ಮುದ್ರಿಸೋದಿಲ್ಲ ಎಂದು ಪ್ರತಿಜ್ಞೆ ಮಾಡಿದಂತೆ

ಚಿಂತಾಮಣಿ ಮುಖ ಕೊಂಚ ಕೆಂಪಗಾಯಿತು.

"ಹಾಗಲ ಗಣಪತೀ ನಮ್ಮಲ್ಲಿ ಇರುವ ಜಾಣ್ಮೆಯನ್ನು ಪ್ರಕಾಶಕರು, ಸಾರ್ವಜನಿಕರು ಗುರುತಿಸಬೇಕಾದರೆ "

"ಹೋ ಸಾಕು". ಎಂದ ಗಣಪತಿ.

ವಾಸು ಎರಡು ಕೈಗಳನ್ನೂ ಮೇಲೆತ್ತಿ

'ಶಾಂತೀ ಶಾಂತೀ ಈಗ ಇಲ್ಲಿಯೇ ಕುರುಕ್ಷೇತ್ರ ಆರಂಭಮಾಡಿಬಿಡಬೇಡಿ" ಎಂದ.

ಚಿಂತಾಮಣಿ ಒಣನಗೆ ನಕ್ಕು

"ನೀನೇನು ಹೇಳ್ತೀಯಪ್ಪಾ ವಾಸು?" —ಎಂದರು.

"ನನ್ನದು ಸಂಪೂರ್ಣ ಒಪ್ಪಿಗೆ"— ಎಂದ ವಾಸು.

ಚಿಂತಾಮಣಿಯ ಮುಖ ಹಿಗ್ಗಿನಿಂದ ಊರಗಲವಾಯಿತು ಅಲ್ಲಿ ಕುಳಿತಿದ್ದ ಇತರ ಉಪಾಧ್ಯಾಯರ ಕಡೆ ತಿರುಗಿ ಚಿಂತಾಮಣಿ

"ನಿಮಗೆಲ್ಲಾ ಒಪ್ಪಿಗೆಯೇ?"—ಎಂದ.

"ಹೂಂ ಸರಿ. ಆದರೆ ನನಗೆ ಕೃಷ್ಣನ ಪಾರ್ಟು ಕೊಡುವ ಹಾಗಿದ್ದರೆ ಮಾತ್ರ ನಾನು ನಾಟಕ ಆಡೋದು"— ಎಂದರು ಕೆಮಿಸ್ಟ್ರಿಯ ಕೋದಂಡರಾಮು.

"ನೀವು ನಾಟಕದಲ್ಲಾದರೂ ಭೀಷ್ಮನ ಪಾರ್ಟು ಹಾಕಿರಿ ಮಹಾರಾಯರೆ. ಕೃಷ್ಣನ ಪಾರ್ಟು ನೀವು ಹಾಕುತ್ತಾನೇ ಇರ್ತೀರಿ. ನಾಟಕ— ಮನೇಲಿ ಹೆಂಡತಿಯ ಮುಂದೆ ಅಭಿನಯಿಸುತ್ತಲೇ ಇರ್ತೀರಿ."

ಗುಂಪಿನಲ್ಲಿ ಕೊಂಚ ಹಿರಿಯರೆನಿಸಿಕೊಂಡಿದ್ದ ಲೆಖ್ಖದ ಮೇಷ್ಟರು ಕೋದಂಡರಾಮರಿಗೆ ಕೀಟಲೆಯ ದನಿಯಲ್ಲಿ ಹೇಳಿದರು. ಕೋದಂಡರಾಮರ ಸ್ವಭಾವದ ಪರಿಚಯವಿದ್ದುದರಿಂದಲೇ ಅವರು ಅಷ್ಟು ಧೈರ್ಯವಾಗಿ ಸಹೋದ್ಯೋಗಿಯನ್ನು ಚೇಷ್ಟೆ ಮಾಡಿದರು.

ಅವರಿಗೆ ಉತ್ತರವಾಗಿ ಕೋದಂಡರಾಮು ನಕ್ಕರು. ಆದರೆ ಕಿವಿಯ ತುದಿಗಳು ಕೆಂಪೇರಿದವು.

"ದ್ರೌಪದಿ ಯಾರು?"—ಗುರುಮೂರ್ತಿ ಕುತೂಹಲದಿಂದ ಕೇಳಿದ.

"ರಾಮಯ್ಯ ದ್ರೌಪದಿಯಾಗಲಿ" - ಎಂದ ಗಣಪತಿ. ಎಲ್ಲರೂ 'ಹೋ' ಎಂದು ಕೂಗಿ ಮೇಜು ಕುಟ್ಟಿದರು.

ರಾಮಯ್ಯ ಆ ಗುಂಪಿನಲ್ಲಿ ಅಚ್ಚ ಕಪ್ಪು ಬಣ್ಣದವನಾಗಿದ್ದ ಆತನನ್ನು ನೋಡಿದರೆ ರೋಮಗಳಿಂದ ತುಂಬಿದ ಕರಡಿಯ ನೆನಪು ಬರುತ್ತಿತ್ತು. ಅಗಲವಾದ ಕಪ್ಪು ಗುಂಡು ಮುಖ, ಗೆಡ್ಡೆಗಣ್ಣುಗಳು, ವಕ್ರವಾದ ಹಲ್ಲುಗಳ ಸಾಲು, ಅಂಕೆಗೊಳಗಾಗದ ದಟ್ಟವಾದ ಕೂದಲು, ಬೊಜ್ಜು ದೇಹ, ಗಿಡ್ಡ ಮೈ, ಕೈ ಕಾಲುಗಳ ಮೇಲೆ ವಿಪುಲವಾದ ರೋಮ ರಾಶಿಯಿಂದ ತುಂಬಿದ ರಾಮಯ್ಯ ಸ್ಟಾಫ್ ರೂಮಿನಲ್ಲಿ 'ಬ್ಯೂಟಿ' ಎಂದು ಅಡ್ಡ ಹೆಸರು ಪಡೆದಿದ್ದ.

"ದ್ರೌಪದಿ! ಅಹಾ... ಪಂಚಪಾಂಡವರೆಲ್ಲ ಒಟ್ಟಿಗೆ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಾರೆ"—ಎಂದರು ಲೆಕ್ಕದ ಮೇಷ್ಟರು.

"ನೀವಿರೋ ಬಣ್ಣಕ್ಕೆ"—ಎಂದು ರಾಮಯ್ಯ ಆತನನ್ನು ಮೂದಲಿಸಿದ

"ನಿಮಗಿಂತ ವಾಸಿ."

ಗಣಪತಿ ಕೇಕೆ ಹಾಕಿ ಹೇಳಿದರು "ಈ ದ್ರೌಪದೀನ ಆಧುನಿಕ ದ್ರೌಪದಿಯನ್ನಾಗಿ ಮಾಡಿ ಮೊಳಕಾಲ ಮೇಲೆ ಲಂಗ ಹಾಕಿ ಕರೆದು ತರೋಣ. ಆ ಮಾಟವಾದ ಕಾಲುಗಳನ್ನು ನೋಡಿ ಜನ ಮೂಗಿನ ಮೇಲೆ ಬೆರಳಿಟ್ಟು "

"ಬೇಡ ಮಹರಾಯಾ, ಆ ಮೇಲೆ ಸ್ಟೇಜಿನ ಮೇಲೆ ಕಲ್ಲುಗಳು ಬಿದ್ದಾವು"—ಎಂದು ಚಿಂತಾಮಣಿ ಆತಂಕವನ್ನು ವ್ಯಕ್ತಪಡಿಸಿದ.

"ನಿನ್ನ 'ಕುರುಕ್ಷೇತ್ರ'ದ ಚಂದಕ್ಕೆ ನಾನು ದ್ರೌಪದಿಯಾದರೆ ಸಾಕು"—ಎಂದರು ರಾಮಯ್ಯ.

"ಶಕುನಿ ಯಾರು?" ಕೋದಂಡರಾಮ ಪ್ರಶ್ನಿಸಿದರು.

"ರಾಜಾರಾಯರು ಶಕುನಿಯಾಗಲಿ. ಆತನಷ್ಟು ಚೆನ್ನಾಗಿ ಬೇರೆ ಯಾರು ಆ ಪಾತ್ರವನ್ನ ವಹಿಸಲಾರರು. ಒಬ್ಬರಿಂದೊಬ್ಬರಿಗೆ ಚಾಡಿ ಹೇಳುವುದು, ಸುಳ್ಳು ಮಾತು ಸೃಷ್ಟಿಸುವುದು, ಜಗಳ ತಂದು ಹಾಕುವುದು ಇವುಗಳಲ್ಲಿ ಅವರದು ಎತ್ತಿದ ಕೈ. ಶಕುನಿಯ ಪಾತ್ರವನ್ನು ಅವರು ಹೊಸದಾಗಿ ಅಭ್ಯಾಸ ಮಾಡಬೇಕಾಗಿಯೇ ಇಲ್ಲ."

ಹಿರಿಯರಾದ ಲೆಕ್ಕದ ಮೇಷ್ಟರು ಹೇಳಿದರು.

"ನಿಜ"—ಎಂದು ಎಲ್ಲರೂ ತಲೆದೂಗಿದರು.

ರಾಜಾರಾಯರು ಅಲ್ಲಿರಲಿಲ್ಲ. ಆ ಗುಂಪಿನಲ್ಲಿ ಎಲ್ಲರಿಗೂ ಒಂದುಸಮಸ್ಯೆ, ತಲೆನೋವಾಗಿದ್ದ ಆತನ ವಿಷಯ ಬಂದ ಕೂಡಲೇ ಒಂದು ಗಳಿಗೆ ಕೊಟಡಿ ಮೌನ ತಾಳಿತು.

ಕೊನೆಗೆ ವಾಸುವೇ ಮೌನವನ್ನೊಡೆದು ಹೇಳಿದ

"ನೀವು 'ಕುರುಕ್ಷೇತ್ರ' ವನ್ನಾದರೂ ಆಡಿ, 'ಕೀಚಕ ವಧೆ'ಯನ್ನಾದರೂ ಆಡಿ. ಆದರೆ ನಾನು ಮಾತ್ರ ನಾಟಕದಲ್ಲಿ ಪಾತ್ರ ವಹಿಸುವುದಿಲ್ಲ."

"ಯಾಕಪ್ಪಾ?"—ಎಂದರು ಚಿಂತಾಮಣಿ ಚಿಂತೆಯಿಂದ.

"ವಾಸುವಿಗೆ ಪತ್ನೀ ಸಾಹೇಬರ ಅಪ್ಪಣೆ ಸಿಕ್ಕಬೇಕೂಂತ ಕಾಣಿಸುತ್ತದೆ—ರಂಗದ ಮೇಲೆ ಪ್ರವೇಶ ಮಾಡೋಕೆ" — ಗುರುಮೂರ್ತಿಯ ಕುಚೋದ್ಯವಿದು.

"ಅಷ್ಟೊಂದು ಕೋಳೀಕುಕ್ಕನೇ ನಮ್ಮ ವಾಸು?" ಗಣಪತಿ ಕೇಳಿದ.

"ಹೂಂ. ಅವನ ಪ್ರತಾಪವೆಲ್ಲ ವಿದ್ಯಾರ್ಥಿಗಳ ಮುಂದೆ ಮನೆಯವರ ಮೇಲಿನ ಕೋಪವನ್ನೆಲ್ಲಾ ಇಲ್ಲಿ ನಮ್ಮ ಮುಂದೆ ತೋರಿಸುತ್ತಾನೆ "

ಮಾತಿನ ಲಹರಿ ಸಿಕ್ಕಸಿಕ್ಕಾಗಿ ಹರಿಯತೊಡಗಿದ್ದನ್ನು ಕಂಡು ವಾಸು ವಿವರಿಸಿದ.

"ಇಲ್ಲಪ್ಪಾ, ಈ ಸಲ ಬೇಸಿಗೆ ರಜದಲ್ಲಿ ನಾವು ದೊಡ್ಡ ಪ್ರವಾಸ ಇರಿಸಿಕೊಂಡಿದೀವಿ. ಆದುದರಿಂದ ನಾಟಕದಲ್ಲಿ ಪಾರ್ಟು ಮಾಡೋಕಾಗೋದಿಲ್ಲ ಎಂದೆ. ಈ ಸಲ ಕ್ಷಮಿಸಿ."

"ನಿನಗೆ ಕೃಷ್ಣನ ಪಾರ್ಟು ಕೊಡ್ತೀನಿ"—ಎಂದರು ನಾಟಕಕಾರರು.

"ಯಾವ ಪಾತ್ರ ಕೊಟ್ಟರೂ ಆಗೋದಿಲ್ಲ"— ವಾಸು ಖಂಡಿತವಾದ ದನಿಯಲ್ಲಿ ಹೇಳಿದ.

"ಎಲ್ಲಿಗೆ ಹೋಗ್ತೀರಾ?"— ಕೋದಂಡರಾಮ ಕುತೂಹಲದಿಂದ ಕೇಳಿದರು.

ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆವಿಗೆ ಹೋಗಿ ಬರೋಣಾಂತ ಮಾಡಿದೀವಿ."

"ಕಾಶಿಯಾತ್ರೆ ಆರಂಭಿಸೀದೀಯಾ?"

"ಮದುವೆಯಲ್ಲಿ ಕಾಶಿಯಾತ್ರೆ ಮಾಡಿದ್ದು ಸಾಲದೇ"?

“ಪುತ್ರಕಾಮೇಷ್ಟಿಯಾಗವೇನೋ ಇದು?”—ಗಣಪತಿ ಕೇಳಿದರು.

“ಛೆ”— ಎಂದ ವಾಸು.

“ಕನ್ಯಾರತ್ನ ಬಯಸಿ ”

“ಥೂ” — ಎಂದ ವಾಸು.

“ಮತ್ತೆ ಈ ವಯಸ್ಸಿನಲ್ಲಿ ಯಾತ್ರೆ ಮಾಡುವ ಉದ್ದೇಶ ? ” — ಲೆಕ್ಕದ ಮೇಷ್ಟ್ರರು ಕೇಳಿದರು.

“ಯಾತ್ರೆ ಮಾಡೋಕೆ ವಯಸ್ಸೇನು ಬಂತು. ಯಾತ್ರೆ ಎನ್ನುವ ಹೆಸರು ಕೊಡೋಕೆ ಇಷ್ಟವಿಲ್ಲದಿದ್ದರೆ ಪ್ರವಾಸ,ವಿಹಾರ ಎಂದು ಕರೆಯಿರಿ.”

“ಪ್ರವಾಸ ಮುಂದುವರಿಸೋಕೆ ಸಾಧ್ಯವಿಲ್ಲವೆ ? ”— ಚಿಂತಾಮಣಿ ವ್ಯಥೆಯಿಂದ ಕೇಳಿದರು.

“ಊಹೂಂ. ಸಾಧ್ಯವಿಲ್ಲ. ಎಲ್ಲಾ ಏರ್ಪಾಡೂ ಆಗಿದೆ. ಈಗ ಸಾಧ್ಯವೇ ಇಲ್ಲ. ಕಾಲೇಜಿಗೆ ರಜಾ ಬರುವುದನ್ನೇ ನಾನು ಎದಿರುನೋಡ್ತಾ ದೀನಿ. ”

“ಪುಟ್ಟ ಗಂಟು ಇಟ್ಟಿದೀರಾ ಯಾತ್ರೆಗೆ ?” —ಗುರುಮೂರ್ತಿ ಬಹು ಮುಖ್ಯವಾದ ಪ್ರಶ್ನೆ ಕೇಳಿದರು.

“ಹೂಂ. ಎರಡು ವರ್ಷದಿಂದ ಅಂದಾಜು ಹಾಕಿ ಹಣ ಕೂಡಿಸಿ ದೀನಿ”—ಎಂದ ವಾಸು.

“ಯೋಚನೆ ಮಾಡಿ” —ಎಂದು ಒತ್ತಿ ಹೇಳಿದರು ಚಿಂತಾಮಣಿ.

“ಯೋಚನೆ ಮಾಡೋಕೆ ಇಲ್ಲಿ ಏನೂ ಇಲ್ಲ. ನಾನೊಬ್ಬ ಇಲ್ಲದಿದ್ದರೆ ನಾಟಕವೇನೂ ನಿಲ್ಲಬೇಕಾಗಿಲ್ಲ. ನೀವೆಲ್ಲರೂ ಸೇರಿ ಆಡಿ. ನಿಮ್ಮ ನಾಟಕ ಯಶಸ್ವಿಯಾಗಲಿ ಎಂದು ದೂರದಿಂದ ನಾನು ಹಾರೈಸುತ್ತೇನೆ.”

“ಮಹಾರಾಯ ಲೆಕ್ಚರ್ ಸಾಕು”— ಎಂದರು ಗಣಪತಿ.

ಅಷ್ಟರಲ್ಲಿ ಗಂಟೆ ಹೊಡೆದುದರಿಂದ ಉಪಾಧ್ಯಾಯರೆಲ್ಲ ಪುಸ್ತಕ ಗಳನ್ನು ತೆಗೆದುಕೊಂಡು ಚದುರಿದರು

ಸಂಜೆ ನಾಲ್ಕು ಗಂಟೆಯ ವೇಳೆಗೆ ವಾಸುವಿನ ಅಂದಿನ ಕರ್ತವ್ಯ ಮುಗಿಯಿತು. ಅವನು ಪುಸ್ತಕವನ್ನು ಜೋಡಿಸಿಕೊಂಡು ಮನೆಗೆ ಹೊರಟ. ದಾರಿಯಲ್ಲಿ ‘ಇಂದ್ರಭವನ್’ ಹೋಟಲಿನ ಬೋರ್ಡು ಅವನನ್ನು ಸ್ವಾಗ ತಿಸಿ ಕೈಬೀಸಿ ಕರೆಯಿತು ಬೆಳಗಿನ ಸಾರಿನ ಪ್ರಕರಣದಿಂದ ಧೈರ್ಯ ಗುಂದಿದ ವಾಸು ಸರಳಾ ಮಾಡಿದ ತಿಂಡಿಯನ್ನು ಎದುರಿಸಲು ಹೆದರಿ

ಹೋಟಲಿನೊಳಕ್ಕೆ ನುಗ್ಗಿದ.

ವಾಸು ತೃಪ್ತಿಯಿಂದ ಅಚ್ಚುಕಟ್ಟಾಗಿ ಎರಡು ಮಸಾಲೆ ದೋಸೆ ತಿಂದು, ಕಾಫಿ ಹೀರಿ, ತೃಪ್ತನಾಗಿ ಹೊರಗೆ ಬಂದ.

ವಾಸು ಮನೆಗೆ ಬಂದಾಗಲೂ ಸರಳಾ ಮುನ್ನಿನಂತೆಯೇ ರೈಲ್ವೆ ಗೈಡಿನ ಮುಂದೆ ಕುಳಿತಿದ್ದಳು. ಆದರೆ ಅವಳ ಭಂಗಿ ಕೊಂಚ ಬದಲಾಗಿತ್ತು. ಈಗ ಅವಳು ಒಂದು ಕುರ್ಚಿಯ ಮೇಲೆ ಕುಳಿತು ಮತ್ತೊಂದು ಕುರ್ಚಿಯ ಮೇಲೆ ಕಾಲನ್ನು ನೀಡಿದ್ದಳು.

ಆಕಳಿಕೆ ಮಾತ್ರ ಸತತವಾಗಿ ಅವಳ ಬಾಯಿಂದ ಹೊರ ಬರುತ್ತಿತ್ತು.

ವಾಸುವನ್ನು ನೋಡಿದ ಕೂಡಲೇ ಸರಳಾ ಬೇಸರದಿಂದ

"ಏನು ಹಾಳು ಗೈಡೋ. ಹದಿಮೂರು ಗಂಟೆ, ಹದಿನಾಲ್ಕು ಗಂಟೆ ಎಂದು ಇದರಲ್ಲಿ ಬರೆಯುತ್ತಾರೆ. ಹಾಗೆ ಬರೆದರೆ ಯಾರಿಗೆ ಅರ್ಥವಾದೀತು. ನನಗಂತೂ ಈ ಗೈಡು ಅರ್ಥವೇ ಆಗುವುದಿಲ್ಲ"—ಎಂದಳು.

"ನಾನು ಹೇಳಿಕೊಡಲೇ?"

"ಹೂಂ"—ಸರಳಾ ಆಸಕ್ತಿ ವ್ಯಕ್ತಪಡಿಸಿದಳು.

"ನೋಡು ಇದು ರೈಲು ಹೊರಡುವ ವೇಳೆ ಇದು ರೈಲು ಆ ಊರಿಗೆ ತಲುಪುವ ಸಮಯ "

"ಅಯ್ಯೋ ಬಿಡಿ. ಹೀಗೆ ಒಗಟಿನಂತಾಗಿ ಬರೆದರೆ ಯಾರಿಗೆ ಅರ್ಥವಾದೀತು? ಇಷ್ಟಕ್ಕೂ ರೈಲ್ವೆ ಗೈಡು ನೋಡಿ ನನಗೇನಾಗಬೇಕಾಗಿದೆ?"

"ಅದು ಸರಿ. ಇಲ್ಲಿ ಬರೆದಿರುವ ಹಾಗೆ ಯಾವ ರೈಲೂ ಹೊರಡುವುದಿಲ್ಲ."

"ಇಷ್ಟಕ್ಕೂ ನೀವು ನನ್ನ ಜೊತೆ ಇರ್ತೀರಿ. ನನಗೆ ಗೈಡು ಕಟ್ಟಿಕೊಂಡು ಏನಾಗಬೇಕು?"—ಸರಳಾ ಆಲಸ್ಯದಿಂದ ಮೈ ಮುರಿದು ಮೇಲೆದ್ದಳು.

"ಡಿಗ್ರಿ ತಗೊಂಡು ರೈಲ್ವೆ ಗೈಡು ನೋಡೋಕೆ ಬರೋಲ್ಲ ಎಂದರೆ ಜನ ನಗುತ್ತಾರೆ. ಬಾ ಇಲ್ಲಿ .. ನಾನು ನಿಧಾನವಾಗಿ ಹೇಳಿಕೊಡ್ತೀನಿ...." ವಾಸು ಅತ್ಯಂತ ಶ್ರದ್ಧೆಯಿಂದ ಹೇಳಿದ.

"ತಿಂಡಿ ಬೇಡವೇನು?"

"ತಿಂಡಿ ಮಾಡಿದೀಯಾ? ಇವತ್ತು ಮಾಡದಿದ್ದರೂ ಆಗಿತ್ತು. ಪಾಪ! ಬೆರಳು ಕುಯಿದುಕೊಂಡೂ ಈ ತೊಂದರೆ ಯಾಕೆ ತಗೊಂಡೆ?"—ವಾಸು ಸಹಾನುಭೂತಿಯಿಂದ ನುಡಿದ.

"ರಾಯರಿಗೆ ಎಲ್ಲೋ ತಿಂಡಿಯಾಗಿರಬೇಕು"—ಸರಳಾ ಕಾವಿನಿಂದ ನುಡಿದಳು.

"ಇಲ್ಲಾ ನಾನು ಹೋಗಬಾರದೆಂದೇ ಮಾಡಿದ್ದೆ. ಆದರೆ ಸ್ನೇಹಿತರು ಬಿಡಬೇಕಲ್ಲಾ....ಎಲ್ಲಾ ಬಲವಂತಮಾಡಿ ಹೋಟಲಿಗೆ ಎಳೆದು ಕೊಂಡು ಹೋದರು.ನಾನೇನು ಮಾಡಲಿ ?"—ವಾಸು ತಪ್ಪೊಪ್ಪಿಕೊಂಡು ಕ್ಷಮಾಪಣೆ ಬೇಡಿದ.

"ನನಗೆ ಅವೆಲ್ಲಾ ಗೊತ್ತಿಲ್ಲ. ನಾನೂ ಈಗ ತಿಂಡಿ ಮಾಡಿಬಿಟ್ಟಿದೀನಿ. ನೀವು ತಿನ್ನಲೇಬೇಕು."

"ರಾತ್ರೀಗೆ ತಿನ್ನುತ್ತೀನಿ ಸರಳಾ"—ವಾಸು ದೈನ್ಯದಿಂದ ನುಡಿದ.

"ಊ ಹೂಂ. ಸ್ವಲ್ಪವಾದರೂ ಈಗ ತಿನ್ನಲೇಬೇಕು.ನಂಗೆ ಅವೆಲ್ಲಾ ಗೊತ್ತಿಲ್ಲ."

"ಹೋಗಲಿ, ಸ್ವಲ್ಪ ತಗೊಂಡು ಬಾ"—ವಾಸು ನಿರ್ವಾಹವಿಲ್ಲದೇ ಒಪ್ಪಬೇಕಾಯಿತು.

ಸರಳಾ ಸಂಭ್ರಮದಿಂದ ಒಳಗೆ ಹೋದಳು. ಕೆಲವು ನಿಮಿಷಗಳ ನಂತರ ಸಣ್ಣ ಗಾಜಿನ ತಟ್ಟೆಯಲ್ಲಿ ತಿಂಡಿಯನ್ನು ತಂದು ವಾಸುವಿನ ಮುಂದೆ ಇರಿಸಿದಳು.

ವಾಸು ತಟ್ಟೆಯನ್ನು ಕೈಗೆತ್ತಿಕೊಂಡು ತಿಂಡಿಯ ಕಡೆ ನೋಟ ಬೀರಿ "ಏನಿದು?"— ಎಂದ.

"ಕಾಣಿಸೋದಿಲ್ಲವೇ?"—ಸರಳಾ ಮುನಿದಳು.

"ಕಾಣಿಸಿತು. ಆದರೆ ಏನು ಎನ್ನುವುದು ತಿಳಿಯಲಿಲ್ಲ."

ಸರಳೆಗೆ ಈಗ ನಿಜವಾಗಿಯೂ ಕೋಪ ಬಂತು.ತಾನು ನೋಡುತ್ತಿದ್ದ ರೈಲ್ವೆ ಗೈಡನ್ನೂ ಬಿಟ್ಟು ಶ್ರದ್ಧೆಯಿಂದ ಗಂಡನಿಗಾಗಿ ತಿಂಡಿ ಮಾಡಿದರೆ ಅದರ ಬಗ್ಗೆ ಅವರಿಗೆ ಎಷ್ಟೊಂದು ಅಲಕ್ಷ್ಯ!

"ತಿಂದು ನೋಡಿ. ಗೊತ್ತಾಗಬಹುದು"—ಸರಳೆಗೂ ಆಗಲಾದರೂ ತಿಳಿಯುವುದೋ ಇಲ್ಲವೋ ಎಂಬುದರ ಬಗ್ಗೆ ಅನುಮಾನ.

ವಾಸು "ಯಾಕೋ ಹೆದರಿಕೆಯಾಗ್ತಿದೆ ಕಣೆ ಸರಳಾ, ಜೀವವಿಮೆ ಮಾಡಿಸಿ ಬಂದು .."ಎಂದ.

"ತಿನ್ನೀಂದ್ರೆ ಆಟ ಆಡ್ತಾರೆ."

ವಾಸು ತಿಂಡಿಯನ್ನು ಬಾಯಿಗಿರಿಸಿಕೊಂಡ. ಮೊದಲೇ ಅವನ

ಹೊಟ್ಟೆ ತುಂಬಿತ್ತು. ಅದರ ಮೇಲೆ ಸರಳೆಯು ಅಮೃತ ಹಸ್ತದಿಂದ ತಯಾರಾದ ಪಾಕ!

ವಾಸುವಿಗೆ ಓಕರಿಕೆ ಬಂದಂತಾಯಿತು. ಆದರೂ ಕಷ್ಟಪಟ್ಟು ನುಂಗಿ ತಕ್ಷಣ ನೀರನ್ನು ಗಟಗಟನೆ ಕುಡಿದ.

''ಈಗಲಾದರೂ ಏನು ತಿಂಡಿ ಅಂತ ತಿಳಿಯಿತೇ?''— ಸರಳೆ ತನ್ನ ತಿಂಡಿಯ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಲಿಸಲು ತವಕಿಸಿದಳು.

''ನಾನು ಮೂರು ಸಲ ಊಹೆ ಮಾಡ್ತೀನಿ.''

''ಆಗಲಿ.''

''ರವೆ ಪಾಯಸ?''

''ಅಲ್ಲ''— ಸರಳೆ ಹುಬ್ಬುಗಂಟಿಕ್ಕಿದಳು.

''ದಮರೋಟು?''

''ಅಲ್ಲ.''

''ಸಜ್ಜಿಗೆ?''

''ಸಧ್ಯ ಮಜ್ಜಿಗೆ ಎಂದು ಹೇಳಲಿಲ್ಲ. ನನ್ನ ಪುಣ್ಯ. ಕೇಸರೀ ಭಾತು ಇದು.''

''ಅಂ!''—ವಾಸುವಿಗೆ ಅಚ್ಚರಿ.

''ಹೌದು'' —ಸರಳಾ ಮತ್ತೆ ಹೇಳಿದಳು.

''ಮತ್ತೆ ಇಷ್ಟೊಂದು ನೀರುನೀರಾಗಿದೆ. ನಾನೆಲ್ಲೋ ರವೆ ಪಾಯಸಾಂತ ಮಾಡಿದ್ದೆ. ಹಾಗೂ ಅಂದುಕೊಂಡೆ—ಪಾಯಸಾನ ಲೋಟಕ್ಕೆ ಹಾಕದೆ ತಟ್ಟೆಯಲ್ಲಿ ಯಾಕೆ ಹಾಕಿದೀಯಾಂತ''—ವಾಸುವಿನ ಮಾತು ಮುಗಿಯುವ ಮುನ್ನ ಸರಳಾ ತಟ್ಟನೆಬಾಗಿ ಅವನಕೈಯಿಂದ ತಟ್ಟೆಯನ್ನು ಕಿತ್ತುಕೊಂಡಳು

''ಹೋಗಲಿ ಕೊಡು. ಹೇಗಾದರೂ ಮಾಡಿ ತಿನ್ನುತ್ತೀನಿ.''

''ನಿಮ್ಮ ಮರುಕ ನನಗೇನು ಬೇಕಿಲ್ಲ''—ಸರಳಾ ಕೆನ್ನೆ ಉಬ್ಬಿಸಿದಳು.

ಅವಳು ಅಷ್ಟು ಹೇಳಿದುದೇ ಸಾಕೆಂದು ವಾಸು ಎದ್ದ.

''ಎಲ್ಲಿಗೆ ಹೋಗ್ತೀರಾ?''—ಸರಳಾ ಕೇಳಿದಳು.

''ಹೀಗೇ ಒಂದು ರೌಂಡು ಹೋಗಿಬರ್ತೀನಿ—ನಿನ್ನ ಸಜ್ಜಿಗೆಯಿಂದ ದೂರವಾಗಿ.''

''ನಾನೂ ಬರ್ತೀನಿ''—ಸರಳಾ ರಾಗ ಎಳೆದಳು.

''ಯಾಕೆ?''

"ಹಸಿವು ನನಗೆ. ಊಟ,ತಿಂಡಿ ಯಾವುದೂ ಸೇರಲಿಲ್ಲ.''

ವಾಸು ನಗುತ್ತಾ ''ಅಂಥಾ ಚೆನ್ನಾಗಿ ಅಡಿಗೆ, ತಿಂಡಿ ಮಾಡಿದಿ"ಎಂದ.

''ಯಾವುದಾದರೂ ಹೋಟಲಿನಲ್ಲಿ ತಿಂಡಿ ಕೊಡಿಸಿ''—ಸರಳಾ ಬಿಗು ಮಾನ ಬಿಟ್ಟು ಕೇಳಿದಳು.

''ಆಗಲಿ. ಐದು ನಿಮಿಷ ನಿನ್ನ ಆಲಂಕಾರಕ್ಕೆ ಟೈಮು ಕೊಡ್ತೀನಿ. ಐದೇ ನಿಮಿಷ.''

''ಆಗೋಲ್ಲ. ಹತ್ತು ನಿಮಿಷ''—ಸರಳಾ ಕೊಸರಾಡಿದಳು.

''ಆಗಲಿ.''

ಸರಳಾ ಸಂಭ್ರಮದಿಂದ ಹೋದಳು. ನಿಲುಗನ್ನಡಿಯ ಮುಂದೆ ಕುಳಿತು ಹುಬ್ಬು ತೀಡಿದಳು. ಮುಖಕ್ಕೆ ಪೌಡರ್ ಸವರಿದಳು. ತುಟಿಯ ರಂಗನ್ನು ಕೊಂಚ ಏರಿಸಿ, ಮುಡಿಗೆ ಹೂಮಾಲೆಯನ್ನು ಸೇರಿಸಿದಳು.

''ಸೀರೆ ಯಾವುದು ಉಡಲಿ?''

''ಕೆಂಪದು?''

''ನನ್ನ ಹತ್ತಿರ ಕೆಂಪು ಬಣ್ಣದ ಸೀರೆಯೇ ಇಲ್ಲ, ನಾನು ಅಷ್ಟು ದಿನ ದಿಂದ ಕೆಂಪು ಬಣ್ಣದ ಸೀರೆ ತೆಗೆದುಕೊಡಿ ಎಂದು....''

''ಹಾಗಾದರೆ ಹಸಿರು''—ವಾಸು ಅವಳ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿದ. ಆದರೆ 'ಕೆಂಪು' ಎಂದ ಕೂಡಲೇ ಸರಳಾ ಕೆಂಪು ಕಂಡ ಗೂಳಿಯಂತೆ ಕೆರಳಿದಳು.

''ಒಂದು ಕೆಂಪು ಬಣ್ಣದ ಸೀರೆ ಇಲ್ಲದಿದ್ದ ಮೇಲೆ ಎಂತಹ ಜೀವನ!''

''ಇದೆಯಲ್ಲಾ ಒಂದು ಕೆಂಪು ಬಣ್ಣದ ಮೇಲಿನ ಸೀರೆ'' ವಾಸು ಮುಡುಕುತ್ತಾ ನುಡಿದ.

''ಲಕ್ಷಣವಾಯಿತು. ಈರುಳ್ಳಿ ಬಣ್ಣಕ್ಕೂ ಕೆಂಪು ಬಣ್ಣಕ್ಕೂ ನಿಮಗೆ ವ್ಯತ್ಯಾಸ ತಿಳಿದು.''

''ಅದಲ್ಲವೇ ...ಇನ್ನೊಂದು ಚಟ್ಟೆ ಬಾರ್ಡರಿನದು.''

''ಸರಿ. ಅದು ಟೊಮ್ಯಾಟೋ ಕೆಂಪು. ನಾನು ಕೇಳ್ತಿರೋದು ರಕ್ತ ಗೆಂಪಿನ ಸೀರೆ. ನಾನು ಕೆಂಪಿನ ಸೀರೆ ಎಂದಕೂಡಲೇ ನೀವು ಕಣ್ಣು ಕೆಂಪಗೆ ಮಾಡ್ತೀರಿ.''

''ಉರಿಗೆಂಪು, ಎಣ್ಣೆಗೆಂಪು, ಕಂದುಕೆಂಪು, ರೋಜಾಕೆಂಪು ಇತ್ಯಾದಿ ಬಣ್ಣದ ಸೀರೆಗಳು ಬೇಡವೇನೇ?"

"ನಾನೇನು ಈಗ ಬೇಡಾಂದೆನೇ? ಆದರೆ ನಾನು ಕೇಳಿದ್ದನ್ನೆಲ್ಲಾ ತೆಗೆದುಕೊಡುವವರು ಯಾರು?"

ಸರಳಾ ನಿಟ್ಟುಸಿರು ಬಿಟ್ಟಳು.

"ಹೋಟಲಿಗೆಹೋಗುವ ಕಾರ್ಯಕ್ರಮ ಈಗ ರದ್ದಾಯಿತೇ ಹೇಗೆ?"

ಸರಳಾ ಮತ್ತೆ ಚಟುವಟಿಕೆಯಿಂದ "ಇಲ್ಲ, ಇದೇ ಬಂದೆ"–ಎಂದಳು.

ಐದು ನಿಮಿಷಗಳ ನಂತರ ಕಾಮನಬಿಲ್ಲಿನ ಬಣ್ಣದ ಸೀರೆಯೊಂದನ್ನು ಧರಿಸಿ ಸರಳಾ ವಾಸುವಿನ ಮುಂದೆ ನಿಂತಳು.

"ಕೋಳಿ ಹಬ್ಬದಲ್ಲಿ ಎಲ್ಲಾದರೂ ಹೊರಗೆ ಹೋಗಿದ್ದೆಯಾ?"— ವಾಸು ಆತಂಕದಿಂದ ಕೇಳಿದ.

"ಇಲ್ಲವಲ್ಲಾ."

"ಯಾವುದು ಈ ಸಪ್ತವರ್ಣದ ಸೀರೆ?"

"ನೀವು ಸುಮ್ಮನೆ ಹೊರಡಿ. ಆಮೇಲೆ ಸೀರೆ ವಿಷಯ ಟೀಕೆ ಮಾಡುವಿರಂತೆ"–ಎನ್ನುತ್ತಾ ಸರಳ ಸೀರೆಯ ಬಣ್ಣಕ್ಕೆ ಹೊಂದಿಕೆಯಾಗುವ, ಒಂದಿಂಚು ಹಿಮ್ಮಡಿಯಿದ್ದ ಚಪ್ಪಲಿ ಮೆಟ್ಟಿದಳು.

ಸರಳೆಯ ಮುಖದಲ್ಲಿ ಉತ್ಸಾಹ ಮಿನುಗುತ್ತಿತ್ತು. ಬೆಳಗಿನಿಂದ ಸರಿಯಾಗಿ ಊಟ, ತಿಂಡಿಯಿಲ್ಲದ ಅವಳು ಹಸಿವಿನಿಂದ ಒಂದು ಹೋಟಲನ್ನೇ ನುಂಗಿಬಿಡಲು ತಯಾರಾಗಿ ಹೊರಟಳು. ದಾರಿಯಲ್ಲಿ ಸರಳಾ ಗಂಡನನ್ನು ಎಚ್ಚರಿಸಿದಳು.

"ಜೇಬಿನಲ್ಲಿ ಸಾಕಷ್ಟು ದುಡ್ಡಿದೆ ತಾನೇ?"

"ಒಂದು ಪಕ್ಷ ಸಾಲದೇ ಬಂದರೆ ನಿನ್ನ ತವರುಮನೆಯಲ್ಲಿ ಇಟ್ಟಿರುವ ಚಿನ್ನದ ಬಳೆಯನ್ನು ಅಡವಿಡೋಣ"—ವಾಸು ಹೆಂಡತಿಯನ್ನು ಕೆಣಕಿದ.

"ನನ್ನ ತವರುಮನೆಯ ಸುದ್ದಿಗೆ ಮಾತ್ರ ನೀವು ಬರಬೇಡಿ" ಎಂದು ಸರಳಾ ನುಡಿದಳು.

ಹೋಟಲಿನೊಳಗೆ ಹೋಗಿ ಇಬ್ಬರೂ ಎದಿರುಬದಿರಾಗಿ ಆಸನಾರೂಢರಾದ ಕೂಡಲೇ ಮಾಣಿಯೊಬ್ಬ ಪ್ರತ್ಯಕ್ಷನಾದ.

"ಏನು ಬೇಕು ಸಾರ್?"

ವಾಸು ಪ್ರಶ್ನಾರ್ಥಕವಾಗಿ ಸರಳೆಯ ಕಡೆ ನೋಡಿದ.

"ಮಸಾಲೆ ದೋಸೆ, ಜಾಮೂನು, ಚೌ ಚೌ, ಬೋಂಡ...."

"ತಾಳು ತಾಳು, ಅವನು ಹೇಳಬೇಕಾದ್ದನ್ನು ನೀನು ಹೇಳಬೇಡ"–

ವಾಸು ನಡುವೆ ಬಾಯಿ ಹಾಕಿದ.

"ಇನ್ನೇನು ಬೇಕು ?"—ಮಾಣಿ ಕೇಳಿದ.

"ಎಲ್ಲಾ ಒಬ್ಬರಿಗೆ ಸಾಕು. ನನಗೆ ಏನೂ ಬೇಡ" ವಾಸು ಹೇಳಿದ.

ಮಾಣಿ ಹೊರಟುಹೋದ.

"ನೀವೂ ಏನಾದರೂ ತಿಂಡಿ ತರಿಸಿಕೊಳ್ಳೀಂದ್ರೆ"—ಸರಳಾ ಅಂಗಲಾಚುವ ದನಿಯಲ್ಲಿ ಹೇಳಿದಳು.

"ನನಗೆ ಏನೂ ಬೇಡ. ಕಾಲೇಜಿನಿಂದ ಮನೆಗೆ ಬರುವಾಗ ಹೋಟಲಿನಲ್ಲಿ ಪಟ್ಟಾಗಿ ತಿಂದು ಬಂದಿದೀನಿ."

"ಏನಾದರೂ ಸ್ವಲ್ಪ ..."ಸರಳಾ ಒತ್ತಾಯಪಡಿಸಿದಳು.

"ಇದೇನು ಇಷ್ಟೊಂದು ನನಗೆ ಉಪಚಾರ? ರಾತ್ರಿ ಅಡಿಗೆ ಪ್ರೋಗ್ರಾಂ ಏನಾಯಿತು ?"

"ಈಗ ನೀವೂ ತಿಂಡಿ ತಿಂದುಬಿಟ್ಟರೆ ರಾತ್ರಿ ನಾನು ಮತ್ತೆ ಅಡಿಗೆ ಮಾಡೋದು ತಪ್ಪುತ್ತದೆ. ಬೆಳಗಿನ ಸಾರೆಲ್ಲಾ ಹಾಗೇ ಇದೆ. ರಾತ್ರೀಗೂ ಆದೇ ಸಾರು "

ವಾಸು ಬೆದರಿ ಹೇಳಿದ "ಆಗಲಿ. ಹಾಗಾದರೆ ನಾನೂ ಈಗ ತಿಂಡಿ ತಿಂದುಬಿಡುತ್ತೇನೆ. ಆದರೆ ಒಂದು ಶರತ್ತು "

ಸರಳಾ ಉತ್ಸುಕತೆಯಿಂದ "ಏನದು?"—ಎಂದಳು.

ರಾತ್ರಿಯ ಅಡಿಗೆ ತಪ್ಪಿತಲ್ಲಾ ಎಂದು ಅವಳಿಗೆ ಮಹದಾನಂದವಾಗಿತ್ತು.

"ನಾಳೆಗೆ ಮಾತ್ರ ನೀನು ಇದೇ ಸಾರನ್ನು ಇಡಬಾರದು. ಒಪ್ಪಿಗೆಯೋ?"

"ನಾನು ಇಟ್ಟರೂ ಅದು ಇರಬೇಕಲ್ಲ. ನಾಳೆಗೆ ಅದು ಹಳಸಿಹೋಗುತ್ತದೆ."

ಸರಳಾ ತಾನು ನಾಳೆಗೆ ಸಾರನ್ನು ಉಳಿಸದಿರಲು ಕಾರಣ ವಿವರಿಸಿದಳು. ಮಾಣಿ ತಿಂಡಿಯನ್ನು ತಂದು ಸರಳೆಯ ಮುಂದಿರಿಸಿದ.

"ನನಗೂ ಪೂರಿ, ಸಾಗು ತಂದುಕೊಡಪ್ಪ. ಹಾಗೇ ಕೇಸರೀಭಾತು ಒಂದು ಪ್ಲೇಟು."

ಸರಳಾ ತಿಂಡಿ ತಿನ್ನತೊಡಗಿದಳು. ಚೋಂಗ ಒಂದು ಚೂರು ಬಾಯಿಗೆ ಹಾಕಿಕೊಂಡು ಸರಳಾ ಮೆಚ್ಚುಗೆಯಿಂದ

"ನಾನು ಮಾಡುವ ಬೋಂಡಾನೂ ಸ್ವಲ್ಪ ಹೆಚ್ಚು ಕಡಿಮೆ ಹೀಗೇ ಇರುತ್ತೆ"—ಎಂದಳು.

"'ಹೆಚ್ಚು ಕಡಿಮೆ' ಎಂಬ ಪದದ ಅರ್ಥ ಬಹಳ ವಿಶಾಲವಾದುದು"-ವಾಸು ಹೆಂಡತಿಯ ಮಾತನ್ನು ತಿರಸ್ಕರಿಸಿದ.

"ಅಂದರೆ?"

"ಅನ್ನ ಹೆಚ್ಚು ಕಡಿಮೆ ಇಡ್ಲಿ ಇದ್ದ ಹಾಗಿರುತ್ತದೆ ಎಂದ ಹಾಗೆ. ಅರ್ಥಾತ್ ನೀನು ಮಾಡುವ ಇಡ್ಲಿ ಹೆಚ್ಚು ಕಡಿಮೆ ಅನ್ನ ಇದ್ದ ಹಾಗಿರುತ್ತದೆ."

"ಹೌದು, ನಿಮಗೆ ನಿಮ್ಮಮ್ಮ ರುಚಿ ರುಚಿಯಾಗಿ ಅಡಿಗೆ, ತಿಂಡಿ ಮಾಡಿಕೊಟ್ಟು ನಿಮ್ಮನ್ನು ಹಾಳುಮಾಡಿದಾರೆ. ಈ ರೀತಿ ಜಿಹ್ವಾ ಚಾಪಲ್ಯ ಇಟ್ಟುಕೋಬಾರದೂಂದ್ರೆ"—ಸರಳ ಗಂಡನಿಗೆ ಬುದ್ಧಿವಾದ ಹೇಳಿದಳು.

ವಾಸು ನಕ್ಕು ಸರಳೆಯ ಮುಂದಿದ್ದ ತಟ್ಟೆಗಳ ರಾಶಿಯ ಕಡೆ ಕೈ ತೋರಿಸಿ ಕೇಳಿದ

"ಇದು ಎಂಥಾ ಚಾಪಲ್ಯ ಎನಿಸಿಕೊಳ್ಳುತ್ತದೆ?"

"ಒಂದೊಂದು ದಿನ ಚೆನ್ನಾಗಿ ತಿಂದರೆ ತಪ್ಪೇನಿಲ್ಲ ಆದರೆ ದಿನಾ ಅಚ್ಚುಕಟ್ಟಾಗಿ ಇರಬೇಕೆ? ನಾನೂ ಸ್ವಬುದ್ಧಿಯಿಂದ ಅಡಿಗೆ ಮಾಡೋದಿಲ್ಲ 'ಪಾಕಶಾಸ್ತ್ರ' ದ ಪುಸ್ತಕವನ್ನು ಎದುರಿಗಿರಿಸಿಕೊಂಡು ಅದರಲ್ಲಿ ಬರೆದಿರುವ ಹಾಗೆ ಚಾಚೂ ತಪ್ಪದೆ ಮಾಡ್ತೀನಿ."

"ಅ... ...."—ವಾಸು ಉದ್ಗರಿಸಿದ.

"ರೇಡಿಯೋಲಿ ಬರುವ ತಿಂಡಿಯನ್ನು ಪುಸ್ತಕದಲ್ಲಿ ಬರೆದುಕೊಂಡು ಮಾಡಿಕೊಟ್ಟರೆ ನಿಮಗೆ ತಿನ್ನೋಕೆ ಏನು?"

ಸರಳಾ ವಾಸುವಿನ ಹಠಕ್ಕೆ ವಿವರಣೆ ಕೇಳಿದಳು.

"ಹಾಳು ರೇಡಿಯೊ ಯಾಕಾದರೂ ಕೊಂಡುಕೊಂಡೆನೋ ಎಂದು ಈಗ ವಿಡುಕುತ್ತಿದ್ದೇನೆ. ಈಗ ಎಲ್ಲ ಕೈಮೀರಿತು."

ಸರಳ ತಿಂಡಿಯನ್ನು ತಿಂದು ತೃಪ್ತಳಾದಳು. ಹೋಟಲಿನ ಮುಂದಿದ್ದ ಅಂಗಡಿಯಲ್ಲಿ ಬೀಡಾ ಕೊಂಡು ತುಟಿಯನ್ನು ಕೆಂಪಾಗಿಸಿಕೊಂಡಳು. ರಸ್ತೆಯ ಮೇಲಿದ್ದ ಹೂವಾಡಿಗನ ಬಳಿ ಮೊಗ್ಗನ್ನು ಕೊಂಡು ಮತ್ತೆ ಮುಡಿಗೇರಿಸಿಕೊಂಡಳು.

"ನೀನು ಮನೆಗೆ ಹೋಗ್ತೀಯಾ?"

"ಯಾಕೆ?" —ಎಂದಳು ಸರಳಾ.

"ನಾನು ಹೀಗೇ ನನ್ನ ಗೆಳೆಯನ ಮನೆಗೆ ಹೋಗಿ ಬರ್ತೀನಿ."

"ಹೂಂ. ನಾನು ಹೋಗ್ತೀನಿ. ಇವತ್ತು ರೇಡಿಯೋಲಿ ಏನಿದೆ ಗೊತ್ತಾ?"

"ಸಧ್ಯ, ಹೊಸ ತಿಂಡಿಯ ಸಮಾಚಾರ... ದೇವರೇ" ವಾಸು ನಡು ರಸ್ತೆಯಲ್ಲಿಯೇ ನಿಂತು ಎದೆಯನ್ನು ಮುಟ್ಟಿಕೊಂಡ.

"ಬಿನಾಕಾ ಗೀತಮಾಲಾ ಇದೆ"—ಸರಳಾ ನಕ್ಕಳು.

"ಹೂಂ. ಆದರೆ ರಾತ್ರಿ ಒಂಭತ್ತೂವರೆಗೆ ಮಾತ್ರ ನನಗೆ ರೇಡಿಯೊ ಬಿಟ್ಟುಬಿಡು. ಮದ್ರಾಸಿನಿಂದ ಇವತ್ತು ಸೊಗಸಾದ ಸಂಗೀತ ಪ್ರಸಾರ ಮಾಡುತ್ತಾರೆ."

ವಾಸು ರಸ್ತೆಯ ತಿರುವಿನಲ್ಲಿ ತಿರುಗಿ ಕಣ್ಮರೆಯಾದ. ಸರಳಾ ಉಲ್ಲಾಸದಿಂದ ಹೆಜ್ಜೆ ಹಾಕಿದಳು. ರಾತ್ರಿಯ ಅಡುಗೆಯ ತಾಪತ್ರಯವಿರಲಿಲ್ಲ. ಅವಳು ಮುಸುರೆ ಪಾತ್ರೆಗಳನ್ನೆಲ್ಲಾ ಈಚೆಗಿರಿಸಿ ಕೈಲೊಂದು ಪುಸ್ತಕ ಹಿಡಿದು ರೇಡಿಯೋದ ಮುಂದೆ ಕುಳಿತು ಬಿರಡೆಯನ್ನು ತಿರುಗಿಸಿದಳು.

ವಾಸು ಒಂಭತ್ತು ಗಂಟೆಯ ವೇಳೆಗೆ ಹಾಜರಾದ.

"ಯಾಕೆ ಇಷ್ಟು ಹೊತ್ತು?"—ಸರಳಾ ಆಕ್ಷೇಪಣೆ ಮಾಡುವ ಧ್ವನಿಯಲ್ಲಿ ಕೇಳಿದಳು.

"ನಿನ್ನ ಬಿನಾಕಾ ಮುಗಿಯಲಿ ಎಂದು ಕುಳಿತಿದ್ದೆ. ಅದೇನು ಕೈಲಿರುವ ಪುಸ್ತಕ?"

"ರೈಲ್ವೆ ಗೈಡು. ಯಾವ ಯಾವ ಊರಿಗೆ ನಾವು ಹೋಗುತ್ತೇವೆಯೋ ಆ ಊರಿನಲ್ಲಿ ನಾನು ಕೊಂಡುಕೊಳ್ಳುವಂತಹ ವಸ್ತುಗಳು ಏನಿದೆ ಎಂದು ಲೆಕ್ಕಾಚಾರ ಹಾಕುತ್ತಿದ್ದೆ."

ವಾಸು ನಕ್ಕುಬಿಟ್ಟ.

"ಏನಿದೆ ನಗೋಕೆ?"

"ಯಾವ ಯಾವ ಊರಿನಲ್ಲಿ ನೋಡೋದು ಏನಿದೆ ಎಂದು ಲೆಕ್ಕಾಚಾರ ಹಾಕಬೇಡವೇ?"

"ಆ ಲೆಕ್ಕಾಚಾರ ಮಾಡೋಕೆ ನೀವಿದೀರಿ. ಡೆಲ್ಲಿಯಲ್ಲಿ ಚಪ್ಪಲಿ, ಸೀರೆ, ಕಾಶಿಯಲ್ಲಿ ಕಾಶೀಪೀತಾಂಬರ, ಗಾಜಿನ ಬಳೆಗಳು, ಕಾಶ್ಮೀರದಲ್ಲಿ ಸೀರೆ, ಕಲ್ಕತ್ತಾಲಿ ಸೀರೆ,ಬಳೆ,ಬೊಂಬಾಯಲ್ಲಿ ಪಾತ್ರೆಗಳು,ಪೂನಾಲಿ ಸೀರೆ,

ಧಾರವಾಡದಲ್ಲಿ.. ”

“ಒಂದು ಎಮ್ಮೆ”—ಎಂದು ವಾಕ್ಯವನ್ನು ಪೂರ್ಣಗೊಳಿಸಿದ ವಾಸು

“ಎಮ್ಮೆ!”

“ಹೂಂ. ಧಾರವಾಡದ ಎಮ್ಮೆ ತುಂಬಾ ಪ್ರಸಿದ್ಧಿ.”

“ಅಂದ ಹಾಗೆ ನಿಮ್ಮ ತಾಯಿ, ತಂದೆ ಯಾವತ್ತು ಬರ್‍ತಾರೆ?”—ಸರಳಾ ಆತಂಕದಿಂದ ಕೇಳಿದಳು.

“ಸಧ್ಯದಲ್ಲಿಯೇ ಬರಬಹುದು.”

“ಅವರನ್ನು ಕೇಳಿದರೆ ಯಾವ ಊರಿನಲ್ಲಿ ಏನು ಸಿಕ್ಕುತ್ತದೆ ಎಂದು ಸರಿಯಾಗಿ ತಿಳಿಯುತ್ತದೆ. ಅವರು ಎಲ್ಲಾ ಕಡೆಗೂ ಹೋಗಿ ಬಂದಿರುವುದರಿಂದ ನಾವು ಅವರಿಂದ ಏನು ವಿಷಯ ಬೇಕಾದರೂ ಕೇಳಬಹುದು.”

“ಹಾಗಾದರೆ ರೈಲ್ವೆ ಗೈಡನ್ನು ಬಿಸಾಕಿಬಿಡು. ನಿನಗೆ ಏನೇನೂ ಅದು ಅರ್ಥವಾಗುವುದಿಲ್ಲ”—ಎಂದ ವಾಸು.

ಒಂಭತ್ತೂವರೆಯಾಗುತ್ತಲೇ ವಾಸು ಮದ್ರಾಸಿನಿಂದ ಬರುತ್ತಿದ್ದ ಸಂಗೀತವನ್ನು ಆಲಿಸುತ್ತಾ ಕುಳಿತುಕೊಂಡ.

ಸರಳಾ ಮೆತ್ತೆಯ ಮೇಲೆ ಮಲಗಿಕೊಂಡು ರಗ್ಗನ್ನು ಎಳೆದು ಗೋಡೆಯ ಕಡೆ ಮುಖ ಮಾಡಿಕೊಂಡು ಮಲಗಿದಳು.

* * *

ಗೋಡೆಯ ಮೇಲಿದ್ದ ಗಡಿಯಾರ ಏಳುಗಂಟೆ ಹೊಡೆದುದು ಸರಳಗೆ ಸ್ಪಷ್ಟವಾಗಿ ಕೇಳಿಸಿತು. ಆದರೂ ಹಾಸಿಗೆ ಬಿಟ್ಟೇಳಲು ಅವಳಿಗೆ ಮನಸ್ಸಾಗಲಿಲ್ಲ. ಮಲಗಿದ್ದ ಕಡೆಯಿಂದಲೇ ಸರಳಾ ಮೆಲುವಾಗಿ ಕೂಗಿದಳು.

“ಎಚ್ಚರವಾಯಿತೇ ? ಕಾಫಿ ಮಾಡಬೇಕೆ?”

ಸರಳೆಗೆ ಉತ್ತರಕೊಡಲು ವಾಸು ಎದ್ದಿದ್ದರಷ್ಟೆ ? ಸರಳಾ ವಿಧಿಯಿಲ್ಲದೆ ಹೊದೆದಿದ್ದ ರಗ್ಗನ್ನು ಬಿಸಾಡಿ ಎದ್ದು ಕುಳಿತು ಮೈಮುರಿದಳು. ಎಂತಹ ಕಡು ಬೇಸಿಗೆಯಲ್ಲೂ ಅವಳು ರಗ್ಗನ್ನು ಹೊದೆಯದೆ ಮಲಗುತ್ತಿರಲಿಲ್ಲ. ಮೈಮೇಲೆ ಭಾರವಾದ ರಗ್ಗಿಲ್ಲದಿದ್ದರೆ ತನಗೆ ನಿದ್ರೆಯೇ ಬರುವುದಿಲ್ಲವೆಂದು ಅವಳು ವಾಸುವಿಗೆ ಹೇಳುತ್ತಿದ್ದುದುಂಟು.

ಸರಳಾ ಮುಖ ತೊಳೆದು ಕಾಫಿಗೆ ನೀರಿಟ್ಟಳು. ಕಾಫಿಯಾದ ಸುದ್ದಿ ವಾಸುವಿಗೆ ಹೇಗೆ ತಿಳಿಯಿತೋ—ಅವನೂ ಎದ್ದು ಕುಳಿತ. ಸರಳಾ ಕಾಫಿಯ ಲೋಟವನ್ನು ಗಂಡನ ಕೈಗಿರಿಸಿ

"ಇವತ್ತು ಮಾರ್ಕೆಟ್ ಕಡೆ ಹೋಗ್ತೀರಾ?"—ಎಂದಳು.

"ಯಾಕೆ ಏನು ಬೇಕಾಗಿತ್ತು?"

"ನನಗೆ ಕೊಂಚ ಕಲರ್ ಕುಂಕುಮ ಬೇಕಾಗಿತ್ತು"—ಸರಳಾ ರಾಗ ಎಳೆದಳು.

"ಅಂದರೆ ಯಾವ ಕಲರು?"

"ಹಸಿರು ಕುಂಕುಮ ಬೇಕು. ಅದಕ್ಕೆ ಚಮಕಿ ಹಾಕಿಸಿಕೊಂಡು ಬರ್ತೀರಾ?"

"ಚಮಕಿ ಎಂದರೆ?"

"ತಳಪಳ ಎಂದು ಹೊಳೆಯುತ್ತಿರುತ್ತದೆ ಒಂದು ತೊಲ ಕುಂಕುಮ ತಗೊಂಡುಬನ್ನಿ."

ವಾಸು ತುಟಿಯವರೆವಿಗೆ ತೆಗೆದುಕೊಂಡು ಹೋಗಿದ್ದ ಬಟ್ಟಲನ್ನು ಕೆಳಗಿರಿಸಿ

"ಸರಳಾ, ನಾನು ನಿನಗಿಂತ ದೊಡ್ಡವನು ಎಂದು ಒಪ್ಪುತ್ತೀಯಾ?"

"ಹೂಂ."

"ಹಾಗಾದರೆ ನಾನೊಂದು ಬುದ್ಧಿ ಮಾತು ಹೇಳಿದರೆ ನೀನು ಕೇಳ್ತೀಯ?"

"ನೀವು ಹೇಳುವುದು ಹೇಳಿ. ಕೇಳೋದೂ, ಬಿಡೋದೂ ನನಗೆ ಸೇರಿದ್ದು"—ಸರಳ ಅಲಕ್ಷ್ಯದಿಂದ ನುಡಿದಳು.

"ನೋಡು, ನಿನ್ನ ಬಣ್ಣಕ್ಕೆ, ಮುಖಕ್ಕೆ ಹಸಿರು ಕುಂಕುಮ ಸ್ವಲ್ಪವೂ ಒಪ್ಪೋದಿಲ್ಲ. ಲಕ್ಷಣವಾಗಿ ಕಲಸಿದ ಕುಂಕುಮ ಇಟ್ಟುಕೋ, ಸಾಕು."

ಅದೇಕೋ ಕೂಡಲೇ ಸರಳೆಯ ಕಣ್ಣಿನಲ್ಲಿ ನೀರಾಡಿತು. "ಹಾಸ್ಯ ಮಾಡ್ತಿದೀರಾ—ನಾನು ಕಪ್ಪೂಂತ"

"ಖಂಡಿತ ಇಲ್ಲ ಸರಳಾ."

"ನೀವು ಬೆಳ್ಳಗಿರೋಳನ್ನೇ ಮಾಡಿಕೊಳ್ಳಬೇಕಿತ್ತು. ನನ್ನ ಯಾಕೆ ಮಾಡಿಕೊಂಡಿರಿ?"

"ತಪ್ಪು ತಿಳಿಯಬೇಡ. ಹಸಿರು ಕುಂಕುಮ ನಿನಗೆ ಒಪ್ಪೋದಿಲ್ಲ ಎಂದು ಹೇಳಿದೆ. ನಿನಗೆ ಅದು ಅಗತ್ಯವಾಗಿ ಬೇಕಾಗಿದ್ದಲ್ಲಿ ತಂದುಕೊಡುತ್ತೇನೆ."

ಸರಳೆಯ ಕಣ್ಣೀರು ಮಾಯವಾಯಿತು. ಮುಗುಳುನಗೆ ಮುಖದ ತುಂಬ ಹರಡಿಕೊಂಡಿತು.

"ಒಂದು ತೊಲ ತಂದುಕೊಡಿ. ಹಾಗೇ ನನಗೊಂದು ಪಾವು ಬೇಕಾಗಿತ್ತು."

"ಯಾಕೆ ನನಗೆ ಕಾಫಿ ಕೊಡುವುದಕ್ಕೇನು? ಪಾವೇನೂ ಬೇಡ. ಲೋಟದಲ್ಲಿಯೇ ಕಾಫಿಕೊಡು ಪರವಾಗಿಲ್ಲ."

"ಊಹೂಂ. ಅದಕ್ಕಲ್ಲ. ಒಂದು ಪಾವು ಅಕ್ಕಿಗೆ ಎರಡು ಪಾವು ನೀರು ಹಾಕಬೇಕಂತೆ. ಪಾವು ಇಲ್ಲದೆ ನನಗೆ ಅಳತೆ ಸರಿಯಾಗಿ ಸಿಕ್ಕದೆ ಅನ್ನ ಮುದ್ದೆಯಾಗಿಬಿಡುತ್ತದೆ. ಆದುದರಿಂದ ಖಂಡಿತ ಪಾವು ತನ್ನಿ."

"ಅಪ್ಪಣೆ"—ಎಂದ ವಾಸು.

ಸರಳಾ ನಿಶ್ಚಿಂತೆಯಿಂದ ಒಳಗೆ ಹೋದಳು. ಸ್ನಾನಮಾಡಿ ಅಡಿಗೆಗೆ ನೀರು ಇರಿಸಿ ಮತ್ತೆ ಕೊಟಡಿಗೆ ಬಂದಳು.

ಅಲ್ಲಿಂದ ಮುಖಾಲಂಕಾರ ಪ್ರಾರಂಭವಾಯಿತು. ವಾಸು ತನ್ನ ಕೆಲಸವನ್ನೆಲ್ಲಾ ಮುಗಿಸಿ ಮಾರ್ಕೆಟ್ಟಿಗೆ ಹೊರಟುಹೋದ. ಅವನು ಬರುವಷ್ಟರಲ್ಲಿ ಸರಳ ರೋಮಾಂಚಕಾರಕ ಸುದ್ದಿಯೊಂದನ್ನು ಹೇಳಲು ಕಾತರಳಾಗಿ ಹೊಸಲಿನ ಮೇಲೆ ನಿಂತು ಗಂಡನ ಆಗಮನವನ್ನು ಎದಿರುನೋಡುತ್ತಿದ್ದಳು.

ವಾಸು ಸೈಕಲ್ಲಿಂದ ಕೆಳಗಿಳಿಯುವುದೇ ತಡ ಸರಳಾ ತವಕದಿಂದ "ನಿಮ್ಮತಾಯಿ, ತಂದೆ ನಾಳೆ ಬರುತ್ತಾರಂತೆ. ಈಗ ಸ್ವಲ್ಪಹೊತ್ತಿನ ಹಿಂದೆ ಅವರಿಂದ ಕಾಗದ ಬಂದಿದೆ"—ಎಂದಳು.

ವಾಸು ಯಾವ ಬಗೆಯ ಉದ್ವೇಗವನ್ನೂ ವ್ಯಕ್ತಪಡಿಸಲಿಲ್ಲ.

"ನಾಳೆ ಊಟದ ಹೊತ್ತಿಗೇ ಬರ್ತೀವಿ ಎಂದು ಬರೆದಿದ್ದಾರೆ"—ಸರಳಾ ಮತ್ತೊಮ್ಮೆ ಹೇಳಿದಳು. ತಾನು ಇಷ್ಟೊಂದು ಮುಖ್ಯವಾದ ಸುದ್ದಿಹೇಳುವಾಗ ವಾಸು ಔದಾಸೀನ್ಯದಿಂದಿರುವುದು ಅವಳಿಗೆ ಸಹನವಾಗಲಿಲ್ಲ.

"ಹಳ್ಳಿಯಿಂದ ಬಾಳೆಗೊನೆಗಳು, ತೆಂಗಿನಕಾಯಿ ತರಬಹುದು. ಅಲ್ಲವೇಂದ್ರೆ?"

"ಓಹೋ—ಅಮ್ಮಾವರ ಉದ್ವೇಗದ ಕಾರಣ ಈಗ ತಿಳಿಯಿತು"—ವಾಸು ಕೊನೆಗೂ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ.

"ಬಿಡಿ ನಾನೇನು ಅವರು ತರುವ ಹಣ್ಣಿಗೆ ಗತಿಗೆಟ್ಟಿಲ್ಲ. ನೀವು ನನಗೆ ಯಾವುದು ಕಡಿಮೆ ಮಾಡಿದೀರಿ."

"ನಿನಗೆ ಹೊಸಸೀರೆ ಬೇಕಾಗಿತ್ತೇನು?".

"ಏನೂ ಬೇಕಿಲ್ಲ."

"ಹಾಗಾದರೆ ನನ್ನ ಯಾಕೆ ವ್ಯರ್ಥವಾಗಿ ಸ್ತುತಿಸುತ್ತಿರುವೆ?''

"ನಿಮ್ಮ ಕೈಲಿ ಯಾರು ಮಾತನಾಡಿ ಗೆಲ್ಲುತ್ತಾರೆ? ಪಾವು ತಂದಿದೀರಾ?"—ಸರಳಾ ಮತ್ತೆ ಕೇಳಿದಳು.

"ಸಿಕ್ಕಲಿಲ್ಲ. ಇನ್ನು ಹದಿನೈದು ದಿನ ಬಿಟ್ಟುಕೊಂಡು ಬಂದರೆ ತರಿಸಿ ಕೊಡುತ್ತೇನಿ ಎಂದಿದ್ದಾನೆ ಅಂಗಡಿಯವನು. ಅಷ್ಟರಲ್ಲಿ ಅಮ್ಮ ಬಂದಿರುತ್ತಾಳೆ. ಅವಳಿಂದ ಅಡಿಗೆ ಮಾಡುವುದನ್ನು ಕೇಳಿ, ನೋಡಿ, ಜೊತೆಯಲ್ಲಿ ನೀನೂ ಮಾಡಿ ಕಲಿತುಕೋ."

ವಾಸುವಿನ ಮಾತಿಗೆ ಸರಳಾ ಪ್ರತ್ಯುತ್ತರ ಕೊಡಲಿಲ್ಲ. ಅವಳು ನಿಲುವುಗನ್ನಡಿಯ ಮುಂದೆ ನಿಂತು ಸೀರೆಯ ನಿರಿಗಳನ್ನು ಓರಣ ಮಾಡಿಕೊಳ್ಳುವುದರಲ್ಲಿ ಮಗ್ನಳಾಗಿದ್ದಳು.

ಅವಳ ಮಹತ್ಕಾರ್ಯಕ್ಕೆ ಅಡ್ಡಿಬರಲು ವಾಸು ಇಷ್ಟವಿಲ್ಲದೆ ಸುಮ್ಮನಾದ.

ಅತ್ತೆ, ಮಾವ ಬರಲಿರುವರೆಂದು ತಿಳಿದು ಸರಳೆ ಮನೆಯನ್ನೆಲ್ಲಾ ಸ್ವಚ್ಛಗೊಳಿಸಲು ಸೆರಗನ್ನು ಅಡ್ಡಗಟ್ಟಿ ನಿಂತಳು. ಮೊದಲು ಮನೆಯಲ್ಲಿದ್ದ ಇಲ್ಲಣವನ್ನು ಜಾಡಿಸಿ, ನಂತರ ಸರಳ ಮನೆಯನ್ನು ಗುಡಿಸಿದಳು ಹೆಂಡತಿ ಮನೆಯನ್ನು ಚೊಕ್ಕಟವಾಗಿಡುವುದರಲ್ಲಿ ಶ್ರದ್ಧೆ ವಹಿಸುತ್ತಿರುವುದನ್ನು ನೋಡಿ ವಾಸುವಿಗೆ ನಗುಬಂತು.

ಮೇಜಿನ ಮೇಲಿದ್ದ ಪುಸ್ತಕಗಳನ್ನು ಜೋಡಿಸಿ ತೆಗೆದು ಎಲ್ಲವನ್ನೂ ಮಂಚದ ಕೆಳಗಿದ್ದ ಟ್ರಂಕಿನಲ್ಲಿ ತುರುಕಿದಳು. ಟ್ರಂಕಿನಲ್ಲಿದ್ದ ಬಟ್ಟೆಗಳನ್ನು ಜೋಡಿಸಿ ಹಾಸಿಗೆಯ ಕೆಳಗೆ ಇಸ್ತ್ರಿಯಾಗಲೆಂದು ಇರಿಸಿ, ಬಿಳಿಯ ಮಗ್ಗುಲು ಹಾಸನ್ನು ಹಾಸಿಗೆಗೆ ಕವುಚಿ ಹಾಕಿದಳು.

ಹಾಸಿಗೆಯ ತುಂಬಾ ಹರಡಿದ್ದ ಪುಸ್ತಕಗಳನ್ನು ಎಲ್ಲಿಡುವುದೆಂದು ತೋರದೆ ಸರಳ ಸಲಹೆಗಾಗಿ ವಾಸುವಿನ ಬಳಿಗೆ ಬಂದಳು.

''ನಮ್ಮ ಮನೆಗೆ ಒಂದು ಬೀರುವಿನ ಅಗತ್ಯವಿದೆ ಎಂದು ನಿಮಗೆ ನಿಸುವುದಿಲ್ಲವೇ?"

"ಇಲ್ಲ."

"ಅಯ್ಯೋ ಹೇಳಿ."

"ಖಂಡಿತ ಇಲ್ಲ."

"ಹಾಗಾದರೆ ಈ ಪುಸ್ತಕಗಳನ್ನು ಎಲ್ಲಿಡುವುದು?"

"ಮಂಚ, ಮೇಜು, ರೇಡಿಯೋ, ಟೇಬಲ್ಲು, ಕುರ್ಚಿ ...ಚಾಪೆ ಇತ್ಯಾದಿಗಳ ಮೇಲೆ ಇಟ್ಟರೆ ಸಾಕು."

"ಸರಿ, ಮಂಚದ ಮೇಲೆ ಪುಸ್ತಕ ಹರಡಿದರೆ ಮಲಗುವಾಗ ಏನು ಮಾಡುವುದು?"

"ಇಷ್ಟು ದಿನ ಏನು ಮಾಡುತ್ತಿದ್ದೆವೋ ಅದನ್ನೇ ಮಾಡುವುದು. ಎಲ್ಲವನ್ನೂ ಮಂಚದಿಂದ ಒತ್ತರಿಸಿ ನೆಲದಮೇಲೆ ಹಾಕುವುದು."

"ನೆಲ ಗುಡಿಸುವಾಗ?"

ಸರಳೆಯ ಪಾಲಿಗೆ ಇದೊಂದು ಘೋರ ಸಮಸ್ಯೆಯಾಗಿತ್ತು.

"ಆಗ ಎಲ್ಲವನ್ನೂ ಮೇಜಿನ ಮೇಲಿರಿಸುವುದು."

"ಬರೆಯಬೇಕಾಗಿ ಬಂದರೆ?"

"ಆಗ ಭೂಮಿತಾಯಿ ಇದ್ದೇ ಇದಾಳೆ—ನಾವು ಎಸೆದಿದ್ದನ್ನೆಲ್ಲಾ ಬಾಚಿ ತಬ್ಬಿಕೊಳ್ಳುವುದಕ್ಕೆ."

"ಅಯ್ಯೋ, ಅದು ಹೇಗಾಗುತ್ತೆ?"

"ಹೀಗೆ"—ಎನ್ನುತ್ತಾ ವಾಸು ಸರಳೆಯನ್ನು ಎರಡುಕಡೆಯಿಂದಲೂ ಬಳಸಿ ಹಿಡಿದ.

"ಬೀರುವಿದ್ದರೆ ಎಲ್ಲವನ್ನೂ ಜೋಡಿಸಿಟ್ಟರೆ ಮನೆಯ ಹರದ ಅರ್ಧಕ್ಕರ್ಧ ಕಡಿಮೆಯಾಗುತ್ತದೆ. ಬಿಡಿ, ಬೀಳಿ ಬೆಂದಿದೆಯೋ ಇಲ್ಲವೋ ನಾನು ನೋಡಬೇಕು."

"ಬೇಳೆ ಬೆಂದಿದೆ"—ವಾಸು ಚೇಷ್ಟೆ ಮಾಡಿದ.

"ನಿಮ್ಮ ಒಗಟೆ ನಿಮಗೇ ಪ್ರೀತಿ"

"ನನ್ನ ಬೇಳೆ ನಿನ್ನ ಹತ್ತಿರ ಎಂದೋ ಬೆಂದುಹೋಗಿದೆ ಸರಳಾ – ಆ ದಿನ ಆಸ್ಪತ್ರೆಯಲ್ಲಿ ನೀನು ನನ್ನಕಡೆ ನೋಡಿದಾಗಲೇ ..."

ಸರಳೆಗೆ ಒಳಗೊಳಗೆ ಆನಂದವಾದರೂ ಮೇಲೆ ಯಾವುದನ್ನೂ ವ್ಯಕ್ತಪಡಿಸದೇ ಬೇಸರ ನಟಿಸಿದಳು.

"ಚಕ್ಕಂದ ಸಾಕುಬಿಡಿ. ಮದುವೆಯಾಗಿ ನಾಲ್ಕು ವರ್ಷಗಳಾದವು.

ಆದರೂ ಹೊಸದಾಗಿ ಮದುವೆಯಾದ ಗಂಡಸಿನ ಹಾಗೆ ಆಡ್ತಿದೀರ."

"ಇಗೋ ಬಿಟ್ಟೆ"—ಎನ್ನುತ್ತಾ ವಾಸು ದೂರ ಸರಿದಾಗ ಸರಳೆಗೆ ನಿಜವಾಗಿಯೂ ನಿರಾಶೆಯಾಯಿತು.

ಏನು ಗಂಡಸರೋ, ತೋರಿಕೆಗಾಗಿ ಕೆಲವು ಮಾತನ್ನಾಡಿದರೂ ಹಾಗೆ ಆಡಿದ್ದೇ ಸಾಕೆಂದು ತಿಳಿದು ವರ್ತಿಸುತ್ತಾರೆ. ಅವರ ತಲೆಯಲ್ಲಿ ಏನು ಬುದ್ಧಿ ಇದೆಯೋ ಆ ಪರಮಾತ್ಮನೇ ಬಲ್ಲ. ಬೇಕಾಗಿರುವುದನ್ನು ಬೇಡ ವೆಂದೂ, ಬೇಡವಾಗಿರುವುದನ್ನು ಬೇಕೆಂದೂ ಹೇಳುವುದು ಹೆಂಗಸರ ಸಹಜ ಬುದ್ಧಿ ಎಂದು ಈ ಗಂಡಸರು ಯಾವಾಗ ತಿಳಿಯುವರೋ ? ನೀರಿ ನಲ್ಲಿ ಮೀನಿನ ಹೆಜ್ಜೆ ನೋಡಬಹುದು, ಬಿಳಿಯ ಕಾಗೆ ಕಾಣಬಹುದು ಎಂದು ವೃಥಾ ಪದ್ಯ ಕಟ್ಟುತ್ತಾರೆ.

"ಏನೇ ಅಷ್ಟೊಂದು ಯೋಚನೆ ಮಾಡ್ತಿದಿಯಾ ?'' ಎಂದ ವಾಸು.

"ಏನಿಲ್ಲ"—ಸರಳ ಚುಟುಕಾಗಿ ಉತ್ತರಿಸಿದಳು

ಆಗ ಅವಳ ಮನಸ್ಸಿನಲ್ಲಿ ಒಂದು ದೊಡ್ಡ ಆಂದೋಲನ ನಡೆಯು ತ್ತಿತ್ತೆಂದು ವಾಸು ಕನಸು ಮನಸಿನಲ್ಲಿಯಾದರೂ ಊಹಿಸಿಯಾನೆ?

ಸರಳ ಒಲೆಯ ಮುಂದೆ ಕುಳಿತು ಬೇಳೆಯನ್ನು ಸೌಟಿನಿಂದ ತೆಗೆದು ಪರೀಕ್ಷಿಸಿದಳು. ಬೇಳೆ ಬೆಂದಿರಲಿಲ್ಲ. ಸರಳ ಒಲೆಗೆ ಮತ್ತಷ್ಟು ಇಜ್ಜಲನ್ನು ತುಂಬಿ ಒಲೆಯನ್ನು ಬೀಸುತ್ತ ಕುಳಿತಳು.

ವಾಸು ಕೆಲವು ನಿಮಿಷಗಳ ಹಿಂದೆ ಆಡಿದ ಮಾತು ಮತ್ತೆ ಮತ್ತೆ ಅವಳ ಹೃದಯದಲ್ಲಿ ಪ್ರತಿಧ್ವನಿಸಿತು.

* * *

"ಆಸ್ಪತ್ರೆಯಲ್ಲಿ... ನೀನು ನನ್ನಕಡೆ ನೋಡಿದಾಗ .. "

ವಾಸುವಿನ ಮಾತಿನಲ್ಲಿ ಸತ್ಯಾಂಶವಿತ್ತು. ವಾಸು ವೈದ್ಯನೂ ಅಲ್ಲ. ಸರಳಾ ನರ್ಸೂ ಆಗಿರಲಿಲ್ಲ. ಆದರೂ ಅವರಿಬ್ಬರ ಭೇಟಿ ಆಸ್ಪತ್ರೆಯಲ್ಲಿ ಅಂದರೆ ನರ್ಸಿಂಗ್ ಹೋಂನಲ್ಲಿ ಆಯಿತು. ಅವರಿಬ್ಬರೂ ರೋಗಿ ಗಳಾಗಿಯೂ ಅಲ್ಲಿಗೆ ದಾಖಲಾಗಿರಲಿಲ್ಲ.

ಸುಮಾರು ನಾಲ್ಕು ವರ್ಷಗಳ ಹಿಂದಿನ ಮಾತು. ಸರಳೆಯ ವಿದ್ಯಾ ಭ್ಯಾಸ ಆದೇ ತಾನೆ ಮುಗಿದಿತ್ತು. ಬಿ. ಎ. ಡಿಗ್ರಿ ಪಡೆದ ಅಪೂರ್ವ ಸಂತೋಷದಿಂದ ಅವಳು ಚಪಲೆಯಾಗಿ ಸ್ನೇಹಿತರೊಡಗೂಡಿ ಎಲ್ಲ ಕಡೆ ಯಲ್ಲೂ ಸುತ್ತುತ್ತಿದ್ದಳು.

ಸರಳೆಯ ತಾಯಿ, ತಂದೆ ಯಾವುದೋ ಹಳ್ಳಿಯಲ್ಲಿರುತ್ತಿದ್ದರು. ಸರಳಾ ಚಿಕ್ಕಮ್ಮನ ಮನೆಯಲ್ಲಿ ಸ್ವಚ್ಛಂದದಿಂದ ಬೆಳೆದಳು. ಮಕ್ಕಳಿಲ್ಲದ ಸರಳೆಯ ಚಿಕ್ಕಮ್ಮ ಸರಳೆಯನ್ನು ಎರಡುವರ್ಷದ ಮಗುವಾದಾಗಿನಿಂದಲೂ ತಮ್ಮ ಮನೆಯಲ್ಲಿರಿಸಿಕೊಂಡಿದ್ದರು. ಅಂದಿನಿಂದ ಸರಳೆ ತಾಯಿ, ತಂದೆಯ ರಿಗೆ ದೂರವಾದಳು. ಸರಳೆಯ ತಾಯಿ, ತಂದೆಗೆ ಮಗಳ ಮೇಲಣ ಅಭಿಮಾನ ಸಂಪೂರ್ಣವಾಗಿ ಮಾಯವಾಗಿಲ್ಲದಿದ್ದರೂ ಸರಳೆಗೆ ಅವರ ಮೇಲೆ ವಾತ್ಸಲ್ಯ ವಿರಲಿಲ್ಲ. ಚಿಕ್ಕಮ್ಮ, ಚಿಕ್ಕಪ್ಪನಿಂದ ಅವಳು ಅಪರಿಮಿತವಾಗಿ ಮುದ್ದಿಸಲ್ಪಟ್ಟಿದ್ದಳು. ಅವರ ಮಮತೆಯ ಮಡಿಲಿನಲ್ಲಿ ಸರಳಾ ಸಣ್ಣ ಹೆಂಗಸಾದಳು.

ಡಿಗ್ರಿ ಪರೀಕ್ಷೆ ಮುಗಿದ ಕೂಡಲೇ ಪಂಕಜಮ್ಮ ಸರಳೆಗಾಗಿ ವರನನ್ನು ಹುಡುಕ ತೊಡಗಿದರು. ಆದರೆ ಸರಳೆಗೆ ಮಾತ್ರ ಇನ್ನೂ ಮದುವೆಯಾಗುವ ಆಸೆ ಹೃದಯದಲ್ಲಿ ಮೊಳೆತಿರಲಿಲ್ಲ.

ಎಲ್ಲಿಯಾದರೂ ಪ್ರಯತ್ನಪಟ್ಟರೆ ತನಗೊಂದು ಐನೂರು ರೂಪಾಯಿನ ಕೆಲಸ ದೊರೆಯುವುದಿಲ್ಲವೇ? ತಿಂಗಳಿಗೆ ಐನೂರು ರೂಪಾಯಿ ಸಂಪಾದಿಸಿ ಹಾಯಾಗಿ ಕಣ್ಣಿಗೆ ಬೇಕಾದ ಸೀರೆಗಳನ್ನು ಕೊಂಡು, ಪ್ರತಿನಿತ್ಯ ಬಗೆ ಬಗೆಯಾದ ತಿಂಡಿತಿಂದು, ಊರಿಗೆ ಬಂದ ಸಿನಿಮಾಗಳನ್ನೆಲ್ಲಾ ಸ್ನೇಹಿತರೊಡನೆ ನೋಡುತ್ತಾ ಕಾಲ ಕಳೆಯುವುದೆಂದು ಅವಳು ತೀರ್ಮಾನಿಸಿಬಿಟ್ಟಿದ್ದಳು.

ಮದುವೆಯಾದರೆ ಹೆಂಗಸು ತನ್ನ ಸ್ವಾತಂತ್ರ್ಯವನ್ನು ಗಂಡನಿಗೆ ಮಾರಿಕೊಂಡಂತೆಯೂ, ಅವಳು ಕೊನೆಯವರೆವಿಗೆ ಗಂಡಸಿನ ಗುಲಾಮಳಾಗಿ ಮಕ್ಕಳನ್ನು ಹೆರುವ ಯಂತ್ರವಾಗಿಯೇ ಉಳಿಯಬೇಕಾಗುವುದೆಂದು ತಿಳಿದಿದ್ದಳು.

ಹದಿನೆಂಟರ ಹುಚ್ಚು ಹುಡುಗಿ ಲೋಕವನ್ನೇ ಆಳಬಲ್ಲೆ ಎಂದು ನಂಬಿದ್ದರೂ ಪಂಕಜಮ್ಮ, ರಂಗಸ್ವಾಮಿಯವರು ಮಾತ್ರ ಸರಳೆಗಾಗಿ ವರನನ್ನು ಹುಡುಕುವ ಕೆಲಸವನ್ನು ನಿಲ್ಲಿಸಿರಲಿಲ್ಲ.

"ಚಿಕ್ಕಮ್ಮಾ, ನನಗೆ ಕೆಲಸವಾದ ಕೂಡಲೇ ನಿನಗೊಂದು ಸೀರೆ, ಚಿಕ್ಕಪ್ಪನಿಗೊಂದು ಜೊತೆ ಪಂಚೆ ತರ್ತೀನಿ''—ಎನ್ನುತ್ತಿದ್ದಳು ಸರಳಾ—ತನಗೆ ಮಾಡಲು ಬೇರೇನೂ ಕೆಲಸವಿಲ್ಲದಾಗ.

ಸರಳೆಯ ಮುಗ್ಧ ಮಾತುಗಳನ್ನು ಕೇಳಿ ಪಂಕಜಮ್ಮ ನಗುತ್ತಿದ್ದರು.

"ನಿಮ್ಮನ್ನು ದಿನಾ ಹೋಟಲಿಗೆ ಕರೆದುಕೊಂಡು ಹೋಗ್ತೀನಿ—ಚಿಕ್ಕಮ್ಮಾ, ನಂಗೆ ನಿನ್ನೆ ಮಾಡಿದ ಓಂಪುಡಿ ಇದ್ದರೆ ಕೊಡಿ"—ಎನ್ನುತ್ತಾ ಓಂಪುಡಿಯ ನೆನಪಾಗುತ್ತಲೇ ಸರಳೆ ತಾನಾಡುತ್ತಿದ್ದ ಮಾತುಗಳನ್ನೆಲ್ಲಾ

ಮರೆತು ಓಂಪುಡಿಯ ಡಬ್ಬವನ್ನು ಹುಡುಕಲು ಪ್ರಯತ್ನಿಸುತ್ತಿದ್ದಳು.

ಸ್ವಲ್ಪ ಓಂಪುಡಿಯನ್ನು ಒಂದು ತಟ್ಟೆಯಲ್ಲಿರಿಸಿಕೊಂಡು, ಕೈಗೊಂದು ಕಾದಂಬರಿ ಹಿಡಿದಳೆಂದರೆ ಸರಳ ಇಹ ಪ್ರಪಂಚವನ್ನೇ ಮರೆತುಬಿಡುತ್ತಿದ್ದಳು. ರಾತ್ರಿಯ ಊಟಕ್ಕೆ ಚಿಕ್ಕಮ್ಮ ಕೂಗಿದಾಗಲೇ ಸರಳೆ ಕಾದಂಬರಿ ಪ್ರಪಂಚದಿಂದ ಎಚ್ಚರಗೊಂಡು ಭೂಮಿಗಿಳಿಯುತ್ತಿದ್ದಳು.

ಭವಿಷ್ಯದ ಬಗ್ಗೆ ಹಗಲುಗನಸು ಕಟ್ಟುವುದರಲ್ಲೇ ಸರಳಾ ತನ್ನ ಸಮಯವನ್ನು ವಿನಿಯೋಗಿಸುತ್ತಿದ್ದಳು. ಅವಳ ಕನಸಿನ ತುಂಬಾ ರಂಗು ರಂಗಿನ ಸೀರೆಗಳು, ತಿಂಡಿಗಳು, ಸಿನಿಮಾಗಳು, ಗೆಳತಿಯರ ಹೊರತಾಗಿ ಬೇರೆ ಏನೂ ಇರಲಿಲ್ಲ.

ಆಗಾಗ್ಗೆ ಕತೆ,ಕಾದಂಬರಿಗಳನ್ನು ಬರೆಯಬೇಕೆಂಬ ಚಪಲ ಅವಳನ್ನು ಕಾಡುತ್ತಿತ್ತು. ಇಂಗ್ಲೀಷ್ ಕತೆಯೊಂದನ್ನು ಕನ್ನಡಕ್ಕೆ ಕದ್ದು ಹಾಕಿ,ಅದು ಸಣ್ಣ ಮಾಸಪತ್ರಿಕೆಯೊಂದರಲ್ಲಿ ಪ್ರಕಟವಾದಾಗ ಸರಳೆಗಾದ ಆನಂದ ಅಷ್ಟಿಷ್ಟಲ್ಲ. ಕತೆ ಪ್ರಕಟವಾಗಿ ಪುಸ್ತಕ ಅವಳ ಕೈಗೆ ಬಂದೊಡನೆಯೇ ಅವಳು ತಾನು ಸಾಹಿತ್ಯ ಸಮ್ಮೇಳನವೊಂದರ ಅಧ್ಯಕ್ಷಿಣಿಯಾಗಿ, ನೂರಾರು ಎತ್ತುಗಳಿಂದ ಅಲಂಕೃತವಾದ ಗಾಡಿಯಲ್ಲಿ ಮೆರವಣಿಗೆ ಹೋದಂತೆ ಹಗಲು ಕನಸು ಕಂಡಳು.

ಪೆದ್ದಿಯಾದ ವಿಮಲ ಆನರ್ಸಿನಲ್ಲಿ ಪ್ರೊಫೆಸರ 'ಪೆಟ್' ಆಗಿರದಿದ್ದರೆ ರ್‍ಯಾಂಕು ಬರಲು ಸಾಧ್ಯವಿತ್ತೇ ಎಂಬ ಮುಖ್ಯ ವಿಷಯವನ್ನು ತನ್ನೊಡನೆ ಚರ್ಚಿಸಲು ಸಂಜೆ ಆನಂದವಲ್ಲಿ ಬಂದಾಗ ಸರಳ ತನ್ನ ಕತೆಯನ್ನು ಅವಳಿಗೆ ತೋರಿಸಿದಳು.

ವಿಮಲ, ಪ್ರೊಫೆಸರರ ಬಗ್ಗೆ ಮಾತನಾಡಲು ಬಂದ ಆನಂದವಲ್ಲಿಗೆ ಸರಳೆಯ ಕತೆಯಿಂದಾಗಿ ಕೊಂಚ ರಸಭಂಗವಾದರೂ, ಅವಳು ಗೆಳತಿಯ ಮನಸ್ಸನ್ನು ನೋಯಿಸಲಾರದೆ ಕತೆಯನ್ನು ಓದಿದಳು.

"ಲೇ ಸರಳಾ, ಕತೆ ನಿಜವಾಗಿಯೂ ಚೆನ್ನಾಗಿದೆ ಕಣೆ"–ಆನಂದವಲ್ಲಿ ತನ್ನ ವಿಮರ್ಶೆಯನ್ನು ಸರಳೆಗೆ ತಿಳಿಸಿದಳು. ಸರಳೆಯ ಮುಖ ಹಿಗ್ಗಿನಿಂದ ಊರಗಲವಾಯಿತು.

"ನನ್ನ ಚಿಕ್ಕಮ್ಮ, ಚಿಕ್ಕಪ್ಪಾನೂ ಹಾಗೇ ಎಂದರು ಕಣೆ." ಅವಳ ಕತೆಯ ವಾಚಕರು ಚಿಕ್ಕಮ್ಮ, ಚಿಕ್ಕಪ್ಪರಲ್ಲದೇ ಬೇರೆ ಯಾರಾಗಲು ಸಾಧ್ಯವಿತ್ತು.

''ನಿಜವಾಗೂ ಚೆನ್ನಾಗಿದೆ.''

"ಅಹಾ! ಚಿಕ್ಕಮ್ಮ ಹಾಗೆ ಹೇಳಿದಾಗ ನಾನೆಂದುಕೊಂಡೆ ಅಭಿಮಾನಕ್ಕೆ ಹಾಗೆ ಹೇಳುತ್ತಿರಬಹುದೂಂತ, ನಿಜವಾಗಿಯೂ ಚೆನ್ನಾಗಿದೆಯಾ ?"

"ಹೂಂ. ನೀನು ಮುಂದೆಯೂ ಕತೆ ಕಾದಂಬರಿಗಳನ್ನು ಬರಿ. ಬರೆಯುವ ಕೆಲಸ ಖಂಡಿತ ನಿಲ್ಲಿಸಬೇಡ"—ಆನಂದವಲ್ಲಿ ಗೆಳತಿಯನ್ನು ಉತ್ತೇಜಿಸಿದಳು.

"ಒಂದು ಗುಟ್ಟು ಹೇಳಲಾ"—ಸರಳಾ ಅತ್ತಿತ್ತ ನೋಡುತ್ತಾ ಪಿಸು ಧ್ವನಿಯಲ್ಲಿ ಆನಂದವಲ್ಲಿಯನ್ನು ಕೇಳಿದಳು.

''ಹೂಂ.''

"ನೀನು ಯಾರಿಗೂ ಹೇಳಬಾರದು ಮತ್ತೆ."

''ಖಂಡಿತ ಇಲ್ಲ.''

''ನಾನು ಯಾರಿಗೂ ಹೇಳಿಲ್ಲ. ನಮ್ಮ ಚಿಕ್ಕಮ್ಮ, ಚಿಕ್ಕಪ್ಪನಿಗೆ ಮಾತ್ರ ಹೇಳಿದೀನಿ. ಈಗ ನಿನಗೆ ಮಾತ್ರ ಹೇಳ್ತೀನಿ."

''ಹೇಳು ಪರವಾಗಿಲ್ಲ''—ಎಂದು ಆನಂದವಲ್ಲಿ ಸಾಕಷ್ಟು ಭರವಸೆ ಕೊಟ್ಟಮೇಲೆ ಸರಳಾ

''ಆ ಕತೆಯನ್ನು ಇಂಗ್ಲೀಷ್ ಕತೆಯೊಂದರ ಆಧಾರದಿಂದ ಬರೆದಿದ್ದೀನಿ"—ಎಂದಳು.

''ಹೌದಾ? ಆದರೆ ನೀನು ಹಾಗೆ ಕತೆಯ ಕೆಳಗೆ ಬರೆದಿಲ್ಲವಲ್ಲಾ ಯಾಕೆ?"

"ಯಾಕೋ ಬರೆಯಲಿಲ್ಲ. ಮರೆತು ಹೋಯಿತು"—ಸರಳಾ ವ್ಯಥಿತಳಂತೆ ನುಡಿದಳು.

''ಸರಳಾ, ನಿನಗೆ ಜೈಲಿನಲ್ಲಿರಲು ಆಸೆಯೇ?"—ಎಂದು ಆನಂದವಲ್ಲಿ ಎಚ್ಚರಿಸುವ ದನಿಯಲ್ಲಿ ಕೇಳಿದಾಗ ಸರಳಾ ಬೆರಗಾಗಿ 'ಇಲ್ಲಮ್ಮ'-ಎಂದಳು

"ಹಾಗಾದರೆ ಇನ್ನು ಮೇಲೆ ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವ ಕತೆಗಳನ್ನು ಅನುವಾದಿತ ಎಂದು ನೀನು ತಿಳಿಸುವುದು ಕ್ಷೇಮ. ಇಲ್ಲದಿದ್ದರೆ 'ಕೃತಿಚೌರ್ಯ' ಎಂದು ನಿನ್ನ ಮೇಲೆ ಕೇಸು ಹಾಕಬಹುದು."

ಸರಳಾ ಬೆವರಿದಳು. ಮುಂದೆರಡು ದಿನ ಪೋಲೀಸಿನವನು ಬಂದು ತನ್ನನ್ನು ಕೈದು ಮಾಡಿ ಜೈಲಿಗೆ ಕರೆದೊಯ್ದಂತೆ ದುಸ್ವಪ್ನವನ್ನು ಕಂಡು ಎಚ್ಚರವಾಗಿತ್ತು.

''ಇನ್ನು ಮೇಲೆ ಹಾಗೆ ಮಾಡೋಲ್ಲ"— ಎಂದು ಸರಳಾ ಗೆಳತಿಯ ಕೈಮೇಲೆ ಕೈಹಾಕಿ ಭಾಷೆಯಿತ್ತಳು.

"ಈ ಸಮಾಚಾರಾನ ಯಾರಿಗೂ ಹೇಳಬೇಡ" ಎಂದು ಸರಳಾ ಗೆಳತಿಯೊಡನೆ ಆಣೆ ಹಾಕಿ ಹೇಳಿಕೊಂಡಳು.

ಆನಂದಪಲ್ಲಿ ಗೆಳತಿಗೆ ಅಭಯವಿತ್ತು ಹೋಗುವಾಗ ತನಗೆ ದಾರಿಯಲ್ಲಿ ಸಿಕ್ಕಿದ ಶ್ರೀಮತಿಯೊಡನೆ ಗುಟ್ಟಿನ ಸಮಾಚಾರ ಹೇಳಿಅವಳಿಂದ ಯಾರಿಗೂ ಹೇಳುವುದಿಲ್ಲವೆಂದು ಭಾಷೆ ಹಾಕಿಸಿಕೊಂಡು ಮುಂದೆ ಸಾಗಿದಳು.

ಕೆಲವು ದಿನಗಳ ನಂತರ ಒಮ್ಮೆ ಸಿನಿಮಾ ಮಂದಿರದಲ್ಲಿ ಎಲ್ಲ ಗೆಳತಿ ಯರೂ ಸೇರಿದಾಗ ತನ್ನಕತೆಯ ಗುಟ್ಟನ್ನು ಎಲ್ಲರೂ ಗುಟ್ಟಾಗಿರಿಸಿದ್ದಾರೆ ಎಂದು ತಿಳಿದು ಸರಳೆಗೆ ಕೊಂಚ ಅವಮಾನವಾದಂತಾಯಿತು. ಅವಳು ಹಿಂತಿರುಗಿ ಮನೆಗೆ ಬರುವಾಗ ಆನಂದಪಲ್ಲಿಗೆ

"ನೋಡೆ, ನಾನು ಕತೆಯ ಗುಟ್ಟು ಎಷ್ಟು ರಹಸ್ಯವಾಗಿ ಇಟ್ಟಿದ್ದೆ. ನಿನ್ನ ಹೊರತು ಬೇರೆ ಯಾರಿಗೂ ಹೇಳಿರಲಿಲ್ಲ. ಆದರೂ ಅದು ಎಲ್ಲರಿಗೂ ಹೇಗೋ ಗೊತ್ತಾಗಿ ಹೋಗಿದೆ''— ಎಂದಳು.

ಆನಂದಪಲ್ಲಿ "ಎಲ್ಲಾ ಆ ಶ್ರೀಮತಿಯ ಕೆಲಸ. ನಾನು ಅವಳಿಗೆ ಯಾರಿಗೂ ಹೇಳಬೇಡ. ಬಹಳ ಗುಟ್ಟಿನ ವಿಷಯ ಎಂದು ಹೇಳಿದ್ದರೆ ಆ ಬಾಯಿಬಡಕಿ ಎಲ್ಲರಿಗೂ ಹೇಳಿಬಿಟ್ಟಿದ್ದಾಳೆ" ಎಂದು ತಪ್ಪನ್ನೆಲ್ಲ ಶ್ರೀಮತಿಯ ತಲೆಯ ಮೇಲೆ ಹೊರಸಿತನ್ನ ಮನಸ್ಸಿನ ದುಗುಡವನ್ನು ಕಳದುಕೊಂಡಳು.

ಆಗೊಮ್ಮೆ, ಈಗೊಮ್ಮೆ ತನ್ನ ಕತೆ ಪ್ರಕಟವಾದಾಗ ಸರಳಾ ಹಿಗ್ಗುತ್ತಿದ್ದಳು.

ಒಂದು ಸಂಜೆ ಹುರಿಗಾಳನ್ನು ತಿನ್ನುತ್ತಾ ಸರಳೆ ಯಾವುದೋ ಕಾದಂಬರಿಯಲ್ಲಿ ಮಗ್ನಳಾಗಿದ್ದಾಗ ಪಂಕಜಮ್ಮ ಅವಳ ಬಳಿಗೆ ಬಂದು

"ಸರಳಾ, ನಾಳೆನಾನು ಆಸ್ಪತ್ರೆಗೆ ಅಡ್ಮಿಟ್ ಆಗುತ್ತೇನೆ. ಒಂದು ವಾರ ನೀನು ಕೊಂಚ ಮನೆ ನೋಡಿಕೊಂಡಿರುತ್ತೀಯಾ?" ಎಂದರು.

ಚಿಕ್ಕಮ್ಮ ಆಸ್ಪತ್ರೆಗೆ ಸೇರಲಿರುವ ಸುದ್ದಿ ಸರಳೆಗೆ ತುಂಬಾ ಗಾಬರಿ ಯನ್ನುಂಟು ಮಾಡಿತು?".

''ಯಾಕೆ ಚಿಕ್ಕಮ್ಮ ಏನಾಯಿತು.

"ಏನಿಲ್ಲ. ನಿನ್ನೆ ಲೇಡಿ ಡಾಕ್ಟರ್ ಹತ್ತಿರ ಹೋಗಿದ್ದೆ. ಒಂದು ಸಣ್ಣ ಆಪರೇಷನ್ ಆದರೆ ಮಕ್ಕಳಾದರೂ ಆಗಬಹುದು ಎಂದು ಅವರು ಹೇಳಿ

ದರು. ಇದೊಂದು ಕೊನೆಯ ಪ್ರಯತ್ನ ಮಾಡಿಬಿಡೋಣ ಎಂದು ನಿರ್ಧರಿಸಿದ್ದೇನೆ. ಇದರಮೇಲೆ ದೈವಚಿತ್ತ."

ಪಂಕಜಮ್ಮ ಸರಳೆಯಿಂದ ಯಾವುದನ್ನೂ ಮುಚ್ಚಿಡುತ್ತಿರಲಿಲ್ಲ. ಈಗ ಸರಳಾ ಬೆಳೆದ ಹುಡುಗಿಯಾದುದರಿಂದ ಆಕೆ ಆಗಾಗ್ಗೆ ಸರಳೆಯ ಸಲಹೆಯನ್ನು ಪಡೆಯುತ್ತಿದ್ದುದೂ ಉಂಟು.

"ಆಗಲಿ ಚಿಕ್ಕಮ್ಮಾ, ನೋಡಿಕೋತೀನಿ" —ಎಂದು ಚಿಕ್ಕಮ್ಮನನ್ನು ಸರಳಾ ಸಮಾಧಾನಗೊಳಿಸಿದಳು.

ಮಾರನೆಯ ದಿನ ಬೇಗ್ಗೆ ಚಿಕ್ಕಮ್ಮ ಆಸ್ಪತ್ರೆಗೆ ದಾಖಲಾದರು. ಸರಳೆಯೂ ಅವರೊಡನೆ ನರ್ಸಿಂಗ್ ಹೋಂಗೆ ಹೋಗಿದ್ದಳು.

ಎರಡು ಮಂಚಗಳಿದ್ದ ವಾರ್ಡಿನಲ್ಲಿ ಪಂಕಜಮ್ಮ 'ರೋಗಿ' — ಎನಿಸಿಕೊಂಡು ಮಲಗಿದರು.

"ಸರಳಾ, ನೀನು ಮನೆಗೆ ಹೋಗಮ್ಮ. ಇವತ್ತು ಊಟ ತೆಗೆದುಕೊಂಡು ಬಾ, ರಾತ್ರಿಗೆ ಊಟ ಬೇಡವೆಂದು ಡಾಕ್ಟರು ಹೇಳಿದ್ದಾರೆ. ಮಧ್ಯಾಹ್ನದ ಕಾಫಿಯನ್ನು ನಿಮ್ಮ ಚಿಕ್ಕಪ್ಪನ ಕೈಲಿ ಕಳಿಸು."

"ಆಗಲಿ ಚಿಕ್ಕಮ್ಮ."

"ಒಲೆಯ ಹತ್ತಿರ ಹೋಗುವಾಗ ಜೋಕೆ. ಸೀರೆಯನ್ನು ಹರಡಿಕೊಂಡು ಕುಳಿತುಕೊಳ್ಳಬೇಡ. ಕೈಯಲ್ಲಿರುವ ಪ್ಲಾಸ್ಟಿಕ್ ಬಳೆಗಳನ್ನು ತೆಗೆದಿರಿಸಿಬಿಡು. ಒಲೆಯ ಮೇಲಿಂದ ಪಾತ್ರೆಗಳನ್ನು ಬಾಗಿ ಕೆಳಗಿರಿಸುವಾಗ ಜಡೆ ಹುಷಾರು. ಜಡೆ ಹಿಂದಿನಿಂದ ಮುಂದೆ ಬಂದು ಒಲೆಯೊಳಗೆ ಬಿದ್ದೀತು—"

ಪಕ್ಕದ ಹಾಸಿಗೆಯ ಮೇಲೆ ಮಲಗಿದ್ದ ಪೇಷಂಟು ಕಿಲಕಿಲನೆ ನಕ್ಕರು

"ನಿಮ್ಮ ಮಗಳೇ?" ಆಕೆ ಪಂಕಜಮ್ಮನನ್ನು ಕೇಳಿದರು.

"ಹೂಂ. ಮಗಳೇ ಎಂದು ಹೇಳಬಹುದು."

"ಕೆಲಸ ಮಾಡಿ ಅಭ್ಯಾಸವಿಲ್ಲವೇನೋ."

"ಇಲ್ಲ, ಇಷ್ಟು ದಿನ ಕಾಲೇಜಿನ ಹವ್ಯಾಸವಾಯಿತು. ಇದೇ ಈಗ ಮನೆಯಲ್ಲಿ ಆರಾಮವಾಗಿದ್ದಾಳೆ."

"ಏನು ಓದಿದಾಳೆ?"

"ಬಿ.ಎ.ಗೆ ಕಟ್ಟಿದಾಳೆ. ರಿಸಲ್ಟ್ ಇನ್ನೂ ಬಂದಿಲ್ಲ."

ಪಕ್ಕದ ಪೇಷಂಟು ಸರಳೆಯ ಕಡೆ ನೋಡಿದರು.

ನಿಷ್ಕಪಟ ಭಾವ, ಮುಗ್ಧತೆಯಿಂದ ತುಂಬಿದ ಕಣ್ಣುಗಳು ಆಕೆಗೆ

ತುಂಬಾ ಹಿಡಿಸಿದವು. ಆಸ್ಪತ್ರೆಗೆ ಬಂದಿದ್ದರೂ ಸರಳಾ ಶ್ರದ್ಧೆಯಿಟ್ಟು ಅಲಂಕರಿಸಿಕೊಂಡಿದ್ದಳು. ಹಸಿರು ಚುಕ್ಕಿಗಳಿದ್ದ ಬಿಳಿಯ ವಾಯಿಲ್ ಸೀರೆ ಅವಳಿಗೆ ತುಂಬಾ ಒಪ್ಪುತ್ತಿತ್ತು.

''ನಿನ್ನ ಹೆಸರೇನಮ್ಮಾ? '' ಆಕೆ ಕೇಳಿದರು.

"ಸರಳಾ. "

"ಮದುವೆ ಯತ್ನ ಮಾಡಿದೀರಾ?" ಆಕೆ ಚಿಕ್ಕಮ್ಮನನ್ನು ಕೇಳಿದರು.

''ಇನ್ನೂ ಇಲ್ಲ. "

ಸರಳಾ ತಲೆ ಬಾಗಿಸಿದಳು.

ಪಂಕಜಮ್ಮ ಆಕೆಯನ್ನು ಕೇಳಿದರು "ನೀವು.. ಇಲ್ಲಿ ಸೇರೋಕೆ ಕಾರಣ?''

ಆಕೆ ಸಂಕೋಚದಿಂದ ನುಡಿದಳು ''ಒಂಭತ್ತು ಮಕ್ಕಳಿವೆ. ಇದೇ ಕೊನೆಯ ಹೆರಿಗೆಯಾಗಲಿ ಎಂದು ನಾಲ್ಕು ದಿನದ ಹಿಂದೆ ಆಪರೇಷನ್ ಮಾಡಿಸಿಕೊಂಡೆ. ಸಾಕಪ್ಪಾ ಈ ಮಕ್ಕಳ ಕಾಟ. ಕೊನೆ ಕೊನೆಗೆ ನನಗೂ ಬೇಜಾರಾಗಿಹೋಯಿತು. ಸಧ್ಯ, ಇನ್ನು ಮೇಲಾದರೂ ಹಾಯಾಗಿರುತ್ತೀನಿ. ನೀವು ಯಾಕೆ ''

"'ಡಿ ಎಂಡ್ ಸಿ' ಆದರೆ ಮಕ್ಕಳಾದರೂ ಆಗಬಹುದು ಎಂದು ಡಾಕ್ಟರು ಹೇಳಿದರು. ಆದುದರಿಂದ ಅಡ್ಮಿಟ್ ಆದೆ. ನಾಳೆ ಆಪರೇಶನ್ ಮಾಡ್ತಾರೆ."

ಸರಳೆಗೆ ನಗು ಬಂತು.

ಒಂದೇ ರೂಮಿನಲ್ಲಿದ್ದ ಇಬ್ಬರು ರೋಗಿಗಳು! ಒಬ್ಬರಿಗೆ ಮಕ್ಕಳಾಗಲಿ ಎಂದು ಶಸ್ತ್ರ ಚಿಕಿತ್ಸೆಯಾದರೆ ದುಶ್ತ್ರೊಬ್ಬಳಿಗೆ ಮಕ್ಕಳು ಬೇಡ ಎಂದು ಶಸ್ತ್ರ ಚಿಕಿತ್ಸೆ!

ಅವರ ಮಾತು ಕತೆ ಬೇಸರವಾಗಿ ಸರಳಾ ರೂಮಿನಿಂದ ಹೊರಗೆ ಹೋಗಿ ಕಂಬವೊಂದನ್ನು ಒರಗಿ ನಿಂತಳು.

ಹಸನ್ಮುಖದ ತರುಣನೊಬ್ಬ ಕೈಲೊಂದು ಚೀಲ ಹಿಡಿದು ಸರಳೆಯಿದ್ದೆಡೆಗೆ ನೇರವಾಗಿ ಬಂದ.

"ಈ ವಾರ್ಡಿನಲ್ಲಿ ಸರೋಜಮ್ಮಾಂತ ಯಾರಾದರೂ ಪೇಷಂಟ್ ದಾರೆಯೇ? "—ಆತ ಸರಳೆಯನ್ನು ಪ್ರಶ್ನಿಸಿದ.

"ಏನೋ ನನಗೆ ಗೊತ್ತಿಲ್ಲ. ಒಳಗೆ ವಿಚಾರಿಸಿ"—ಸರಳ ಆತನ ಕಡೆ

ನೇರವಾಗಿ ನೋಡಿ ಹೇಳಿಗಳು.

ಅತ ಅಳುಕುತ್ತಾ ಪಾರ್ಟಿನ ಬಾಗಿಲಿನಲ್ಲಿ ನಿಂತ. ಮೊದಲನೆಯ ಮಂಚದ ಮೇಲೆ ಮಲಗಿದ್ದ ಪಂಕಜಮ್ಮನ ಮೇಲೆ ಹರಿದ ಕಣ್ಣುಗಳು ನಂತರ ಮತ್ತೊಂದು ಮಂಚದ ಕಡೆ ತಿರುಗಿದವು.

"ಅಕ್ಕಾ ಹೇಗಿದೀಯಾ?"—ಎನ್ನುತ್ತಾ ಅವನು ಕೊಟಡಿಯೊಳಗೆ ಕಾಲಿಟ್ಟ.

"ವಾಸೂ . ಯಾವಾಗ ಬಂದೆ, ಬಾ. ಅರುಂಧತಿ ಬರಲಿಲ್ಲವೇ? "- ಸರೋಜಮ್ಮ ಕೇಳಿದರು.

"ಇಲ್ಲ ಅಕ್ಕ. ನಾನು ನಿನ್ನೆ ರಾತ್ರಿ ಬಂದೆ. ನಿನಗೆ ಆಪರೇಷನ್ ಆಗಿರುವ ಸಮಾಚಾರ ನಿನ್ನೆ ಭಾವನ ಕಾಗದದಿಂದ ತಿಳಿಯಿತು. ಒಂದು ವಾರ ರಜ ಹಾಕಿ ಬಂದೆ. ತುಂಬಾ ಗಾಭರಿಯಾಗಿಬಿಟ್ಟಿತು."

"ಗಾಭರಿ ಯಾಕಪ್ಪ?"—ಎಂದು ಸರೋಜಮ್ಮ ನಕ್ಕರು.

"ಕಾಫಿ ಕುಡೀತೀಯಾ? "

"ಹೂಂ."

ವಾಸು ಚೀಲದಲ್ಲಿದ್ದ ಫ್ಲಾಸ್ಕನ್ನು ತೆಗೆದು ಲೋಟಕ್ಕೆ ಕಾಫಿಯನ್ನು ಬಗ್ಗಿಸಿ ಅಕ್ಕನಿಗೆ ನೀಡಿದ.

"ಇವತ್ತು ಏಳಬಾರದೆಂದು ಹೇಳಿದ್ದಾರೆ. ನೀನೇ ಕುಡಿಸಿಬಿಡು."

ವಾಸು ಅಕ್ಕನಿಗೆ ಕಾಫಿ ಕುಡಿಸುತ್ತಿದ್ದಾಗ ಸರಳೆ ಒಳಗೆ ಬಂದಳು. ವಾಸು ಸರಳೆಯ ಕಡೆ ನೋಡುತ್ತಾ ಅಕ್ಕನಿಗೆ ಕಾಫಿ ಕುಡಿಸಲು ಪ್ರಯತ್ನಿಸಿದ. ಕಾಫಿ ತುಳುಕಿ ಆಕೆ ಹೊದೆದಿದ್ದ ಟವಲಿನ ಮೇಲೆ ಬಿತ್ತು.

''ಎತ್ತೆತ್ತಲಾಗೋ ನೋಡಿಕೊಂಡು ಕಾಫಿ ಕುಡಿಸಬೇಡ. ನನ್ನ ಮೇಲೆ ನಿಗಾ ಇರಲಿ"—ಸರೋಜಮ್ಮ ತಮ್ಮನನ್ನು ಕೆಣಕಿದರು.

ವಾಸು ನಕ್ಕ.

ಅವನ ಮುತ್ತಿನ ಸಾಲಿನಂತಹ ಹಲ್ಲುಗಳು ಸರಳೆಗೆ ತುಂಬಾ ಒಪ್ಪಿಗೆಯಾದವು ಅವಳೂ ಪಂಕಜಮ್ಮನ ಹತ್ತಿರವಿದ್ದ ಕುರ್ಚಿಯ ಮೇಲೆ ಕುಳಿತಳು

''ಅರುಂಧತಿ ಏನು ಮಾಡುತ್ತಿದ್ದಳು?"

''ಊಂ ಅಡಿಗೆ ಮಾಡುತ್ತಿದ್ದಳು.''

"ಅವಳು ಯಾಕೆ ಮಾಡಬೇಕು. ಭಟ್ಟರು ಇದ್ದರಲ್ಲಾ "

"ಇದ್ದರು ಸರಿ. ಆದರೆ ಅಡಿಗೆ ಮಾಡೋದು ಕಲಿತುಕೊಳ್ಳಬೇಕೊಂತ

ನಿನ್ನ ಮಗಳು ತಾನೇ ಸೆರಗು ಸಿಕ್ಕಿಸಿ ಅಡಿಗೆ ಮನೆಯ ಮೇಲೆ ಧಾಳಿ ಪ್ರಾರಂಭ ಮಾಡಿದಾಳೆ."

ಸರಳೆಯ ಕಣ್ಣುಗಳು ಪಂಕಜಮ್ಮನನ್ನು ನೋಡುತ್ತಿದ್ದರೂ ಅವಳ ಮನಸ್ಸೆಲ್ಲಾ ವಾಸುವಿನ ಕಡೆಗಿತ್ತು. ವಾಸು ಅಕ್ಕನೊಡನೆ ಮಾತನಾಡುತ್ತಿದ್ದರೂ ಅವನ ಕಣ್ಣುಗಳು ಸರಳೆಯ ದಿಕ್ಕಿನಲ್ಲಿ ಹರಿಯುತ್ತಿದ್ದವು.

"ಹಾಗಾದರೆ ಮನೆಗೆ ಹೋಗ್ತೀಯಾ ಸರಳಾ?''—ಪಂಕಜಮ್ಮ ಸರಳೆಯನ್ನು ಬೀಳ್ಕೊಟ್ಟರು.

''ಹೂ."

''ಮಧ್ಯಾಹ್ನ ಊಟ ತರ್ತೀಯಾ?"

''ಹೂಂ."

''ಹನ್ನೆರಡು ಗಂಟೆಗೇ ಬಂದು ಬಿಡು."

''ಹೂಂ."

''ಏನೂ ಹೆಚ್ಚಿಗೆ ಮಾಡಬೇಡ. ಅನ್ನ, ಸಾರು ಮಾಡು ಸಾಕು."

"ಹೂಂ"—ಎನ್ನುತ್ತಾ ಮನಸ್ಸಿಲ್ಲದ ಮನಸ್ಸಿನಿಂದ ಸರಳಾ ಮೇಲೆದ್ದಳು.

ಸರಳಾ ವಾರ್ಡನ್ನು ಬಿಟ್ಟು ಹೋಟು ಹೋದ ಮೇಲೆ ವಾಸುವಿಗೆ ಅಲ್ಲಿಯೇ ಉಳಿಯಲು ಏಕೋ ಬೇಸರವಾಯಿತು.

"ನಾನಿನ್ನು ಬರ್ತೀನಿ ಅಕ್ಕ"—ಎನ್ನುತ್ತಾ ಅವನು ನಿಂತ.

"ಹೂಂ."

''ಮಧ್ಯಾಹ್ನ ಊಟ ನಾನೇ ತರ್ತೀನಿ"—ಎನ್ನುತ್ತಾ ವಾಸು ಹೊರಗೆ ಬಂದ.

ಸರಳಾ ಎಲ್ಲಿಯೂ ಕಾಣಿಸಲಿಲ್ಲ. ವಾಸುವಿಗೆ ಕೊಂಚ ನಿರಾಶೆಯೂ ಯಿತು. ಆದರೆ ಹೊರ ಆವರಣದೊಳಗೆ ಬಂದ ಕೂಡಲೆ ಅವನ ಕಣ್ಣುಗಳು ಮಿನುಗಿದವು.

ಸರಳಾ ಹೆಬ್ಬಾಗಿಲನ್ನು ದಾಟಿ ಬೀದಿಗಿಳಿಯುತ್ತಿದ್ದಳು ವಾಸು ಅವಳನ್ನು ಹಿಂಬಾಲಿಸಿದ.

ತನ್ನ ಮುಂದೆ ಹೋಗುತ್ತಿದ್ದ ಚಂಚಲೆಗಣ್ಣಿನ ಹುಡುಗಿಯನ್ನು ಮಾತನಾಡಿಸುವ ಆಸೆ ವಾಸುವಿಗಿತ್ತು. ಆದರೆ ಗುರುತು ಪರಿಚಯವಿಲ್ಲದಾಕೆಯನ್ನು ವಿದ್ಯಾವಂತನಾದ ತಾನು ಮಾತನಾಡಿಸುವುದಾದರೂ ಹೇಗೆ?

ಸರಳಾ ನಿಧಾನವಾಗಿ ನಡೆಯುತ್ತಿದ್ದಳು. ವಾಸು ಎಷ್ಟೋ ನಿಧಾನವಾಗಿ

ನಡೆದರೂ ಕೊನೆಗೆ ಸರಳೆಯನ್ನು ದಾಟಿ ಹೋಗಲೇಬೇಕಾಯಿತು. ಹಾಗೆ ಅವಳನ್ನು ದಾಟುವಾಗ ಅವರಿಬ್ಬರ ಕಣ್ಣುಗಳ ಸಮಾಗಮವಾಯಿತು.

ಹುಡುಗಿ ತಪ್ಪು ಭಾವಿಸಿಯಾಳೆಂದು ವಾಸು ಹಿಂತಿರುಗಿ ನೋಡುವ ಆಸೆಯನ್ನು ನುಂಗಿಕೊಂಡ.

ಈಗ ಸರಳೆಯ ನಡಿಗೆ ವೇಗವಾಯಿತು. ಅವಳು ವಾಸುವಿನ ಕ್ರಾಪಿನ ಮೇಲೆ ನೋಟವಿರಿಸಿ ನಡೆದಳು. ಅವನು ತನ್ನನ್ನು ಮಾತನಾಡಿಸದೆ ಮುಂದೆ ನಡೆದಾಗ ಸರಳೆಗೆ ನಿರಾಶೆಯಾಯಿತು. ಆತ ಹಿಂತಿರುಗಿ ನೋಡದೆ ನಡೆದಾಗ ಅರ್ಧ ಮನಸ್ಸು ಮೆಚ್ಚಿಕೊಂಡರೂ ಮತ್ತರ್ಧ ಮನಸ್ಸು ಮುದುಡಿತು.

'ಎಷ್ಟು ಸೊಕ್ಕು! ನನ್ನಂತಹ ಹುಡುಗಿಯನ್ನು ನೋಡದೇ ಹೋಗಬೇಕಾದರೆ ಎಷ್ಟು ಅಹಂಕಾರವಿರಬೇಕು.'

ಸರಳಾ ಮನೆಗೆ ಬಂದು ಅಡುಗೆಯ ಸಿದ್ಧತೆಯಲ್ಲಿ ತೊಡಗಿದಳು. ಬೇಳೆ ಬೇಯಲು ಇರಿಸಿ ಕಾದಂಬರಿ ಹಿಡಿದು ಕುಳಿತಾಗ ಮನಸ್ಸು ಅಲೆದಾಡಲು ಪ್ರಾರಂಭವಾಯಿತು.

ಸರಳ ಮತ್ತೊಮ್ಮೆ ಶ್ರದ್ಧೆಯಿಂದ ಸಿಂಗರಿಸಿಕೊಂಡಳು. ತಾನು ಊಟ ಮಾಡಿ, ಚಿಕ್ಕಮ್ಮನಿಗೆ ಅನ್ನವನ್ನು ಒಂದು ಸ್ಟೀಲಿನ ಟಿಫಿನ್ ಕ್ಯಾರಿಯರ್‌ನಲ್ಲಿ ಹಾಕಿಕೊಂಡು ಮನೆಗೆ ಬೀಗ ಹಾಕಿ ಹೊರಟಳು.

ಅವಳು ಅರ್ಧ ದಾರಿ ಹೋಗುವಷ್ಟರಲ್ಲಿ ಕಾರೊಂದು ಹಿಂದಿನಿಂದ ಹಾರ್ನನ್ನು ಮಾಡುತ್ತಾ ಬಂತು. ಸರಳ ಪಕ್ಕಕ್ಕೆ ಸರಿದು ಕಾರಿನ ಕಡೆ ನೋಡಿದಳು.

ಕಾರನ್ನು ಎಳೆಯ ಪ್ರಾಯದ ಯುವತಿಯೊಬ್ಬಳು ನಡೆಸುತ್ತಿದ್ದಳು. ಅವಳ ಪಕ್ಕದಲ್ಲಿ ವಾಸು ಹರಟುತ್ತಾ ಕುಳಿತಿದ್ದ.

ಆಕೆ ಯಾರಿರಬಹುದು ಎಂಬ ಪ್ರಶ್ನೆ ಸರಳೆಯ ಮುಂದೆ ಬಂದು ನಿಂತಿತು. ಕಾರನ್ನು ನಡೆಸುತ್ತಿದ್ದ ಹುಡುಗಿ ಅಷ್ಟೇನೂ ಲಕ್ಷಣವಾಗಿರಲಿಲ್ಲವೆಂದು ಒಂದು ನೋಟದಿಂದಲೇ ಅವಳ ಸೌಂದರ್ಯವನ್ನು ಅಳೆದಿದ್ದ ಸರಳೆಗೆ ಕೊಂಚ ಸಮಾಧಾನವಾಯಿತು.

ಆ ಹುಡುಗಿ ಆತನ ಹೆಂಡತಿಯಿರಬಹುದೇ ?

ಉಪ್ಪು, ಹುಳಿ, ಖಾರ ಯಾವುದನ್ನೂ ಹಾಕಿರದ ಊಟವನ್ನು ಉಂಡಂತಾಯಿತು ಸರಳೆಗೆ.

ಕಾರು ಸರಳೆಯನ್ನು ದಾಟುವಾಗ ವಾಸುವೂ ಅವಳ ಕಡೆ ನೋಡಿದ.

ಸರಳೆಯನ್ನು ನೋಡಿ ಅವನ ಕಣ್ಣುಗಳು ಅರಳಿದವು. ಅವನು ಪಕ್ಕದಲ್ಲಿ ಡ್ರೈವ್ ಮಾಡುತ್ತಿದ್ದ ಹುಡುಗಿಗೆ ಏನನ್ನೋ ಹೇಳಲು ಬಾಗಿದ.

ಕಾರು ಧೂಳನ್ನು ಸರಳೆಗೆರಚಿ ಮರೆಯಾಯಿತು. ನಡೆದು ಹೋಗುತ್ತಿದ್ದ ಸರಳೆಯನ್ನು ಕಾರಿನೊಳಗೆ ಆಹ್ವಾನಿಸುವ ಆಸೆಯಾಯಿತು ವಾಸುವಿಗೆ ಆದರೆ ಕಾರು ಅವನದಾಗಿರಲಿಲ್ಲ. ಅವನು ನಿರುಪಾಯನಾದ.

ಸರಳೆ ಆಸ್ಪತ್ರೆಯನ್ನು ತಲುಪಿ ಪಂಕಜಮ್ಮನ ಬಳಿಗೆ ಬಂದಳು. ಕೂಡಲೇ ಅವಳಕಣ್ಣುಗಳು ಸರೋಜಮ್ಮನ ಅಕ್ಕಪಕ್ಕಗಳಲ್ಲಿನಗುತ್ತಾ, ಮಾತನಾಡುತ್ತಾ ಕುಳಿತಿದ್ದ ಅರುಂಧತಿ, ವಾಸುವನ್ನು ನೋಡಿದವು.

ಸರಳೆ ಚಿಕ್ಕಮ್ಮನಿಗೆ ಊಟ ಕೊಟ್ಟಳು. ತಾನು ಮಾಡಿದ ಅಡಿಗೆ ಯಾದುದರಿಂದ ಪಂಕಜಮ್ಮ ಊಟ ಮಾಡುವಾಗ ಅವರ ಮುಖಭಾವ ಹೇಗಿರುತ್ತದೆಯೆಂದು ತಿಳಿಯುವ ಧೈರ್ಯ ಸರಳೆಗೆ ಬರಲಿಲ್ಲ.

"ಸರಳಾ, ಬಾ ಇಲ್ಲಿ"—ಸರೋಜಮ್ಮ ಕೂಗಿದರು. ಸರಳಾ ವಿಧೇಯಳಾಗಿ ಎದ್ದು ಅವರ ಮಂಚದ ಕಾಲಿನ ಹತ್ತಿರ ನಿಂತಳು.

''ಇವಳು ನನ್ನ ಹಿರಿಯ ಮಗಳು ಅರುಂಧತಿ . ಇವಳಿಗೂ ಬಿ. ಎ. ಪಾಸಾಗಿದೆ. ಇವನು ನನ್ನ ತಮ್ಮ ವಾಸು.''

ಪರಸ್ಪರ ನಮಸ್ಕಾರಗಳ ವಿನಿಮಯವಾಯಿತು. ಸರಳೆ ನಿಂತಿರುವುದನ್ನು ನೋಡಿ ವಾಸು ತನ್ನಕುರ್ಚಿಯನ್ನು ಬಿಟ್ಟು ಎದ್ದು ನಿಂತು "ಕುಳಿತುಕೊಳ್ಳಿ"— ಎಂದ.

"ಪರವಾಗಿಲ್ಲ.''

"ಕುಳಿತುಕೋಮ್ಮಾ"—ಸರೋಜಮ್ಮ ಉಪಚಾರ ಮಾಡಿದರು. ಸರಳಾ ಕುಳಿತುಕೊಂಡಳು. ವಾಸು ಸರಳೆಗೆ ಸಮೀಪವಾಗಿ ಮಂಚದ ಮೇಲೆ ಕುಳಿತುಕೊಂಡ.

ಸರಳೆಗೆ ನಾಚಿಕೆಯಿಂದ ಮುಖ ಬಿಸಿಯಾಯಿತು. ಅವಳಿಗೆ ತಲೆ ಎತ್ತಿ ನೋಡುವುದಾಗಲಿಲ್ಲ. ವಧುಪರೀಕ್ಷೆಗೆ ಕುಳಿತ ಹುಡುಗಿಯಂತೆ ತಲೆ ತಗ್ಗಿಸಿ ಕುಳಿತುಬಿಟ್ಟಳು.

''ಇದೇನೆ ಮದುವೆ ಹೆಣ್ಣಿನ ಹಾಗೆ ಕುಳಿತುಬಿಟ್ಟೆ?"

ಪಂಕಜಮ್ಮ ಮಲಗಿದ್ದ ಕಡೆಯಿಂದಲೇ ಸರಳೆಯನ್ನು ರೇಗಿಸಿದರು. ಸರಳೆಯ ಮಾತುಗಾರಿಕೆ ಎಲ್ಲಿ ಮಾಯವಾಗಿತ್ತೋ?

ಪರಿಚಯಕ್ಕಾಗಿಯೋ ಕಾದಿದ್ದ ವಾಸು ಸರಳೆಯನ್ನು ಮಾತನಾಡಿಸಿದ

"ಏನು ಓದಿದೀರ?"

"ಬಿ. ಎ.''

"ಕಾಂಬಿನೇಷನ್ನು?"

"ಹಿಸ್ಟರಿ, ಫಿಲಾಸಫಿ, ಪಾಲಿಟಿಕ್ಸ್."

''ಅವು ನಿಮಗೆ ಇಷ್ಟವೇ?''

"ಸುಮಾರು."

"ಅವುಗಳಿಂದ ಉಪಯೋಗವಾಗಬಹುದೇ?"

"ಆಗಬಹುದೂಂತ ಕಾಣಿಸುತ್ತದೆ."

"ಮುಂದೇನು ಮಾಡ್ತೀರಿ?"

ಸರಳಾ ಅಸಹಾಯಕ ದೃಷ್ಟಿಯನ್ನು ಪಂಕಜಮ್ಮನ ಕಡೆ ಕಳುಹಿಸಿದಳು. ಆದರೆ ಅಲ್ಲಿಂದ ಅವಳಿಗೆ ಯಾವ ಸಹಾಯವೂ ಸಿಕ್ಕಲಿಲ್ಲ.

ವಾಸು ನಿರ್ದಯನಾಗಿದ್ದ.

"ಕಾಲ ಹೇಗೆ ಕಳೆಯುತ್ತಿದ್ದೀರಿ?"

"ಹೀಗೇ....ಕತೆ ಓದುವುದು, ತಿರುಗಾಡುವುದು. ನಿದ್ದೆ ಮಾಡುವುದು...." ವಾಸು ನಕ್ಕುಬಿಟ್ಟ.

ಸರಳೆ ಮುಂದೆ ಮಾತನಾಡದೇ ತುಟಿಗಳನ್ನು ಬಿಗಿಯಾಗಿ ಮುಚ್ಚಿಕೊಂಡಳು.

"ನಮ್ಮ ಅರುಂಧತೀನ ಕೇಳಿ—ಸಮಯ ಹೇಗೆ ಕಳೆಯುವುದು ಎಂದು ಅವಳು ನಿಮಗೆ ಪಾಠ ಹೇಳಿಕೊಡುತ್ತಾಳೆ.''

"ಸಾಕು ಸುಮ್ಮನಿರು"— ಎಂದು ಅರುಂಧತಿ ಸಿಡುಕಿದಳು.

''ಮನೆಗೆ ಹೋಗುವಾಗ ನಮ್ಮ ಜೊತೆಯೇ ಬನ್ನಿ. ನಿಮ್ಮನ್ನು ಮನೆಯ ಹತ್ತಿರ ಇಳಿಸಿ ನಾವು ಹೋಗುತ್ತೇವೆ."

"ಇಲ್ಲ. ನಾನು ನಡೆದೇ ಹೋಗುತ್ತೇನೆ"—ಮಹಾ ಸ್ವಾಭಿಮಾನಿ ಸರಳೆ.

"ಹೋಗು ಸರಳಾ—"ಸರೋಜಮ್ಮ ಹೇಳಿದರು.

ಹೆಚ್ಚು ಚರ್ಚೆ ಮಾಡಲು ಆಸೆಯಿಲ್ಲದೆ ಸರಳಾ ಸುಮ್ಮನಾದಳು.

ಪಂಕಜಮ್ಮನ ಊಟ ಮುಗಿಯಿತು. ಯಾವಾಗಲೂ ಸರಳೆಗೆ ಏನಾದರೊಂದು ಮಾತನಾಡುತ್ತಲೇ ಇರಬೇಕು. ಆದರೆ ಇಂದು ಅದೇಕೊ ಅವಳು ಮೌನವಾಗಿದ್ದಳು. ವಾಸುವಿನ ಮಾತಿನ ಹೊಡೆತವನ್ನು ಅವಳು ಹೇಗಾದರೂ ತಡೆಯಬಲ್ಲವಳಾಗಿದ್ದಳು.

ಆವರೆ ಆ ಕಣ್ಣಿನ ನೋಟ !

ಸರಳೆ ಮಳೆಯಲ್ಲಿ ನೆಂದ ಪಾರಿವಾಳದಂತೆ ದೇಹವನ್ನು ಹಿಡಿಯಾಗಿ ಮಾಡಿಕೊಂಡು ಕುರ್ಚಿಯಲ್ಲಿ ಹುದುಗಿದಳು. ಕೊನೆಗೆ ಸರಳಾ ವಾಸುವಿನ ನೋಟಕ್ಕೆ ತತ್ತರಿಸಿ 'ನಾನು ಹೋಗ್ತೀನಿ' ಎಂದು ಎದ್ದು ನಿಂತಳು.

ವಾಸು ಅವಳನ್ನು ಅಡಿಯಿಂದ ಮುಡಿಯವರೆವಿಗೆ ನೋಡಿದ. ಭುಜದ ಮೇಲೆ ತೂಗಾಡುತ್ತಿದ್ದ ಎರಡು ಜಡೆಗಳನ್ನು ನೋಡಿದ. ಅದಕ್ಕೆ ಬಿಲ್ಲಿನಂತೆ ಮುಡಿಸಿದ್ದ ಸೇವಂತಿಗೆಯ ಮಾಲೆಯನ್ನು ನೋಡಿದ. ಅವಳು ಬೆಳಗ್ಗೆ ಧರಿಸಿದ್ದ ವಾಯಿಲ್ ಸೀರೆಯನ್ನು ಬದಲಾಯಿಸಿ ತಿಳಿ ಹಳದಿ ಬಣ್ಣದ ಷಿಫಾನ್ ಸೀರೆಯುಟ್ಟಿದ್ದನ್ನು ಗಮನಿಸಿದ.

ಸರಳೆಗೆ ರೇಗಿತ್ತು. ಅವಳು ರೊಯ್ಯನೆ ಜಡೆಯನ್ನು ಬೀಸಿ ಹಿಂದಕ್ಕೆಸೆದು "ಬರ್ತೀನಿ ಚಿಕ್ಕಮ್ಮಾ, ರಾತ್ರಿ ಸಾಧ್ಯವಾದರೆ ಬರ್ತೀನಿ" ಎನ್ನುತ್ತಾ ಹೊರಟು ಹೋದಳು.

ವಾಸು ಅರುಂಧತಿಯನ್ನು ಬಲವಂತಪಡಿಸಿ ಕೊನೆಗೂ ಹೊರಡಿಸಿದ. ಅರುಂಧತಿಗೆ ಆಗಲೇ ಹೊರಡುವ ಇಷ್ಟವಿಲ್ಲದಿದ್ದರೂ ವಾಸುವಿನ ಕಾಟ ತಡೆಯಲಾರದೆ ಹೊರಟಳು.

ಅರುಂಧತಿ ಕಾರನ್ನು ಹತ್ತಿ ಕುಳಿತಳು. ಹೆಬ್ಬಾಗಿಲನ್ನು ದಾಟಲಿದ್ದ ಸರಳೆಯನ್ನು ವಾಸು ಆಹ್ವಾನಿಸಿದ.

"ಬನ್ನಿ ಮನೆಯ ಬಳಿ ಇಳಿಸಿ ಹೋಗುತ್ತೇವೆ."

ಬೇಡ. ತೊಂದರೆ ನಿಮಗೆ.''

"ಛೆ ಛೇ. ಬನ್ನಿ. ಒಬ್ಬರೇ ಯಾಕೆ ಹೋಗಬೇಕು."

ಸರಳೆ ಅನುಮಾನಿಸಿದುದನ್ನು ಕಂಡ ಅರುಂಧತಿ ತಾನೂ ಕರೆದಳು. ಸರಳೆ ಕಾರಿನ ಕಡೆ ತಿರುಗಿದಳು. ವಾಸು ದಿಗ್ವಿಜಯ ಮಾಡಿದವನಂತೆ ಕಾರಿನ ಬಾಗಿಲನ್ನು ತೆರೆದ. ಸರಳಾ ಕುಳಿತಳು. ವಾಸು ಅವಳ ಹಿಂದೆಯೇ ತಾನೂ ಹತ್ತಿ ಕುಳಿತು ಕಾರಿನ ಬಾಗಿಲನ್ನು ಹಾಕಿಕೊಂಡ.

ಅವನು ಮುಂದುಗಡೆ ಕುಳಿತುಕೊಳ್ಳಬಹುದೆಂದು ತಿಳಿದಿದ್ದ ಸರಳೆಗೆ ಅವನ ವರ್ತನೆ ಅಚ್ಚರಿಯನ್ನುಂಟು ಮಾಡಿತು. ಸುಖವಾದ ಭಾವನೆಯ ತರಂಗದಲ್ಲಿ ಅವಳು ತೇಲಿಹೋದಳು.

ಅರುಂಧತಿಯ ಹುಬ್ಬುಗಳು ಬಿಗಿದುಕೊಂಡವು. ಆಕೆ ಕಾರನ್ನು ನಡೆಸ ತೊಡಗಿದಳು ಸರಳಾ ತಗ್ಗಿಸಿದ ತಲೆ ಮೇಲೆತ್ತಲಿಲ್ಲ. ವಾಸು ಪ್ರಶ್ನೆಗಳ ಸುರಿ

ಮಳೆಯಿಂದ ಅವಳು ತಬ್ಬಿಬ್ಬಾಗುವಂತೆ ಮಾಡುತ್ತಿದ್ದ. ಸರಳೆಗೆ ಮುಂದೆ ಕುಳಿತು ಕಾರನ್ನು ಡ್ರೈವ್ ಮಾಡುತ್ತಿದ್ದ ಹುಡುಗಿ ಅದೇಕೋ ಇಷ್ಟವಾಗ ಲಿಲ್ಲ. ಸರಳೆ ಅರುಂಧತಿಯನ್ನೂ, ವಾಸುವನ್ನೂ ಸಂಶಯದ ತಕ್ಕಡಿಯು ಲ್ಲಿಟ್ಟು ತೂಗಿ ನೋಡುತ್ತಿದ್ದಳು. ವಾಸುವಿನ ಪ್ರಶ್ನೆಗಳಿಗೆ 'ಹೂಂ' 'ಇಲ್ಲ'—ಎಂದು ಮಾತ್ರ ಉತ್ತರಕೊಡುತ್ತಿದ್ದಳು.

ಸರಳೆ ಉತ್ತರ ಕೊಡಲಿ, ಕೊಡದಿರಲಿ, ಅವಳ ಸಾನ್ನಿಧ್ಯ ವಾಸುವಿಗೆ ತುಂಬಾ ಹಿತಕರವಾಗಿತ್ತು. ಅದುವರೆವಿಗೂ ಅಲೆದಾಡುತ್ತಿದ್ದ ಮನಸ್ಸು ಈಗ ತನ್ನ ನೆಲೆಯನ್ನು ಕಂಡುಕೊಂಡು ಶಾಂತಿಯನ್ನು ಪಡೆದಿತ್ತು.

ಏಕಪಾತ್ರಾಭಿನಯದಿಂದ ವಾಸುವಿಗೆ ಬೇಸರವಾಯಿತು. ಅರುಂಧತಿ ಸರಳೆ ಸಹಜವಾಗಿ ಗೆಳೆತಿಯರಾಗಬೇಕಿತ್ತು. ಬದಲು ಇಬ್ಬರೂ ಪರಸ್ಪರರನ್ನು ವೈರಿಗಳಂತೆ ಕಂಡು ಮನಸ್ಸಿಲ್ಲದಿದ್ದರೂ ತೋರಿಕೆಗಾಗಿ ಮಾತನಾಡಿಸಿದರು.

ತಾನು ಮನಸ್ಸಿನಲ್ಲಿಯೇ ಮೆಚ್ಚಿಕೊಂಡಿದ್ದ ವಾಸು ಅಪರಿಚಿತಹುಡುಗಿ ಯಲ್ಲಿ ಅನಾವಶ್ಯಕವಾದ ಆಸಕ್ತಿ, ಸ್ನೇಹ ತೋರಿಸುತ್ತಿದ್ದುದು ಅರುಂಧತಿ ಯಲ್ಲಿದ್ದ ಸ್ವಾಭಿಮಾನವನ್ನು ಕೆರಳಿಸಿತ್ತು.

ಚಿಕ್ಕಂದಿನಿಂದಲೂ ಅರುಂಧತಿಯನ್ನು ವಾಸುವಿಗೇ ಕೊಡುವುದೆಂದು ಸರೋಜಮ್ಮ ನಿರ್ಧರಿಸಿದ್ದರು. ಮನೆಯಲ್ಲಿ ಹಿರಿಯರಾಡುತ್ತಿದ್ದ ಮಾತು ಗಳನ್ನು ಕೇಳಿ ಎಳೆಯ ವಯಸ್ಸಿನಿಂದಲೂ ಅರುಂಧತಿ ಮಧುರ ಭಾವನೆಗಳ ಬಲೆಯೊಂದನ್ನು ಹೆಣೆದು, ತಾನಾಗಿಯೇ ಆ ಬಲೆಯಲ್ಲಿ ಸಿಕ್ಕಿಕೊಂಡಿದ್ದಳು. ಆದರೆ ಈ ವಿಷಯದಲ್ಲಿ ವಾಸು ಸಂಪೂರ್ಣ ನಿರ್ದೋಷಿ. ಅವನು ಎಂದೂ ಅರುಂಧತಿಯ ಆಶಾಬಳ್ಳಿಗೆ ನೀರೆರೆದಿರಲಿಲ್ಲ. ಅಕ್ಕನ ಮಗಳಾದುದರಿಂದ ಸಲಿಗೆಯಿಂದ ಅವಳೊಡನೆ ವರ್ತಿಸುತ್ತಿದ್ದರೂ ಸಲಿಗೆಯ ಸೀಮೆಯನ್ನು ದಾಟಿ ಅವನು ಅವಳ ಹತ್ತಿರ ಹೋಗಿರಲಿಲ್ಲ.

ವಾಸುವಿನ ನಡವಳಿಕೆಯಿಂದ ಸರೋಜಮ್ಮ, ಆಕೆಯ ಪತಿ, ಅರುಂಧತಿ ಮೂವರೂ ನಿರಾಶೆಗೊಂಡಿದ್ದರು. ಕೊನೆಗೊಮ್ಮೆ ಸರೋಜಮ್ಮ ವಾಸು ವಿನಲ್ಲಿ ಮಗಳ ಮದುವೆಯ ಸುದ್ದಿಯನ್ನು ಪ್ರಸ್ತಾಪಿಸಿದರು.

"ವಾಸೂ, ನಿನಗೆ ಕೆಲಸವಾಯಿತು—ಯಾವಾಗ ಮದುವೆ ಮಾಡಿ ಕೊಳ್ಳುತ್ತೀಯಾ?"—ಎಂದು ಸರೋಜಮ್ಮ ರಜೆಯಲ್ಲಿ ವಾಸು ಮನೆಗೆ ಬಂದಿದ್ದಾಗ ಮಾತು ತೆಗೆದರು.

"ಅದಕ್ಕೇನು ಮಾಡಿಕೊಂಡರಾಯಿತು"—ವಾಸು ಹಾರಿಕೆಯ ಮಾತ ನ್ನಾಡಿದ.

"ಅರುಂಧತಿಗೂ ವಯಸ್ಸಾಯಿತು. ಮದುವೆ ಇನ್ನೂ ಎಷ್ಟು ದಿನ ನಿಲ್ಲಿಸುವುದು?"

ಅರುಂಧತಿಯನ್ನು ಅಕ್ಕ, ಭಾವ ತನಗೆ ಕೊಡಬೇಕೆಂದಿರುವ ವಿಷಯ ವಾಸುವಿಗೆ ತಿಳಿದಿದ್ದರೂ ಅವನು ಏನೂ ತಿಳಿಯದವನಂತೆ ನಟಿಸುತ್ತಿದ್ದ.

"ಅರುಂಧತಿಗೆ ಮದುವೆ ಮಾಡಿ. ಅದಕ್ಕೂ, ನನಗೂ ಏನು ಸಂಬಂಧ?"—ವಾಸು ಅಚ್ಚರಿ ನಟಿಸಿ ಕೇಳಿದ.

"ಚನ್ನಾಯ್ತು. ಇವಳು ಹುಟ್ಟಿದಾಗಿನಿಂದಲೂ ನಿನಗೇ ಕೊಡುವುದೆಂದು ನಿರ್ಧಾರ ಮಾಡಿದೀನಿ ನಾನು. ಈಗ ಏನೂ ತಿಳಿಯದವನ ಹಾಗೆ ಮಾತನಾಡುತ್ತೀಯ."

ಸರೋಜಮ್ಮ ನೋವಿನ ಮಾತನ್ನಾಡಿದರು.

"ಅಕ್ಕ, ನಾನೂ ಸ್ಪಷ್ಟವಾಗಿ ಹೇಳಿಬಿಡುತ್ತೇನೆ. ಕೇಳು. ಅರುಂಧತಿಯನ್ನು ನಾನು ಎಂದಿಗೂ ಮದುವೆಯಾಗಲಾರೆ, ಅವಳಿಗೆ ಬೇರೆ ಎಲ್ಲಾದರೂ ಪ್ರಯತ್ನ ಮಾಡಿ"

"ಇಷ್ಟು ದಿನ ನಿನ್ನನ್ನೇ ನಾವು ನಂಬಿಕೊಂಡಿದ್ದೆವು."

"ನಾನು ಎಂದೂ ನಿಮಗೆ ಆಸೆಯ ಮಾತನ್ನಾಡಿರಲಿಲ್ಲ ಆ ವಿಷಯವಾಗಿ ಪ್ರೋತ್ಸಾಹವನ್ನೂ ಕೊಟ್ಟಿರಲಿಲ್ಲ. ಇದರಲ್ಲಿ ನನ್ನ ತಪ್ಪಿಲ್ಲ. ಈ ದಿನ ನೀವು ಸ್ಪಷ್ಟವಾಗಿ ಕೇಳಿದ್ದರಿಂದ ನಾನೂ ಸ್ಪಷ್ಟವಾಗಿ ಉತ್ತರಕೊಟ್ಟಿದೀನಿ"

ಸರೋಜಮ್ಮನಿಗೆ ನಿರಾಶೆಯಾಯಿತು ಆದರೆ ವಾಸುವಿನ ಹೇಳಿಕೆ ಸತ್ಯವಾಗಿತ್ತು. ಅಕ್ಕನಾದುದರಿಂದ ಅವನು ಅವರಮನೆಗೆ ಬಂದು ಹೋಗುತ್ತಿದ್ದುದುಂಟು. ಆದರೆ ಅರುಂಧತಿ ಅವನನ್ನು ಎಂದೂ ಆಕರ್ಷಿಸಿರಲಿಲ್ಲ. ಅವನು ಅರುಂಧತಿಯ ಮದುವೆಯ ವಿಷಯದಲ್ಲಿ ಕಿಂಚಿತ್ ಭರವಸೆಯನ್ನಾಗಲಿ, ಪ್ರೋತ್ಸಾಹವನ್ನಾಗಲಿ ಕೊಟ್ಟಿರಲಿಲ್ಲ.

"ಇನ್ನೊಂದು ಸಲ ಯೋಚನೆ ಮಾಡು" ಸರೋಜಮ್ಮ ಕೊನೆಯದಾಗಿ ಹೇಳಿದರು.

"ಇದರಲ್ಲಿ ಯೋಚನೆ ಮಾಡುವುದು ಏನೂ ಇಲ್ಲ ಅಕ್ಕ" ಎಂದು ವಾಸು ಮಾತು ಮುಗಿಸಿದ್ದ.

ಅಂದಿನಿಂದ ಅಕ್ಕ, ಭಾವ ಅರುಂಧತಿಗೆ ವರಾನ್ವೇಷಣೆ ಮಾಡುತ್ತಿದ್ದರು.

ತನ್ನ ಮದುವೆಯ ಪ್ರಶ್ನೆ ಮುಂದಿದ್ದರಿಂದ ಅರುಂಧತಿಗಾದ ನೋವು

ಅಷ್ಟಿಷ್ಟಲ್ಲ. ವಾಸುವೆಂದರೆ ಅವಳಿಗೆ ಅಪಾರ ಮೆಚ್ಚುಗೆಯಿತ್ತು. ಪ್ರೀತಿಯಿತ್ತು. ಅವಳು ಪ್ರಾಯಕ್ಕೆ ಬಂದಾಗ ಆಗಾಗ್ಗೆ ಮನೆಗೆ ಬಂದು ಹೋಗುತ್ತಿದ್ದ ಚೆಲುವ ವಾಸುವನ್ನು ಪುಲಕಿತಳಾಗಿ ನೋಡುತ್ತಿದ್ದಳು. ಸೋದರ ಮಾವನೆಂಬ ಸಲಿಗೆ ಅವಳಿಗೆ, ಅಕ್ಕನ ಮಗಳೆಂದು ಸ್ವಾತಂತ್ರ್ಯ ವಾಸುವಿಗೆ. ಹೀಗಾಗಿ ಮಾತು, ಕತೆ,ಆಟ, ನೋಟ ಇವುಗಳಲ್ಲಿ ಅವರಿಬ್ಬರೂ ಬೆರೆಯುತ್ತಿದ್ದರು. ಒಬ್ಬರನ್ನೊಬ್ಬರು ಕೀಟಲೆ ಮಾಡಿ ಸಂತಸ ಪಡೆಯುತ್ತಿದ್ದರು. ವಾಸುವಿಗೆ ಪ್ರಿಯವೆಂದು ತೋರಿದುದನ್ನೆಲ್ಲಾ ಅರುಂಧತಿ ನೆರವೇರಿಸುತ್ತಿದ್ದಳು ವೇಷ ಭೂಷಣಗಳಿಂದ ಮಾತುಗಾರಿಕೆಯಿಂದ ಅವನನ್ನು ಸೆಳೆಯಲು ಆಕೆ ಮಾಡಿದ ಪ್ರಯತ್ನಗಳಿಗೆ ಕೊನೆ ಮೊದಲಿಲ್ಲ.

ಅವರಿಬ್ಬರೇ ಚಲನಚಿತ್ರ ನೋಡಲು ಹೋದದ್ದುಂಟು. ಅಕ್ಕಪಕ್ಕದಲ್ಲಿ ಕುಳಿತು ಬೇಸರವಾಗುವಷ್ಟು ಮಾತನಾಡಿದ್ದುಂಟು. ಆದರೆ ಆಕಸ್ಮಾತ್ತಾಗಿಯಾದರೂ ವಾಸುವಿನ ಕೈ ಬೆರಳು ಸಹ ಅವಳಿಗೆ ಸೋಕಿರಲಿಲ್ಲ ಸಭ್ಯತನ, ಸೌಜನ್ಯದ ಎಲ್ಲೆಯನ್ನು ಅವನು ಮೀರಿರಲಿಲ್ಲ.

ಪ್ರಣಯ ದೃಶ್ಯಗಳನ್ನು ನೋಡುವಾಗ ಅರುಂಧತಿ ಕತ್ತಲಲ್ಲಿಯೂ ಕೆಂಪಾದದ್ದುಂಟು, ಆಗ ಅವಳ ರಕ್ತ ವೇಗವಾಗಿ ಹರಿದಿದ್ದೂ ಉಂಟು. ಆದರೆ ವಾಸು ಮಾತ್ರ ನಿರ್ಲಿಪ್ತನಾಗಿ ಚಿತ್ರ ನೋಡುತ್ತಾ ಟೀಕಿಸುತ್ತಿದ್ದ.

"ಛೀ, ನಮ್ಮಲ್ಲಿಯ ಪ್ರಣಯ ದೃಶ್ಯಗಳೆಂದರೆ ನನಗೆ ಬೇಸರಿಕೆ ಬರುತ್ತದೆ. ಮರ, ಗಿಡ, ನದಿಯಲ್ಲಿ ನಾಯಕ, ನಾಯಕಿಯರು ಕಣ್ಣಾಮುಚ್ಚಾಲೆ, ಛೂಟಾಟದಲ್ಲಿ ಪ್ರಣಯ ಮುಗಿದಿರುತ್ತದೆ. ಸಹಜತೆ ಎನ್ನುವುದೇ ಇಲ್ಲ. ಇಂಗ್ಲಿಷ್ ಚಿತ್ರಗಳಲ್ಲಿ...."

"ಹೋಗಪ್ಪ ಸಾಕು. ನೀನೇನು ವರ್ಣಿಸಬೇಡ"–ಎಂದು ಅರುಂಧತಿ ಮುನಿಯುತ್ತಿದ್ದಳು.

"ಹೂಂ. ಬಿಡು"—ಎಂದು ವಾಸು ತನ್ನ ಮಾತನ್ನು ನಿಲ್ಲಿಸುತ್ತಿದ್ದ.

ಅವನಿಗೂ ತನ್ನಂತೆಯೇ ಕಾತರವಿದ್ದುದಾದರೆ ಎಂದಿಗೂ ಅವನು ಹಾಗೆ ಅನಾಸಕ್ತಿಯ ದನಿಯಲ್ಲಿ ಟೀಕಿಸುತ್ತಿರಲಿಲ್ಲವೆಂಬುದನ್ನು ಅರುಂಧತಿ ಬಲ್ಲಳು.

ತನ್ನ ಬಗ್ಗೆ ಯಾವ ಶ್ರದ್ಧೆಯನ್ನೂ ತೋರಿಸದ ವಾಸು ಸರಳೆಯಲ್ಲಿ ತೋರಿಸುತ್ತಿರುವ ಆಸಕ್ತಿ ಅವಳಲ್ಲಿದ್ದ ಅಸೂಯೆಯ ಭಾವನೆಯನ್ನು ಹೊಡೆದೆಬ್ಬಿಸಿತು.

'ಈತ ಇವಳಲ್ಲಿ ಏನನ್ನು ಕಾಣುತ್ತಾನೆ' ಎಂಬ ಪ್ರಶ್ನೆ ಅವಳಿಗೆ ಪ್ರಶ್ನೆಯಾಗಿಯೇ ಉಳಿಯಿತು.

ಆದುದರಿಂದ ಅರುಂಧತಿ ಸರಳೆಯೊಡನೆ ಸ್ನೇಹದ ಮಾತುಗಳನ್ನಾಡುವ ನಟನೆ ಮಾಡಲಿಲ್ಲ. ಸರಳೆಯನ್ನು ಕಂಡರೆ ತನಗೆ ಸ್ನೇಹವಿಲ್ಲ ಎಂಬುದನ್ನು ಅವಳು ತೋರಿಸಿಕೊಂಡಳು. ಅವಳ ವರ್ತನೆಯಿಂದ ಸರಳೆಯ ಮನಸ್ಸು ಕುಗ್ಗಿತು. ಆದರೆ ವಾಸುವಿನ ನೆಟ್ಟ ನೋಟ, ನೋಟದಲ್ಲಿದ್ದ ಆಸಕ್ತಿ. ನಗೆಯಲ್ಲಿದ್ದ ಮೆಚ್ಚುಗೆ, ಮಾತುಗಳ ಮೋಡಿ ಇವುಗಳು ಸರಳೆಯನ್ನು ಸುಖದ ತೊಟ್ಟಿಲಿನಲ್ಲಿಟ್ಟು ತೂಗಿದವು. ಅವಳು ತಮ್ಮ ಮುಂದೆ ಅರುಂಧತಿ ಕುಳಿತಿದ್ದನ್ನೂ ಮರೆತುಬಿಟ್ಟಿದ್ದಳು.

"ಇದೇ ನಮ್ಮ ಮನೆ. ಕಾರನ್ನು ನಿಲ್ಲಿಸಿ"—ಎಂದು ಸರಳಾ ಹೇಳಿದಾಗ ಅರುಂಧತಿ ಗಕ್ಕನೆ ಬ್ರೇಕು ಹಾಕಿದಳು. ಸರಳಾ ಹೂವಿನ ಹೊರೆಯಂತೆ ವಾಸುವಿನ ಭುಜಕ್ಕೊರಗಿದಳು.

ಕಾರು ಹಾಗೆ ಗಕ್ಕನೆ ನಿಂತಿದ್ದಕ್ಕಾಗಿ ವಾಸು ಕಾರನ್ನು ಮನಸಾರೆ ಹೊಗಳಿದ—ಮನಸ್ಸಿನಲ್ಲಿ. ಆದರೆ ಸರಳಾ ಕೆಂಪಾದಳು. ನಾಚಿಕೆಯಿಂದಲೇ ದೂರ ಸರಿದು ಕಾರಿನ ಬಾಗಿಲನ್ನು ತೆಗೆಯಲು ಪ್ರಯತ್ನಿಸಿ ಕೊಸರಾಡಿದಳು. ಆದರೆ ಬಾಗಿಲು ತೆರೆಯಲಿಲ್ಲ.

ವಾಸು ಬಾಗಿ ಕಾರಿನ ಬಾಗಿಲು ತೆಗೆದ ಅವನು ತನ್ನ ಮುಂದೆ ಬಾಗಿದಾಗ ಸರಳೆ ಅವನ ಕ್ರಾಪನ್ನು ನೋಡುತ್ತಿದ್ದಳು. ಸೊಂಪಾದ, ದಟ್ಟವಾದ ಅವನ ತಲೆಗೂದಲು ಅವಳಿಗೆ ಮೆಚ್ಚುಗೆಯಾಯಿತು.

ಅವಳು ಕೆಳಗಿಳಿದು ನಿಂತು ವಾಸುವಿನ ಕಡೆಯೇ ನೋಡುತ್ತಾ 'ತುಂಬಾ ಥ್ಯಾಂಕ್ಸ್' ಎಂದಳು.

ವಾಸು ನಗುತ್ತಾ ಮಾತನಾಡದೆ ಮುಂದಿನ ಸೀಟಿನಲ್ಲಿ ಕುಳಿತಿದ್ದ ಅರುಂಧತಿಯ ಕಡೆ ಕೈ ತೋರಿಸಿದ. ಸರಳೆಗೆ ಅವಳನ್ನು ವಂದಿಸಬೇಕೆಂಬುದೇ ಮರೆತುಹೋಗಿತ್ತು. ವಾಸು ನೆನಪುಕೊಟ್ಟ ನಂತರ ಅವಳು ಕೃತಜ್ಞತೆಯ ನೋಟವನ್ನೊಮ್ಮೆ ಅವನೆಡೆಗೆ ಬೀರಿ

"ನಿಮ್ಮಿಂದ ಸಹಾಯವಾಯಿತು. ಬನ್ನಿ ಒಳಗೆ. ಐದು ನಿಮಿಷವಿದ್ದು ಹೋಗುವಿರಂತೆ" ಎಂದು ಅರುಂಧತಿಯನ್ನು ಆಹ್ವಾನಿಸಿದಳು.

ಅರುಂಧತಿ ಭುಜ ಕುಣಿಸಿ ಅವಳ ಆಹ್ವಾನವನ್ನು ನಿರಾಕರಿಸಿ 'ಇನ್ನು ಯಾವಾಗಲಾದರೂ ಬಂದರಾಯಿತು' ಎಂದಳು. ವಾಸುವಿಗೇನೋ ಕೆಳ

ಗಿಳಿದುಹೋಗಿ ಸರಳೆಯೊಡನೆ ಮಾತನಾಡಿ ಬರಬೇಕೆಂಬ ಆಸೆಯಿತ್ತು. ಆದರೆ ಅರುಂಧತಿಯಿಂದಾಗಿ ಅವನಾಸೆ ಮಣ್ಣುಗೂಡಿತು. ಹಾಗೂ "ಅವಳು ಬರದಿದ್ದರೇನಂತೆ ? ನಾನು ಬರಲೇ ?"—ಎಂದು ಕೇಳುವ ತವಕ ಅವನಿಗೆ.

ಅಷ್ಟರಲ್ಲಿ ಮನೆಯ ಮುಂದೆ ಎದುರಿನಿಂದ ಬಂದ ಒಂದು ಕಾರು ನಿಂತುಕೊಂಡಿತು. ಕಾರನ್ನು ಡ್ರೈವ್ ಮಾಡುತ್ತಿದ್ದ ತರುಣ ಸರಳೆಯನ್ನು ನೋಡಿ ಕೈಬೀಸಿ 'ಹಲೋ' ಎಂದ. ಸರಳೆಯ ಮುಖ ಪ್ರಫುಲ್ಲಗೊಂಡಿತು. ಅವಳು ಎಲ್ಲವನ್ನೂ ಮರೆತು ಅತ್ತ ಕಡೆ ಧಾವಿಸಿದಳು.

ಕಾರಿನಲ್ಲಿ ಕುಳಿತಿದ್ದ. ಕೂಲಿಂಗ್ ಗ್ಲಾಸನ್ನು ಹಾಕಿದ್ದ ಲಕ್ಷಣವಾದ ತರುಣ ಕೆಳಗಿಳಿದು ಬಂದ.

ವಾಸುವಿನ ಹರ್ಷವೆಲ್ಲ ಮಂದರಿಯಲ್ಲಿನ ನೀರಿನಂತೆ ಜರ್‍ರನೆ ಇಳಿದು ಹೋಯಿತು. ಅವನು ತೀರಾ ಆಯಾಸಗೊಂಡವನಂತೆ ಕಾರಿನ ಮೆಟ್ಟಿಗೊರಗಿದ. ಅರುಂಧತಿಗೆ ಕೊಂಚ ಉಸಿರು ಬಂತು. ಅವಳು ಕೂಡಲೆ ಕಾರನ್ನು ಸ್ಟಾರ್ಟ್‌ಮಾಡಿದಳು. ನಿಮಿಷಾರ್ಧದಲ್ಲಿ ಕಾರು ಮರೆಯಾಯಿತು.

"ಆ ತರುಣ ಯಾರು" ಎಂದು ವಾಸು ಪ್ರಶ್ನಿಸಿಕೊಂಡು ಹಿಂಸೆಪಟ್ಟ. 'ಅವನೂ ಲಕ್ಷಣವಾಗಿದ್ದಾನಲ್ಲಾ' ಎಂದು ಕೈಕೈ ಹೊಸೆದುಕೊಂಡು ಮಿಡುಕಾಡಿದ. 'ಕಾರಿಟ್ಟಿರುವುದರಿಂದ ಶ್ರೀಮಂತನಿರಬಹುದು' ಯೌವ್ವನ ಮೊದಲಾದ ಈ ದುರ್ಗುಣಗಳನ್ನೆಲ್ಲಾ ವಾಸು ವಿಶಾಲ ಮನೋಭಾವದಿಂದ ಕ್ಷಮಿಸಲು ಸಿದ್ಧನಿದ್ದರೂ, ಅವನು ಬಂದಾಗ ಸರಳೆಯ ಮುಖ ನಗುವಿನಿಂದ ಅರಳಿದುದನ್ನು ಮಾತ್ರ ಅವನು ಎಂದೆಂದಿಗೂ ಕ್ಷಮಿಸಲು ತಯಾರಿರಲಿಲ್ಲ.

ಇಷ್ಟಕ್ಕೆ ಸರಳೆ ತನಗೇನಾಗಬೇಕು, ಎಲ್ಲಾದರೂ ಹಾಳಾಗಲಿ ಎಂದು ಆಗಾಗ್ಗೆ ವಾಸು ಸಮಾಧಾನ ತಂದುಕೊಳ್ಳಲು ಯತ್ನಿಸಿದ. ಆದರೆ ಅವನ ಪ್ರಯತ್ನ ನೀರಿನಲ್ಲಿ ಹೋಮ ಮಾಡಿದಂತಾಯಿತು.

ರಾಜಗೋಪಾಲನನ್ನು ಕಂಡ ಕೂಡಲೆ ಸರಳಾ ವಾಸುವನೂ ಮರೆತು ಅವನ ಕಾರಿನ ಬಳಿಗೆ ಧಾವಿಸಿದ್ದುಂಟು.

"ಚಿಕ್ಕಮ್ಮ ಹೇಗಿದಾರೆ ಸರಳಾ?"—ರಾಜಗೋಪಾಲ ಕಾರಿನಿಂದ ಕೆಳಗಿಳಿಯುತ್ತಾ ಪ್ರಶ್ನಿಸಿದ.

"ಹುಷಾರಾಗಿದಾರೆ. ನಾಳೆ ಆಪರೇಷನ್ನು ಮಾಡ್ತಾರಂತೆ"

"ಓಹೋ, ಹಾಗಾದರೆ ಮನೆಯಲ್ಲಿ ನೀನು, ಚಿಕ್ಕಪ್ಪ ಮಾತ್ರ ಇದೀರಿ."

"ಹೂಂ."

"ಅಡಿಗೆ ಸರಳಾದೇವಿಯವರದೇನೋ?"

"ಹೋಗಕ್ಕ, ಕೀಟಲೆ ಮಾಡಬೇಡ."

''ಆಸ್ಪತ್ರೆಗೆ ಹೋಗೋಣ ಬರ್ತಿಯಾ?''

"ಇದೇ ತಾನೆ ಆಸ್ಪತ್ರೆಯಿಂದ ಬರ್ತಿದೀನಿ ಮತ್ತೆ ಅಲ್ಲಿಗೆ ಹೋಗು ವುದೇ?''

ಮಾತನಾಡುತ್ತಾ ಇಬ್ಬರೂ ಒಳಗೆ ಬಂದರು. ರಾಜಗೋಪಾಲ ವರಾಂಡದಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಸಿಗರೇಟನ್ನು ಬಾಯಲ್ಲಿಟ್ಟು ಕಡ್ಡಿ ಗೀರಿದ.

'ರಾಜೂ, ಈ ದುರಭ್ಯಾಸ ಬಿಡಲಾರೆಯಾ?"—ಸರಳಾ ಕೇಳಿದಳು.

"ನನ್ನ ಒಂದು ಆಸೆ ನೆರವೇರಿದರೆ ಈ ಅಭ್ಯಾಸ ಬಿಟ್ಟು ಬಿಡ್ತೀನಿ''—ಎನ್ನುತ್ತಾ ರಾಜಗೋಪಾಲ ಅವಳ ಕಡೆ ನೋಡಿದ.

ಅವನ 'ಆಸೆ' ಏನೆಂದು ಸರಳೆಗೆ ತಿಳಿದಿತ್ತು. ಆದರೆ ಅದು ಈ ಜನ್ಮದಲ್ಲಿ ನೆರವೇರುವ ಹಾಗಿರಲಿಲ್ಲವಾದುದರಿಂದ ಸರಳಾ ಮತ್ತೆ ಆ ಮಾತನ್ನು ಎತ್ತಲಿಲ್ಲ

"ಹೋಗೋಣವಾ ಆಸ್ಪತ್ರೆಗೆ?"

"ಮಧ್ಯಾಹ್ನ ಹೋಗೋಣ. ಚಿಕ್ಕಮ್ಮನಿಗೆ ಹೇಗಿದ್ದರೂ ಕಾಫಿ ತಿಂಡಿ ತಗೊಂಡು ಹೋಗಬೇಕು. ಇವತ್ತು ನಿನಗೆ ರಜವಿದೆಯಷ್ಟೆ?"

"ಹೂಂ. ಆದುದರಿಂದಲೆ ಅಮ್ಮಾವರನ್ನ ನೋಡಲು ಬಂದೆ."

ಸರಳಾ ಮುಡುಕಿದಳು ಅವನ ಕೆಲವು ಮಾತುಗಳು ಅವಳನ್ನು ಚುಚ್ಚಿ ನೋಯಿಸುತ್ತಿದ್ದವು.

"ಹಾಗೆಲ್ಲಾ 'ಅಮ್ಮಾವರು' ಎನ್ನಬೇಡಪ್ಪ."

"ಯಾಕೆ?"

"ಯಾಕೆ ಎಂದು ನಿನಗೆ ಗೊತ್ತು."

"ಸರಳಾ, ಸರಳಾ ...ನನಗೆ ನೀನು ಏನೇನೂ ಬೆಲೆ ಕೊಡುವುದಿಲ್ಲವೆ?" --ರಾಜಗೋಪಾಲ ಕೇಳಿದ.

"ಅದರಿಂದ ಏನು ಪ್ರಯೋಜನ ರಾಜೂ?"

"ನಿಮ್ಮ ಚಿಕ್ಕಮ್ಮನ್ನ ಒಪ್ಪಿಸಲಾರೆಯಾ?" ರಾಜು ಕೇಳಿದ.

"ನೀನು ಪೈಲಟ್ ಕೆಲಸ ಬಿಡುವುದಾದರೆ ನಾನು ಈ ದಿನವೇ

ಚಿಕ್ಕಮ್ಮನನ್ನು ಒಪ್ಪಿಸುತ್ತೇನೆ. ನೀನು ವೈಮಾನಿಕನಾದುದರಿಂದ ಚಿಕ್ಕಮ್ಮ ನನ್ನನ್ನು ನಿನಗೆ ಕೊಟ್ಟು ಮದುವೆ ಮಾಡಲು ಹೆದರುತ್ತಿದ್ದಾರೆ. ನೀನು ಆ ಕೆಲಸ ಬಿಟ್ಟುಬಿಡು. ಆ ದಿನವೇ ನಾನು ನಿನ್ನವಳಾಗುತ್ತೇನೆ ನನಗೂ ನಿನ್ನ ಉದ್ಯೋಗ ಹೆದರಿಕೆಯನ್ನುಂಟುಮಾಡುತ್ತದೆ. ದಿನ ಬೆಳಗಾದರೆ ಪೇಪರಿನಲ್ಲಿ ವಿಮಾನಾಪಘಾತದ ಸುದ್ದಿ ಓದಿ ಜೀವ ತಲ್ಲಣಿಸುತ್ತದೆ. ನಾನು ನಿನಗೆ ಬೇಕಾಗಿದ್ದಲ್ಲಿ ಆ ಕೆಲಸ ಬಿಟ್ಟುಬಿಡು."

ರಾಜಗೋಪಾಲ ಉತ್ತರಿಸಲಿಲ್ಲ.

"ಏನು ಹೇಳ್ತೀಯಾ?"

"ಎಂದೆಂದಿಗೂ ನಾನು ಆ ಕೆಲಸ ಬಿಡುವುದಿಲ್ಲ. ನಾನು ಓದಿರುವ ವಿದ್ಯೆಗೆ ಯಾರು ನನಗೆ ಸಾವಿರಾರು ರೂಪಾಯಿ ಬರುವ ಕೆಲಸ ಕೊಡುತ್ತಾರೆ? ಈ ಕಾರು, ಬೆಲೆಬಾಳುವ ಬಟ್ಟೆಗಳು, ದೊರೆ ಜೀವನ, ಕಂಟೋನ್ಮೆಂಟಿನಲ್ಲಿ ಬಂಗಲೆಯ ವಾಸ, ಆಳುಕಾಳುಗಳು— ಊಹೂಂ. ಆ ಕೆಲಸ ನಾನು ಎಂದೆಂದಿಗೂ ಬಿಡಲಾರೆ."

"ಹಾಗಾದರೆ ಮತ್ತೆ ಈ ವಿಷಯ ನನ್ನೆದುರಿಗೆ ಆಡಬೇಡ ರಾಜೂ. ಚಿಕ್ಕಮ್ಮನ ಮನಸ್ಸನ್ನು ನೋಯಿಸಿ ನಾನು ನಿನ್ನ ಕೈ ಹಿಡಿಯಲಾರೆ."

ಅವರಿಬ್ಬರ ನಡುವೆ ಮೌನದ ಕಮರಿ ಉದ್ಭವಿಸಿತು. ಆಳವಾದ ಹಳ್ಳದ ಆಚೀಚೆಯ ದಂಡೆಗಳಲ್ಲಿ ಇಬ್ಬರೂ ನಿಂತು ಒಬ್ಬರನ್ನೊಬ್ಬರು ನೋಡಿದರು ಸರಳೆಯ ಮುಖ ಕಳೆಗುಂದಿದುದನ್ನು ರಾಜಗೋಪಾಲ ಗಮನಿಸಿದ ಅವಳನ್ನು ನೋಯಿಸುವುದೆಂದರೆ ಅವನಿಗಾಗದು.

"ಬಿಡು ಸರಳಾ. ಇನ್ನು ಮೇಲೆ ಈ ಮಾತನ್ನಾಡಿ ನಿನ್ನ ನೋಯಿಸುವುದಿಲ್ಲ. ಎಲ್ಲಿ ನಕ್ಕುಬಿಡು—"ಎಂದ ರಾಜಗೋಪಾಲ.

ಸರಳಾ ನಕ್ಕಳು. ಅವಳ ನಗು ರಾಜಗೋಪಾಲನ ಹೃದಯದಲ್ಲಿ ಪ್ರತಿಧ್ವನಿಸಿತು. ಅವರು ಹಿಂದಿನದೆಲ್ಲವನ್ನೂ ಮರೆತು ಮಾತನಾಡಿದರು. ಸರಳೆ ಮಾಡಿದ ಕಾಫಿ ಕುಡಿದು ರಾಜಗೋಪಾಲ ಎದೆ ಸವರಿಕೊಂಡು

"ನಾನು ಒಂದು ವಾರ ರಜೆಗೆ ಹಾಕಬೇಕು" ಎಂದ.

"ಯಾಕೆ?"

"ನಿನ್ನ ಕಾಫಿ, ತಿಂಡಿ ಅರಗೋದಿಲ್ಲ ಬೇಗ."

"ಬಿಡಪ್ಪ ನಿಮ್ಮಮ್ಮನಷ್ಟು ಚೆನ್ನಾಗಿ ನನಗೆ ಅಡಿಗೆ ಮಾಡೋಕೆ ಬರೋದಿಲ್ಲ. ಅತ್ತೇನ ಯಾವಾಗ ಇಲ್ಲಿಗೆ ಕರೆದುಕೊಂಡು ಬರ್ತೀಯಾ?"

"ಸೊಸೇನೇ ಅಲ್ಲಿಗೆ ಯಾಕೆ ಕರೆದುಕೊಂಡು ಹೋಗಬಾರದು ?"

ರಾಜಗೋಪಾಲನ ಪ್ರತಿ ಮಾತಿನಲ್ಲಿಯೂ ಸರಳೆಯ ಬಗೆಗಿದ್ದ ಅಭಿಲಾಷೆ ಬೇಡಬೇಡವೆಂದರೂ ವ್ಯಕ್ತವಾಗುತ್ತಿತ್ತು.

ಅವನ ಉದ್ಯೋಗ ಅವರಿಬ್ಬರ ವಿವಾಹವನ್ನು ತಡೆದಿತ್ತು.

ರಾಜಗೋಪಾಲ ಸರಳೆಯ ತಂದೆಯ ಅಕ್ಕನ ಮಗ. ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡ ರಾಜಗೋಪಾಲನ ತಾಯಿ ಅವರಿವರ ನೆರವಿನಿಂದ ಮಗನನ್ನು ಪದವೀಧರನನ್ನಾಗಿ ಮಾಡಿದರು. ಕಾಲೇಜಿಗೆ ಕಾಲಿಟ್ಟ ದಿನದಿಂದಲೂ ರಾಜಗೋಪಾಲನಿಗೆ ಸರಳೆಯನ್ನು ಮದುವೆಯಾಗುವ ಆಸೆಯಿತ್ತು. ಅವನು ತನ್ನ ಆಸೆಯ ಬಳ್ಳಿಯನ್ನು ಬೆಳೆಸಿಕೊಂಡು ಅದು ಅವನ ಹೃದಯವನ್ನೆಲ್ಲಾ ವ್ಯಾಪಿಸಿ ನಿಂತಮೇಲೆ ಅದನ್ನು ಸರಳೆಯ ಹೃದಯ ಹಂದರದ ಮೇಲೂ ಹಬ್ಬಿಸಿ ಬೆಳೆಸಿದ.

ಭವ್ಯವಾದ ನಿಲುವು, ಆಕರ್ಷಕವಾದ ದಿಟ್ಟತನದಿಂದ ತುಂಬಿದ ಮುಖ, ಸರಸವಾದ ಮಾತುಕತೆಗಳಿಗೆ ಎಳೆಯ ಪ್ರಾಯದ ಸರಳ ಮರುಳಾಗುವುದಿರಲಿ—ಅವಳ ಚಿಕ್ಕಮ್ಮ, ಚಿಕ್ಕಪ್ಪ ಸಹಿತ ಮರುಳಾದರು. ಅವರೂ ಸರಳೆಯನ್ನು ಅವನಿಗೆ ಕೊಡುವುದೆಂದು ನಿರ್ಧರಿಸಿದ್ದರು.

ಆದರೆ ರಾಜಗೋಪಾಲ ವೈಮಾನಿಕನಾದಾಗ ಅವರಿಗಾದ ನಿರಾಶೆ ಅಷ್ಟಿಷ್ಟಲ್ಲ. ತಾಯಿಯ ಕಣ್ಣೀರು ಅವನ ನಿರ್ಧಾರವನ್ನು ಕರಗಿಸಲಿಲ್ಲ. ತನ್ನ ಶ್ರೀಮಂತಿಕೆಯಿಂದ ಸರಳೆಯ ಸರಳ ಮನಸ್ಸನ್ನು ಗೆಲ್ಲುತ್ತೇನೆ ಎಂದವನು ಭಾವಿಸಿದ್ದ, ಸರಳೆಯನ್ನು ಒಡವೆ, ವಸ್ತ್ರಗಳಿಂದ ಮೆರೆಸಬೇಕೆಂದೇ ಅವನು ಆ ಉದ್ಯೋಗವನ್ನು ಹಿಡಿದಿದ್ದ. ಆದರೆ ಯಾರಿಗಾಗಿ ಅವನು ಆ ಕೆಲಸವನ್ನು ಕೈಗೊಂಡನೋ ಅವಳು ತನ್ನ ಕೆಲಸದಲ್ಲಿರುವ ಅಪಾಯದಿಂದಾಗಿ, ಗಳಿಗೆ ಗಳಿಗೆಗೂ ಮೃತ್ಯುವನ್ನು ಎದುರಿಸುವ ಗಂಡನನ್ನು ಹೊಂದಲು ಹಿಂಜರಿದುದರಿಂದ ಅವನಾಸೆಗಳೆಲ್ಲ ಮಣ್ಣುಗೂಡಿದವು.

ಸರಳೆಯ ಚಿಕ್ಕಮ್ಮ, ಚಿಕ್ಕಪ್ಪನಂತೂ "ಸರಳೆಗೆ ಮದುವೆಯಾಗದಿದ್ದರೂ ಚಿಂತೆಯಿಲ್ಲ. ಅವನಿಗೆಮಾತ್ರ ಸರಳೆಯನ್ನು ಖಂಡಿತ ಕೊಡುವುದಿಲ್ಲ, ಎಂದು ನಿರ್ಧರಿಸಿದ್ದರು. ತಮ್ಮ ನಿರ್ಧಾರವನ್ನು ರಾಜಗೋಪಾಲನಿಗೆ ತಿಳಿಸಿಯೂ ಇದ್ದರು. ಆದರೆ ಅಷ್ಟುಹೊತ್ತಿಗೆ ಆ ಜೀವನದ ರುಚಿಕಂಡಿದ್ದ ರಾಜಗೋಪಾಲ ಉದ್ಯೋಗದಿಂದ ವಿಮುಖನಾಗಲು ಒಪ್ಪಲಿಲ್ಲ ಕೊನೆಕೊನೆಗೆ 'ಸರಳೆಯಿಲ್ಲದಿದ್ದರೆ ಬೇಡ. ಈ ಕೆಲಸವಿರಲಿ' ಎಂದು ತೀರ್ಮಾನಿಸಿದ್ದ.

ಆದರೂ ಸರಳೆಯ ಮನಸ್ಸನ್ನು ಗೆಲ್ಲಲು ಅವನು ಮಾಡಿದ ಪ್ರಯತ್ನ ಒಂದೊಂದಲ್ಲ ತನ್ನ ಪ್ರೇಮವನ್ನು ಅವಳಿಗೆ ನಿವೇದಿಸಿದ. ತನ್ನ ಶ್ರೀಮಂತ ಜೀವನವನ್ನು ಅವಳೆದುರಿಗೆ ಬಣ್ಣಿಸಿದ.

"ನಿಮ್ಮ ಚಿಕ್ಕಮ್ಮ ಒಪ್ಪದಿದ್ದರೇನಂತೆ, ನಾವು ಮದುವೆಯಾಗೋಣ. ಎರಡು ದಿನ ಅವರಿಗೆ ಬೇಸರವಾಗಬಹುದು ಆದರೆ ಆಮೇಲೆ ಅವರು ತಾವಾಗಿಯೇ ಸರಿಹೋಗುತ್ತಾರೆ"—ಎಂದಿದ್ದ ರಾಜಗೋಪಾಲ

ಆದರೆ ಸರಳೆಗೆ ಚಿಕ್ಕಮ್ಮ, ಚಿಕ್ಕಪ್ಪನಲ್ಲಿ ತುಂಬಾ ಪ್ರೀತಿಯಿತ್ತು. ಅವರನ್ನು ಯಾವರೀತಿಯಿಂದಲೂ ಅವಳು ನೋಯಿಸಲಾರದವಳಾಗಿದ್ದಳು. ಸಾಲದುದಕ್ಕೆ ವೈಮಾನಿಕನಬಾಳು ಎಷ್ಟು ಅಪಾಯದಿಂದ ತುಂಬಿದೆ ಎಂಬುದನ್ನೂ ಅವಳು ಬಲ್ಲವಳಾಗಿದ್ದಳು ತಿಳಿದೂ ತಿಳಿದೂ ತನ್ನಕಾಲ ಮೇಲೆ ತಾನೇ ಕಲ್ಲು ಎತ್ತಿಹಾಕಿಕೊಳ್ಳಲು ಸರಳಾ ಒಪ್ಪಲಿಲ್ಲ.

"ಕ್ಷಮಿಸು ರಾಜು. ಕೆಲಸ ಬಿಟ್ಟದಿನ ನಾನು ನಿನ್ನವಳು" ಎಂದು ಖಂಡಿತವಾದ ಧ್ವನಿಯಲ್ಲಿ ಅವಳು ತನ್ನ ಅಭಿಪ್ರಾಯವನ್ನು ಅವನಿಗೆ ತಿಳಿಸಿದ್ದಳು.

ಅಂದಿನಿಂದ ಅವಳು ರಾಜಗೋಪಾಲ ತನ್ನ ಹೃದಯದಲ್ಲಿ ಹಬ್ಬಿಸಿದ್ದ ಆಶಾಬಳ್ಳಿಯನ್ನು ಕಿತ್ತೊಗೆಯಲು ಪ್ರಯತ್ನಿಸಿ ಆ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಳು. ಅವನು ಆಗಾಗ್ಗೆ ಬಾದು ಅವಳನ್ನು ಭೇಟಿಮಾಡದಿದ್ದರೆ ಸರಳೆ ಅವನನ್ನು ಸಂಪೂರ್ಣವಾಗಿ ಮರೆಯಲೂ ಸಾಧ್ಯವಿತ್ತು. ಆದರೆ ರಾಜಗೋಪಾಲ ಬಿಡುವು ದೊರೆತಾಗಲೆಲ್ಲಾ ಅವಳಿದ್ದಲ್ಲಿಗೆ ಬಂದು ನಂದುತ್ತಿದ್ದ ಕಿಡಿಯನ್ನು ಮತ್ತೊಮ್ಮೆ ಬೆಳಗುವಂತೆ ಮಾಡುತ್ತಿದ್ದ

ಅವನ ಉತ್ಕಟ ಆಸೆಯನ್ನು ಸರಳೆಯ ಹೃದಯ ಅರಿತಾಗ ಅವಳಿಗೆ ಎಲ್ಲರನ್ನೂ ಬಿಟ್ಟು, ಎಲ್ಲರನ್ನೂ ಮರೆತು ಅವನೊಡನೆ ಹೊರಟುಹೋಗುವ ಮನಸ್ಸಾಗುತ್ತಿತ್ತು. ಆದರೆ ತನ್ನ ದುಡುಕಿನಿಂದಾಗಿ ಮುಂದೆ ಇಡೀ ಜೀವಮಾನವನ್ನೇ ಬಲಿಯನ್ನಾಗಿ ಕೊಡಬೇಕಾದರೆ?

ಸರಳಾ ಭಗ್ನ ಪ್ರೇಮಿಯಂತೆ ಕೊನೆಗೆ ನಿಶ್ಚಯ ಮಾಡಿದಳು-ತಾನು ಎಂದೆಂದಿಗೂ ಮದುವೆಯಾಗದೆ ಉಳಿಯುವುದಾಗಿ.

ಆದರೆ ಹದಿನೆಂಟು ವರ್ಷದ ಹುಡುಗಿಯ ನಿರ್ಧಾರವದು. ಯಾವುದೋ ಒಂದು ಗಳಿಗೆಯಲ್ಲಿ ಮನಸ್ಸು ತೀರ ಬೇಸರಗೊಂಡಾಗ ಮಾಡಿದ ನಿರ್ಧಾರ ಅವಳನ್ನೇ ಅಧೀರಳನ್ನಾಗಿ ಮಾಡುತ್ತಿತ್ತು.

ಅವಳ ಹೃದಯ ಕಂಗೆಟ್ಟು ಅಳುತ್ತಿದ್ದಾಗ ವಾಸು ತಂಪು ನೀರಿನ ಚಿಲುಮೆಯಂತೆ ಅವಳೆದುರಿಗೆ ಬಂದ.

ಅವನ, ತನ್ನ ಪರಿಚಯ ಕೇವಲ ಒಂದು ದಿನದ್ದಾಗಿತ್ತು. ಆದರೂ ವಾಸು ತನಗೆ ಮರುಳಾಗಿದ್ದಾನೆ ಎಂಬುದು ಅವಳಿಗೆ ತಿಳಿದಿತ್ತು. ಅವನ ನಗು, ಮಾತುಗಳನ್ನು ಅವಳು ಮನಸ್ಸಿನಲ್ಲಿ ಮೆಲಕು ಹಾಕುತ್ತಿದ್ದಾಗ ರಾಜಗೋಪಾಲ ಎಚ್ಚರಿಸಿದ

"ಸರಳಾ, ನಡಿ ಆಸ್ಪತ್ರೆಗೆ ಹೋಗೋಣ."

ಸರಳಾ ಕನಸಿನಿಂದ ಎಚ್ಚರಗೊಂಡಳು "ಊಂ, ಐದು ನಿಮಿಷ ಬಂದೆ"—ಎನ್ನುತ್ತಾ ರೂಮಿಗೋಡಿದಳು.

ಅಲಂಕೃತಳಾಗಿ ಹೊರಗೆ ಬಂದ ಸರಳೆಯನ್ನು ರಾಜಗೋಪಾಲ ಮೆಚ್ಚುಗೆಯಿಂದ ನೋಡಿ ಹೇಳಿದ

"ಸರಳಾ ಒಬ್ಬಳು ಏರ್‌ಹೋಸ್ಟೆಸ್ ಇದ್ದಾಳೆ ಅವಳು ನಿನ್ನ ಹಾಗೇ ಇದಾಳೆ. ಅವಳನ್ನು ನೋಡಿದಾಗಲೆಲ್ಲ ನಿನ್ನ ನೆನಪು ಬರುತ್ತದೆ."

"ಹುಚ್ಚು ಹುಡುಗ"—ಎಂದಳು ಸರಳಾ.

ಜೊತೆಯಾಗಿ ಬಂದ ಸರಳಾ, ರಾಜಗೋಪಾಲನನ್ನು ನೋಡಿ ಚಿಕ್ಕಮ್ಮ ನಕ್ಕರು.

"ಎಷ್ಟು ಸುಂದರವಾದ ಜೋಡಿ! ಆದರೆ ಅವನಾದರೂ ಯಾಕೆ ಅಷ್ಟುಹಠ ಮಾಡುತ್ತಾನೆ"—ಎಂದು ಪಂಕಜಮ್ಮ ಮನಸ್ಸಿನಲ್ಲೇ ನೊಂದರು.

"ರಾತ್ರಿ ಊಟ, ಬೆಳಿಗ್ಗೆ ಕಾಫಿ ಯಾವುದೂ ಬೇಡ ಬೆಳಿಗ್ಗೆ ಒಂಭತ್ತು ಗಂಟೆಗೆ ಆಪರೇಷನ್ ಮಾಡ್ತಾರಂತೆ"- ಎಂದರು ಪಂಕಜಮ್ಮ.

"ಚಿಕ್ಕಮ್ಮಾ, ಬೇಕಾದರೆ ಅಮ್ಮನ್ನ ಕರೆದುಕೊಂಡು ಬರಲೇನು? ಸರಳಾ ಮನೆಯಲ್ಲಿ ಒಬ್ಬಳೇ ಆಗ್ತಾಳೆ"—ಎಂದು ರಾಜಗೋಪಾಲ ಹೊರ ಡುವಾಗ ಕೇಳಿದ.

ಸರಳೆಯಲ್ಲಿ ಎಷ್ಟೊಂದು ಪ್ರೀತಿ! ಆದರೂ ಅವಳಿಗಾಗಿಯಾದರೂ ಅವನು ತನ್ನ ಕೆಲಸವನ್ನು ನಿರಾಕರಿಸಲಾರದವನಾಗಿದ್ದ. ಮಾತು ಮಾತಿನಲ್ಲ ವ್ಯಕ್ತವಾಗುತ್ತಿದ್ದ ಅವನ ಅಭಿಮಾನ ಪ್ರೀತಿ ಇವುಗಳನ್ನು ಪಂಕಜಮ್ಮ ಗುರುತಿಸಿ ಸಂಕಟಪಟ್ಟರು.

ಆದರೆ ಭಾವುಕತೆಗೆ ಬಲಿಯಾಗಲು ಅವರು ಸಿದ್ಧರಿರಲಿಲ್ಲ. "ಏನೂ ಬೇಡ ರಾಜು"—ಎಂದರಾಕೆ.

ರಾಜಗೋಪಾಲ ಸರಳೆಯನ್ನು ಮನೆಯಲ್ಲಿಳಿಸಿ, ಚಿಕ್ಕಪ್ಪನೊಡನೆ ಹರಟೆ ಹೊಡೆದು ರಾತ್ರಿ ಎಂಟು ಗಂಟೆಯವೇಳೆಗೆ ಕಂಟೋನ್ಮೆಂಟಿಗೆ ಹೋದ.

ಸರಳಾ ಚಿಕ್ಕಪ್ಪನೊಡನೆ ಹೇಳಿದಳು "ಚಿಕ್ಕಪ್ಪಾ, ನಾಳೆ ಒಂಭತ್ತು ಗಂಟೆಗೆ ಆಪರೇಷನ್ ಮಾಡ್ತಾರಂತೆ. ನೀವೂ ಬರ್ತೀರಾ?"

"ಇಲ್ಲಮ್ಮ. ನನಗೆ ಕೆಲಸವಿದೆ, ಸಂಜೆ ಬರ್ತೀನಿ."

ಮಾರನೆಯ ದಿನ ಸರಳಾ ಬೆಳಿಗ್ಗೆ ಅಡಿಗೆ ಮಾಡಿ ಮುಚ್ಚಿ ಇರಿಸಿದಳು. ಚಿಕ್ಕಮ್ಮನಿಗೆ ಆಪರೇಷನ್ ಮಾಡಲಿರುವ ಸುದ್ದಿ ಅವಳ ಪಾಲಿಗೆ ಅತ್ಯಂತ ಭೀಕರವಾಗಿತ್ತು. ಆತಂಕದಿಂದಾಗಿ ಅವಳಿಗೆ ಹಸಿವೆಯಾಗಲಿಲ್ಲ.

ಎಂಟು ಗಂಟೆಗೇ ಸರಳಾ ಆಸ್ಪತ್ರೆಗೆ ಬಂದಳು. ಚಿಕ್ಕಮ್ಮನ ಮುಖವನ್ನು ನೋಡಿದ ಕೂಡಲೇ ಸರಳೆಗೆ ಬೇರೆ ಯಾರನ್ನೋ ನೋಡಿದಂತಾಯಿತು. ಚಿಕ್ಕಮ್ಮ ತಮ್ಮ ಮಂಚದ ತಲೆಯ ಹತ್ತಿರವಿದ್ದ ಆಲ್ಮೈರಾದಿಂದ ಮೂಗುತಿಯನ್ನು ತೆಗೆದು ಸರಳೆಯ ಕೈಗೆ ಕೊಟ್ಟರು.

''ಯಾಕೆ ಚಿಕ್ಕಮ್ಮಾ.. ?"

"ಕ್ಲೋರೋಫಾರಂ ಕೊಡ್ತಾರೆಂದು ಕಾಣಿಸುತ್ತದೆ."

ಸರಳೆಯ ಮುಖದಲ್ಲಿ ಭೀತಿ ಕವಿಯಿತು. ದುಃಖದಿಂದ ಅವಳಿಗೆ ಅಳು ಬರುವಂತಾಯಿತು.

"ಚಿಕ್ಕಪ್ಪ ಬಂದಿದ್ದರೆ ಚೆನ್ನಾಗಿತ್ತು". ಎಂದು ಅವಳು ಚಿಕ್ಕಮ್ಮನೊಡನೆ ಬಾರಿ ಬಾರಿಗೂ ಹೇಳಿದಳು

"ಚಿಂತೆಯಿಲ್ಲ. ನೀನು ಹೆದರಬೇಡ. ಸರೋಜಮ್ಮಾ, ಸರಳಾ ತುಂಬಾ ಹೆದರಿಬಿಟ್ಟಿದ್ದಾಳೆ. ನೀವಾದರೂ ಸಮಾಧಾನ ಹೇಳಿ" – ಎಂದರು ಪಂಕಜಮ್ಮ.

''ಇದರಲ್ಲಿ ಅಳೋದಕ್ಕೇನಿದೆಯಮ್ಮ? ಬಹಳ ಸಣ್ಣ ಆಪರೇಷನ್ ಇದು ಏನೂ ದಿಗಿಲುಪಡಬೇಡ"—ಎಂದರು ಸರೋಜಮ್ಮ.

ವಾಸು ಒಳಗೆ ಬಂದ. ಸರಳೆಯ ಕೆನ್ನೆಯ ಮೇಲೆ ಹರಿಯುತ್ತಿದ್ದ ಕಂಬನಿಯನ್ನು ಗಮನಿಸಿದ. ಅಷ್ಟರಲ್ಲಿ ನರ್ಸುಗಳಿಬ್ಬರು ಬಂದು ಪಂಕಜಮ್ಮನನ್ನು ಟ್ರಾಲಿಯಲ್ಲಿ ಮಲಗಿಸಿಕೊಂಡು ಶಸ್ತ್ರಚಿಕಿತ್ಸೆ ಮಾಡುವ ರೂಮಿಗೆ ಕರೆದೊಯ್ದರು. ಕಣ್ಣೀರನ್ನು ಕರವಸ್ತ್ರದಿಂದ ಒರೆಸಿಕೊಳ್ಳುತ್ತಾ ಸರಳ ಅವರನ್ನು ಹಿಂಬಾಲಿಸಿದಳು.

' ಹೋಗೋ ವಾಸು, ಸರಳಾ ಬಹಳ ಹೆದರಿಬಿಟ್ಟಿದ್ದಾಳೆ. ಅವಳಿಗೆ ಧೈರ್ಯ ಹೇಳಿ ಇಲ್ಲಿಗೆ ಕರೆದುಕೊಂಡು ಬಾ" ಎಂದು ಸರೋಜಮ್ಮ ತಮ್ಮ

ನಿಗೆ ಅಪ್ಪಣೆ ಮಾಡಿದರು. ಅವರು ಅಷ್ಟು ಹೇಳಿದ್ದೇ ಸಾಕೆಂದು ವಾಸು ಸರಳೆಯನ್ನು ಹಿಂಬಾಲಿಸಿದ.

ಶಸ್ತ್ರ ಚಿಕಿತ್ಸೆಯ ರೂಮಿನ ಹೊರಗೆ ಹಾಕಿದ್ದ ಮರದ ಬೆಂಚಿನ ಮೇಲೆ ಕುಳಿತಿದ್ದಳು ಸರಳಾ. ಹೆದರಿಕೆ, ಭಯ ಅವಳ ಮುಖದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ್ದವು.

ವಾಸು ಅವಳ ಮುಂದೆ ಕ್ಷಣಕಾಲ ನಿಂತು ನೋಡಿದ. ಸರಳ ಅವನನ್ನು ಗಮನಿಸಿದಂತೆ ತೋರಲಿಲ್ಲ. ಅವನು ಅವಳ ಪಕ್ಕದಲ್ಲಿ ಕುಳಿತು ಧೈರ್ಯ ಹೇಳಿದ.

''ಇಷ್ಟಕ್ಕೆಲ್ಲಾ ಅಳ್ತಾರೆಯೇ? ತುಂಬ ಪುಟ್ಟ ಆಪರೇಷನ್ ಅದು. ಇದೆಲ್ಲಾ ಏನು ಮಹಾ. ನೋಡಿ ಇಲ್ಲಿ, ಅಕ್ಕ ನಿಮ್ಮನ್ನು ಕರೆದುಕೊಂಡು ಬಾ ಎಂದರು. ಬನ್ನಿ, ವಾರ್ಡಿಗೆ ಹೋಗೋಣ."

"ನನಗೆ ತುಂಬಾ ಭಯವಾಗುತ್ತದೆ ಚಿಕ್ಕಮ್ಮನಿಗೆ ಏನೂ ಆಗುವುದಿಲ್ಲವೇನ್ರೀ?"

"ಏನೂ ಆಗೊಲ್ಲ"—ತಾನೇ ಡಾಕ್ಟರೆಂಬಂತೆ ವಾಸು ನುಡಿದ.

"ಏನಾದರೂ ಆದರೆ?"

"ನಾನಿದೀನಿ. ನಿಮ್ಮನ್ನು ನೋಡಿಕೊಳ್ತೀನಿ"—ವಾಸು ಅತ್ಯಂತ ಸಹಾನುಭೂತಿಯಿಂದ ನುಡಿದ

''ಹಾಗಾದರೆ ಚಿಕ್ಕಮ್ಮನಿಗೆ ಆಪರೇಷನ್ ಆಗುವವರೆವಿಗೆ ನೀವೂ ಇಲ್ಲೇ ಇರಿ. ನನಗೆ ತುಂಬಾ ಭಯ"—ಎಂದಳು ಸರಳಾ.

ವಾಸು ಅವಳಿಗಾಗಿ ಏನು ಮಾಡಲೂ ತಯಾರಿದ್ದ.

''ತುಂಬಾ ದೊಡ್ಡ ಆಪರೇಷನ್ನಾ ಅದು?''

''ಛೀ. ಬಹಳ ಸಣ್ಣದು''—ವಾಸು 'ಡಿ ಎಂಡ್ ಸಿ' ತನಗೆ ಚಿರಪರಿಚಿತ ಎಂಬಂತೆ ನುಡಿದ.

ಅವಳು ಸಣ್ಣಗೆ ನಡುಗುತ್ತಿದ್ದುದನ್ನು ವಾಸು ಗಮನಿಸಿದ. ಅವಳ ಮನಸ್ಸನ್ನು ಬೇರೆ ಕಡೆಯಲ್ಲಿ ತಿರುಗಿಸಲು ವಾಸು ತನ್ನ ಕಾಲೇಜು, ಪರೀಕ್ಷೆಗಳು ಇತ್ಯಾದಿ ವಿಷಯಗಳನ್ನು ಸ್ವಾರಸ್ಯವಾಗಿ ಹೇಳಿದ.

"ಪರೀಕ್ಷೆ ಬರಿಯ ನಾಟಕ. ಯಾವನಾದರೂ ವಿದ್ಯಾರ್ಥಿ ಖಾಲಿ ಪೇಪರನ್ನು ಕೊಟ್ಟು ಬಂದಿದ್ದರೂ ಅವನು ಪಾಸಾಗುವ ಸಂಭವ ಇದೆ.''

"ಹೇಗೆ?''—ಸರಳೆಗೆ ಅಚ್ಚರಿ.

"ಪ್ರೊಫೆಸರು ಮನಸ್ಸು ಮಾಡಿದಲ್ಲಿ ಆ ಹುಡುಗನನ್ನು ತಮ್ಮ ಮನೆಗೆ ಕರೆಸಿಕೊಂಡು ಎದುರಿಗೆ ಕುಳಿತು ಉತ್ತರ ಬರೆಯಿಸಿ ಅವನಿಂದ ಹಣ ಪಡೆದು ಕಳುಹಿಸುವ ಪ್ರಸಂಗಗಳು ಇವೆ."

"ತುಂಬಾ ಅನ್ಯಾಯ"

"ನಿಮ್ಮ ಹೆಸರು ಏನೆಂದಿರಿ?"—ವಾಸುವಿಗೆ ಸರಳೆಯಂತಹ ಹುಡುಗಿಯೆದುರು ನೀರಸವಾದ ಪರೀಕ್ಷೆಯ ವಿಷಯ ಮಾತನಾಡಲು ಬೇಸರವಾಯಿತು. ಸರಳೆಯ ವಿಷಯ ಅರಿಯಲು ಅವನ ಮನಸ್ಸು ತವಕಗೊಂಡಿತು.

"ಸರಳಾ."

"ತುಂಬಾ ಚೆನ್ನಾಗಿದೆ ನಿಮ್ಮ ಹೆಸರು. ನಿಮಗೆ ತುಂಬಾ ಒಪ್ಪುತ್ತದೆ." ಸರಳಾ ನಾಚಿದಳು.

"ನಿನ್ನೆ ನಿಮ್ಮ ಮನೆಗೆ ಯಾರೋ ಕಾರಿನಲ್ಲಿ ಬಂದಿದ್ದರಲ್ಲಾ ಅವರು ಯಾರು?"—ನಿನ್ನೆಯಿಂದ ವಾಸುವನ್ನು ಜೀವಂತವಾಗಿ ದಹಿಸುತ್ತಿದ್ದ ಪ್ರಶ್ನೆಯನ್ನು ಅವನು ಧೈರ್ಯ ಮಾಡಿ ಕೊನೆಗೆ ಕೇಳಿಯೇ ಬಿಟ್ಟ

"ಅವರು ನಮ್ಮ ಸೋದರತ್ತೆಯ ಮಗ"

"ಊಂ....ಭಾರಿ ಕೆಲಸದಲ್ಲಿದ್ದಾರೆಂದು ತೋರುತ್ತದೆ."

"ಹೂಂ. ಪೈಲಟ್ ಆಗಿದಾರೆ"

"ಮದುವೆಯಾಗಿದೆಯೇ?"

"ಇಲ್ಲ."

ವಾಸುವಿಗೆ ಉಸಿರು ಸಿಕ್ಕಿಕೊಂಡಂತಾಯಿತು. ಕೂಡಲೇ ಅವನು ತನ್ನ ಕರ್ತವ್ಯವನ್ನು ಪರಿಪಾಲಿಸಲು ಹೇಳಿದ

"ಪೈಲಟ್ ಕೆಲಸದಂತಹ ಅಪಾಯದ ಕೆಲಸ ಬೇರೊಂದಿಲ್ಲ ಸರಳಾದೇವಿ. ನನ್ನ ಗೆಳೆಯನೊಬ್ಬ ಹೀಗೆ ಪೈಲಟ್ ಆಗಿದ್ದ. ಕಲ್ಲುಗುಂಡಿನ ಹಾಗಿದ್ದ. ವಿಮಾನದ ಯಂತ್ರಗಳೆಲ್ಲ ಸರಿಯಾಗಿದ್ದವಂತೆ, ಆದರೂ ಅನಾಹುತವಾಗಿಯೇ ಹೋಯಿತು. ಕೈತುಂಬಾ ಸಂಬಳವೇನೋ ಕೊಡ್ತಾರೆ. ಆದರೆ ಯಾವಗಳಿಗೆಯಲ್ಲಿ ಏನಾಗುತ್ತದೋ ಯಾರು ಬಲ್ಲರು? ಹಣದಿಂದೇನಾಗಬೇಕು, ಮನುಷ್ಯನಿಗೆ ಸಂತೋಷ ಮುಖ್ಯ"

ಸರಳೆಯಿಂದ ಯಾವ ಪ್ರತಿಕ್ರಿಯೆಯೂ ಇಲ್ಲದಿರುವುದನ್ನು ನೋಡಿ ವಾಸು ಕೇಳಿದ

"ಇದರಲ್ಲಿ ನಿಮ್ಮ ಅಭಿಪ್ರಾಯವೇನು?"

"ನೀವು ಹೇಳುವುದು ನಿಜ."

ಸರಳೆಗೆ ಕೂಡಲೇ ವಾಸುವಿನೆದುರಿಗೆ ತನ್ನ ಅಂತರಂಗವನ್ನು ತೋಡಿ ಕೊಳ್ಳುವ ಆಸೆಯಾಯಿತು. ಆದರೆ ಮನಸ್ಸು ಹಿಂಜರಿಯಿತು.

ಎಷ್ಟಾಗಲಿ ವಾಸು ಅವಳ ಜೀವನದಲ್ಲಿ ಹೊಸಬ.

ಸರಳೆಯ ಅಭಿಪ್ರಾಯ ತಿಳಿದು ವಾಸುವಿಗೆ ಸಂತೋಷವಾಯಿತು.

"ನನ್ನ ಕೇಳಿದರೆ ಪ್ರೈಲೆಟ್ ಆಗುವವರು ಮದುವೆಯನ್ನೇ ಮಾಡಿ ಕೊಳ್ಳಬಾರದು. ಹೆಣ್ಣು ಹೆತ್ತ ತಂದೆ ತಾಯಂದಿರೂ ತಮ್ಮ ಮಕ್ಕಳನ್ನು ಅಂತಹವರಿಗೆ ಕೊಟ್ಟು ಮದುವೆ ಮಾಡಬಾರದು. ನೀವೇನು ಹೇಳುತ್ತೀರ?"

ರಾಜಗೋಪಾಲನಂತಹ ಹುಡುಗ ಮದುವೆಯಾಗಲೇಬಾರದೇ ? ವಾಸುವಿನ ಮಾತು ಸರಳೆಗೆ ಹಿಡಿಸಲಿಲ್ಲ.

"ನನಗೇನೂ ಹಾಗೆ ಎನಿಸೋದಿಲ್ಲ"—ಎಂದಳು ಸರಳಾ.

"ನನ್ನ ಮಾತನ್ನು ತಪ್ಪು ತಿಳಿಯಬೇಡಿ. ಹುಡುಗಿಯ ಹಿತದೃಷ್ಟಿ ಯಿಂದ ನಾನು ಹೀಗೆ ಹೇಳುತ್ತಿದ್ದೇನೆ "

ರಾಜಗೋಪಾಲ ಯಾರನ್ನುಮದುವೆ ಮಾಡಿಕೊಂಡರೆ ವಾಸುವಿಗೆ ಅದರಿಂದ ಆಗಬೇಕಾದ್ದೇನು ? ಆದರೆ ಆ ಹುಡುಗಿ ಸರಳೆಯಾಗದಿರಲಿ ಎಂದು ಅವನ ಅಭಿಲಾಷೆ.

ವಾಸುವಿನೊಡನೆ ಹೆಚ್ಚು ಚರ್ಚಿಸಲಾಶಿಸದೆ ಸರಳಾ 'ಸರಿ' ಎಂದಳು.

ಅಷ್ಟರಲ್ಲಿ ಆಪರೇಷನ್ ಥಿಯೇಟರಿನ ರೂಮಿನ ಬಾಗಿಲು ತೆರೆಯಿತು. ಅರ್ಧಂಬರ್ಧ ಜ್ಞಾನವಿದ್ದ ಪಂಕಜಮ್ಮನನ್ನು ಟ್ರಾಲಿಯಲ್ಲಿ ತಳ್ಳಿಕೊಂಡು ಇಬ್ಬರು ನರ್ಸುಗಳು ಹೊರಗೆ ಬಂದರು. ಚಿಕ್ಕಮ್ಮ ನೋವಿನಿಂದ ನರಳುತ್ತಿದ್ದುದನ್ನು ನೋಡಿ ಸರಳಾ ಅಧೀರಳಾದಳು. ಚಿಕ್ಕಮ್ಮನ ಕಳೆಗುಂದಿದ ನಿಸ್ತೇಜವಾದ ಮುಖವನ್ನು ನೋಡಿ ಸರಳೆಗೆ ಕಣ್ಣೀರನ್ನು ತಡೆಯಲಾಗ ಲಿಲ್ಲ. ಅವಳು ಬಿಕ್ಕಳಿಸುತ್ತಾ ಟ್ರಾಲಿಯ ಹಿಂದೆ ನಡೆದಳು.

ಸರಳೆ ಬಿಕ್ಕಳಿಸಿದಾಗ ವಾಸುವಿಗೆ ಹೃದಯ ಹಿಂಡಿದ ಹಾಗಾಯಿತು.

"ಸ್ಥೈರಿಸಿಕೊಳ್ಳಿ ಸರಳಾದೇವಿ"—ಎನ್ನುತ್ತಾ ಅವನು ಅವಳನು ಹಿಂಬಾಲಿಸಿದ.

ವಾರ್ಡಿನಲ್ಲಿ ಚಿಕ್ಕಮ್ಮನನ್ನು ಸಂತಯಿಸುತ್ತಾ ಸರಳೆ ಕುಳಿತಳು. ಸರಳೆಯನ್ನು ನೋಡುತ್ತಾ ವಾಸು ಕುಳಿತ. ತಮ್ಮನ ಗಮನ ಯಾವದಿಕ್ಕಿನಲ್ಲಿ

ಹರಿಯುತ್ತಿದೆ ಎಂಬುದನ್ನು ಸರೋಜಮ್ಮ ಗಮನಿಸಿದ್ದರು. ತಮ್ಮ ಮಗಳನ್ನು ನಿರಾಕರಿಸಿದ ವಾಸುವಿನ ಮೇಲೆ ಆಕೆಗೆ ಕೋಪವೂ ಇತ್ತು. ಆದರೆ ಹಾಗೆಂದು ವಾಸು ಎಷ್ಟು ದಿನ ಬ್ರಹ್ಮಚಾರಿಯಾಗಿರಲು ಸಾಧ್ಯ ?

ಚಿಕ್ಕಮ್ಮನನ್ನು ಬಿಟ್ಟು ಊಟಕ್ಕೆ ಮನೆಗೆ ಹೋಗಲು ಸರಳೆ ಸ್ವಲ್ಪವೂ ಒಪ್ಪಲಿಲ್ಲ. ಪಂಕಜಮ್ಮ ಸರಳೆಗೆ ಹೇಳಿದರು

"ಹೋಗಿ ಊಟ ಮಾಡಿಕೊಂಡು ಬಾ."

"ಊಹೂಂ ಮನೆಗೆ ಹೋದರೆ ತುಂಬಾ ಹೊತ್ತಾಗುತ್ತದೆ. ನಾನು ಹೋಗೋದಿಲ್ಲ. ಚಿಕ್ಕಪ್ಪ ಇಲ್ಲಿಗೆ ಬಂದ ಮೇಲೆ ಹೋಗುತ್ತೇನೆ"—ಎಂದು ಸರಳಾ ಹಠ ಹಿಡಿದಳು.

"ವಾಸೂ, ಹೋಗಿ ಇಲ್ಲಿಯ ಹೋಟಲೊಂದರಲ್ಲಿ ತಿಂಡಿ ಕಟ್ಟಿಸಿಕೊಂಡು ಬಾ. ಹುಡುಗಿ ಏನಾದರೂ ಕೊಂಚ ತಿನ್ನಲಿ"— ಎಂದು ಸರೋಜಮ್ಮ ತಮ್ಮನಿಗೆ ಹೇಳಿದರು.

ವಾಸು ಕುಣಿತದ ನಡಿಗೆಯಲ್ಲಿ ಹೊರಗೆ ಹೋದ.

"ನನಗೇನೂ ಬೇಕಿರಲಿಲ್ಲ"—ಎಂದಳು ಸರಳಾ.

"ಚಿಕ್ಕವಯಸ್ಸಿನಲ್ಲಿ ಚೆನ್ನಾಗಿ ತಿಂದುಂಡು ಮಾಡಬೇಕಮ್ಮ" ಎಂದರು ಸರೋಜಮ್ಮ.

ಕಾಲು ಗಂಟೆಯಲ್ಲಿ ವಾಸು ಹಿಂತಿರುಗಿ ಬಂದ. ತಾನು ಕಟ್ಟಿಸಿಕೊಂಡು ಬಂದಿದ್ದ ತಿಂಡಿಯನ್ನು ಸರಳೆಯ ಕೈಗಿತ್ತ.

"ತೊಂದರೆಯಾಯಿತು"—ಎಂದಳು ಸರಳಾ.

"ನಾನು ತಂದಿರುವುದನ್ನೆಲ್ಲಾ ನೀವುತಿಂದು ಮುಗಿಸದಿದ್ದರೆ ಆಗ ನನಗೆ ತೊಂದರೆಯಾಗುತ್ತದೆ"—ಎಂದ ವಾಸು.

ತಿಂಡಿಯನ್ನು ಅವಳ ಬೊಗಸೆಯಲ್ಲಿಡುವಾಗ ಬೆರಳುಗಳು ತಾಕಲಾಡಿದವು. ಸರಳೆಯ ಕೈ ಕೊಂಚ ನಡುಗಿತು. ವಾಸುವಿನ ದೇಹದಲ್ಲಿ ಹರಿದಾಡಿದ ಮಿಂಚಿನ ಹೊಳೆ ಕೊನೆಗೆ ಅವನ ಕಣ್ಣುಗಳಲ್ಲಿ ಐಕ್ಯವಾಯಿತು.

ವಾಸು ಅಷ್ಟೇನೂ ಪರಿಚಯವಿರದಿದ್ದರೂ ಪಂಕಜಮ್ಮನ ಯೋಗಕ್ಷೇಮವನ್ನು ವಿಚಾರಿಸುತ್ತಾ ಅವರ ಹಾಸಿಗೆಯ ಪಕ್ಕದಲ್ಲಿಯೇ ಕುಳಿತುಬಿಟ್ಟ.

ಪಂಕಜಮ್ಮನಿಗೆ ವಾಸುವಿನ ವರ್ತನೆಯಿಂದ ಸಂಶಯ ಬಂತು. ಅವರು ವಾಸುವಿನ ಮಾತು, ಕತೆ, ನೋಟವನ್ನು ಪರೀಕ್ಷಕರ ದೃಷ್ಟಿಯಿಂದ ನೋಡಿದರು. ವಾಸು ಯಾವುದನ್ನೂ ಮರೆಮಾಚಿ ಕಂಡರಿಯ. ಆಕೆಯ

BUREAU OF COPYRIGHT COLLECTION.
STATE CENTRAL LIBRARY, BANGALORE


ಸೂಕ್ಷ್ಮದೃಷ್ಟಿ ಎಲ್ಲವನ್ನೂ ಒಮ್ಮೆ ಪರಾಂಬರಿಸಿತು.

ಸರಳೆ ತಿಂಡಿ ತಿಂದು ಕಾಗದ ಬಿಸಾಡಿ ಕೈ ತೊಳೆಯಲು ಹೊರಗೆ ಹೋದಳು. ಏನೋ ನೆಪ ಹಾಕಿಕೊಂಡು ವಾಸುವೂ ಆ ಕ್ಷಣ ಹೊರಗೆ ಹೋದ.

ಪಂಕಜಮ್ಮ ನಸುನಕ್ಕು ಸರೋಜಮ್ಮನನ್ನು ಕೇಳಿದರು

"ನಿಮ್ಮ ತಮ್ಮನಿಗೆ ಮದುವೆ ಆಗಿದೆಯೇ?"

"ಇಲ್ಲ."

"ಏನು ಕೆಲಸವಿದೆ?"

"ಕಾಲೇಜಿನ ಮೇಸ್ಟರಾಗಿದ್ದಾನೆ."

"ಮದುವೆ ಮಾಡಿಕೊಳ್ಳುವ ಮನಸ್ಸಿದೆಯೆ?"

"ಸರಿಯಾದ ಹುಡುಗಿ ಸಿಕ್ಕಿದರೆ ಮಾಡಿಕೊಳ್ಳಬೇಕೆಂದಿದಾನೆ." ಪಂಕಜಮ್ಮನ ಮಾತಿನ ಜಾಡು ಸೂಕ್ಷ್ಮಮತಿಯಾದ ಸರೋಜಮ್ಮನಿಗೆ ತಿಳಿಯಿತು.

"ನಮ್ಮ ಸರಳಾನ ಮಾಡಿಕೊಳ್ಳುತ್ತಾನೆಯೇ ಕೇಳಿನೋಡಿ"— ಎಂದರು ಪಂಕಜಮ್ಮ. ಸರಳೆಯ ಮದುವೆಯ ಕಲ್ಪನೆಯಿಂದಲೇ ಪಂಕಜಮ್ಮನಿಗೆ ನೋವೆಲ್ಲ ಮರೆತುಹೋಗಿತ್ತು.

"ನಿಮ್ಮದು ಯಾವ ಗೋತ್ರ?"—ಸರೋಜಮ್ಮ ಕೇಳಿದರು.

ಸರಳೆಯನ್ನು ಕಣ್ಣಿನಿಂದಲೇ ನುಂಗುವ ಹಾಗೆ ನೋಡುತ್ತಿದ್ದ ವಾಸುವಿಗೆ ಸರಳೆಯನ್ನು ಮದುವೆಯಾಗುವ ಅಪೇಕ್ಷೆಯಿದೆಯೇ ಇಲ್ಲವೇ ಎಂದು ತಿಳಿಯುವುದು ಸರೋಜಮ್ಮನಿಗೆ ಅನಾವಶ್ಯಕವಾಗಿತ್ತು.

"ಕೌಂಡಿನ್ಯ ಗೋತ್ರ."

"ಹಾಗಾದರೆ ಚಿಂತೆಯಿಲ್ಲ. ನಾನು ಹುಡುಗನನ್ನು ಕೇಳಿ ಯಾವುದೂ ತಿಳಿಸುತ್ತೇನೆ. ನೀವೂ ಸರಳೆಯನ್ನು ವಿಚಾರಿಸಿ ಹೇಳಿ" ಎಂದು ಮಾತು ಮುಗಿಸಿದರು ಸರೋಜಮ್ಮ.

ಸರಳೆಯ ಮದುವೆಯ ವಿಷಯವಾಗಿ ಪಂಕಜಮ್ಮನಿಗೆ ಆಶಂಕವಿದ್ದೇ ಇತ್ತು. ಆಕೆ ರಾಜಗೋಪಾಲನ ಮಡದಿಯಾಗುವ ಕನಸು ಕಾಣುತ್ತಿದ್ದುದುಂಟು. ಆತ ವೈಮಾನಿಕನಾದಾಗ ಸರಳೆಯ ಕನಸು ಒಡೆದಿದ್ದರೂ ರಾಜಗೋಪಾಲನ ಬಗ್ಗೆ ಅವಳ ಹೃದಯದಲ್ಲಿ ಆತ್ಮೀಯತೆಯಿತ್ತು. ಅವಳು ನಿರಾಶಳಾಗಿ ತಾನು ಎಂದೆಂದಿಗೂ ಮದುವೆಯಾಗುವುದಿಲ್ಲವೆಂದೂ, ತಾನು

ಕೆಲಸಮಾಡಿ ಹಾಯಾಗಿ ತನ್ನ ಅನ್ನ ತಾನು ಸಂಪಾದಿಸುವುದಾಗಿಯೂ ಹಿರಿಯರೆದುರಿಗೆ ಹೇಳುತ್ತಿದ್ದಳು. ಆಗಲೇ ಅವಳು ಹಲವಾರು ಕತೆಗಳನ್ನು ಬರೆದು 'ಸಾಹಿತಿ' ಯಾಗುವ ಸ್ವಪ್ನ ಕಾಣುತ್ತಿದ್ದಳು. ಅವಳ ಮನಸ್ಸಿನ ಭಾವನೆಗಳು ರೂಪುಗೊಂಡು ಕತೆಗಳ ಆಕಾರ ತಾಳಿದ್ದವು.

ಈಗ ಅವಳು ನಿಜವಾಗಿಯೂ ರಾಜಗೋಪಾಲನ ಸ್ಥಾನದಲ್ಲಿ ವಾಸುವನ್ನು ಸಿಲ್ಲಿಸುವಳೇ ಎಂಬ ಸಂದೇಹ ಪಂಕಜಮ್ಮನನ್ನು ಕೊರೆಯುತ್ತಿತ್ತು. ರಾಜಗೋಪಾಲನೊಡನೆ ಮದುವೆಯ ಪ್ರಸಂಗ ಬಿರುಗಾಳಿಯಂತೆ ನುಗ್ಗಿ ಬಂದು ಮನೆಯ ಶಾಂತ ವಾತಾವರಣವನ್ನು ಅಲ್ಲೋಲ ಕಲ್ಲೋಲ ಮಾಡಿತ್ತು. ಮನೆ ಮತ್ತೆ ಮೊದಲಿನ ಪರಿಸ್ಥಿತಿಗೆ ಬರಬೇಕಾದರೆ ಕೊಂಚ ಕಾಲ ಬೇಕಾಗಿತ್ತು. ಈಗ ಮತ್ತೆ ಮದುವೆಯ ಸುದ್ದಿಯನ್ನು ಸರಳೆಯ ಎದುರಿಗೆ ಹೇಗೆ ತೆಗೆಯಲಿ ಎಂದು ಪಂಕಜಮ್ಮ ಚಿಂತಿಸಿ ಹಣ್ಣಾದರು.

ರಾಜಗೋಪಾಲನಾದರೂ ಪದೇ ಪದೇ ತಮ್ಮಲ್ಲಿಗೆ ಬಾರದಿದ್ದರೆ ಚೆನ್ನಾಗಿತ್ತು.

ಪಂಕಜಮ್ಮ ನರಳಿ ಮತ್ತೊಂದು ಮಗ್ಗುಲಿಗೆ ಹೊರಳಿಕೊಂಡರು.

ಸರಳೆ ಇಷ್ಟು ಹೊತ್ತಾದರೂ ಯಾಕೆ ಬರಲಿಲ್ಲ ಎಂಬ ಯೋಚನೆ ಮನಸ್ಸಿನಲ್ಲಿ ಸುಳಿಯಿತು.

ಅವಳು ವಾರ್ಡಿನ ಹೊರಗೆ ನಿಂತಿರಬಹುದೆಂದೂಹಿಸಿ ಮೆಲುದನಿಯಲ್ಲಿ "ಸರಳಾ"—ಎಂದರು.

ಉತ್ತರ ಬರಲಿಲ್ಲ.

"ವಾಸೂ" ಎಂದು ಸರೋಜಮ್ಮ ಕೂಗಿದರು.

ಉತ್ತರವಿಲ್ಲ.

ಸರೋಜಮ್ಮ, ಪಂಕಜಮ್ಮ ಪರಸ್ಪರ ಮುಖ ನೋಡಿದರು. ಇಬ್ಬರ ಮುಖದ ಮೇಲೂ ಕಂಡೂ ಕಾಣದ ಹಾಗೆ ಮಂದಹಾಸ ಸುಳಿಯಿತು.

ಒಂದು ಗಂಟೆಯ ನಂತರ ಸರಳೆ ಒಳಗೆ ಬಂದಳು.

"ಎಲ್ಲಿಹೋಗಿದ್ದೆ ಸರಳಾ?"—ಪಂಕಜಮ್ಮ ಕೇಳಿದರು.

"ಬೇಜಾರಾಯಿತು. ಎಲ್ಲಾ ವಾರ್ಡುಗಳನ್ನೂ ಸುತ್ತಿಕೊಂಡು ಬಂದೆ. ಈಗ ಹೇಗಿದೆ ಚಿಕ್ಕಮ್ಮ?"

"ನೋವೇನಿಲ್ಲ."

ವಾಸು ಒಳಗೆ ಬಂದ. ಅವನು ಸರಳೆಯ ಕಡೆ ನೋಡಿ ಕಿರುನಗೆ

ಬೀರಿದ ಎಂದು ಪಂಕಜಮ್ಮನಿಗೆ ಸಂಶಯ.

ಸುಮಾರು ಒಂದು ಗಂಟೆಯ ಹೊತ್ತಿಗೆ ಪಂಕಜಮ್ಮನಿಗೆ ನಿದ್ದೆ ಹತ್ತಿತು. ಸರಳಾ ಎಚ್ಚರವಾಗಿ ಮಲಗಿದ್ದ ಸರೋಜಮ್ಮನ ಹತ್ತಿರ ಹೋಗಿ

"ಚಿಕ್ಕಮ್ಮನಿಗೆ ನಾನು ಮನೆಗೆ ಹೋದೆನೆಂದು ತಿಳಿಸಿಬಿಡಿ. ಚಿಕ್ಕಪ್ಪನ್ನ ಕಳುಹಿಸುತ್ತೇನೆ. ನಾನು ಮತ್ತೆ ಸಂಜೆ ಐದು ಗಂಟೆಯವೇಳೆಗೆ ಬರುತ್ತೇನೆ"—ಎಂದಳು.

"ಈ ಉರಿಬಿಸಿಲಿನಲ್ಲಿ ಮನೆಗೆ ಹೋಗ್ತೀರಾ?" ವಾಸು ಕೇಳಿದ.

"ಹೂಂ."

"ನಡೆಯಿರಿ. ನಾನೂ ಬರ್ತೀನಿ. ಗಾಡಿಯಲ್ಲಿ ಹೋಗೋಣ."

ವಾಸುವಿನ ದಿಟ್ಟಮಾತು ಕೇಳಿ ಸರಳೆ ಚಕಿತಳಾದಳು. ಸರೋಜಮ್ಮ ಪ್ರಶ್ನಾರ್ಥಕವಾಗಿ ತಮ್ಮನ ಕಡೆ ನೋಡಿದರು.

"ಸಂಜೆ ಬರ್ತೀನಿ ಅಕ್ಕಾ. ನಿನಗೇನು ಬೇಕು ಹೇಳು—ಮನೆಯಿಂದ ತಂದುಕೊಡ್ತೀನಿ." ವಾಸು ಅಕ್ಕನ ನೋಟವನ್ನು ತಪ್ಪಿಸಿ ಹೇಳಿದ.

"ಏನೂ ಬೇಡ ನನಗೆ."

"ಸರಿ. ನಡೆಯಿರಿ ಸರಳಾದೇವಿ"—ಎಂದು ವಾಸು ಸರಳೆಯನ್ನು ತಾನೇ ಹೊರಡಿಸಿದ. ಸರಳೆಗೆ ಏನು ಮಾಡಬೇಕೋ ತಿಳಿಯದಾಯಿತು. ಅವಳು ಒಮ್ಮೆ ವಾಸುವಿನ ಮುಖವನ್ನೂ, ಮತ್ತೊಮ್ಮೆ ಸರೋಜಮ್ಮನ ಮುಖವನ್ನೂ ನೋಡುತ್ತಾ ನಿಂತುಬಿಟ್ಟಳು.

ತಮ್ಮನ ಇಂಗಿತವನ್ನರಿತ ಸರೋಜಮ್ಮ ಹೇಳಿದರು

"ಹೋಗಮ್ಮ ಸರಳಾ ವಾಸು ಕಾಯ್ತಿದ್ದಾನೆ."

ಸರಳೆ ನಿರುಪಾಯಳಾಗಿ ಹೊರಟಳು. ವಾಸು ಅವಳೊಡನೆ ಹೆಜ್ಜೆ ಹಾಕಿದ. ಸರಳಾ ತಲೆತಗ್ಗಿಸಿ ನಡೆಯುತ್ತಿದ್ದಳು. ವಾಸು ಮಾತ್ರ ಅತ್ಯಂತ ಸುಪ್ರೀತನಾಗಿದ್ದ.

"ಯಾಕೆ ಮಾತನಾಡೋಲ್ಲ ನೀವು?" ಎಂದ ವಾಸು.

"ಸುಮ್ಮನೆ."

"ನಾನು ನಿಮ್ಮ ಜೊತೆ ಬಂದೆ ಎಂದು ನಿಮಗೆ ಬೇಸರವಿಲ್ಲವಷ್ಟೆ?"

"ಇಲ್ಲ."

"ಸಂಕೋಚವಿಲ್ಲ ತಾನೆ?"

"ಊಹೂಂ."—ಎಂದು ಸರಳೆ ಸಮುತ್ತಷ್ಟು ಕೊರಳು ಬಾಗಿಸಿದಳು.

"ನೋಡಿ ಎಷ್ಟೊಂದು ತಲೆ ಬಗ್ಗಿಸಿಕೊಂಡು ಬರ್‍ತಿದೀರಿ. ನಾನು ನಿಮ್ಮೊಡನೆ ಬರುವುದು ನಿಮಗೆ ಹಿಂಸೆಯಾದರೆ ನಾನು ಹೊರಟು ಹೋಗ್ತೀನಿ."

ವಾಸುವೆಲ್ಲಿ ನಿಜವಾಗಿಯೂ ಹೊರಟುಹೋಗುವನೋ ಎಂದು ಸರಳೆಗೆ ಭಯವಾಯಿತು.

"ನನಗೇನೂ ಹಿಂಸೆಯಿಲ್ಲ."

"ಗಾಡಿ ಮಾಡ್ತೀನಿ. ನಡೆದುಕೊಂಡು ಯಾಕೆ ಹೋಗಬೇಕು?" ಎನ್ನುತ್ತಾ ವಾಸು ಸಮೀಪದಲ್ಲಿಯೇ ಹೋಗುತ್ತಿದ್ದ ಗಾಡಿಯನ್ನು ಕೂಗಿ "ಹತ್ತಿ"— ಎಂದ ಸರಳೆಗೆ.

"ಗಾಡಿ ಬಾಡಿಗೆ ನಾನೇ ಕೊಡುವುದಾದರೆ"—ಎಂದಳು ಸರಳಾ.

"ಆಮೇಲೆ ಆವಿಷಯ ಮಾತನಾಡೋಣ. ಈಗ ನೀವು ಮೊದಲು ಗಾಡಿಯಲ್ಲಿ ಕುಳಿತುಕೊಳ್ಳಿ"

"ಆಗ ತಿಂಡಿಗೂ ನೀವೆ ದುಡ್ಡು ಕೊಟ್ಟಿರಿ. ಈಗ ಮತ್ತೆ ಗಾಡಿಗೂ ಕೊಡುತ್ತೇನೆಂದರೆ ನಾನು ಒಪ್ಪುವುದಿಲ್ಲ"

"ರಾಯರು ಕೊಡುತ್ತಾರೆ. ನೀವು ಕುಳಿತುಕೊಳ್ಳಿ ತಾಯಿ" ಎಂದ ಗಾಡಿಯವನು.

ಸರಳೆ ಗಾಡಿ ಹತ್ತಿದಳು. ವಾಸು ತಾನೂ ಅವಳ ಪಕ್ಕದಲ್ಲಿ ಕುಳಿತು ಕೊಂಡ.

"ನೀವು ಹೇಗೆ ಸಮಯ ಕಳೆಯುತ್ತೀರಿ"—ವಾಸು ಸರಳೆಯನ್ನು ಕೇಳಿದ.

"ಊಟ, ತಿಂಡಿ, ನಿದ್ದೆ, ಗೆಳತಿಯರು; ಕತೆ ಕಾದಂಬರಿಗಳನ್ನು ಓದು ವುದು...."ಸರಳೆ ಮುಂದೆ ಹೇಳಬೇಕೆಂದಿದ್ದುದನ್ನು ಹಾಗೆಯೇ ನುಂಗಿ ಕೊಂಡಳು

"ಹೂಂ. ಮುಂದೆ?"—ವಾಸು ಒತ್ತಾಯಮಾಡಿದ.

"ಏನಿಲ್ಲ"—ಸರಳೆ ನಾಚಿದಳು.

"ಹೇಳಿ ಚಿಂತೆಯಿಲ್ಲ."

"ಪದ್ಮಜ ಎನ್ನುವ ಹೆಸರನ್ನು ಎಲ್ಲಿಯಾದರೂ ಕೇಳಿದ ನೆನಪಿದೆಯೇ ನಿಮಗೆ?"—ಸರಳಾ ಪ್ರಶ್ನಿಸಿದಳು.

ವಾಸು ಹುಬ್ಬುಗಂಟಿಕ್ಕಿ. ತುಟಿ ಕಚ್ಚಿ ಯೋಚಿಸತೊಡಗಿದ.

"ತಾಳಿ ಹೇಳುತ್ತೇನೆ. ಹಿಂದೆ ಚರಿತ್ರೆಯಲ್ಲಿ ಆ ಹೆಸರು ಕೇಳಿದ ನೆನಪು. ಬಹಳ ಸುಂದರವಾದ ರಾಣಿ...."

"ಅವಳ ಹೆಸರು ಪದ್ಮಿನಿ. ಪದ್ಮಜಳಲ್ಲ"—ಸರಳೆ ವಾಸುವಿನ ಅಜ್ಞಾನಕ್ಕೆ ಮರುಗಿ ಹೇಳಿದಳು.

"ನಮ್ಮ ಪಕ್ಕದ ಮನೆಯಲ್ಲಿ ಪದ್ಮ ಎಂಬ ಹುಡುಗಿಯೊಬ್ಬಳಿದ್ದಳು. ಮಹಾ ಪೆದ್ದಿ ಅವಳು."

"ನಾನು ಕೇಳಿದ್ದು ಪದ್ಮಜ"—ಸರಳೆ ಮತ್ತೆ ಹೇಳಿದಳು.

"ಯಾವುದೋ ಕಾದಂಬರಿಯ ನಾಯಕಿಯ ಹೆಸರು ಇದ್ದ ಹಾಗಿದೆ. ಸೋತೆ. ನೀವೇ ಹೇಳಿಬಿಡಿ. ಯಾರು ಆ ಪದ್ಮಜ?"

ಸರಳೆಗೆ ತುಂಬಾ ನಿರಾಶೆಯಾಯಿತು. ಅವಳ ನಾಲ್ಕಾರು ಕತೆಗಳು 'ಪದ್ಮಜ' ಎಂಬ ಕಾವ್ಯನಾಮದಲ್ಲಿ ಪ್ರಕಟವಾಗಿದ್ದರೂ ಆ ಖ್ಯಾತನಾಮವನ್ನು ಕೇಳದಿದ್ದ ವಾಸು ವಿದ್ಯಾವಂತನೆಂದು ನಂಬುವುದೂ ಸರಳೆಗೆ ಕಷ್ಟವಾಯಿತು.

"ನಿಮಗೆ ಸಾಹಿತ್ಯದಲ್ಲಿ ಆಸಕ್ತಿಯಿದೆಯೇ?" ಸರಳೆ ಕೇಳಿದಳು.

"ಸುಮಾರಾಗಿದೆ. ಇಂಗ್ಲಿಷ್ ಪುಸ್ತಕಗಳೆಂದರೆ ತುಂಬಾ ಇಷ್ಟ. ಆದರೆ ಕನ್ನಡ ಪುಸ್ತಕಗಳನ್ನು ನನಗೆ ಕಂಡರಾಗದು. ಕನ್ನಡ ಲೇಖಕರನ್ನೆಲ್ಲಾ ಯಾವುದಾದರೂ ಸಮುದ್ರದೊಳಗೆ ಮುಳುಗಿಸಿಬಿಡೋಣ ಎನಿಸುತ್ತದೆ ನನಗೆ. ಅವರ ಬರವಣಿಗೆಯೋ? ಆ ರಾಮನಿಗೇ ಪ್ರೀತಿಯಾಗಬೇಕು...."

ವಾಸು ಒಂದೇ ಸಮನೆ ಕನ್ನಡ ಪುಸ್ತಕಗಳನ್ನೂ, ಕನ್ನಡ ಬರೆಹಗಾರರನ್ನೂ ನಿಂದಿಸಿದ. ಸರಳೆ ಸಿಟ್ಟಿನಿಂದ ಬುಸುಗುಟ್ಟುತ್ತಾ ಆದಷ್ಟು ದೂರ ವಾಸುವಿನಿಂದ ಸರಿದು ಕುಳಿತಳು.

ಭಾಷಾಭಿಮಾನವೆಲ್ಲ ಒಟ್ಟಿಗೆ ಅವಳಲ್ಲಿ ದಂಗೆ ಎದ್ದು ಸರಳೆಯನ್ನು ಕುಪಿತಳನ್ನಾಗಿ ಮಾಡಿತು.

"ನಿಮ್ಮ ಮಾತೃಭಾಷೆಯಲ್ಲೇ ನಿಮಗೆ ಪ್ರೀತಿಯಿಲ್ಲದ ಮೇಲೆ ನಿಮಗೆ ಬೇರೆ ಭಾಷೆಯಲ್ಲಿ ಪ್ರೀತಿ ಹೇಗೆ ಬರುತ್ತದೆ?"

ವಾಸು ಎಚ್ಚರಗೊಂಡ. ತನ್ನ ಮಾತಿನ ಧಾಟಿ ಸರಳೆಗೆ ಹಿಡಿಸಲಿಲ್ಲವೆಂದು ಅವನಿಗೆ ತಿಳಿಯಿತು. ಅವನು ಹೇಳಿದ

"ಏನೇನೋ ಹೇಳಿದೆ. ಇರಲಿ. ಈಗ ಪದ್ಮಜೆಗೂ, ಕನ್ನಡ ಸಾಹಿತ್ಯಕ್ಕೂ ಏನು ಸಂಬಂಧ?"

ಸರಳೆಯ ಮನಸ್ಸು ಉಯ್ಯಾಲೆಯಾಡಿತು. ಕೊನೆಗೆ ಅವಳು ಹೇಳಿದಳು.

"ಪದ್ಮಜಾ ಎನ್ನುವ ಹೆಸರಿನಿಂದ ನಾನು ಕತೆ ಬರೆಯುತ್ತೇನೆ."

ವಾಸುವಿನ ಮುಖ ಕಳೆಗುಂದಿತು. ಮರುಕ್ಷಣದಲ್ಲಿಯೇ ಅವನು ಚೇತರಿಸಿಕೊಂಡು

"ನನಗೆ ಕನ್ನಡ ಲೇಖಕರನ್ನು ಕಂಡರಾಗುವುದಿಲ್ಲ. ಆದರೆ ಈ ಮಾತು ಕನ್ನಡ ಲೇಖಕಿಯರಿಗೆ ಅನ್ವಯಿಸುವುದಿಲ್ಲ. ಲೇಖಕಿಯರೆಂದರೆ—ಅರ್ಥಾತ್ ಅವರ ಲೇಖನಗಳೆಂದರೆ ನನಗೆ ತುಂಬಾ ಇಷ್ಟ."

"ಉಪಚಾರಕ್ಕೆ ಹೇಳಬೇಡಿ."

"ಛೇ ಛೇ....ಹಾಗೇನಿಲ್ಲ. ಅಂದಹಾಗೆ ನೀವು ಯಾವ ಪತ್ರಿಕೆಗೆ ಬರೆಯುತ್ತೀರಿ?" - ವಾಸು ಸರಳೆಯ ಬರವಣಿಗೆಯಲ್ಲಿ ವಿಶೇಷ ಅಭಿಮಾನ ವಿರುವವನಂತೆ ಕೇಳಿದ.

ಸರಳೆ ಎರಡು ಮೂರು ಪತ್ರಿಕೆಗಳ ಹೆಸರು ಹೇಳಿದಳು.

"ಆ ಪತ್ರಿಕೆಗಳ ಹೆಸರು ನಾನು ಕೇಳಿಯೇ ಇಲ್ಲವಲ್ಲಾ" ಎಂದು ವಾಸು ಸರಳೆಯ ಪ್ರತಿಷ್ಠೆಯನ್ನು ಕುಗ್ಗಿಸಿದ.

"ನೀವು ಬರಿಯ ಇಂಗ್ಲಿಷ್ ಪೇಪರಿನ ಭಕ್ತರೇನೋ?" ಸರಳೆ ವಾಸುವನ್ನು ಕೆಣಕಿದಳು.

"ನಿಜ"—ಎಂದು ವಾಸು ಒಪ್ಪಿಕೊಂಡು

"ನೀವೆಲ್ಲಾ ಕನ್ನಡ ಪತ್ರಿಕೆಗಳನ್ನು ಪೋಷಿಸದಿದ್ದರೆ ಅವು ಹೇಗೆ ಬೆಳೆಯುತ್ತವೆ?"

"ನಾಳೆಯಿಂದ ನಾನೂ ಮನೆಗೆ ಒಂದೆರಡು ಕನ್ನಡ ಪತ್ರಿಕೆಗಳನ್ನು ತರಿಸುತ್ತೇನೆ."

"ನೀವು ನನ್ನ ಮೆಚ್ಚಿಸುವುದಕ್ಕಾಗಿ ಕನ್ನಡ ಪತ್ರಿಕೆ ತರಿಸಬೇಕಾಗಿಲ್ಲ. ಅಥವಾ ನನ್ನ ಮಾತಿನಿಂದ ನೀವೊಬ್ಬರು ತರಿಸಿದರೆ ಅದರಿಂದ ಏನು ಪ್ರಯೋಜನ? ಒಟ್ಟಿನಲ್ಲಿ ನಮ್ಮ ಜನದ ದೃಷ್ಟಿ, ಮನೋಭಾವ ಬದಲಾಯಿಸಬೇಕು."

ವಾಸು ಬೆಪ್ಪಾದ. ಸರಳೆ ಈ ರೀತಿ ಭಾಷಣ ಮಾಡುವಳೆಂದು ವಾಸು ಭಾವಿಸಿರಲಿಲ್ಲ. ಅವಳು ಏನಾದರೂ ಮಾತನಾಡಿಕೊಳ್ಳಲಿ, ಒಟ್ಟಿನಲ್ಲಿ ಅವಳು ತನಗೆ ಸಮೀಪವಾಗಿದ್ದರೆ ಸಾಕು ಎಂದುಕೊಂಡ ವಾಸು.

"ಮೊನ್ನೆ ಏನಾಯಿತು ಗೊತ್ತೇ?"—ಸರಳೆ ಕೇಳಿದಳು.

"ಏನಾಯಿತು?"

"ಇಂಗ್ಲೀಷ್ ಸ್ಪೀಕಿಂಗ್ ಯೂನಿಯನ್‌ಗೆ ಅಮೆರಿಕದ ರಾಯಭಾರಿ ಗಾಲ್‌ಬ್ರೈತ್‌ರನ್ನು ಸದಸ್ಯರು ಆಹ್ವಾನಿಸಿ ಸತ್ಕಾರಕೂಟ ಏರ್ಪಡಿಸಿದ್ದರು. ಆಗ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾನಿಲಯದ ಪ್ರೊಫೆಸರು ಕೆಟ್ಟ, ತಪ್ಪು ಇಂಗ್ಲಿಷಿನಲ್ಲಿ ಕನ್ನಡ ಭಾಷೆಯನ್ನು ಹೀನಾಮಾನಾ ಬೈದು ಇಂಗ್ಲಿಷನ್ನು ಹೊಗಳಿದರು. ಇಂಗ್ಲಿಷ್ ಭಾಷೆಯೆಂದರೆ ನಮಗೆ ದ್ವೇಷವಿಲ್ಲ. ಆ ಸಾಹಿತ್ಯ ದಲ್ಲಿರುವ ಅಪಾರ ಸಂಪತ್ತು ಅಕ್ಷಯವಾದುದು. ಆದರೆ ವಿದೇಶದಿಂದ ಬಂದಿರುವ ಅತಿಥಿಯ ಎದುರಿಗೆ ಕನ್ನಡವನ್ನು ತೆಗಳುವ ಕಾರಣವಿರಲಿಲ್ಲ. ಇಂಗ್ಲಿಷನ್ನು ಅವರು ಹೊಗಳಿ ಹಾಡಲಿ. ಕನ್ನಡದ ಬಗ್ಗೆ ಹಾಗೆ ಮಾತನಾಡಿ ದವರಿಗೆ ನೆಟ್ಟಗೆ ಇಂಗ್ಲಿಷೂ ಬಾರದು, ಕನ್ನಡವೂ ಬಾರದು. ಆತನ ಮಾತೃಭಾಷೆ ಮರಾಠಿ. ಇದರಲ್ಲಿದೆ ತಮಾಷಿ."

ವಾಸು ಮುಖದ ಬೆವರೊರೆಸಿಕೊಂಡ.

"ಭಾಷಣ ಮುಂದುವರಿಯಲಿ."

ಸರಳಾ ರೆಪ್ಪೆಗಳನ್ನು ಎತ್ತಿ ನೇರವಾಗಿ ವಾಸುವನ್ನು ದಿಟ್ಟಿಸಿ ನೋಡಿ ದಳು. ಅವಳ ಕಣ್ಣಿನಾಳದೊಳಗೆ ವಾಸು ಮುಳುಗಿಹೋದ. ತುಟಿಯನ್ನು ಕೊಂಕಿಸಿ, ಬೀದಿಯ ಕಡೆ ನೋಡುತ್ತಾ ಸರಳ ಹೇಳಿದಳು

"ನಾನು ಭಾಷಣ ಮಾಡುತ್ತಿಲ್ಲ."

"ಸರಳಾದೇವಿ, ಸಂಜೆ ನೀವು ಬರೆದಿರುವ ಕತೆಗಳನ್ನು ತಂದು ಕೊಡ್ತೀರಾ ? ನನಗೆ ಓದಲಾಸೆಯಿದೆ."

"ನೀವು ಅವುಗಳನ್ನು ಓದದಿದ್ದರೆ ನಿಮಗೂ ನಷ್ಟವಿಲ್ಲ. ನನಗೂ ನಷ್ಟವಿಲ್ಲ."

"ಕೋಪ ಮಾಡಿಕೊಳ್ಳಬೇಡಿ. ತರ್ತೀರಾ?"

"ಏಯ್ ಗಾಡಿ ನಿಲ್ಲಿಸು" ಎನ್ನುತ್ತಾ ಸರಳ ವಾಸುವಿನ ಪ್ರಶ್ನೆಗೆ ಉತ್ತರ ಹೇಳದೆ ಗಾಡಿಯಿಂದ ಕೆಳಗಿಳಿದು ಕಣ್ಮರೆಯಾದಳು.

ಸರಳೆಗೆ ತನ್ನ ವಿಷಯದಲ್ಲಿ ಬಹಳ ಅಸಮಾಧಾನವಾಗಿದೆ ಎಂದು ಕೊಂಡ ವಾಸು. ಅವನಿಗೆ ಸರಳೆಯನ್ನು ತಡೆದು ನಿಲ್ಲಿಸೋಣವೆನಿಸಿತು. ಆದರೆ ಅಷ್ಟರಲ್ಲಿಯೇ ಸರಳೆ ಅವನ ಕೈಗೆ ಸಿಕ್ಕದಷ್ಟು ದೂರ ಹೊರಟು ಹೋಗಿದ್ದಳು.

೩

. ಸಂಜೆ ಆಸ್ಪತ್ರೆಗೆ ಹೋಗುವಾಗ ದಾರಿಯಲ್ಲಿ ಸರಳೆಯ ಮನೆಯ ಮುಂದೆ ವಾಸು ಎರಡು ನಿಮಿಷ ನಿಂತು ಅವಳ ಮನೆಯ ಕಡೆ ನೋಡಿದ. ಮನೆಯ ಮುಂದೆ ಯಾರೂ ಇರಲಿಲ್ಲ. ಅವರ ಮನೆಯ ಬಾಗಿಲು ಮುಚ್ಚಿತ್ತು. ವಾಸುವಿಗೆ ಸರಳೆಯ ಹೃದಯದ ಬಾಗಿಲು ಮುಚ್ಚಿರುವಂತೆ ಭಾಸವಾಯಿತು.

ಆಸ್ಪತ್ರೆಗೆ ಹೋಗಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ ಸರಳೆ ಕಿಟಕಿಯ ಕಡೆ ಬಂದಾಗ ವಾಸು ಮನೆಯ ಮುಂದೆ ನಿಂತಿರುವುದನ್ನು ನೋಡಿದಳು. ಅವಳ ಹೃದಯ ಹೊಡೆದುಕೊಂಡಿತು.

ಪರಿಚಯವಾದ ಎರಡನೆಯ ದಿನಕ್ಕೇ ವಾಸು ಹೀಗೆ ತನ್ನನ್ನು ಕಾಡ ತೊಡಗಿದಾಗ ಸರಳೆಗೆ ನಿಜವಾಗಿಯೂ ಭಯವಾಯಿತು.

ತನಗರಿಯದಂತೆ ಯಾವ ರೀತಿಯಲ್ಲಾದರೂ ತಾನು ಅವನನ್ನು ಪ್ರೋತ್ಸಾಹಿಸಿರಬಹುದೇ?

ಸರಳೆ ಮತ್ತೊಮ್ಮೆ ಕಿಟಕಿಯಿಂದ ವಾಸುವಿನ ಕಡೆ ನೋಡಿದಳು. ಪ್ರೇಮ ಜ್ವರದಿಂದ ಪರಿತಪಿಸುವ ಕಿಶೋರ ಬಾಲಕನಂತೆ ವಾಸು ಅವಳ ಮನೆಯ ಮುಂದೆ ನಿಂತಿದ್ದ.

ವಾಸು ಪುಂಡನಿರಲಾರನಷ್ಟೆ? ಪರಿಚಯವಾದ ನೆಪದಲ್ಲಿ ತನ್ನನು ಅಗ್ಗವಾಗಿ ಭಾವಿಸಿ ಹೀಗೆ ಬೆನ್ನು ಹತ್ತಿರಬಹುದೇ?

ಛೇ ಇರಲಾರದು. ಮುಖ ನೋಡಿದರೆ ಸಂಭಾವಿತನಂತೆ ಕಾಣಿಸು ತ್ತಾನೆ.

ವಾಸುವಿನ ಮುಖ ನೋಡಿ ಸರಳೆಗೆ ಕರುಣೆಯುಕ್ಕಿತು. ಬಾಗಿಲನ್ನು ತೆರೆದು ವಾಸುವನ್ನು ಒಳಗೆ ಆಹ್ವಾನಿಸುವ ಚಪಲವಾಯಿತು ಅವಳಿಗೆ. ಸರಳೆ ತನ್ನ ಮನಸ್ಸನ್ನು ಬಿಗಿಹಿಡಿದು ಅಲ್ಲಿಂದ ಸರಿದುಹೋದಳು. ಅವಳು ಐದು ನಿಮಿಷದ ನಂತರ ಮತ್ತೆ ಕಿಟಕಿಯ ಕಡೆ ಬಂದಾಗ ವಾಸು ಅಲ್ಲಿರಲಿಲ್ಲ.

ಸರಳೆಯ ಹೃದಯದ ಮೂಲೆಯಲ್ಲಿ ನಿರಾಶೆಯ ಬಿಸಿಗಾಳಿ ಬೀಸಿ ದಂತಾಯಿತು.

ಸರಳೆಯ ಚಿಕ್ಕಪ್ಪ ರಂಗಸ್ವಾಮಿ ಆಫೀಸಿನಿಂದ ಮನೆಗೆ ಬಂದರು. ಚಿಕ್ಕಪ್ಪ, ಮಗಳು ಇಬ್ಬರೂ ಒಟ್ಟಿಗೆ ಆಸ್ಪತ್ರೆಗೆ ಹೊರಟರು.

ವಾರ್ಡಿನಲ್ಲಿ ಬಾಗಿಲಿನ ಕಡೆಯೇ ದೃಷ್ಟಿ ನಾಟಿ ಕುಳಿತಿದ್ದ ವಾಸುವಿಗೆ ಸರಳೆಯ ಚಿಕ್ಕಪ್ಪನನ್ನು ನೋಡಿ ನಿರಾಶೆಯಾಯಿತು.

ಚಿಕ್ಕಪ್ಪನನ್ನು ಚಿಕ್ಕಮ್ಮನೊಡನೆ ಮಾತನಾಡಲು ಬಿಟ್ಟು ಸರಳೆ

ಹೊರಗೆ ಹೋದಳು. ಅರ್ಧ ಗಂಟೆಯನಂತರ ಸರಳೆ ಹಿಂತಿರುಗಿ ಬಂದಾಗ ಚಿಕ್ಕಪ್ಪ ವಾಸುವಿನೊಡನೆ ಮಾತನಾಡುತ್ತಿದ್ದರು.

ಸರಳೆಯ ಹೃದಯದಲ್ಲಿ ಮತ್ತೆ ಗಾಭರಿಯ ಅಲೆ ಎದ್ದಿತು. ಅವಳು ಅಂಜುತ್ತಾ ಚಿಕ್ಕಪ್ಪನ ಮುಖ ನೋಡಿದಳು. ಆದರೆ ಆತ ವಾಸುವಿನೊಡನೆ ಮಾತನಾಡುವುದರಲ್ಲಿ ಮಗ್ನರಾಗಿದ್ದರು.

ಸಂಜೆ ಮನೆಗೆ ಹೊರಟಾಗ ವಾಸುವೂ ಅವರೊಡನೆ ಹೊರಟ. ರಂಗಸ್ವಾಮಿ ವಾಸುವನ್ನು ಬಲವಂತಮಾಡಿ ಮನೆಯೊಳಗೆ ಕರೆದೊಯ್ದರು.

ಮನೆಗೆ ಬಂದಿದ್ದ ಅತಿಥಿಯನ್ನು ಸತ್ಕರಿಸದೆ ಸರಳೆಗೆ ವಿಧಿಯಿರಲಿಲ್ಲ. ರಂಗಸ್ವಾಮಿ ವಾಸುವಿನೊಡನೆ ಮಾತನಾಡುತ್ತಾ "ಸರಳಾ, ಒಂದು ಲೋಟ ಓವಲ್ಟೀನ್ ತಂದುಕೊಡು" ಎಂದರು.

ಸರಳೆ ತಂದುಕೊಟ್ಟ ಪಾನೀಯವನ್ನು ಸೇವಿಸಿ ವಾಸು 'ಧನ್ಯನಾದೆ' ಎಂದುಕೊಂಡ. ಸರಳೆಗೆ ಅಲ್ಲಿಯೇ ಕುಳಿತು ಮಾತಿನಲ್ಲಿ ತಾನೂ ಭಾಗವಹಿಸಬೇಕೆನ್ನಿಸಿತು. ಆದರೆ ಚಿಕ್ಕಪ್ಪ ಅವಳನ್ನು ಅಲ್ಲಿಯೆ ಕುಳಿತುಕೊಳ್ಳುವಂತೆ ಹೇಳಲಿಲ್ಲ. ಸರಳೆ ಕುಡಿದ ಲೋಟವನ್ನು ತೆಗೆದುಕೊಂಡು ಒಳಗೆ ಹೋದಳು.

ಚಿಕ್ಕಮ್ಮ ಗುಣಮುಖರಾಗಿ ಮನೆಗೆ ಬರುವಷ್ಟರಲ್ಲಿ ವಾಸು, ಸರಳೆಯರ ಗೆಳೆತನ ಬಲಗೊಂಡಿತ್ತು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಚಿಕ್ಕಮ್ಮ, ಚಿಕ್ಕಪ್ಪ ಅವರ ಸ್ನೇಹದ ಬಳ್ಳಿಗೆ ನೀರೆರೆಯುತ್ತಿದ್ದರು.

ಅವರ ವರ್ತನೆ ಕೆಲವು ವೇಳೆ ಸರಳೆಗೆ ಆಶ್ಚರ್ಯವನ್ನುಂಟುಮಾಡುತ್ತಿತ್ತು. ವಾಸು ಆಗಾಗ್ಗೆ ಬಂದು ಸರಳೆಯನ್ನು ವಾಕಿಂಗಿಗೆ ಕರೆದೊಯ್ಯುತ್ತಿದ್ದ. ಆಗ ಚಿಕ್ಕಮ್ಮ, ಚಿಕ್ಕಪ್ಪ ಅವನನ್ನು ಯಾವ ರೀತಿಯಿಂದಲೂ ತಡೆಯುತ್ತಿರಲಿಲ್ಲ. ವಾಸುವಿನ ಯಾವ ವರ್ತನೆಯನ್ನೂ ಅವರು ಪ್ರತಿಭಟಿಸುತ್ತಿರಲಿಲ್ಲ. ಸಂಬಂಧಿಯಾಗಿದ್ದ ರಾಜಗೋಪಾಲನೊಡನೆ ಸರಳೆಯನ್ನು ಒಂಟಿಯಾಗಿ ಕಳುಹಿಸಲು ಒಪ್ಪದಿದ್ದ ಚಿಕ್ಕಮ್ಮ ಈಗ ಧೈರ್ಯವಾಗಿ ವಾಸುವಿನೊಡನೆ ಕಳುಹಿಸುತ್ತಿದ್ದುದು ಸರಳೆಗೆ ಅರ್ಥವಾಗಿರಲಿಲ್ಲ.

ಸರಳೆ, ರಾಜಗೋಪಾಲರ ಮದುವೆಯ ಪ್ರಶ್ನೆ ಮುರಿದಮೇಲೆ, ರಾಜಗೋಪಾಲ ಮನೆಗೆ ಬರುವುದು ಅಪರೂಪವಾಗಿದ್ದರೂ ಅವರಿಬ್ಬರೇ ಕುಳಿತು ಮಾತನಾಡಲು ಚಿಕ್ಕಮ್ಮ ಎಂದೂ ಅವಕಾಶ ಕೊಟ್ಟಿರಲಿಲ್ಲ. ಸರಳೆಯನ್ನು ನಿಧಿ ಕಾಯುವಂತೆ ಆಕೆ ಕಾಯುತ್ತಿದ್ದರು. ಅವರಿಗೆ ಸರಳಾ, ರಾಜಗೋಪಾಲರಲ್ಲಿ ನಂಬಿಕೆಯಿದ್ದರೂ, ಅವರ ಎಳೆವಯಸ್ಸಿನಲ್ಲಿ ನಂಬಿಕೆಯಿರಲಿಲ್ಲ.

ಪರಿಸ್ಥಿತಿ ಹೀಗಿರುವಾಗ ಅಪರಿಚಿತನಾದ ವಾಸುವಿನೊಡನೆ ಮಾತ ನಾಡಲು ತನಗೆ ಧಾರಾಳವಾಗಿ ಅನುಮತಿ ಕೊಟ್ಟಿದ್ದಲ್ಲದೇ ಅವರಿಬ್ಬರೇ ಉಳಿದುಕೊಳ್ಳುವ ಅವಕಾಶವನ್ನು ಚಿಕ್ಕಮ್ಮ, ಚಿಕ್ಕಪ್ಪ ಅವರಿಗೆ ಕಲ್ಪಿಸಿ ಕೊಡುತ್ತಿದ್ದರು.

ವಾಸು ಬಂದು ಎಲ್ಲರನ್ನೂ ಕರೆಯುತ್ತಿದ್ದ.

"ಎಲ್ಲಾದರೂ ಹೋಗಿ ಬರೋಣ. ಬನ್ನಿ."

ಆಗ ಚಿಕ್ಕಮ್ಮ, ಚಿಕ್ಕಪ್ಪ ಹೊರಡುತ್ತಿರಲಿಲ್ಲ.

"ನೀವು ಹೋಗಿಬನ್ನಿ. ಮತ್ತೊಂದಾದರೂ ನಾವೆಲ್ಲರೂಹೋಗೋಣ".

ಒಂದುಸಲ ವಾಸು ಎಲ್ಲರನ್ನೂ ಚಲನಚಿತ್ರ ನೋಡಲು ಆಹ್ವಾನಿ ಸಿದ್ದ. ಹಿರಿಯರು ನೆಪ ಹೇಳಿ ಅವರೊಡನೆ ಹೋಗಲು ತಪ್ಪಿಸಿಕೊಂಡರು. ಕೊನೆಗೆ ಹೊರಟವರು ವಾಸು, ಸರಳೆಯರು.

"ಯಾವ ಚಿತ್ರಕ್ಕೆ ಹೋಗೋಣ ಸರಳಾದೇವಿ?"

"ಯಾವುದಾದರೂ ಸರಿ."

"ನಿಮ್ಮ ಕತೆಗಳನ್ನು ನೀವು ಕೊಡಲಿಲ್ಲ ನನಗೆ."

"ಕೊಡೋಲ್ಲ"— ಎಂದಳು ಸರಳೆ ಕೊಂಕು ದನಿಯಲ್ಲಿ.

"ಯಾಕೆ?"

"ನನ್ನ ಕತೆಗಳನ್ನು ನೀವು ಓದುವುದು ನನಗೆ ಇಷ್ಟವಿಲ್ಲ."

"ಅನ್ಯಾಯವಾಗಿ ಪದ್ಮಜಾ ತನ್ನ ಒಬ್ಬ ಭಕ್ತನನ್ನು ಕಳೆದುಕೊಳ್ಳು ತ್ತಿದ್ದಾಳೆ" ವಾಸು ಕೆಣಕಿದ.

"ಪದ್ಮಜೆಯ ಕತೆ ಓದದೆ ನೀವು ಅವಳ ಭಕ್ತರೋ?"

"ಊಹೂಂ. ನಾನು ಪದ್ಮಜೆಯ ಭಕ್ತನಲ್ಲ. ಸರಳಾಸಕ್ತ, ಸರಳ ಭಕ್ತ."

"ಸಾಕು ಹುಡುಗಾಟ"

ಅಷ್ಟರಲ್ಲಿ ಥಿಯೇಟರು ಸಿಕ್ಕಿದ್ದರಿಂದ ವಾಸುವಿನ ಹುಡುಗಾಟ ನಿಂತಿತು. ಇಬ್ಬರೂ ಥಿಯೇಟರನ್ನು ಪ್ರವೇಶಿಸಿ ಹೆಚ್ಚು ಜನರಿಲ್ಲದ ಜಾಗ ವನ್ನು ಆಕ್ರಮಿಸಿಕೊಂಡರು.

ಚಿತ್ರ ಶುರುವಾಯಿತು. ವಾಸು ಸರಳೆಯೊಡನೆ ಮಾತನಾಡುತ್ತಿದ್ದ. ಸರಳೆಯ ಕಡೆ ನೋಡುತ್ತಾ ಅವನು ಕಾಲ ಕಳೆದ. ತಾನು ಚಿತ್ರ ನೋಡು ವುದಿರಲಿ, ಸರಳೆಗೆ ಚಿತ್ರ ನೋಡಲು ಅವನು ಅವಕಾಶ ಕೊಡಲಿಲ್ಲ.

ಥಿಯೇಟರಿನಲ್ಲಿ ಕವಿದ ನಸುಕತ್ತಲಿನಲ್ಲಿ ಸರಳೆಯ ಮುಖದ ಹತ್ತಿರ ಮುಖ ತಂದು ವಾಸು ಕೇಳಿದ

"ನನ್ನ ಮದುವೆ ಮಾಡಿಕೊಳ್ಳುತ್ತೀರಾ?"

"ಊಹೂಂ"—ಎಂದಳು ಸರಳಾ—ಮುದ್ದಾಗಿ.

"ಯಾಕೆ?"

"ನೀವು ಯಾರೋ, ನಿಮ್ಮ ಕ್ವಾಲಿಫಿಕೇಶನ್ನು ಏನೋ ಒಂದೂ ನನಗೆ ತಿಳಿಯದು."

"ಕೇಳಿ ಹೇಳುತ್ತೇನೆ. ನನ್ನ ಹೆಸರು ವಾಸುದೇವ್. ಆದರೆ ಎಲ್ಲರೂ ನನ್ನನ್ನು ವಾಸು ಎಂದು ಕರೆಯುತ್ತಾರೆ. ಎಂ.ಎಸ್.ಸಿ. ಪರೀಕ್ಷೆ ಪಾಸಾಗಿದೆ. ಕಾಲೇಜಿನಲ್ಲಿ ಮೇಷ್ಟರು. ಸಂಬಳ ಸಧ್ಯಕ್ಕೆ ಇನ್ನೂರಿಪ್ಪತ್ತು ಬರುತ್ತಿದೆ. ನಿಮಗೆ ಶ್ರೀಮಂತ ಜೀವನವಲ್ಲದಿದ್ದರೂ ನೆಮ್ಮದಿ ಜೀವನ ಕೊಡಬಲ್ಲೆ."

"ವಯಸ್ಸು?"—ಎಂದಳು ಸರಳಾ.

"ಇಪ್ಪತ್ತನಾಲ್ಕು ವರ್ಷ."

"ಜಾತಿ?"

"ನಿಮ್ಮ ಜಾತಿ. ಸರಳೆಯನ್ನು ಪ್ರೇಮಿಸುವ ಜಾತಿ."

"ತಾಯಿ, ತಂದೆ?"

"ಹಳ್ಳಿಯಲ್ಲಿದ್ದಾರೆ. ಮಗ ಮದುವೆಯಾದರೆ ಸಾಕು'ಎಂದು ತಪಸ್ಸು ಮಾಡುತ್ತಿದ್ದಾರೆ."

"ಚಿಕ್ಕಪ್ಪ, ಚಿಕ್ಕಮ್ಮ ಒಪ್ಪಿದಾರೆಯೇ?"

"ಅವರ ಅನುಮತಿ ಇಲ್ಲದಿದ್ದರೆ ನಾವು ಇಷ್ಟು ದೂರ ಬರಲು ಸಾಧ್ಯವಿತ್ತೇ?"

ವಾಸುವಿನ ತಲೆಯಮೇಲೆ ಹೊಡೆದಂತೆ ಕೊನೆಗೆ ಸರಳಾ ಕೇಳಿದಳು

"ಅರುಂಧತಿ?"

ಅವಳ ದನಿಯಲ್ಲಿ ಮತ್ಸರವಿತ್ತು.

"ಅವಳು ನನ್ನ ಅಕ್ಕನ ಮಗಳು. ಹಿಂದೆಯೂ ಅಕ್ಕನ ಮಗಳಾಗಿದ್ದಳು. ಮುಂದೆಯೂ ಅಕ್ಕನ ಮಗಳಾಗಿಯೇ ಉಳಿಯುತ್ತಾಳೆ."

"ಹಾಗಾದರೆ...."

"ಹೇಳಿ ಸರಳಾ. ನಾನು ಒಪ್ಪಿಗೆಯೇ?"

"ನನ್ನ ವಿಷಯ ನೀವು ಏನೂ ಕೇಳಲಿಲ್ಲವಲ್ಲಾ?"

"ಹಾಗಾದರೆ ಈಗ ಕೇಳುತ್ತೇನೆ ಹೇಳಿ. ಹೆಸರು, ವಯಸ್ಸು, ಗೋತ್ರ, ವಿದ್ಯೆ ಎಲ್ಲವೂ ನನಗೆ ಗೊತ್ತು. ನೀವು ಬರೆದಿರುವ ಕತೆಗಳನ್ನು ಓದಿಲ್ಲದೇ ನಾನು ನಿಮ್ಮ ಭಕ್ತನಾಗಿದೀನಿ."

"ಸರಿ. ನೀವು ಕೇಳುವುದೇನೂ ಉಳಿದಿಲ್ಲ."

"ಇದೆ. ರಾಜಗೋಪಾಲ?"

ವಾಸುವಿನ ದನಿಯಲ್ಲಿ ಅಸೂಯೆಯಿತ್ತು.

"ಆತ ನಮ್ಮ ಸೋದರತ್ತೆಯ ಮಗ."

"ಅಷ್ಟೇಯೇ?"—ವಾಸು ಸರಳೆಯ ಹೃದಯವನ್ನು ಕೆದಕಿದ.

ಸರಳೆಯ ತುಟಿಗಳು ಬಿಗಿಯಾಗಿ ಮುಚ್ಚಿಕೊಂಡವು.

ವಾಸುವಿನ ಪರಿಚಯವಾದನಂತರ ರಾಜಗೋಪಾಲ ಅವಳ ಹೃದಯದಿಂದ ಬಹಳ ದೂರ ಹೊರಟುಹೋಗಿದ್ದ. ಅವನ ವಿಷಯ ವಾಸುವಿನಿಂದ ಅಡಗಿಸಿಡುವಂತಹುದು ಏನೂ ಇರಲಿಲ್ಲ.

"ಹಿಂದೆ ನನ್ನ ಅವನಿಗೆ ಕೊಡುವ ಮಾತಾಗಿತ್ತು."

"ಈಗ?"

"ಇಲ್ಲ."

"ಕಾರಣ?"

"ಅವನ ಉದ್ಯೋಗ."

"ನಿಮ್ಮ ಮನಸ್ಸು ಹೇಗೆ—ಅವನ ವಿಷಯದಲ್ಲಿ?"

"ಹಿಂದೆಯೂ ಸ್ನೇಹಿತರಾಗಿದ್ದೆವು. ಮುಂದೆಯೂ ಅಷ್ಟೆ."

ವಾಸು ನಿರಾತಂಕವಾಗಿ ಉಸಿರಾಡಿದ.

"ಈಗ ಹೇಳಿ. ಒಪ್ಪಿಗೆಯೇ?" ವಾಸು ಕೇಳಿದ.

"ನೋಟೀಸ್."

"ಹೇಳಿ ಸರಳಾ."

"ಇನ್ನಾದರೂ ಸಿನಿಮಾ ನೋಡೋಣ, ಸುಮ್ಮನೆ ನನ್ನನ್ನು ಮಾತನಾಡಿಸಬೇಡಿ. ಇಷ್ಟು ದುಡ್ಡು ಸುರಿದು...."

"ಅಂದಹಾಗೆ ಆ ದಿನದ ಗಾಡಿ ಬಾಡಿಗೆ, ಹೋಟೆಲ್ ತಿಂಡಿಯ ಬೆಲೆ, ಈ ದಿನದ ಟಿಕೇಟಿನ ಬೆಲೆ ಯಾವುದೂ ನನಗೆ ಸಂದಾಯವಾಗಿಲ್ಲ"—ವಾಸು ಗಂಭೀರ ದನಿಯಲ್ಲಿ ಹೇಳಿದ.

ಸರಳೆ ಗಲಿಬಿಲಿಗೊಂಡಳು.

"ನಿಜ. ಎಷ್ಟು ಕೊಡಬೇಕು ನೀವೇ ಹೇಳಿ."

"ಹೇಳಲೇ?"

"ಹೂಂ."

"ಒಂದೇ ಒಂದು ಮುತ್ತು."

ಸರಳೆ ಕೊಂಕುನೋಟ ಬೀರಿ

"ಬಹಳ ಸಲಿಗೆ ತಗೋತಿದೀರಿ"—ಎಂದಳು.

"ಸಲಿಗೆಯಿಂದ ಬೇಡುವ ಭಿಕ್ಷೆ ಇದು."

"ಪರಿಚಯವಾದ ಸ್ವಲ್ಪ ದಿನಗಳಲ್ಲೇ ಹೀಗೆ ಮಾತನಾಡುವುದನು ನೋಡಿದರೆ ಹೆದರಿಕೆಯಾಗುತ್ತದೆ."

"ಆದರೆ ನಿಮ್ಮನ್ನು ನೋಡಿದರೆ ಹೆದರಿದ ಹಾಗೆ ಕಾಣುವುದಿಲ್ಲ."

ಮಾತು ಬೆಳೆಯಿತು. ಚಿತ್ರ ಮುಗಿಯಿತು. ವಾಸು ತೆರೆಯ ಕಡೆ ನೋಡುವುದರಬದಲು ಅವಳ ಬೆರಳುಗಳೊಡನೆ ಆಟವಾಡುತ್ತಾ ಕಾಲಕಳೆದ

ಇನ್ನು ಸರಳೆ!

ಅವಳಿಗೆ ತನ್ನದೊಂದು ಪ್ರತ್ಯೇಕವಾದ ದೇಹ, ಮನಸ್ಸು, ವ್ಯಕ್ತಿತ್ವ ಇದೆ ಎನ್ನುವುದೇ ಮರೆತುಹೋಗಿತ್ತು.

ಇಬ್ಬರೂ ಥಿಯೇಟರಿನಿಂದ ಹೊರಗೆ ಬಂದರು.

ಸರಳೆಯನ್ನು ಅವಳ ಮನೆಯ ಬಳಿ ಬೀಳ್ಕೊಡುವಾಗ ವಾಸು ಹೇಳಿದ

"ನಾನಿನ್ನು ಬರ್ತೀನಿ."

"ಒಳಗೆ ಬನ್ನಿ"—ಸರಳಾ ಆಹ್ವಾನಿಸಿದಳು.

"ಇಲ್ಲ. ನಾಳೆ ಸಂಜೆ ಬರ್ತೀನಿ. ತಯಾರಾಗಿರಿ."

"ಎಲ್ಲಿಗೆ?"

"ಎಲ್ಲಿಗಾದರೂ ಸರಿ. ತಿರುಗಾಡಿಕೊಂಡು ಬರೋಣ."

ಸರಳಾ ನಸುನಕ್ಕು "ನೀವು ಕಾಲೇಜಿನ ಯೋಚನೆಯನ್ನು ಬಿಟ್ಟು ಬಿಟ್ಟಿದೀರಾ ? ಅಥವಾ ರಾಜೀನಾಮೆ ಕೊಟ್ಟಿದೀರಾ ಹೇಗೆ?"—ಎಂದಳು.

"ಕಾಲೇಜನ್ನು ಜ್ಞಾಪಿಸಬೇಡಿ"—ಎಂದ ವಾಸು.

ಸರಳೆ ಕ್ಷಣಕಾಲ ಯೋಚಿಸಿ ಗಂಭೀರವಾದ ದನಿಯಲ್ಲಿ

"ನಾಳೆ ನಿಮ್ಮ ಹತ್ತಿರ ನಾನೊಂದು ವಿಷಯ ಹೇಳಿಕೊಳ್ಳುವುದಿದೆ. ಬಹಳ ಗುಟ್ಟಿನ ಮಾತದು. ನಿಮ್ಮಲ್ಲೇ ಇರಲಿ" ಎಂದಳು.

ವಾಸುವಿನ ಹೃದಯ ತಳಮಳಗೊಂಡಿತು. ಅವನು ಆತಂಕದಿಂದ ಗೇಟಿನ್ನೊರಗಿ ನಿಂತು

"ಈಗಲೇ ಹೇಳಿ"—ಎಂದ.

"ಈಗ ಬೇಡ. ನಾಳೆ ಹೇಳ್ತೀನಿ. ಮದುವೆಗೆ ಮುಂಚೆ ನಿಮ್ಮಿಂದ ಯಾವುದನ್ನೂ ಮರೆಮಾಚಲು ನನಗಿಷ್ಟವಿಲ್ಲ."

ವಾಸುವಿನ ಮುಖ ಬೆಳ್ಳಗಾಯಿತು.

ಬಹುಶಃ ರಾಜಗೋಪಾಲನೊಡನೆ ಈಕೆ ಏನಾದರೂ ಮಿತಿಮೀರಿ ವರ್ತಿಸಿರಬಹುದೇ ? ಆ ತಪ್ಪು ಅವಳನ್ನು ಈಗ ಕೊರೆಯುತ್ತಿರಬಹುದು.

"ಅಯ್ಯೋ ದೇವರೇ"—ಎಂದ ವಾಸು.

"ನಾಳೆ ಸಿಕ್ಕುವಿರಲ್ಲ"—ಎಂದು ಹೇಳಿ ಸರಳಾ ಒಳಗೆ ಹೋದಳು.

ಹೃದಯದ ಮೇಲೆ ಹಿಮಾಲಯವನ್ನಿರಿಸಿಕೊಂಡು ವಾಸು ಮನೆ ಸೇರಿದ. ರಾತ್ರಿಯೆಲ್ಲಾ ಅಶಾಂತಿಯಿಂದ ಹಾಸಿಗೆಯ ಮೇಲೆ ಹೊರಳಾಡಿದ.

ಒಂದು ವೇಳೆ ಸರಳೆ ತನ್ನ ದುಡುಕನ್ನು ಕುರಿತು ಹೇಳಿಕೊಂಡರೆ ಆಗ ತಾನೇನು ಮಾಡಬೇಕು? ರಾಜಗೋಪಾಲ ಆಗಾಗ್ಗೆ ಅವರ ಮನೆಗೆ ಬಂದು ಹೋಗುತ್ತಿದ್ದುದುಂಟು.

ಅವನು ಲಕ್ಷಣವಾದ, ಕೈತುಂಬಾ ಸಂಬಳ ಬರುವ ಹುಡುಗ. ಸರಳೆ ಲಕ್ಷಣವಾದ ದಿಟ್ಟ ಹುಡುಗಿ. ರಕ್ತ ಸಂಬಂಧವಿರುವುದರಿಂದ ಮನೆಯವರು ಅವರ ಸ್ನೇಹದ ಬಗ್ಗೆ ಉದಾಸೀನರಾಗಿರಬಹುದು. ಒಂದು ವಿಷಗಳಿಗೆಯಲ್ಲಿ ....ಮುಂದೆ ಯೋಚಿಸಲೂ ವಾಸುವಿಗೆ ಸಾಧ್ಯವಾಗಲಿಲ್ಲ.

ಈಗ ಅವನ ಮುಂದಿದ್ದುದು ಒಂದೇ ಪ್ರಶ್ನೆ. ಸರಳೆ ತನ್ನ ತಪ್ಪು ಒಪ್ಪಿಕೊಂಡ ನಂತರ ತಾನು ಅವಳನ್ನು ಪರಿಗ್ರಹಿಸಬೇಕೇ ಅಥವಾ ನಿರಾಕರಿಸಬೇಕೇ?

ಅವಳನ್ನು ಪರಿಗ್ರಹಿಸುವುದು ವಾಸುವಿನಂತಹ ಸ್ವಾಭಿಮಾನಿಯಿಂದಾಗದ ಕೆಲಸ. ಸರಳೆಯಂತಹ ಹುಡುಗಿಯನ್ನು ನಿರಾಕರಿಸುವುದು ಮತ್ತೂ ಕಷ್ಟದ ಕೆಲಸ.

'ಯಾಕಾದರೂ ಈ ಹುಡುಗಿ ನನ್ನ ಕಣ್ಣಿಗೆ ಬಿದ್ದಳೋ ಎಂದು ವಾಸು ಪರಿತಪಿಸಿದ.

ಮಾರನೆಯದಿನ ಸಂಜೆ ವಾಸುವಿನ ಪ್ರೇಮಪರೀಕ್ಷೆಯಾಗಲಿತ್ತು. ವಾಸುವಿಗೆ ಅದೇಕೋ ಅಲಂಕಾರದಲ್ಲಿ ಆಸಕ್ತಿ ಬರಲಿಲ್ಲ ಕೂದಲನ್ನೂ ಸಹ

ಸರಿಯಾಗಿ ಬಾಚದೆ ಮನೆಯಿಂದ ಹೊರಟ. ಸರಳೆಯೂ ತನ್ನಂತೆಯೇ ನಿರ್ಲಕ್ಷ್ಯದಿಂದ ಅಲಂಕರಿಸಿಕೊಂಡಿರಬಹುದು ಎಂದು ವಾಸು ನಿರೀಕ್ಷಿಸಿದ್ದ. ಆದರೆ ಅವನ ನಿರೀಕ್ಷೆ ತಪ್ಪಾಯಿತು. ಸರಳಾ ಅತ್ಯಂತ ಆಡಂಬರದಿಂದ ಅಲಂಕರಿಸಿಕೊಂಡಿದ್ದಳು.

ಅಂತಹ ತಪ್ಪುಮಾಡಿ ಈಗ ತನ್ನೊಡನೆ ಒಪ್ಪಿಕೊಳ್ಳುವ ದಿನ ಹೀಗೆ ಅಲಂಕರಿಸಿಕೊಂಡು ಹೊರಡುವ ಮನಸ್ಸಾದರೂ ಸರಳೆಗೆ ಹೇಗೆ ಬಂತೋ?

ಸರಳೆ ಕೊನೆಯ ಬಾರಿ ಕನ್ನಡಿಯಲ್ಲೊಮ್ಮೆ ತನ್ನ ಸ್ವರೂಪ ನೋಡಿ ಹೊರಬರುವವರೆವಿಗೆ ವಾಸು ರಂಗಸ್ವಾಮಿಯೊಡನೆ ಮಾತನಾಡುತ್ತಿದ್ದ.

ಇಬ್ಬರೂ ಲಾಲ್‌ಬಾಗಿಗೆ ಹೊರಟರು. ವಾಸುವಿನ ಮುಖ ಕಳೆಗುಂದಿದ್ದುದನ್ನು ಸರಳೆ ಗಮನಿಸಿ

"ಯಾಕೆ ಹೀಗಿದೀರಿ?"—ಎಂದಳು.

"ಇಲ್ಲವಲ್ಲಾ"—ವಾಸು ನಗಲು ಯತ್ನಿಸಿದ.

"ಏನೋ ಇದೆ ಹೇಳಿ. ನಾನು ಮಾತ್ರ ನಿಮಗೆ ಎಲ್ಲವನ್ನೂ ಹೇಳುವುದಿಲ್ಲವೇ? ನೀವೇಕೆ ಹಾಗೆ ನನಗೆಲ್ಲ ಹೇಳಬಾರದು?"

"ಹೇಳಲು ಏನೂಇಲ್ಲ."

ಲಾಲ ಬಾಗಿನಲ್ಲಿ ಬೀಸಣಿಗೆಯ ಗಿಡದ ಕೆಳಗೆ ಇಬ್ಬರೂ ಕುಳಿತರು. ವಾಸು ಸರಳೆಯಿಂದ ಆದಷ್ಟುದೂರ ಕುಳಿತ. ಯಾವಾಗಲೂ ಅವಳ ಒತ್ತಿನಲ್ಲಿ ಸರಿದು ಬರುತ್ತಿದ್ದ ವಾಸು ಇಂದು ದೂರವಾದ. ಆದರೆ ತನ್ನ ಉತ್ಸಾಹದಲ್ಲಿ ಸರಳೆ ಯಾವುದನ್ನೂ ಗಮನಿಸಲಿಲ್ಲ.

"ಅದೇನು ಹೇಳ್ತೀರೋ ಹೇಳಿ"—ವಾಸು ಧೈರ್ಯಮಾಡಿ ಕೇಳಿದ.

"ಆಮೇಲೆ ನನ್ನ ಮೋಸಗಾತಿ ಎನ್ನಬಾರದು"—ಸರಳಾ ತನ್ನ ಶರತ್ತನ್ನು ಅವನ ಮುಂದಿಟ್ಟಳು.

ವಾಸುವಿನ ಗಂಟಲಿನಲ್ಲಿ ಚೆಂಡನ್ನು ತುರುಕಿದಂತಾಯಿತು. ಅವನು ವಿಶ್ವಪ್ರಯತ್ನ ಮಾಡಿ 'ಇಲ್ಲ' ಎಂಬ ಪದವನ್ನು ಗಂಟಲಿನಿಂದ ಹೊರಕ್ಕೆ ತಳ್ಳಿದ.

"ನಾನು ಮೊದಲೇ ನಿಮಗೆ ಎಲ್ಲವನ್ನೂ ಹೇಳಿಬಿಟ್ಟಿದ್ದರೆ ಚೆನ್ನಾಗಿತ್ತು. ಎಲ್ಲವೂ ಮೀರಿದಮೇಲೆ ತಿಳಿದು ನೀವು ಮನಸ್ಸು ಕೆಡಿಸಿಕೊಳ್ಳಬಾರದು ಎಂದು ಈಗಲೇ ಹೇಳ್ತಿದೀನಿ."

"ಆಗಲಿ ಹೇಳಿ."

"ಆಮೇಲೆ ನಿಮ್ಮ ಅಭಿಪ್ರಾಯ ಸ್ಪಷ್ಟವಾಗಿ, ನಿರ್ದಾಕ್ಷಿಣ್ಯವಾಗಿ ತಿಳಿಸಬೇಕು."

"ಆಗಲಿ."

"ಹೇಗೆ ಹೇಳುವುದೋ ನನಗೆ ಬಾಯೇ ಬರುವುದಿಲ್ಲ. ತಾಳಿ.... ತೋರಿಸಿಬಿಡುತ್ತೇನೆ" ಎನ್ನುತ್ತಾ ಸರಳಾ ತನ್ನ ಶೋಕಿ ಚೀಲದ ಸರಪಣಿಯನ್ನು ಎಳೆದು ಒಳಗೆ ಕೈ ಹಾಕಿದಳು.

ವಾಸು ಕುತೂಹಲ, ಸಂಕಟ ಬೆರೆತ ನೋಟದಿಂದ ಸರಳೆಯ ಕಡೆ ನೋಡುತ್ತಿದ್ದ.

ಸರಳಾ ಚರ್ಮದ ಕಪ್ಪು ಕೇಸೊಂದನ್ನು ತೆಗೆದು ವಾಸುವಿನ ಕೈಗೆ ಕೊಟ್ಟಳು.

ರಾಜಗೋಪಾಲ ಸರಳೆಗೆ ಬರೆದ ಪ್ರೇಮ ಪತ್ರಗಳಿರಬಹುದೇ?

ವಾಸು ಕೇಸನ್ನು ತೆಗೆದು ಒಳಗಿದ್ದ ವಸ್ತುವನ್ನು ಕೈಗೆತೆಗೆದುಕೊಂಡ.

"ಇದೇನು ಕನ್ನಡಕ ! ಯಾರದು ಇದು?"

"ನನ್ನದ."

"ನಿಮ್ಮದೇ ?ಕಣ್ಣು ಚೆನ್ನಾಗಿರುವ ಹಾಗಿದೆ."

"ಅಯ್ಯೋ ನೋಡೋಕೆ ಹಾಗಿದೆ ಅಷ್ಟೆ. ನನಗೆ ಹತ್ತಿರದ ದೃಷ್ಟಿ."

"ಮತ್ತೆ ದಿನವೂ ನೀವೇಕೆ ಕನ್ನಡಕ ಹಾಕಿಕೊಳ್ಳುವುದಿಲ್ಲ?"

"ನನ್ನ ಗೆಳತಿಯರು ನನಗೆ 'ಕನ್ನಡಕ ಹಾಕಿಕೊಳ್ಳಬೇಡ. ನಿನಗದು ಚೆನ್ನಾಗಿ ಕಾಣುವುದಿಲ್ಲ. ಕನ್ನಡಕ ಹಾಕಿಕೊಳ್ಳುವ ಹುಡುಗಿಯರನ್ನು ಹುಡುಗರು ಕಣ್ಣೆತ್ತಿಯೂ ನೋಡುವುದಿಲ್ಲ' ಎಂದರು...."

ಸರಳೆ ಕೊಟ್ಟ ವಿವರಣೆ ಕೇಳಿ ವಾಸುವಿಗೆ ನಗುಬಂತು.

"ನಿನ್ನೆ ನನ್ನೊಡನೆ ಚಿತ್ರ ನೋಡಲು ಬಂದಿದ್ದಾಗ ಸಹ ನೀವು ಕನ್ನಡಕ ಹಾಕಿಕೊಂಡಿರಲಿಲ್ಲ. ತೆರೆಯಮೇಲೇನು ಆಗುತ್ತಿದೆಎಂದು ನಿಮಗೆ ತಿಳಿಯಿತೇ?"

"ನಿನ್ನೆ ನಾನು ಚಿತ್ರ ಎಲ್ಲಿ ನೋಡಿದೆ? ನೀವು ಚಿತ್ರನೋಡಲು ನನಗೆಲ್ಲಿ ಅವಕಾಶ ಕೊಟ್ಟಿರಿ? ಮಾತು....ಮಾತು, ಬರಿಯಮಾತು. ನನ್ನ ಬೆರಳುಗಳೆಲ್ಲ ಈಗಲೂ ನೋಯುತ್ತಿವೆ."

"ಎಲ್ಲಿ ತೋರಿಸಿ?"– ವಾಸು ಕೇಳಿದ.

ಸರಳಾ ತನ್ನ ಬಲಗೈಯನ್ನು ಅವನವುಂದೆ ಹಿಡಿದಳು. ವಾಸು ಅವಳ ಕೈ ಬೆರಳಿನ ಮೂಳೆಗಳು ಮುರಿಯುವಂತೆ ಅದುಮಿ

"ಬಲು ಕೆಟ್ಟಹುಡುಗಿ ನೀವು" – ಎಂದ.

"ಯಾಕೋ? ನಾನೇನು ಮಾಡಿದೆ?"

"ನನ್ನೆದೆ ಒಡೆದುಹೋಗಿತ್ತು. ಅಬ್ಬ ! ನಿನ್ನೆ ರಾತ್ರಿ ಸತ್ತೂ ಸತ್ತು ಬದುಕಿದೆ."

"ಏನಾಗಿತ್ತು ಅಂತಹದು?"

"ಸಧ್ಯ, ಅದನ್ನು ಮರೆತುಬಿಡೋಣ. ನನ್ನ ಮನಸ್ಸಿನಲ್ಲಿ ನೆನ್ನೆ ರಾತ್ರಿ ನಡೆದ ಯುದ್ಧ ತಿಳಿಸಿದರೆ ನನ್ನಗತಿ ಮುಗಿದೇ ಹೋಗುತ್ತದೆ."

ಸರಳೆಯ ಗಮನ ವಾಸುವಿನ ಮೇಲಿರಲಿಲ್ಲ. ಅವಳು ಕನ್ನಡಕವನ್ನು ಕೈಲಿ ತಿರುಗಿಸುತ್ತಾ

"ನಾನುಕನ್ನಡಕ ಹಾಕಿಕೊಳ್ತೀನಿ ಎನ್ನುವ ವಿಷಯವನ್ನು ನಿಮ್ಮಿಂದ ಮುಚ್ಚಿಡುವುದು ನನಗೆ ಸಾಧ್ಯವಾಗಲಿಲ್ಲ.ನಾನೊಂದು ದೊಡ್ಡ ತಪ್ಪು ಮಾಡ್ತಿದೀನಿ ಎನಿಸಿತು.ಆದುದರಿಂದಲೇ ಇವತ್ತುಇರುವ ವಿಷಯಾನ ಹೇಳಿಬಿಟ್ಟೆ."

"ಇಷ್ಟೇ ತಾನೆ?"

"ಕೊಂಚ ತಡೆಯಿರಿ"—ಎನ್ನುತ್ತಾ ಸರಳೆ ತನ್ನ ಮುಖವನ್ನು ವಾಸುವಿನ ಮುಂದೆ ನೀಡಿ

"ನಾನು ಹೇಗೆ ಕಾಣ್ತೀನಿ"—ಎಂದಳು.

"ಬ್ಯೂಟಿಫುಲ್"—ಎಂದ ವಾಸು.

"ಈಗ ..."ಎನ್ನುತ್ತಾ ಸರಳಾ ಕನ್ನಡಕವನ್ನು ಹಾಕಿಕೊಂಡು ಮತ್ತೆ ಅವನ ಮುಂದೆ ಮುಖ ಒಡ್ಡಿದಳು.

"ಮೊದಲಿಗಿಂತಲೂ ಹೆಚ್ಚು ಸುಂದರವಾಗಿ ಕಾಣಿಸುತ್ತಿದೀರಾ. ಆದರೆ...."

"ಏನು ಆದರೆ?"—ಸರಳೆಗೆ ಅಷ್ಟಕ್ಕೇ ಗಾಬರಿ.

"ಕನ್ನಡಕಹಾಕಿಕೊಂಡರೆ ಕೆಲವು ಕೆಲಸಗಳಿಗೆಅಡ್ಡಿ"— ಎಂದವಾಸು.

"ಏನು ಕೆಲಸ? ಕನ್ನಡಕ ಹಾಕಿಕೊಂಡು ಏನು ಕೆಲಸ ಮಾಡಲೂ ನನಗೆ ತೊಂದರೆಯಾಗುವುದಿಲ್ಲ"—ಸರಳಾ ಮುಗ್ಧ ದನಿಯಲ್ಲಿ ಹೇಳಿದಳು.

"ನಿಮಗಲ್ಲ ತೊಂದರೆ. ನನಗೆ ತೊಂದರೆ."

"ಎಂತಹ ತೊಂದರೆ...."

ಸರಳೆಯ ವಾಕ್ಯ ಗಂಟಲಿನಲ್ಲೇ ಅಡಗಿಹೋಯಿತು. ವಾಸು ಸುತ್ತಲೂ ನೋಡಿ ಎಡಗೈಯಿಂದ ಸರಳೆಯ ಕನ್ನಡಕ ಕಸಿದು ಅವಳಿಗೆ ಮುತ್ತಿಟ್ಟ.

ಸರಳಾ ಬೆವತು ಹೋದಳು. ಅವಳ ಮುಖ ಕೆಂಪಾಯಿತು.

"ನನ್ನ ಈ ಕೆಲಸಗಳಿಗೆ ತೊಂದರೆ"—ಎಂದ ವಾಸು—ಚೇತನ ಬಂದ ಮೇಲೆ.

* * *

ಬೇಳೆ ಸೀದು ತಳ ಹತ್ತಿದ ನಂತರ ಸರಳಾ ತನ್ನ ಯೋಚನೆಗಳನ್ನು ಕೊಡವಿಕೊಂಡು ಎಚ್ಚರಗೊಂಡಳು. ವಾಸು ಊಟಕ್ಕೇಳುವನೆಂದು ಗಡಿಬಿಡಿಯಿಂದ ಸರಳಾ ಉಪ್ಪು, ಹುಳಿ, ಖಾರ ಹಾಕಿ ಸಾರನ್ನು ಕುದಿಸಿದಳು.

ವಾಸು ಊಟಕ್ಕೆ ಬಂದಾಗ ಮತ್ತೆ ತನ್ನ ಮಾತನ್ನು ತೆಗೆದಳು.

"ಪುಸ್ತಕಗಳನ್ನು ಎಲ್ಲಿ ಇಡೋಣಾಂದ್ರೆ"

ಸಾರು ಈ ದಿನ ಬಾಯಿಗೆ ಹಾಕುವಂತಿತ್ತು. ಆದುದರಿಂದ ವಾಸು ಸುಪ್ರೀತನಾಗಿ ತನ್ನ ಸಲಹೆಯನ್ನು ಕೊಟ್ಟ

"ಎಲ್ಲವನ್ನೂ ಮಂಚದ ಕೆಳಗೆ ಜೋಡಿಸಿಟ್ಟು ಒಂದು ಹಳೆಯ ಮಗ್ಗಲು ಹಾಸಿಗೆಯನ್ನು ಹೊದೆಸಿಬಿಡು."

ಸರಳೆಗೆ ಆ ಸಲಹೆ ತುಂಬಾ ಇಷ್ಟವಾಯಿತು. ವಾಸು ಆತುರಾತುರವಾಗಿ ಕಾಲೇಜಿಗೆ ಹೊರಟಾಗ ಸರಳೆ ಮನೆಯನ್ನು ಚೊಕ್ಕಟಗೊಳಿಸುವ ಕಾರ್ಯವನ್ನು ಮುಂದುವರಿಸಿದಳು.

ಮನೆಯನ್ನು ಶುದ್ಧಿಮಾಡುವ ಗಡಿಬಿಡಿಯಲ್ಲಿ ಮಧ್ಯಾಹ್ನದ ಊಟದ ನಂತರ ನಿದ್ದೆಮಾಡುವ ಮಹಾಕಾರ್ಯವನ್ನು ಸರಳಾ ಆ ದಿನ ತ್ಯಾಗಮಾಡಲೇಬೇಕಾಯಿತು.

ವಾಸು ಮನೆಗೆ ಬಂದು ಮೇಜಿನ ಮೇಲೆ ಪುಸ್ತಕಗಳನ್ನು ಬಿಸಾಡಿ ಮನೆಯಲ್ಲಿ ಹಾಕಿಕೊಳ್ಳುವ ಬಟ್ಟೆಗಳನ್ನು ಗೂಟದ ಮೇಲೆ ನೋಡಿದ. ಬಟ್ಟೆಗಳು ಮಾಯವಾಗಿದ್ದವು.

ವಾಸು ರೂಮಿನ ಸುತ್ತಲೂ ಕಣ್ಣೋಡಿಸಿದ.

ಎಲ್ಲೆಂದರೆ ಅಲ್ಲಿ ಬೇಕಾದ ಸಾಮಾನು ರೂಮಿನ ತುಂಬಾ ಬಿದ್ದು ಕಂಗೊಳಿಸುತ್ತಿತ್ತು. ಒಂದು ಪಕ್ಷ ಅವನಿಗೆ ಷೂಹಾರ್ನ್ ಬೇಕಾಗಿದ್ದಲ್ಲಿ ಒಮ್ಮೆ ಸುತ್ತಲೂ ನೋಡಿದರೆ ಸಾಕು-ಹಾರ್ನ್ ಎಲ್ಲಿದೆ ಎಂಬುದು ತಿಳಿಯುತ್ತಿತ್ತು.

ಅಥವ ಕಾಲು ಚೀಲ ಬೇಕಾದಾಗ, ಕುಳಿತ ಜಾಗದಿಂದ ಮೇಲೇಳದೆ ಉದ್ದವಾದ ಕಾಲನ್ನು ನೀಡಿ ವಾಸು ತನಗೆ ಬೇಕಾದ ಕಾಲು ಚೀಲವನ್ನು ಹತ್ತಿರಕ್ಕೆಳೆದುಕೊಳ್ಳುತ್ತಿದ್ದ.

ಈಗ ಕೊಟಡಿ ಕುಂಕುಮ, ಹೂವು, ಪೌಡರ್, ಒಡವೆಗಳ ಅಲಂಕಾರವಿರಲಿ–ಸೀರೆ, ರವಿಕೆ ಸಹ ಇಲ್ಲದ ಹೆಂಗಸಿನಂತೆ ತೀರ ನಗ್ನವಾಗಿತ್ತು.

ಕಾಲೇಜಿನಲ್ಲಿ ಬಳಲಿಬಂದಿದ್ದ ವಾಸು ಕೊಂಚ ಅಸಹನೆಯಿಂದ ಕೂಗಿದ

"ಸರಳಾ."

"ಏನು?"—ಎನ್ನುತ್ತಾ ಸರಳಾ ಬಂದಳು.

ಅವಳ ಇರಸರಿಕೆ ನೋಡಿ ವಾಸು ಚಕಿತನಾದ.

"ಏನೇ ಇದು ಅವತಾರ?"

"ರೂಮಿನ ಶಾಪವಿಮೋಚನೆಗಾಗಿ ನಾನು ಈ ಅವತಾರ ತಾಳಬೇಕಾಯಿತು."

"ನನ್ನ ಪೈಜಾಮ, ಶರಟು ಎಲ್ಲಿ?"

ಸರಳೆ ಕೂಡಲೆ ಹಳೆಯ ಬಟ್ಟೆಗಳನ್ನು ತುರುಕಿದ್ದ ಟ್ರಂಕನ್ನು ಹೊರಗೆಳೆದು ಅಲ್ಲಿಂದ ಅವನಿಗೆ ಬೇಕಾದ ಬಟ್ಟೆಗಳನ್ನು ಸಂದುಕೊಟ್ಟಳು.

"ನನ್ನ ಬಟ್ಟೆಗಳ ತಂಟೆಗೆ ಮಾತ್ರ ಬರಬೇಡ ಮಹರಾಯತಿ" ಎಂದ ವಾಸು.

"ರೂಮು ನೀಟಾಗಿ ಕಾಣಲಿ ಎಂದು ಹಾಗೆ ಮಾಡಿದೆ."

"ಗೂಟ ಇರುವುದು ಯಾಕೆ? ಅಲಂಕಾರಕ್ಕೇ?"

"ಗೂಟಕ್ಕೆ ನಿಮ್ಮ ಕೋಟು ಮಾತ್ರ ಹಾಕಿ ಸಾಕು. ಒಂದು ಕರವಸ್ತ್ರದಿಂದ ಹಿಡಿದು ಎಲ್ಲವನ್ನೂ ಅದರ ಮೇಲೆ ಹೊರಿಸಬೇಡಿ. ಗೂಟ ಭಾರ ತಡೆಯಲಾರದೇ ಬಗ್ಗಿ ಹೋಗಿದೆ"

ಸರಳೆಯೊಡನೆ ವಾದಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದು ವಾಸುವಿಗೆ ಗೊತ್ತು. ಸರಳೆ ಒಳಗಿನಿಂದ ಕಾಫಿ, ತಿಂಡಿಯನ್ನು ತಂದು ವಾಸುವಿಗೆ ಕೊಟ್ಟಳು.

"ತಿನ್ನಲೇ ಧೈರ್ಯವಾಗಿ?" ವಾಸು ಕೇಳಿದ.

"ತಿನ್ನಿ. ನಾನು ತಿಂದು ಇನ್ನೂ ಉಳಿಸಿದೀನಿ"—ಎಂದಳು ಸರಳಾ.

ವಾಸು ಉಪಹಾರ ಮುಗಿಸಿ ಗೆಳೆಯನೊಬ್ಬನಿಗೆ ಪತ್ರ ಬರೆಯಲು ಮೇಜಿನ ಮುಂದೆ ಕುಳಿತುಕೊಂಡ.

"ನನ್ನ ಪೆನ್ನು ಎಲ್ಲಿ ಸರಳಾ?"

"ರೇಡಿಯೋ ಹಿಂದುಗಡೆ ಯಾರಿಗೂ ಕಾಣದ ಹಾಗೆ ಇಟ್ಟಿದೀನಿ."

"ನನಗೂ ಕಾಣದ ಹಾಗೆ ಇಡಬೇಡ."

"ಇನ್ನು ಮೇಲೆ ಎಲ್ಲ ಸಮಾನುಗಳಿಗೂ ಇಂತಹದೇ ಜಾಗ ಎಂದು ಒಂದು ಜಾಗ ಮಾಡಿಬಿಟ್ಟಿದೀನಿ."

ಸರಳೆಯ ಈ ಬಗೆಯ ಸುಧಾರಣೆ ಸಾವಿರದ ಒಂದನೆಯ ಬಾರಿ ಯದು.

"ನನಗೆ ಯಾವ ಜಾಗ? ಮೊದಲೇ ತಿಳಿಸಿಬಿಟ್ಟಿದ್ದರೆ ಈ ಪಾಮರ ಬೇರೆ ಜಾಗದಲ್ಲಿ ಕುಳಿತುಕೊಳ್ಳುವಂತಹ ಮಹಾಪರಾಧವನ್ನು ಮಾಡುವು ದಿಲ್ಲ"—ವಾಸು ವಿನೀತನಾಗಿ ಕೇಳಿಕೊಂಡ.

"ನಿಮಗೂ ಒಂದು ಜಾಗ ಗೊತ್ತು ಮಾಡಿದೀನಿ"—ಸರಳೆ ನಗುತ್ತಾ ಹೇಳಿದಳು.

"ಯಾವುದು ನನ್ನ ಜಾಗ?"

"ಇಲ್ಲಿ"— ಎನ್ನುತ್ತಾ ಸರಳೆ ತನ್ನ ಹೃದಯವನ್ನು ತೋರಿಸಿ

"ಈ ಜಾಗ ಬಿಟ್ಟು ಬೇರೆಲ್ಲಿಗಾದರೂ ಹೋಗಲು ಪ್ರಯತ್ನಿಸಿದರೆ...." ಎನ್ನುತ್ತಾ ಕಣ್ಣರಳಿಸಿದಳು.

"ತುಂಬಾ ಥ್ಯಾಂಕ್ಸ್, ನನ್ನ ಲೆಟರ್‌ಪ್ಯಾಡ್ ಎಲ್ಲಿದೆ?"

ಸರಳೆ ಆಲಸ್ಯದಿಂದ ಆಕಳಿಸಿ ಮೈಮುರಿದು

"ಎಲ್ಲಾ ಸಾಮಾನು ಎಲ್ಲಿವೆ ಎಂದು ನನ್ನ ಕೇಳಬೇಡಿ. ನೀವೇ ಹುಡುಕಿ ತಗೋಬಾರದೇ?" —ಎಂದಳು.

"ನನ್ನ ಕೈಗೆ ಸಾಮಾನುಗಳು ಸಿಕ್ಕಬಾರದು ಎನ್ನುವ ಹಠ ತೊಟ್ಟು ನೀನು ಅವುಗಳನ್ನು ಮರೆಮಾಡಿದೀಯ. ನಾನು ಹುಡುಕಿದರೆ ಅವು ಸಿಕ್ಕುತ್ತವೆಯೇ?"

"ಸಿಗುತ್ತವೆ."

"ಇಲ್ಲ, ಸಾಮಾನುಗಳೂ ಈ ಕಣ್ಣಾ ಮುಚ್ಚಾಲೆಯಾಟದಲ್ಲಿ ನಿನ್ನೊಡನೆ ಸಹಕರಿಸುತ್ತವೆ. ನಾನು ಸೋತೆ, ಹುಡುಕಿಕೊಡು."

ಮೇಜಿನ ಅರೆಯುನ್ನೆಳೆದು ಸರಳೆ ಲೆಟರ್ ಪ್ಯಾಡನ್ನು ವಾಸುವಿನ ಕೈಗಿತ್ತು "ನಿಮ್ಮ ಕೆಲಸವಾದ ಮೇಲೆ ಮತ್ತೆ ಅಲ್ಲೇ ಇಡಿ" ಎಂದಳು.

"ನಾನು ಈ ಕುರ್ಚಿಯ ಮೇಲೆ ಕುಳಿತುಕೊಳ್ಳಬಹುದೋ?"

"ಅತೀ ಅತಿಯಾಯಿತು ನಿಮ್ಮದು"—ಎನ್ನುತ್ತಾ ಸರಳಾ ಕಿಟಕಿಯ

ಲ್ಲಿದ್ದ ಹಳೆಯ ಬ್ಲೇಡೊಂದನ್ನು 'ಕಸ'—ಎನ್ನುತ್ತಾ ಬೀದಿಗೆ ಬಿಸಾಡಿದಳು

"ಒಂದಲ್ಲ ಒಂದು ದಿನ ನನ್ನೂ ಕಸಾಂತ ಬೀದಿಗೆ ಬಿಸಾಕಿಬಿಡ್ತೀಯೋ ಏನೋ ಕಾಣೆ"—ವಾಸು ಭೀತಿಸ್ವರದಲ್ಲಿ ನುಡಿದ.

ವಾಸುವಿನ ಬೂಟ್ಸುಗಳನ್ನು ಬೀರುವಿನ ಕೆಳಗೆ ತಳ್ಳಿದಳು ಸರಳಾ.

"ನಿನ್ನ ಕಣ್ಣೆಲ್ಲಾ ನನ್ನ ಸಾಮಾನುಗಳ ಮೇಲೆ. ನಿನ್ನ ಸಾಮಾನುಗಳನ್ನು ಏನು ಮಾಡಿದೆ?"

"ನಾನು ಅನಾವಶ್ಯಕವಾದ ಒಂದು ಸಾಮಾನೂ ಇಟ್ಟುಕೊಂಡಿಲ್ಲ"—ಎಂದಳು ಸರಳ ಹೆಮ್ಮೆಯಿಂದ.

"ಅಂದರೆ ನನ್ನ ಬೂಟ್ಸು, ಬ್ಲೇಡುಗಳು, ಕಾಲುಚೀಲ, ಪೆನ್ನು ಎಲ್ಲವೂ ಅನಾವಶ್ಯಕವಾದ ಸಾಮಾನುಗಳು ಎಂದು ನಿನ್ನ ಭಾವನೆಯೇ?" ವಾಸು ತಾನೇ ಎಷ್ಟು ಸಹಿಸಿಯಾನು?

"ಹಾಗಲ್ಲಾ...." ಸರಳಾ ರಾಗ ಎಳೆದಳು.

ವಾಸು ಬೀರುವಿನ ಬಾಗಿಲನ್ನು ತೆಗೆದು ದಪ್ಪ ಹುರಿಯ ಉಂಡೆಯನ್ನು ಅವಳ ಎದುರಿಗೆ ಹಿಡಿದು

"ಮನೆಗೆ ಸಾಮಾನು ಕಟ್ಟಿಕೊಂಡು ಬರುವ ಹುರಿಯನ್ನೆಲ್ಲಾ ತೆಗೆದು ಹೀಗೆ ಕೂಡಿಹಾಕಿದೀಯಲ್ಲಾ-ಇದು ಯಾರಿಗೆ? ನಿನ್ನ ಮೊಮ್ಮಕ್ಕಳಿಗೋ?"

"ಅಯ್ಯೋ, ಸಮಯಾಂದ್ರೆ ಬೇಕಾಗುತ್ತೆ."

"ಏನು ಸಮಯ ಹೇಳು ಕೇಳೋಣ."

"ಕಸಬರಲು ಕಟ್ಟೋಕೆ ಬೇಕಾಗುತ್ತೆ ಕಣ್ರಿ. ಕಸಪರಿಕೆ ಮಾರುವವರು ಬರಲನ್ನು ಬಿಗಿಯಾಗಿ ಕಟ್ಟಿರೋದಿಲ್ಲ. ಒಂದೆರಡು ಸಲ ಗುಡಿಸುವುದರಲ್ಲಿ ಬರಲು ಕಿತ್ತು ಹೋಗುತ್ತೆ. ಅದಕ್ಕೆ ಅಂಗಡಿಯಿಂದ ಬಂದ ಹುರೀನೆಲ್ಲಾ...."

ವಾಸು ಸರಳೆಯನ್ನು ಅಡಿಗೆ ಮನೆಗೆ ಕರೆದೊಯ್ದ.

"ಯಾಲಕ್ಕಿ ಸಿಪ್ಪೆ ರಾಶಿ ಕೂಡಿಹಾಕಿದೀಯಲ್ಲ ಯಾಕೆ?"—ವಾಸು ತನಿಖೆಗೇ ಆರಂಭಿಸಿಬಿಟ್ಟ.

"ಬಿಸಿಬೇಳೆ ಹುಳಿಯನ್ನ ಮಾಡಿದರೆ ದಾಲ್ಚಿನ್ನಿಗೆ ಬದಲು ಯಾಲಕ್ಕಿ ಸಿಪ್ಪೆ ಉಪಯೋಗಿಸಬಹುದೂಂತ ಪುಸ್ತಕದಲ್ಲಿ ಬರೆದಿದೆ. ಅದುದರಿಂದ ತೆಗೆದಿರಿಸಿದ್ದೇನೆ."

"ಬಾಳೆಹಣ್ಣಿನ ಸಿಪ್ಪೆಗಳು?"

"ಗಂಧಾಕ್ಷತೇಗ."

"ನಾನು ಬುದ್ಧಿ ಬಂದಾಗಿನಿಂದಲೂ ಒಂದು ದಿನ ಗಂಧಾಕ್ಷತೆ ಇಟ್ಟು ಕೊಂಡಿಲ್ಲ"—ವಾಸು ಹೇಳಿದ.

"ಮನೆಗೆ ಯಾರಾದರೂ ಹಿರಿಯ ಗಂಡಸರು ಬಂದರೆ ಇರಲೀಂತ ಇಟ್ಟಿದೀನಿ. ನಾಳೆ ನಿಮ್ಮ ತಂದೆ ಬರುತ್ತಾರೆ. ಅವರಿಗೆ ಗಂಧಾಕ್ಷತೆ ಬೇಡವೇ? ಆಮೇಲೆ ನಾನು ಬಾಳೆಹಣ್ಣಿನ ಸಿಪ್ಪೆ ಹುಡುಕಿಕೊಂಡು ಎಲ್ಲಿಗೆ ಹೋಗಲಿ?"

ವಾಸು ಮೂಲೆಯಿಂದ ಹಳೆಯ ಮಾವಿನ ಓಟೆಯನ್ನು ತೆಗೆದು ಅವಳ ಮುಂದೆ ಹಿಡಿದು "ಇದು ಯಾಕೆ?" ಎಂದ.

"ಅವತ್ತು ಮಾವಿನ ಹಣ್ಣು ತುಂಬಾ ಚೆನ್ನಾಗಿತ್ತು. ಮನೆಯಲ್ಲಿ ನೆಡೋಣಾಂತ ತೆಗೆದಿಟ್ಟಿದೀನಿ."

"ದೇವಿ, ಮಾವಿನ ಓಟೆ ಗಿಡವಾಗಬೇಕಾದರೆ ಅಡಿಗೆ ಮನೆಯ ನೆಲದ ಮೇಲೆ ನೀನು ಐವತ್ತು ವರ್ಷವಿಟ್ಟರೂ ಗಿಡವಾಗುವುದಿಲ್ಲ. ಭೂಮಿಯಲ್ಲಿ ಹಳ್ಳ ತೋಡಿ ನೆಟ್ಟು, ನೀರು ಹಾಕಿ...."

"ಅಯ್ಯೋ ಬಿಡಿ ಸಾಕು."

"ಹತ್ತೀಬೀಜಗಳು ಯಾಕೆ?"

"ಸರಿ. ಎಲ್ಲಾ ಯಾಕೆ ಯಾಕೆ ಎಂದರೆ ಏನು ಹೇಳಲಿ? ನನ್ನ ಗೆಳತಿಯ ಮನೆಯಲ್ಲಿ ಹಸು, ಎಮ್ಮೆ ಕಟ್ಟಿದಾರೆ. ಅವರ ಮನೆಗೆ ಹೋದಾಗ ಕೊಡೋಣಾಂತ ಇಟ್ಟಿದೀನಿ."

"ಭಲಾ, ಏನು ಮುಂದಾಲೋಚನೆ! ಇನ್ನು ಮೇಲೆ ಅವರ ಮನೆಯ ಎಮ್ಮೆಗೆ ಹುಲ್ಲು, ತೌಡು, ಹಿಂಡಿ ಯಾವುದೂ ಕೊಳ್ಳಬೇಕಾಗಿಲ್ಲ. ಅವುಗಳಿಗೆ ಈ ನಾಲ್ಕು ಕಾಳು ಹತ್ತೀಬೀಜ ಸಾಕು"—ವಾಸು ಸರಳೆಯ ಜಾಣ್ಮೆಯನ್ನು ಮೆಚ್ಚಿಕೊಂಡ.

"ನನ್ನ ಕೆಲಸವೆಂದರೆ ನಿಮಗೆ ಅಪಹಾಸ್ಯ"—ವಾಸುವಿನ ಟೀಕೆ ಕೇಳಿ ಸರಳೆಗೆ ದುಃಖವಾಯಿತು.

"ಹಾಗಲ್ಲ ನನ್ನ ಸಾಮಾನುಗಳೆಲ್ಲ ಕೆಲಸಕ್ಕೆ ಬಾರದವು ಎಂದೆಯಲ್ಲಾ ಅದಕ್ಕೆ ನೀನು ಅಡಿಗೆ ಮನೆಯಲ್ಲಿ ಕೂಡಿಟ್ಟಿರುವ ಸಾಮಾನು ಎಂತಹದು ಎಂದು ತೋರಿಸಿದೆ."

"ನನ್ನ ಕಂಡರೆ ನಿಮಗೆ ಆಗೋಲ್ಲ"—ಸರಳೆ ಬಿಕ್ಕಿದಳು.

"ನೀನು ಕೂಡಿ ಹಾಕಿರುವ ಸಾಮಾನು ಕಂಡರೆ ಆಗೋದಿಲ್ಲ. ಕುಂಬಳಕಾಯಿ ಬೀಜಗಳು, ಹತ್ತೀಕಾಳು, ಮಾವಿನಓಟೆ ಇವೆಲ್ಲಾ ಯಾಕೆ...."

ಸರಳೆಯು ಕಣ್ಣಿನಲ್ಲಿ ನೀರಾಡತೊಡಗಿದ್ದನ್ನು ನೋಡಿ ವಾಸು ಮಾತು ಬಹಳ ಮುಂದುವರಿಯಿತು ಎಂದುಕೊಂಡ.

ಸರಳೆಗೆ ಮಾತಿಗಿಂತಲೂ ಮುದ್ದಿನ ಸಮಾಧಾನವೇ ಹೆಚ್ಚು ಹಿಡಿಸುತ್ತಿತ್ತು. ಮನೆಯಲ್ಲಿರುವಾಗ ಅವಳು ವಾಸುವಿಗೆ ತೊಂದರೆಯಾಗದಿರಲಿ ಎಂದು ಕನ್ನಡಕ ಹಾಕುತ್ತಿರಲಿಲ್ಲ. ವಾಸು ನಿರಾತಂಕವಾಗಿ ಅವಳನ್ನು ಸಮಾಧಾನಗೊಳಿಸಿದ.

ಗಂಡ, ಹೆಂಡತಿ ಸಧ್ಯಕ್ಕೆ ರಾಜಿಯಾದರು.

ಮಾರನೆಯ ದಿನ ಅತ್ತೆ, ಮಾವ ಬರುತ್ತಿದ್ದುದರಿಂದ ಸರಳೆ ಸಡಗರ ಪಟ್ಟಳು ಅತ್ತೆ ಬಹಳ ಮಡಿ ಮಾಡುತ್ತಿದ್ದುದರಿಂದ ಸರಳೆ ಮಾಡಿದ ಅಡಿಗೆಯನ್ನು ಊಟ ಮಾಡುತ್ತಿರಲಿಲ್ಲ. ಅದೂ ಒಂದು ವಿಧಕ್ಕೆ ಒಳ್ಳೆಯದೇ ಆಯಿತೆಂದು ಸರಳೆ ಭಾವಿಸಿದಳು. ಮಡಿ ಅಡ್ಡ ಬರುತ್ತಿದ್ದುದರಿಂದ ಅಡಿಗೆ, ತಿಂಡಿಯ ಜವಾಬ್ದಾರಿಯಿಂದ ಸರಳೆ ಸುಲಭವಾಗಿ ಕಳಚಿಕೊಂಡಂತಾಯಿತು

ತಮ್ಮಯ್ಯನವರು, ರಂಗಮ್ಮ ಗಂಟು ಮೂಟೆ ಸಮೇತರಾಗಿ ಮಗನ ಮನೆಗೆ ಬಂದಿಳಿದಾಗ ವಾಸು ಕಾಲೇಜಿಗೆ ಹೊರಟು ಹೋಗಿದ್ದ. ಸರಳೆಯೇ ನಗುಮುಖದಿಂದ ಬಾಗಿಲಿನಲ್ಲಿ ನಿಂತು ಅತ್ತೆ, ಮಾವನನ್ನು ಸ್ವಾಗತಿಸಿದಳು. ಹಳ್ಳಿಯಿಂದ ಹೊತ್ತು ತಂದಿದ್ದ ತೆಂಗಿನಕಾಯಿ, ಬಾಳೆಗೊನೆಗಳು. ಕಾಳುಗಳ ಮೂಟೆಯನ್ನು ತಮ್ಮಯ್ಯನವರೂ, ಸರಳೆಯೂ ಒಳಗೆ ತೆಗೆದಿರಿಸಿದರು.

ರಂಗಮ್ಮ ಚಾಪೆಯ ಮೇಲೆ ಕುಳಿತು ಒಂದು ಗಳಿಗೆ ಸುಧಾರಿಸಿಕೊಂಡರು. ನಂತರ ಬಿಸಿನೀರಿನಲ್ಲಿ ಸ್ನಾನಮಾಡಿ ತಮ್ಮ ಅಡಿಗೆಯನ್ನು ಮುಗಿಸಿ ಊಟ ಮಾಡಿದರು. ತಮ್ಮಯ್ಯನವರು ಹೆಂಡತಿಯಷ್ಟು ಮಡಿ ಮಾಡುತ್ತಿರಲಿಲ್ಲವಾದುದರಿಂದ ಸರಳೆ ಮಾಡಿದ ಅಡಿಗೆಯನ್ನೇ ಊಟ ಮಾಡಿದರು.

ರಂಗಮ್ಮ ಊಟ ಮುಗಿಸಿ ಚಾಪೆಯ ಮೇಲೊಂದು ಮಣೆಯನ್ನಿರಿಸಿ ಮಣೆಯನ್ನೇ ದಿಂಬಿನಂತೆ ಉಪಯೋಗಿಸಿ ಉರುಳಿಕೊಂಡರು.

ಅರೆಗಳಿಗೆ ನಿದ್ರೆ ಮಾಡಲೂ ಮಂಚ, ಮೆತ್ತೆ, ದಿಂಬು, ರಗ್ಗಿಲ್ಲದಿದ್ದರೆ ಸರಳೆಗೆ ನಿದ್ದೆಯೇ ಬರುತ್ತಿರಲಿಲ್ಲ. ಆಗಾಗ್ಗೆ ನೊಣ ಮುಖದ ಮೇಲೆ ಕುಳಿತು ನಿದ್ರಾಭಂಗ ಮಾಡುತ್ತದೆಯೆಂದು ಸರಳೆ ಬೆಳಗಿನ ಸಮಯದಲ್ಲೂ ಪರದೆಯನ್ನು ಚಪ್ಪರದ ಮೇಲಿನಿಂದ ಕೆಳಗಿಳಿಸಿದುದುಂಟು.

ಸರಳೆ ಅಲ್ಲಿ ಕುಳಿತಿದ್ದಂತೆಯೇ, ಮಾತನಾಡುತ್ತಲೇ ರಂಗಮ್ಮ ನಿದ್ದೆ ಹೋದರು. ಸರಳೆಗೂ ಮಧ್ಯಾಹ್ನದ ತಿಂಡಿಯ ತಾಪತ್ರಯವಿರಲಿಲ್ಲ.

ರಂಗಮ್ಮ ಊರಿನಿಂದ ನಾಲ್ಕು ದಿನಗಳಿಗಾಗುವಷ್ಟು ರವೆಉಂಡೆ, ಚಕ್ಕುಲಿ, ಓಂಪುಡಿ ಮುಂತಾದವುಗಳನ್ನು ತಂದಿದ್ದರು. ಆದುದರಿಂದ ಸರಳೆ ನಿರಾತಂಕವಾಗಿ ತನ್ನ ರೂಮಿಗೆ ಬಂದು ಮಲಗಿಕೊಂಡಳು. ಹಾಸಿಗೆಯನ್ನು ಸುತ್ತಿಡುವ ತಾಪತ್ರಯವನ್ನೇ ಅವಳು ತೆಗೆದುಕೊಳ್ಳುತ್ತಿರಲಿಲ್ಲವಾದ್ದರಿಂದ ಮಲಗುವಾಗಲೆಲ್ಲಾ ಅದನ್ನು ಹಾಸುವ ತಾಪತ್ರಯವೂ ಸರಳೆಗಿರಲಿಲ್ಲ.

ಅಡಿಗೆಯ ಮನೆಯ ಜವಾಬ್ದಾರಿ ತಪ್ಪಿದ್ದರಿಂದ ಸರಳೆ ನಿರಾತಂಕವಾಗಿ ಮಲಗಿದಳು.

ವಾಸುವಿನ ದನಿ ಕೇಳಿದ ಕೂಡಲೇ ರಂಗಮ್ಮನಿಗೆ ಎಚ್ಚರವಾಯಿತು. ತಂದೆಯೂ ಎದ್ದು ಮಗನ ಬಳಿಗೆ ಬಂದರು.

"ಏನಪ್ಪಾ ವಾಸು ಹುಷಾರಾಗಿದೀಯಾ?"

"ಹೂಂ, ಎಲ್ಲಿ ಸರಳಾ?"

"ಮಲಗಿದಾಳೆ, ಮಲಗಿರಲಿ ಬಿಡು"—ಎಂದರು ರಂಗಮ್ಮ.

ಸರಳೆ ನಿದ್ದೆ ಮುಗಿಸಿ ಬರುವಷ್ಟರಲ್ಲಿ ರಂಗಮ್ಮ ಮಗನಿಗೆ ಕಾಫಿ, ತಿಂಡಿ ಕೊಟ್ಟಿದ್ದರು. ಗಂಡನೊಡನೆ ಕಾಫಿ ಕುಡಿಯುತ್ತಾ ಸರಳೆ ಔಪಚಾರಿಕವಾಗಿ

"ನಾನು ಎದ್ದು ಕಾಫಿ ಮಾಡ್ತಿದ್ದೆ"—ಎಂದಳು.

"ಯಾರು ಮಾಡಿದರೇನಂತೆ?"—ಎಂದರು ಅತ್ತೆ

ತಮ್ಮಯ್ಯನವರು "ಎಂದು ಹೊರಡುವುದೆಂದು ನಿಶ್ಚಯ ಮಾಡಿದೀಯಾ ವಾಸೂ?"—ಎಂದರು.

ವಾಸು ಅರ್ಥಗರ್ಭಿತವಾಗಿ ಸರಳೆಯ ಕಡೆ ನೋಡಿದ.

ಸರಳೆ ಮಾವನವರೆದುರಿಗೆ ಏನು ಹೇಳಿಯಾಳು? ಸೊಸೆಯ ಕಷ್ಟ ಅತ್ತೆಗೆ ಅರ್ಥವಾಯಿತು. ಅವರು ನಸುನಕ್ಕು

"ಹೂಂ, ಅಡ್ಡಿ ಆತಂಕವೆಲ್ಲಾ ಕಳೆದುಕೊಂಡು ಹೊರಡುತ್ತಾರೆಂದು ತೋರುತ್ತದೆ. ಅಲ್ಲವೇ ಸರಳಾ?" ಎಂದರು.

"ಹಾಗೆಂದು ನಿಶ್ಚಯಿಸಿದ್ದೇವೆ" ಸರಳಾ ಮೆಲ್ಲನೆ ನುಡಿದಳು.

"ಬೇಗ ಯಾತ್ರೆ ಮುಗಿಸಿ ಬಂದುಬಿಡೀಪ್ಪಾ. ನಾವು ಹೀಗೆ ಬಿಟ್ಟು ಬಹಳ ದಿನ ಇರಲಾರೆವು. ನೀವು ಬೇಗ ಬಂದಷ್ಟೂ ನಮಗೇ ಅನುಕೂಲ. ನೀವು ಬಂದ ಮಾರನೆಯ ದಿನವೇ ನಾವು ಹೊರಟುಬಿಡುತ್ತೇವೆ"

"ಯಾತ್ರೆಯೇನು ಬಂತು? ವಿಹಾರಾಂತ ನಾವು ಹೊರಟಿರುವುದು.

ಕಾಶಿಯಲ್ಲಿ ಗಂಗಾನದಿಯಲ್ಲಿ ಸ್ನಾನ ಮಾಡದೇ ಬಂದರೂ ಆಗ್ರಾದಲ್ಲಿರುವ ತಾಜ್‌ಮಹಲ್ ನೋಡದೆ ಎಂದಿಗೂ ಬರುವುದಿಲ್ಲ"—ವಾಸು ತಂದೆಯನ್ನು ರೇಗಿಸಿದ.

"ನೀನು ಶುದ್ಧ ನಾಸ್ತಿಕನಾಗಿ ಹೋದೆ"—ತಮ್ಮಯ್ಯ ರೇಗಿದರು.

"ಸರಳಾ, ಸಂಗಮದಲ್ಲಿ ವೇಣಿದಾನ ಮಾಡಿದರೆ ಮುತ್ತೈದೆತನ ಸ್ಥಿರವಂತೆ. ಅಲಹಾಬಾದಿನಲ್ಲಿ ವೇಣಿದಾನ ಮಾಡದೇ ಬರಬೇಡ"—ಎಂದರು ರಂಗಮ್ಮ.

"ಹಾಗೆಂದರೆ?"

ಅಲಹಾಬಾದಿನಲ್ಲಿ ಬಟ್ಟೆಯ ಗಿರಣಿಗಳಿವೆ, ನೆಹರೂ ಮನೆಯಾಗಿದ್ದ ಆನಂದಭವನವಿದೆ, ನದಿಗಳ ಸಂಗಮವಿದೆ. ಇಷ್ಟು ಮಾತ್ರ ಸರಳೆಗೆ ಗೊತ್ತು. ವೇಣಿದಾನವೆಂದರೇನೋ ಯಾರಿಗೆ ಗೊತ್ತು?

"ಹಾಗೆಂದರೆ?"—ಎಂದಳು ಸರಳಾ.

ತನಗೆ ತಿಳಿಯದ ವಿಷಯವನ್ನು ಅವಳು ಎಂದೂ ತಿಳಿದವಳಂತೆ ನಟಿಸುತ್ತಿರಲಿಲ್ಲ.

"ಸಂಗಮದಲ್ಲಿ ಮುತ್ತೈದೆ ಜಡೆಯ ಒಂದು ಹಿಡಿಯಷ್ಟು ಉದ್ದದ ಕೂದಲನ್ನು ಅವಳ ಗಂಡನಿಂದ ಕತ್ತರಿಸಿ ಸಂಗಮದ ನೀರಿನಲ್ಲಿ ಮೊರದ ಜೊತೆ ಸನೋತ ದಾನ ಮಾಡಿಸಿದರೆ ಪುಣ್ಯವಂತೆ"—ರಂಗಮ್ಮ ವಿವರಿಸಿದರು.

"ಒಂದು ಹಿಡಿ ಕೂದಲು ಗಂಗಾನದಿಗೆ ದಾನ ಮಾಡಿಬಿಟ್ಟರೆ ಸರಳೆಗೆ ಉಳಿಯುವುದೇನು?" ಎಂದ ವಾಸು.

ಸರಳೆಯ ಮೋಟು ಜಡೆಯನ್ನು ಹಾಸ್ಯ ಮಾಡುವುದೆಂದರೆ ವಾಸುವಿಗೆ ಎಲ್ಲಿಲ್ಲದ ಪ್ರೀತಿ.

ಸರಳೆ ವಾಸುವನ್ನು ನುಂಗುವಂತೆ ನೋಡಿದಳು.

"ಜಡೆ ಎಂದರೆ ನಮ್ಮ ಅರುಂಧತಿಯ ಜಡೆ. ನಿಂತಿದ್ದರೂ ನೆಲದ ಮೇಲೆ ಜಡೆಯ ತುದಿ ಓಡಾಡುತ್ತದೆ"—ರಂಗಮ್ಮ ಮೊಮ್ಮಗಳನ್ನು ಹೊಗಳಿಕೊಂಡರು. ಸರಳೆಗೆ ಹೊಟ್ಟೆಯಲ್ಲಿ ಮೆಣಸಿನ ಕಾಯನ್ನು ಕಿವುಚಿದಂತಾಯಿತು.

"ನಮ್ಮ ಸರಳೆಗೂ ಜಡೆ ನೆಲಕ್ಕೆ ತಗಲುತ್ತದೆ. ಆದರೆ ಒಂದು ವ್ಯತ್ಯಾಸ. ಸರಳೆ ನೆಲದ ಮೇಲೆ ಅಂಗಾತನಾಗಿ ಮಲಗಿದಾಗ ಅವಳ ಜಡೆಯೂ ನೆಲಕ್ಕೆ ತಗುಲೇ ತಗಲುತ್ತದೆ."

ವಾಸುವಿನ ಟೀಕೆಯಿದು.

ತಮ್ಮಯ್ಯ, ರಂಗಮ್ಮ ಮನಸಾರೆ ನಕ್ಕರು.

"ಸಂಜೆ ಅರುಂಧತಿ, ಸರೋಜನ್ನ ನೋಡಿಕೊಂಡು ಬರಬೇಕು. ಬರ್ತೀಯಾ?"—ಎಂದರು ರಂಗಮ್ಮ ಸರಳೆಗೆ.

ಅದೇಕೋ ಸರಳೆಗೆ ಅರುಂಧತಿಯನ್ನು ಕಂಡರಾಗುತ್ತಿರಲಿಲ್ಲ.

"ನನಗೆ ಬೇರೆ ಕೆಲಸವಿದೆ"—ಎಂದಳು ಸರಳಾ.

"ನಾನು ಬರ್ತೀನಮ್ಮ ಜೊತೆಗೆ" ಎಂದ ವಾಸು.

ಸರಳೆಗೆ ತಳಮಳವಾಯಿತು. ಸಂಜೆ ವಾಸು, ತಮ್ಮಯ್ಯ ರಂಗಮ್ಮನವರು ಮಗಳ ಮನೆಗೆ ಹೊರಟರು. ವಾಸು ವಿಶೇಷ ಶ್ರದ್ಧೆಯಿಂದ ಅಲಂಕರಿಸಿಕೊಂಡ ಸರಳೆಯೂ ಸಡಗರದಿಂದ ಶೃಂಗಾರ ಮಾಡಿಕೊಂಡಳು. ನವಿಲು ಬಣ್ಣದ ಜಾರ್ಜೆಟ್ ಉಟ್ಟು ಅವಳು ಚಿರತೆಯ ಚರ್ಮದಂತಿದ್ದ ರವಿಕೆ ತೊಟ್ಟಳು. ಬೀಸಣಿಗೆಯಾಕಾರದಲ್ಲಿ ಹೆರಳು ಹಾಕಿಕೊಂಡು ಹೂವು ಮುಡಿದಳು.

ಹೆಂಡತಿಯ ಸಂಭ್ರಮ ಕಂಡು ವಾಸು ಕೇಳಿದ

"ನೀನೂ ಬರ್ತೀಯೇನು ಅಕ್ಕನ ಮನೆಗೆ?"

"ಇಲ್ಲ. ಸಂಜೆ ರಾಜಗೋಪಾಲ ಬರ್ತೀನೀಂತ ಲೋಕಲ್ ಕಾರ್ಡು ಹಾಕಿದ್ದ...."

ವಾಸುವಿನ ಉತ್ಸಾಹವೆಲ್ಲ ಸರ್ರನೆ ಇಳಿದುಹೋಯಿತು. ಅಕ್ಕನ ಮನೆಗೆ ಹೋಗುವ ಕಾರ್ಯಕ್ರಮವನ್ನು ರದ್ದು ಮಾಡಿಬಿಡಲೇ ಎನಿಸಿತು ವಾಸುವಿಗೆ. ಆದರೆ ಹೊರಟಿದ್ದಾಗಿದೆ. ಇನ್ನು ನಿಲ್ಲುವುದು ಖಂಡಿತ ಚೆನ್ನಾಗಿರುವುದಿಲ್ಲ.

"ಅದೇನು ಬರ್ತಾನೆ?"—ಎಂದ ವಾಸು.

"ನನಗೇನು ಗೊತ್ತು? ಅವನು ಬಂದ ಮೇಲೆ ಗೊತ್ತು."

"ಸರಿ"—ಎಂದು ಮಾತು ಮುಗಿಸಿದ ವಾಸು-ಮನಸ್ಸಿನ ತುಂಬ ಅಸಮಾಧಾನ ತುಂಬಿಕೊಂಡು.

"ಅದಕ್ಕೇ ಇಷ್ಟೊಂದು ಅಲಂಕಾರ ಜೋರು"—ಎಂದ ವಾಸು ನಂಜಿನ ದನಿಯಲ್ಲಿ

ಸರಳಾ ಕಿರುನಗೆ ಬೀರಿದಳು. ಮಾತನಾಡಲಿಲ್ಲ.

ವಾಸು ಒಲ್ಲದ ಮನಸ್ಸಿನಿಂದ ತಂದೆ ತಾಯಿಯೊಡನೆ ಹೊರಟ. ಸರಳಾ

ವಾಸುವಿಗೆ ಉಪಚಾರ ಹೇಳಿದಳು

"ನಿಧಾನವಾಗಿ ಬನ್ನಿ, ಆತುರವೇನಿಲ್ಲ."

ವಾಸು ಮುಖವನ್ನು ತೆಂಗಿನಕಾಯಿಯ ಗಾತ್ರ ಮಾಡಿಕೊಂಡ.

ಎಲ್ಲರೂ ಹೋದ ಮೇಲೆ ಸರಳೆ ರೇಡಿಯೋ ಟ್ಯೂನ್‌ಮಾಡಿ 'ವಿವಿಧ ಭಾರತಿ' ಯಿಂದ ಬರುವ ಸಂಗೀತವನ್ನಾಲಿಸುತ್ತಾ ಕುಳಿತುಕೊಂಡಳು. ಹೊರಗೆ ಕಾರಿನ ಸದ್ದಾಯಿತು. ಸರಳಾ ಬಾಗಿಲು ತೆರೆದಳು.

ರಾಜಗೋಪಾಲ ಹೊಸಲಿನ ಆಚೆ ನಿಂತಿದ್ದ.

"ಒಳಗೆ ಬಾ ರಾಜೂ"—ಎಂದು ಸ್ವಾಗತಿಸಿದಳು ಸರಳಾ.

"ಇದೇನು ಮನೆಯಲ್ಲಿ ಯಾರೂ ಇರುವ ಹಾಗಿಲ್ಲ?"

"ಎಲ್ಲರೂ ನಮ್ಮ ಅತ್ತಿಗೆಯ ಮನೆಗೆ ಹೋದರು."

"ಎಲ್ಲರೂ ಎಂದರೆ?"

"ನಾವು ಊರಲ್ಲಿಲ್ಲದ ಸಮಯದಲ್ಲಿ ಮನೆ ನೋಡಿಕೊಳ್ಳಲೆಂದು ಅತ್ತೆ, ಮಾವ ಬಂದಿದ್ದಾರೆ."

"ಓ"—ಎಂದ ರಾಜಗೋಪಾಲ.

ಸರಳೆ ಕಾಫಿ ತಿಂಡಿ ಕೊಟ್ಟು ಅವನನ್ನು ಸತ್ಕರಿಸಿದಳು. ಅತ್ತೆಯ ಯೋಗಕ್ಷೇಮ ವಿಚಾರಿಸಿದಳು.

"ನೀವು ಯಾವತ್ತು ಹೊರಡ್ತೀರಿ ತಿಳಿದುಕೊಂಡು ಬಾ ಅಂತ ಅಮ್ಮ ಕಳಿಸಿದಾಳೆ. ಯಾವತ್ತು ಹೊರಡ್ತೀರಿ?"

"ಇನ್ನೂ ನಿಶ್ಚಯವಾಗಿಲ್ಲ. ಯಾವುದೂ ಒಂದು ವಾರದಲ್ಲೇ ಸಿರ್ಧರ ವಾಗುತ್ತದೆ."

"ನೀವು ಇಷ್ಟು ಹೊತ್ತಿಗಾಗಲೇ ಹೊರಟು ಬಿಡಬೇಕಿತ್ತಲ್ಲ? ಯಾಕೆ ಇಷ್ಟು ತಡಮಾಡುತ್ತಿದೀರಿ?"

"ಹೂಂ....ಏನೋ ತಡವಾಗುತ್ತಿದೆ"—ಎಂದಳು ಸರಳೆ—ತುಟಿ ಕಚ್ಚುತ್ತಾ.

"ಅಮ್ಮ ಏನೇನೋ ಹರಕೆ ಮಾಡಿಕೊಳ್ಳುತ್ತಾಳಂತೆ. ಅವುಗಳಿಗೆ ಕಾಣಿಕೆ...."

"ಹರಕೆ ಯಾಕೆ? ಮಗನಿಗೆ ಬೇಗ ಮದುವೆಯಾಗಲೆಂದೇ?"

"ಹೌದು."

"ಹೌದು ರಾಜು ಅತ್ತೆಯ ಕಾಣಿಕೆಯೊಡನೆ ನಿನಗೆ ಬೇಗ ಮದುವೆ

ಯಾದರೆ ನಾನೂ ಕಾಣಿಕೆ ಕೊಡುತ್ತೇನೆ. ಇನ್ನೂ ಎಷ್ಟು ದಿನ ಹೀಗೆ ಇರುತ್ತೀಯ?"

"ನಾನು ಹೇಳುವ ಹುಡುಗಿಯೊಡನೆ ನನ್ನ ಮದುವೆ ಮಾಡಿಸುತ್ತೀಯಾ?"—ರಾಜಗೋಪಾಲ ಚೇಷ್ಟೆಯ ದನಿಯಲ್ಲಿ ಕೇಳಿದ.

"ಹೂಂ"- ಸರಳೆ ಎಲ್ಲಿಲ್ಲದ ಉತ್ಸಾಹದಿಂದ ಹೇಳಿದಳು.

"ನಾನು ಮದುವೆಯಾದರೆ ನಿನ್ನ ಮಗಳನ್ನು ಮಾತ್ರ "

ಸರಳಾ ಮೊದಲು ನಕ್ಕಳು. ನಂತರ ಪೆಚ್ಚುಮುಖ ಹಾಕಿಕೊಂಡಳು.

"ಏನು ಹೇಳ್ತೀಯ?"

"ನೀವಿನ್ನೂ ಅವಳಿಗಾಗಿ ಬಹಳ ದಿನ ಕಾಯಬೇಕಾಗುತ್ತದೆ."

"ಚಿಂತೆಯಿಲ್ಲ. ಕಾಯುತ್ತೇನೆ."

"ಅಷ್ಟರಲ್ಲಿ ನೀನು ಮುದುಕನಾಗಿ ಹೋಗಿರುತ್ತೀಯ."

"ಪರವಾಗಿಲ್ಲ. ಆಮೇಲೆ ನೀನು ಮುದುಕನಿಗೆ ಮಗಳನ್ನು ಕೊಡುವುದಿಲ್ಲ ಎನ್ನಬಾರದು."

ಸರಳಾ ವಿಷಯ ಬದಲಾಯಿಸಿದಳು.

"ಈಚೆಗೆ ಯಾವ ಚಿತ್ರಕ್ಕೆ ಹೋಗಿದ್ದೆ?"

"ಯಾವುದೂ ಇಲ್ಲ. ಸರಳಾ ನೀನು ನಿನ್ನ ಬರವಣಿಗೆ ನಿಲ್ಲಿಸಿಬಿಟ್ಟಿರುವೆಯೋ ಹೇಗೆ? ಹೊಸದಾಗಿ ಯಾವುದಾದರೂ ಕತೆ ಬರೆಯುತ್ತಿದೀಯಾ?"

"ಬಹುಶಃ ಹೊಸಕೃತಿ ಪ್ರಾರಂಭ ಮಾಡಿದೀನಿ ಎಂದು ತೋರುತ್ತದೆ"

"ಏನು ಹೆಸರಿಟ್ಟಿದೀಯಾ?"

"ಕತೆ ಪೂರ್ತಿ ಬರೆದು ಮುಗಿಸಿಲ್ಲ. ಈಗಲೇ ಹೇಗೆ ಹೆಸರಿಡಲಿ?"

"ಬರೆದಾದ ಮೇಲೆ ನನಗೆ ತೋರಿಸುತ್ತೀಯಾ?"

"ಹೂಂ."

"ಈಗ ಎಷ್ಟು ಬರೆದಿದೀಯ?"

"ಇನ್ನೂ ಇದೇ ಪ್ರಾರಂಭ."

"ಕತೆ ಮುಗಿಯೋಕೆ ಇನ್ನೂ ಎಷ್ಟು ದಿನ ಬೇಕಾಗುತ್ತದೆ?"

"ಬಹುಶಃ ಏಳೆಂಟು ತಿಂಗಳು ಬೇಕಾಗಬಹುದೆಂದು ಕಾಣಿಸುತ್ತದೆ."

ರಾಜಗೋಪಾಲ ಸರಳೆಯನ್ನು ಪ್ರೋತ್ಸಾಹಿಸುವ ಧ್ವನಿಯಲ್ಲಿ "ತುಂಬಾ ಚೆನ್ನಾಗಿರಬೇಕು ಸರಳಾ"—ಎಂದ.

"ಅದನ್ನು ನಾನು ಹೇಗೆ ಹೇಳಲಿ? ನೀವೆಲ್ಲಾ ಹೇಳಬೇಕು. ಬರೆದ

ವಳು ನಾನಾದುದರಿಂದ ಅದು ಹೇಗಿದ್ದರೂ ನನಗೆ ಚೆನ್ನಾಗಿರುತ್ತದೆ.”

“ಅದು ನಿನ್ನ ಮಹಾಕೃತಿಯಾಗಬೇಕು.”

“ಅದರಲ್ಲಿ ಅಡ್ಡಿಯಿಲ್ಲವೆಂದು ಭರವಸೆ ಕೊಡುತ್ತೇನೆ. ಅತ್ತೆ ಹೇಗಿದಾರೆ?”

“ಅತ್ತೆ ಎನ್ನಬೇಡ. ನಿಮ್ಮಮ್ಮ ಎನ್ನು ಸಾಕು”—ಎಂದ ರಾಜಗೋಪಾಲ.

ಸರಳೆಯ ಮುಖ ಚಿಕ್ಕದಾಯಿತು. ರಾಜಗೋಪಾಲನಿಗೆ ಹೃದಯ ಹಿಂಡಿದ ಹಾಗಾಯಿತು.

“ಸರಳಾ ಬೇಜಾರುಪಟ್ಟುಕೋಬೇಡ. ನನ್ನ ದುಡುಕು ಮಾತು ನಿನಗೆ ಗೊತ್ತಲ್ಲ.”

ಸರಳಾ ಪ್ರಸನ್ನಳಾದಳು.

ರಾಜಗೋಪಾಲ ತನ್ನ ಉದ್ಯೋಗದಲ್ಲಿನ ಸ್ವಾರಸ್ಯವನ್ನು ಸರಳೆಗೆ ವಿವರಿಸಿದ. ಗಗನಸಖಿಯರ ಚೆಲ್ಲಾಟ ವರ್ಣಿಸಿದ.

ಸರಳಾ ಬಿದ್ದು ಬಿದ್ದು ನಕ್ಕಳು

ರಾಜಗೋಪಾಲ ಮನೆಗೆ ಹೊರಡಲು ನಿಂತವನು “ನಿನಗೆ ಹಣ್ಣು, ಹೂವು ತಂದಿದೀನಿ” ಎನ್ನುತ್ತಾ ಹೊರಗೆ ಹೋಗಿ ಕಾರಿನಿಂದ ಚೀಲವನ್ನು ತಂದು ಸರಳೆಯ ಕೈಗೆ ಕೊಟ್ಟ.

ಸರಳಾ ಅವನ ಎದುರಿನಲ್ಲಿಯೇ ಸೇಬಿನಹಣ್ಣನ್ನು ಕಚ್ಚಿ ತಿಂದಳು. ಹೂವನ್ನು ಮುಡಿದು ಬಾರಿಬಾರಿಗೂ ಕನ್ನಡಿಯನ್ನು ನೋಡಿಕೊಂಡಳು.

ತಾನು ಹಣ್ಣು, ಹೂವು ತಂದಿದ್ದು ಸಾರ್ಥಕವಾಯಿತೆಂದುಕೊಂಡ ರಾಜಗೋಪಾಲ.

“ನಾನಿನ್ನು ಬರಲಾ? ಯಾವುದಕ್ಕೂ ಹೊರಡುವ ದಿನ ಕುರಿತು ಕಾಗದ ಬರಿ.”

“ಆಗಲಿ. ಅವರೆಲ್ಲಾ ಬರುವವರೆವಿಗೆ ಇರು.”

“ಇಲ್ಲಮ್ಮ. ಹೋಗ್ತೀನಿ”—ಎಂದವನೇ ರಾಜಗೋಪಾಲ ಧಡಧಡನೆ ಹೊರಟುಹೋದ.

ರಾಜಗೋಪಾಲ ಹೋದ ಕಾಲುಗಂಟೆಯ ನಂತರ ರಂಗಪ್ಪ, ತಮ್ಮಯ್ಯ, ವಾಸು ಬಂದರು. ಅರುಂಧತಿ ತನ್ನ ಬಳಗವನ್ನು ಕಾರಿನಲ್ಲಿ ಕರೆದುತಂದಿದ್ದಳು.

ಸರಳಾ ಆಲಸ್ಯದಿಂದ ಕುರ್ಚಿಯನ್ನೊರಗಿ ಕುಳಿತಿದ್ದಳು ಅವಳ ಪಕ್ಕ

ಪಲ್ಲಿದ್ದ ಮೇಜಿನ ಮೇಲೆ ಹಣ್ಣುಗಳು, ಹೂವು ಕಂಗೊಳಿಸುತ್ತಿರುವುದನ್ನು ನೋಡಿ ವಾಸು ಹುಬ್ಬು ಗಂಟಿಕ್ಕಿದ.

ಅತ್ತೆ, ಮಾವ ಬಂದರೆಂಬ ಸೌಜನ್ಯದಿಂದ ಸರಳಾ ಎದ್ದು ನಿಂತಳು. ಅವಳ ನೋಟ ಅರುಂಧತಿಯ ಹೆರಳಿನ ಕಡೆ ಹೋಯಿತು.

ರಂಗಮ್ಮನವರ ಮಾತಿನಲ್ಲಿ ಸತ್ಯಾಂಶವಿಲ್ಲದೇ ಇರಲಿಲ್ಲ. ಅರುಂಧತಿ ಅಲಕ್ಷ್ಯದಿಂದ ಜಡೆ ಹೆಣೆದುಕೊಂಡಿದ್ದರೂ ಅವಳ ಕೂದಲಿನ ತುದಿ ನೆಲವನ್ನು ಚುಂಬಿಸುತ್ತಿತ್ತು.

ಸರಳಾ ಅಸೂಯೆಗೊಂಡಳು.

ಹೂವಿಲ್ಲದೇ ಬರಿದಾಗಿದ್ದ ಅವಳ ಹೆಳಲನ್ನು ನೋಡಿ ಸರಳಾ ಮೇಜಿನ ಮೇಲಿದ್ದ ಹೂಮಾಲೆಯನ್ನು ತೆಗೆದು ಅರುಂಧತಿಯ ಕೈಗೆ ಕೊಟ್ಟು "ಮುಡಿದುಕೊಳ್ಳಿ"—ಎಂದಳು.

"ನೀವೂ ತಗೊಳ್ಳಿ "

"ನಾನು ಬೇಕಾದಷ್ಟು ಮುಡಿದುಕೊಂಡಿದೀನಿ. ನೀವೂ ತಗೊಳ್ಳಿ ಅತ್ತೆ " ಅರುಂಧತಿ, ರಂಗಮ್ಮ ಹೂವು ಮುಡಿದುಕೊಂಡರು.

* * *

ಸರಳೆ, ವಾಸು ಪ್ರವಾಸ ಹೊರಡುವ ತಾರೀಖು ಮುಂದುವರಿಯಿತು. ತಮ್ಮ ಏರ್ಪಾಡೆಲ್ಲ ತಲೆಕೆಳಗಾಗುವುದೇನೋ ಎಂದು ವಾಸು ಗಾಬರಿಯಾದ. ಸರಳೆಗಂತೂ ಬೇಸರದಿಂದ ಅಳುವೇ ಬಂದುಬಿಟ್ಟಿತ್ತು.

ರಂಗಮ್ಮ, ತಮ್ಮಯ್ಯನವರಿಲ್ಲದ ದಿನ ಸರಳೆ ವಾಸುವಿನೊಡನೆ ಹೇಳಿದಳು

"ಏನೊಂದ್ರೆ, ಹೀಗಾಗಿ ಹೋಯಿತು. ಏನಾದರಾಗಲಿ, ದೇವರ ಮೇಲೆ ಭಾರ ಹಾಕಿ ಹೊರಟುಬಿಡೋಣವೇ?"

"ಊಹೂಂ "

"ಇದೇನು ಹೀಗೆ ಹೇಳ್ತೀರ? ನನಗೆಷ್ಟು ನಿರಾಶೆಯಾಗ್ತಿದೆ ಗೊತ್ತೇ? ಒಂದೇ ಮನಸ್ಸು ಮಾಡಿ ಹೊರಟುಬಿಡೋಣ ನಡೆಯಿರಿ."

ವಾಸು ಶಾಂತವಾದ ದನಿಯಲ್ಲಿ ಹೇಳಿದ

"ನಾನು ಹೇಳಿದ ಹಾಗೆ ಕೇಳ್ತೀಯಾ?"

"ಏನು?"

"ನಾಳೆಯು ದಿನ ಲೇಡಿ ಡಾಕ್ಟರ ಹತ್ತಿರ ಹೋಗೋಣ. ಅವರಿಂದ

ಪರೀಕ್ಷೆ ಮಾಡಿಸಿ, ಅವರು 'ಹೌದು' ಎಂದರೆ ಪ್ರವಾಸದ ವಿಷಯ ಕೇಳು. ಅವರು ಪ್ರಯಾಣ ಮಾಡಬಹುದು ಎಂದರೆ ಧೈರ್ಯಮಾಡಿ ಹೊರಟು ಬಿಡೋಣ."

"ಅವರು ಬೇಡವೆಂದರೆ?" — ಸರಳೆ ಕೇಳಿದಳು.

"ಪ್ರಯಾಣ ನಿಲ್ಲಿಸಿ ಬಿಡೋಣ."

"ಇಷ್ಟೆಲ್ಲಾ ಸಿದ್ಧತೆಗಳನ್ನು ಮಾಡಿ ನಿಲ್ಲಿಸುವುದೆಂದರೆ ತುಂಬಾ ಅನ್ಯಾಯ."

"ನಾನೇನು ಮಾಡಲಿ ಅದಕ್ಕೆ? ನಿನ್ನ ಮಗನಿಗೆ ಈಗಲೇ ಮುಹೂರ್ತ ವಾಗಿರುವಾಗ ನಾವೇನು ಮಾಡೋದು?"

ಇನ್ನು ವಾಸುವಿನೊಡನೆ ಚರ್ಚೆ ಮಾಡಿ ಪ್ರಯೋಜನವಿಲ್ಲವೆಂದು ಸರಳಾ ಸುಮ್ಮನಾದಳು.

ಮಾರನೆಯ ದಿನ ದಂಪತಿಗಳಿಬ್ಬರೂ ಆಸ್ಪತ್ರೆಗೆ ಹೊರಟರು. ಸರಳಾ ಪರಮ ಶ್ರದ್ಧೆಯಿಂದ ಅಲಂಕರಿಸಿಕೊಂಡಳು. ವಾಸು ವಿರಕ್ತಭಾವದಿಂದ ಹೆಂಡತಿಯ ಆಗಮನಕ್ಕಾಗಿ ಕಾದು ಹೊರಬಾಗಿಲಿನಲ್ಲಿ ನಿಂತಿದ್ದ.

ಮಗ, ಸೊಸೆ ಎಲ್ಲಿಗೆ ಹೊರಟಿರುವರೆಂದು ತಾಯಿ, ತಂದೆಗೆ ತಿಳಿದಿತ್ತು. ಆದರೂ ಅವರು ಹೊರಗೆ ಹೊರಟಿರುವಾಗ 'ಎಲ್ಲಿಗೆ' ಎಂದು ಕೇಳುವುದು ಸರಿಯಲ್ಲ ಎಂದು ಅವರು ಸುಮ್ಮನಾದರು.

ನಾಲ್ಕು ವರ್ಷಗಳ ನಂತರದ ಈ ಸಂದರ್ಭವನ್ನು ವಯಸ್ಸಾದ ತಾಯಿ, ತಂದೆ ತುದಿಗಾಲಿನಲ್ಲಿ ನಿಂತು ನಿರೀಕ್ಷಿಸುತ್ತಿದ್ದರು. ಸೊಸೆಯ ಲ್ಲಾದ ಬದಲಾವಣೆಯನ್ನು ಅತ್ತೆಯ ಅನುಭವದ ಕಣ್ಣು ಆಗಲೇ ಕಂಡಿತ್ತು.

ಹೆಂಡತಿಯ ಕೋಮಲವಾದ ಕಾಲುಗಳು ನೋಯಬಹುದೆಂದು ವಾಸು ಗಾಡಿ ಮಾಡಿದ. ಆಸ್ಪತ್ರೆಯ ಬಾಗಿಲಿನಲ್ಲಿ ಗಾಡಿ ನಿಂತಿತು

ಕಟ್ಟಡವನ್ನು ನೋಡಿ ವಾಸು, ಸರಳಾ ಒಬ್ಬರ ಮುಖ ನೋಡಿ ಮತ್ತೊಬ್ಬರು ನಕ್ಕರು. ಮಧುರವಾದ ನೆನಪುಗಳು ಹೃದಯದಲ್ಲಿ ತುಂಬಿದ್ದ ಮಂದಹಾಸವನ್ನು ಮುಖದ ಮೇಲೆ ಬೆಳಗುವಂತೆ ಮಾಡಿದವು.

ನಾಲ್ಕು ವರ್ಷಗಳ ಹಿಂದೆ ಇದೇ ಆಸ್ಪತ್ರೆಯಲ್ಲಿ ಮೊದಲನೆಯ ಸಲ ವಾಸು ಸರಳೆಯನ್ನು ಕಂಡಿದ್ದ.

"ಸರಳಾ, ನೆನಪಿದೆಯೋ?"—ಎಂದ ವಾಸು.

"ಹೇಗೆ ಮರೆಯಲು ಸಾಧ್ಯ?"—ಎಂದಳು ಸರಳೆ.

ಲೇಡಿ ಡಾಕ್ಟರು ಬರಲು ಕೊಂಚ ಸಮಯವಾಯಿತು. ಸರಳೆಯಂತೆಯೇ

ಅನೇಕ ಹೆಂಗಸರು ವೈದ್ಯರ ಆಗಮನಕ್ಕಾಗಿ ಕಾದು ಕುಳಿತಿದ್ದರು. ಐದು ನಿಮಿಷವಾದರೂ ವೈದ್ಯರು ಬಾರದಿದ್ದುದನ್ನು ನೋಡಿ ಸರಳಾ ವಾಸುವಿನ ಕಡೆ ತಿರುಗಿ

"ಅಯ್ಯೋ ಬೇಜಾರೂಂದ್ರೆ ಕಾಯೋಕೆ"—ಎಂದಳು.

"ಏನು ಮಾಡೋದು?"—ಎಂದ ವಾಸು.

ಕಾಯುವುದೆಂದರೆ ಅವನಿಗೂ ಬೇಸರವೇ.

ಅರ್ಧ ಗಂಟೆಯ ನಂತರ ವೈದ್ಯರು ಗಡಿಬಿಡಿಯಿಂದ ಬಂದರು. ಸ್ವಲ್ಪ ಎತ್ತರವಾಗಿದ್ದ, ಸ್ಥೂಲಕಾಯದ ಹೆಂಗಸಾಕೆ. ಆಕೆ ಕೊರಳಿನಲ್ಲಿ ಸ್ಟೆತಾಸ್ಕೋಪಿನ ಹಾರ ಶೋಭಿಸುತ್ತಿತ್ತು. ಆಕೆ ಹಾಕಿಕೊಂಡಿದ್ದ ಶುಭ್ರವಾದ ಬಿಳಿಯ ನಿಲುವಂಗಿ ಆಕೆ ಪ್ರಮುಖ ವೈದ್ಯಳು ಎಂಬುದನ್ನು ಕೂಗಿ ಹೇಳುತ್ತಿತ್ತು.

ಆಕೆಯನ್ನು ಕಂಡ ಕೂಡಲೇ ಸರಳಾ ಎದ್ದು ನಿಂತು "ನಮಸ್ಕಾರ ಡಾಕ್ಟರ್"—ಎಂದಳು.

ಡಾಕ್ಟರು ಮಾತನಾಡದೇ ತಲೆ ಅಲುಗಿಸಿ ನಕ್ಕು ತಮ್ಮ ರೂಮಿಗೆ ಹೋದರು. ನರ್ಸೊಬ್ಬಳು ಬಂದು ಮೊದಲು ಬಂದಿದ್ದ ಪೇಷಂಟನ್ನು ಒಳಗೆ ಕರೆದು ಬಾಗಿಲು ಹಾಕಿಕೊಂಡಳು. ಉಳಿದವರೆಲ್ಲ ಮುಚ್ಚಿದ ಬಾಗಿಲಿನ ಕಡೆ ನೋಡತೊಡಗಿದರು.

ಸರಳೆಯ ಸರದಿ ಐದನೆಯದು.

ವೈದ್ಯರ ಕೋಣೆಯೊಳಗೆ ಹೋಗುವಾಗ ಅದೇಕೋ ಸರಳೆಯ ಎದೆ ಹೊಡೆದುಕೊಂಡಿತು.

ವೈದ್ಯರು ನಸುನಕ್ಕು ಸರಳೆಯನ್ನು ಕುರ್ಚಿಯ ಮೇಲೆ ಕೂರಲು ಹೇಳಿದರು.

"ಹೆಸರೇನಮ್ಮ?"

"ಸರಳಾ."

"ವಯಸ್ಸು?"

"ಇಪ್ಪತ್ತೆರಡು."

"ಮದುವೆಯಾಗಿ ಎಷ್ಟು ವರ್ಷವಾಯಿತು?"

"ನಾಲ್ಕು ವರ್ಷಗಳಾದವು."

"ಇದೇ ಮೊದಲನೆಯದೇ?"

"ಇಲ್ಲ. ಮದುವೆಯಾದ ವರ್ಷದಲ್ಲಿ ಒಂದೂವರೆ ತಿಂಗಳಾಗಿ ಹಾಗೇ...."

"ಹಾಗಾದರೆ ಇದು ಎರಡನೆಯದು. ಎಷ್ಟು ದಿನವಾಯಿತು?"

"ಒಂದೂವರೆ ತಿಂಗಳಾಯಿತು."

ಮಕ್ಕಳು ಮುಗ್ಗಿ ಹೇಳುವಂತೆ ವೈದ್ಯಳು ಪ್ರಶ್ನೆಗಳನ್ನು ಬಾಯಿಪಾಠ ಮಾಡಿ ಕೇಳುತ್ತಿದ್ದಂತೆ ತೋರಿತು.

ವೈದ್ಯರು ಸರಳೆಯ ತೋಳಿಗೆ ಬಟ್ಟೆ ಕಟ್ಟಿ ರಕ್ತದ ಒತ್ತಡವನ್ನು ಪರೀಕ್ಷಿಸಿದರು ಪಾದರಸ ನೂರಿಪ್ಪತ್ತರವರೆವಿಗೆ ಏರುವುದನ್ನು ಸರಳಾ ಗಮನಿಸಿದಳು. ಅವಳಿಂದ ಕುತೂಹಲವನ್ನು ತಡೆಯಲಾಗಲಿಲ್ಲ.

"ಸಾಧಾರಣವಾಗಿ ಆರೋಗ್ಯವಾಗಿರುವವರಿಗೆ ರಕ್ತದ ಒತ್ತಡ ಎಷ್ಟಿರಬೇಕು ಡಾಕ್ಟರ್?"

"ನೂರ ಮೂವತ್ತರವರೆವಿಗೆ ಚಿಂತೆಯಿಲ್ಲ."

ವೈದ್ಯರು ಸರಳೆಯನ್ನು ಪರೀಕ್ಷಿಸಿ ತೀರ್ಪಿತ್ತರು

"ಆರು ವಾರಗಳಾಗಿವೆ."

ತಾನು ಒಂದೂವರೆ ತಿಂಗಳು ಎಂದು ಹೇಳಿದುದನ್ನು ಕೊಂಚ ಬದಲಿಸಿ ಈಕೆ ಆರು ವಾರಗಳಾಗಿವೆಯೆಂದು ಹೇಳುತ್ತಿದ್ದಾರೆ. ಅಷ್ಟೇ ತಾನೆ?

"ಕೆಲವು ಮಾತ್ರೆಗಳನ್ನು ಬರೆದು ಕೊಡುತ್ತೇನೆ, ಕ್ರಮವಾಗಿ ತೆಗೆದುಕೊಳ್ಳಿ."

ವೈದ್ಯರು ಸಣ್ಣ ಚೀಟಿಯಲ್ಲಿ ಬರೆದುಕೊಟ್ಟರು.

"ಲ್ಯೂಟೋಸೈಕ್ಲಿನ್ ದಿನಕ್ಕೆ ಎಷ್ಟು ಮಾತ್ರೆ ತಗೋಬೇಕು ಡಾಕ್ಟರ್?"

"ದಿನಕ್ಕೆ ಒಂದು ಸಾಕು."

"ಅಬಿಕ್ಸೈಡ್?"

"ಅದೂ ಒಂದು ಸಾಕು. ಚೆನ್ನಾಗಿ ಹಸಿವಾಗಲಿ ಎಂದು ಅದನ್ನು ಬರೆದು ಕೊಟ್ಟಿದ್ದೇನೆ."

ಸರಳೆಗೆ ಹಸಿವಾಗಲು ಮಾತ್ರೆಯು ಅಗತ್ಯವಿರಲಿಲ್ಲ. ಅವಳಿಗೆ ಹಾಗೆಯೇ ಹಸಿವಾಗುತ್ತಿತ್ತು.

ತಾನು ಮುಖ್ಯವಾಗಿ ಕೇಳಬೇಕೆಂದಿದ್ದ ಪ್ರಶ್ನೆಯನ್ನು ಸರಳಾ ಕೇಳಿದಳು.

"ನಾವು ಉತ್ತರ ಇಂಡಿಯಾ ಕಡೆ ಸುತ್ತಾಡಿ ಬರೋಣವೆಂದುಕೊಂಡಿದೇವೆ. ಹೋಗಬಹುದೇ ಡಾಕ್ಟರ್?"

"ಬೇಡ. ಮೂರು ತಿಂಗಳಾಗುವವರೆವಿಗೆ ಗರ್ಭ ಕೊಂಚ ಅಸ್ಥಿರವಾಗಿರುತ್ತದೆ. ಎಲ್ಲೂ ಪ್ರಯಾಣ ಮಾಡಬೇಡಿ. ಹಿಂದೊಮ್ಮೆ ಕಹಿ ಅನುಭವವಾಗಿದೆಯಲ್ಲವೇ?"

"ಹೌದು."

"ಅಂದ ಹಾಗೆ ನೀವು ಎಲ್ಲಿದ್ದೀರಿ?"—ವೈದ್ಯರು ಕೇಳಿದರು.

ಸರಳೆ ತನ್ನ ವಿಳಾಸವನ್ನು ಕೊಟ್ಟಳು.

"ನಿಮ್ಮ ಮನೆಯಲ್ಲಿ ಯಾರು ಇದೀರಿ?"

ವೈದ್ಯಳು ಅಧಿಕಪ್ರಸಂಗಿ ಎನಿಸಿತು ಸರಳೆಗೆ.

"ನಾನು, ನಮ್ಮ ಯಜಮಾನರು, ಅತ್ತೆ, ಮಾವ."

"ನಿಮ್ಮ ಯಜಮಾನರು ಇಲ್ಲೇ ಇದಾರೆಯೇ?"

ಆತ ಇಲ್ಲಿಲ್ಲದೆ ಮತ್ತೆಲ್ಲಿಗೆ ಹೋಗುತ್ತಾರೆ ಎಂದುಕೊಂಡಳು ಸರಳೆ.

ಸರಳೆಯ ಮುಖದ ಮುಗ್ಧಭಾವ ನೋಡಿ ತಮ್ಮ ಮಾತಿನ ಅರ್ಥ ಸರಳೆಗಾಗಲಿಲ್ಲವೆಂದು ವೈದ್ಯರಿಗೆ ತಿಳಿಯಿತು.

ಅವರು ನಕ್ಕು ಸರಳೆಯ ಬೆನ್ನು ತಟ್ಟಿ ಹೇಳಿದರು

"ನಿಮ್ಮ ಮಗ ಬರುವವರೆವಿಗೂ ನಿಮ್ಮ ಗಂಡನ್ನ ಮಾತ್ರ ಒಂಟಿಯಾಗಿ ಉತ್ತರ ಇಂಡಿಯಾ ಕಡೆ ಕಳಿಸಿಬಿಡಿ."

"ಅಯ್ಯೋ, ಅವರಿಗೆ ಅಷ್ಟು ದಿನ ರಜ ಸಿಗೋಲ್ಲ ಡಾಕ್ಟರ್."

ಡಾಕ್ಟರು ಗಟ್ಟಿಯಾಗಿ ನಕ್ಕರು. ಅವರೊಡನೆ ನರ್ಸೂ ನಕ್ಕಳು.

ಆಗ ಸರಳೆಗೆ ಎಲ್ಲವೂ ಅರ್ಥವಾಯಿತು. ಅವಳ ಮುಖ ರಂಗೇರಚಿದಂತೆ ಕೆಂಪಗಾಯಿತು.

"ಸರಿ" – ಎಂದಳು ಸರಳಾ ಮೆಲ್ಲಗೆ.

"ಇನ್ನೊಂದು ತಿಂಗಳ ನಂತರ ಮತ್ತೆ ಬನ್ನಿ. ಅದುವರೆವಿಗೂ ಶ್ರಮದ ಕೆಲಸ ಮಾಡಬೇಡಿ. ಚೆನ್ನಾಗಿ ಊಟ ಮಾಡಿ ಹಣ್ಣು, ಹಾಲು ತಗೊಳ್ಳಿ. ತುಂಬಾ ನಿದ್ದೆ ಮಾಡಿ. ಯಾವ ಯೋಚನೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಸಂತೋಷವಾಗಿರಿ"—ಎನ್ನುತ್ತಾ ವೈದ್ಯರು ನರ್ಸಿನ ಕಡೆ ತಿರುಗಿ

"ಮುಂದಿನವರನ್ನು ಕರಿ"—ಎಂದರು.

ಸರಳೆ ಕೊಟ್ಟ ಹತ್ತು ರೂಪಾಯಿಯನ್ನು ಅರೆಯೊಳಗೆ ಸೇರಿಸಿ ಆಕೆ ಸರಳೆಯ ಕೈಗೆ ರಸೀತಿ ಕೊಟ್ಟರು.

"ನಮಸ್ಕಾರ"—ಎಂದು ಕೈಮುಗಿದು ಸರಳೆ ಹೊರಗೆ ಬಂದಳು.

ವಾಸು ಆಸ್ಪತ್ರೆಯ ಕಾಂಪೌಂಡಿನಲ್ಲಿದ್ದ ಗಾಡಿಯನ್ನು ಕರೆದ

"ಅಯ್ಯೋ, ಗಾಡಿ ಬೇಡಾಂದ್ರೆ. ತುಂಬಾ ಕುಲುಕುತ್ತದೆ ಮೂರು ತಿಂಗಳಾಗುವವರೆವಿಗೆ ಹುಷಾರಾಗಿರಿ ಎಂದು ಹೇಳಿದಾರೆ"–ಎಂದಳು ಸರಳಾ.

"ಹಾಗಾದರೆ ನಿಜಾನ್ನು."

"ಹೂಂ."

"ಪ್ರವಾಸದ ವಿಷಯ ಕೇಳಿದೆಯಾ?"

"ಎಲ್ಲಿಗೂ ಹೋಗಬಾರದಂತೆ. ಮನೆಯಲ್ಲೇ ವಿಶ್ರಾಂತಿ ತಗೋಬೇಕಂತೆ."

"ಸರಿ. ಈಗ ನಡೆದೇ ಹೋಗಬೇಕೆ?"

"ನನ್ನ ಕೈಲಿ ನಡೆಯೋಕಾಗೋದಿಲ್ಲ. ಮಾರ್ಕೆಟ್‌ವರೆವಿಗೆ ನಡೆದು ಅವರು ಹೇಳಿರುವ ಔಷಧಿ ತಗೊಂಡು, ಅಲ್ಲಿಂದ ಬಸ್ಸಿನಲ್ಲಿ ಮನೆಗೆ ಹೋಗೋಣ"—ಎಂದಳು ಸರಳಾ.

ಹೆಂಡತಿ ಒಂದು ಹೆಜ್ಜೆ ನಡೆಯುವುದೂ ವಾಸುವಿಗೆ ಸಮ್ಮತವಿಲ್ಲ. ಆವನು ಗಳಿಗೆ ಗಳಿಗೆಗೂ ಸರಳೆಯನ್ನು

"ಆಯಾಸವಾಗುವುದಿಲ್ಲವೇ ಸರಳಾ ನಡೆಯೋಕೆ?" ಎಂದು ಪ್ರಶ್ನಿಸುತ್ತಿದ್ದ.

"ಏನು ಮಾಡೋದು?"—ಎನ್ನುತ್ತಿದ್ದಳು ಸರಳಾ—ಅಪಾರ ಕಷ್ಟ ಅನುಭವಿಸುವವಳ ಹಾಗೆ.

ಮಾರ್ಕೆಟ್ಟಿನಲ್ಲಿ ವಾಸು ಹೆಂಡತಿಯ ಆರೈಕೆಗೆ ಆರಂಭಮಾಡಿದ.

"ಹಣ್ಣು ಹೇಗೆ, ಹೂವು ಒಂದು ಮಾರು ಕೊಡಿ.. "

ವಾಸುವಿನ ವ್ಯಾಪಾರ ಮುಗಿಯುವಂತೆಯೇ ಇರಲಿಲ್ಲ.

ಅವನು ಸೇಬು, ಕಿತ್ತಳೆ, ದ್ರಾಕ್ಷಿ ಹಣ್ಣುಗಳನ್ನು ಕಟ್ಟಿಸಿಕೊಂಡ. ಹೂವಿನ ಮಾಲೆಯನ್ನು ಸರಳೆ ಅಲ್ಲಿಯೇ ಜಡೆಗೆ ಏರಿಸಿದಳು.

"ಹೂವು ಭಾರವಾಗುವುದಿಲ್ಲವೇನೇ?"—ಎಂದ ವಾಸು.

"ಇರಲಿ ಬನ್ನಿ"—ಎಂದಳು ಸರಳಾ ಹುಸಿ ಮುನಿಸಿನಿಂದ.

ದಾರಿಯಲ್ಲಿ ಸಿಕ್ಕಿದ ಸೀರೆಯಂಗಡಿಯನ್ನು ನೋಡಿ ವಾಸು

"ಸರಳಾ, ಸೀರೆ ತಗೋತೀಯಾ?"—ಎಂದ.

"ಈಗಲೇ ಅಲ್ಲಾಂದ್ರೆ ಸೀರೆ ತಗೊಳ್ಳೋದು. ಅದಕ್ಕಿನ್ನೂ ಕಾಲವಿದೆ"

"ಚಿಂತೆಯಿಲ್ಲ. ಈಗೊಂದು ಸಾಧಾರಣವಾದುದು ತಗೋ."

ಸರಳೆಗೆ ಬಹಳ ಮುಂದಾಲೋಚನೆ.

"ಜೇಬಿನಲ್ಲಿ ದುಡ್ಡಿದೆಯೋ ನೋಡಿ"—ಎಂದಳು ಸರಳಾ.

ವಾಸು ಜೇಬನ್ನು ತಡಕಾಡಿ ಸಪ್ಪೆದನಿಯಲ್ಲಿ "ಇಲ್ಲ ಸರಳಾ. ಎರಡು ರೂಪಾಯಿ ಮಾತ್ರವಿದೆ"—ಎಂದ.

ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ಇಬ್ಬರೂ ಮನೆ ಸೇರಿ

ದರು. ರಂಗಮ್ಮನವರು ರುಚಿರುಚಿಯಾಗಿ ಹುಳಿತೊವ್ವೆ, ಮಜ್ಜಿಗೆ ಹುಳಿ ಮಾಡಿದ್ದರು.

ಸರಳಾ, ವಾಸು ಎರಡೆರಡು ಬಾರಿ ಕಲಸಿಕೊಂಡರು.

"ಅಮ್ಮಾ, ರುಚಿಯಾದ ಅಡಿಗೆ ತಿಂದು ಎಷ್ಟೋ ದಿನವಾಯಿತು" —ಎಂದ ವಾಸು

"ಯಾಕೋ, ಸರಳಾ ದಿವಿನಾಗಿ ಮಾಡುತ್ತಾಳೆ"—ಎಂದರಾಕೆ.

"ಹೂಂ. ಊಟಾನ ದಿವಿನಾಗಿ ಮಾಡ್ತಾಳೆ. ಅವಳು ಮಾಡಿದ ಅಡಿಗೆ ನೀನೊಂದು ದಿನ ತಿಂದು ನೋಡು. ಆಗ ನಿನ್ನ ಮಗ ಎಂತಹ ಶಿಕ್ಷೆ ಅನುಭವಿಸುತ್ತಿದ್ದಾನೆ ಎಂಬುದು ನಿನಗೇ ತಿಳಿಯುತ್ತದೆ."

"ಅವರು ಉತ್ಪ್ರೇಕ್ಷೆ ಮಾಡ್ತಿದಾರೆ ಅತ್ತೆ"—ಎಂದಳು ಸರಳಾ—ಮತ್ತೊಮ್ಮೆ ಮಜ್ಜಿಗೆ ಹುಳಿಯಲ್ಲಿ ಅನ್ನ ಕಲಸಿ

ಊಟ ಮಾಡಿ ವಾಸು ಹೊರಗೆ ಹೊರಟುಹೋದ. ರಂಗಮ್ಮನವರು ಊಟಕ್ಕೆ ಕುಳಿತರು. ಸರಳೆ ಎಲೆ, ಅಡಿಕೆ ಹಾಕಿಕೊಳ್ಳುತ್ತಾ ಅವರೆದುರಿಗೇ ಕುಳಿತಳು.

"ಡಾಕ್ಟರು ಏನಂದರು?"

ಸರಳೆ ಮೊದಲು ನಾಚಿದಳು.

"ಹೇಳು ಪರವಾಗಿಲ್ಲ."

"ಒಂದೂವರೆ ತಿಂಗಳಾಗಿದೆ ಎಂದರು."

"ಇನ್ನೇನು ಹೇಳಿದರು?"

"ಹೋದ ಸಲದ ಹಾಗಾಗಬಾರದು. ಮೂರು ತಿಂಗಳಾಗುವವರೆವಿಗೂ ತುಂಬಾ ಹುಷಾರಾಗಿರಬೇಕಂತೆ. ತುಂಬಾ ವಿಶ್ರಾಂತಿ ತಗೋಬೇಕಂತೆ. ಆಯಾಸ ಮಾಡಿಕೊಳ್ಳಬಾರದಂತೆ. ಚೆನ್ನಾಗಿ ಊಟಮಾಡಿ, ನಿದ್ದೆ ಮಾಡು....ಎಂದರು."

ರಂಗಮ್ಮನವರಿಗೆ ತುಂಬಾ ತೃಪ್ತಿಯಾಯಿತು.

ಈ ಸುದಿನಕ್ಕಾಗಿ ಹುಬಲಿಸುತ್ತಿದ್ದ ಆಕೆ ಹೇಳಿದರು

"ನೀನು ಏನೂ ಯೋಚನೆ ಮಾಡಬೇಡ ಸರಳಾ. ನೀನು ಸುಖವಾಗಿ ಮೈ ಕಳೆಯುವವರೆವಿಗೆ ನಿನ್ನ ನೋಡಿಕೊಳ್ಳುವ ಜವಾಬ್ದಾರಿ ನನ್ನದು."

"ನಿಮಗೆ ತುಂಬಾ ತೊಂದರೆ, ಕಷ್ಟ."

"ಮೊಮ್ಮಗನ್ನ ಎತ್ತಿಕೊಂಡ ಕೂಡಲೇ ಎಲ್ಲ ಮರೆತುಹೋಗುತ್ತದೆ. ಹೋಗಮ್ಮ, ಮಲಗಿಕೋ ಹೋಗು. ಅಲ್ಲಿಲ್ಲಾ ಸುತ್ತಾಡಿಕೊಂಡು ಬಂದಿದೀಯ, ತುಂಬಾ ಆಯಾಸವಾಗಿರಬಹುದು."

ಸರಳೆಗೆ ಆಯಾಸವೇನೋ ಆಗಿತ್ತು. ಆಕೆ ಹೆಚ್ಚು ಉಪಚಾರ ಹೇಳಿಸಿಕೊಳ್ಳದೆ ಬಂದು ಮಲಗಿದಳು.

ಸರಳಾ ನಾಲ್ಕು ಗಂಟೆಯ ವೇಳೆಗೆ ಎದ್ದಳು. ಅಡಿಗೆ ಮನೆಯಲ್ಲಿ ಅತ್ತೆ ಕಾಣಿಸಲಿಲ್ಲ. ಸರಳಾ ಮಾವನ ಬಳಿಗೆ ಬಂದು

"ಅತ್ತೆ ಎಲ್ಲಿ?"

"ವಾಸು ಜೊತೆ ಮಾರ್ಕೆಟ್ಟಿಗೆ ಹೋದಳು."

ಬೆಳಿಗ್ಗೆ ಮಾರ್ಕೆಟ್ಟಿಗೆ ಹೋಗಿ ಈಗಲೂ ಹೋಗುವಂತಹದು ಏನಿದೆಯಪ್ಪಾ?

ಅತ್ತೆ ಮಾಡಿರಿಸಿದ್ದ ತಿಂಡಿಯನ್ನು ತಿಂದು ಕಾಫಿ ಕುಡಿದು ಮಾರ್ಕೆಟ್ಟಿನಿಂದ ತಂದಿದ್ದ ಹಣ್ಣುಗಳನ್ನು ಮಾವನಿಗೆ ಕೊಟ್ಟು ತಾನೂ ತಿಂದಳು. ನುಂಗಬೇಕಾಗಿದ್ದ ಮಾತ್ರೆಗಳನ್ನು ಎಚ್ಚರಿಕೆಯಿಂದ ನುಂಗಿ ನೀರು ಕುಡಿದಳು

ಸಂಜೆ ಏಳು ಗಂಟೆಯ ವೇಳೆಗೆ ವಾಸು, ರಂಗಮ್ಮ, ಅರುಂಧತಿ ಕಾರಿನಲ್ಲಿ ಬಂದರು.

"ತಿಂಡಿ ತಗೊಂಡೆಯಾಮ್ಮಾ? ಅಡಿಗೆ ಮನೆಯಲ್ಲಿರಿಸಿದ್ದೆ."

ಊಟ, ತಿಂಡಿ ವಿಷಯಗಳಲ್ಲಿ ಸರಳೆಗೆ ಉಪಚಾರವೇ ಬೇಕಿರಲಿಲ್ಲ.

"ಹೂಂ."

"ಮಾತ್ರೆ ತಗೊಂಡೆಯಾ?"

"ಹೂಂ."

"ಹಣ್ಣು ತಿಂದೆಯಾ?" ರಂಗಮ್ಮ ಕೇಳಿದರು.

"ಹೂಂ."

ರಂಗಮ್ಮ ಅರುಂಧತಿಗೂ ಉಪಚಾರ ಮಾಡಿ ತಿಂಡಿ ಕೊಟ್ಟರು.

"ಸರಳಾ, ಎಲ್ಲಿಯಾದರೂ ತಿರುಗಾಡಿಕೊಂಡು ಬರೋಣ. ಬರುತ್ತೀಯಾ?" ವಾಸು ಕೇಳಿದ.

ಸರಳೆಗೆ ನಿದ್ದೆಯ ಮಬ್ಬು ಹರಿದಿರಲಿಲ್ಲ.

"ಊಹೂಂ"—ಎಂದಳು.

ವಾಸು ಅರುಂಧತಿಯೊಡನೆ ಮಾತನಾಡುತ್ತಾ ಹೊರಗೆ ಹೋದ.

ರಂಗಮ್ಮ ಸರಳೆಯನ್ನು ಅಡಿಗೆ ಮನೆಗೆ ಕರೆದೊಯ್ದು ಹೇಳಿದರು. "ಹೋದ ಸಲದ ಹಾಗಾಗಬಾರದೂಂತ ನಾನು ಕೆಲವು ಔಷಧಿ, ಬೇರು ತಂದಿದೀನಿ. ಅವುಗಳಿಂದ ಕಷಾಯ ತಯಾರುಮಾಡಿ ಕೊಡ್ತೀನಿ. ಮುತ್ತಿನಂತಹ ಮಗ ಕೈಗೆ ಬರ್ತಾನೆ."

"ಬೇಡಿ ಅತ್ತೆ. ಆಸ್ಪತ್ರೆಯಲ್ಲಿ ಅವಕ್ಕೆಲ್ಲಾ ಔಷಧಿ ಕೊಟ್ಟಿದ್ದಾರೆ."

"ಅದನ್ನೂ ತಗೋ. ನಾನು ಈ ಔಷಧಿ ಕೊಟ್ಟಿರುವವರಿಗೆ ಯಾರಿಗೂ ನಿರಾಶೆಯಾಗಿಲ್ಲ."

ಸರಳೆಗೂ ಈ ಬಾರಿ ನಿರಾಶೆಯಾಗುವುದು ಬೇಕಿರಲಿಲ್ಲ.

"ಆಗಲಿ"—ಎಂದು ಸರಳಾ ಒಪ್ಪಿಕೊಂಡಳು.

"ಏನು ಹೇಳಲೇ ಸರಳಾ, ಒಂದು ತೊಲ ಕೇಸರಿಗೆ ಇಪ್ಪತ್ತು ರೂಪಾಯಿಯಾಗಿ ಹೋಗಿದೆ. ಒಂದು ತೊಲ ತಂದೆ. "

"ಯಾಕೆ ಸಿಹಿ ತಿಂಡಿಗೇನು?"

"ಅಲ್ಲವೇ ಹುಚ್ಚಿ, ಇನ್ನು ಮೇಲೆ ನೀನು ಕಾಫಿಯನ್ನು ಬಿಟ್ಟುಬಿಡು. ಬೆಳಗ್ಗೆ ಕೇಸರಿ, ಯಾಲಕ್ಕಿ ಹಾಕಿಕೊಂಡು ಹಾಲು ಕುಡಿ. ಮಧ್ಯಾಹ್ನ ಬರಿಯ ಹಾಲು ಸಾಕು. ರಾತ್ರಿ ಓವಲ್ಟೀನ್ ಕುಡಿ"—ರಂಗಮ್ಮ ಮಮತೆಯಿಂದ ಹೇಳಿದರು.

ಸರಳಾ ಅವರು ಹೇಳಿದಂತೆ ನಡೆಯಲು ಒಪ್ಪಿಕೊಂಡಳು.

"ರಾತ್ರಿ ಮಲಗುವಾಗ ಬಾದಾಮಿ, ದ್ರಾಕ್ಷಿ, ಖರ್ಜೂರ ತಿಂದು ಓವಲ್ಟೀನ್ ಕುಡಿಯಬೇಕು."

ಸರಳಾ ನಗುತ್ತಾ "ಆಮೇಲೆ ನನ್ನ ಗತಿಯೇನು ಅತ್ತೆ"—ಎಂದಳು.

"ಯಾಕೆ?"

"ನಾನು ಗುಡಾಣವಾಗಿ ಬಿಡ್ತೀನಿ."

"ಚಿಂತೆಯಿಲ್ಲ. ಬಾದಾಮಿ ಬಲವರ್ಧಕ. ಖರ್ಜೂರ ರಕ್ತವರ್ಧಕ. ದ್ರಾಕ್ಷಿ—ರಕ್ತವನ್ನು ಶುದ್ಧಿ ಮಾಡುತ್ತದೆ...."

"ಕೇಸರಿ?"—ಎಂದಳು ಸರಳೆ.

"ಕೇಸರಿ ಗರ್ಭಕೋಶಕ್ಕೆ ಬಲ ಕೊಡುತ್ತದೆ."

"ನಿಮ್ಮ ಮೊಮ್ಮಗ ಪ್ರತ್ಯಕ್ಷನಾಗುವ ವೇಳೆಗೆ ನಿಮ್ಮ ಮಗನ ಪರ್ಸಿನ ಬಲ ಕಡಿಮೆಯಾಗುತ್ತದೆ."

"ಆದರೆ ಆಗಲೇಳು. ಯಾರ ಉಪಕಾರಕ್ಕೆ ಮಾಡುತ್ತಾನೆ" ಎಂದುರ

ರಂಗಮ್ಮ ತಾತ್ಸಾರದಿಂದ.

ಈ ಬಗೆಯ ಊಟ, ತಿಂಡಿ, ಉಪಚಾರ ಸರಳೆಗೆ ಅತ್ಯಂತ ಪ್ರಿಯವಾದುದು. ಯಾವಾಗಲೂ ಅಚ್ಚುಕಟ್ಟಾದ ಊಟ, ರುಚಿಯಾದ ತಿಂಡಿಗಳನ್ನು ಅವಳ ನಾಲಿಗೆ ಬಯಸುತ್ತಿತ್ತು. ಆದರೆ ತಾನಾಗಿ ಅವನ್ನು ಬಗೆಸಿ ಮಾಡಿಕೊಳ್ಳಲು ಅವಳಿಗೆ ಬೇಸರವೆನಿಸುತ್ತಿತ್ತು. ಬೇಸರಕ್ಕಿಂತಲೂ ಮತ್ತೊಂದು ಮುಖ್ಯವಾದ ಕಾರಣವೆಂದರೆ ಸರಳೆಗೆ ಸರಿಯಾಗಿ, ರುಚಿಯಾಗಿ ಅಡಿಗೆ, ತಿಂಡಿ ಮಾಡಲು ಬರುತ್ತಿರಲಿಲ್ಲ.

ಚಿಕ್ಕಮ್ಮನ ಮನೆಯಲ್ಲಿ ಬಹಳ ಮುದ್ದಿನಿಂದ ಬೆಳೆದವಳಾದುದರಿಂದ ಅವಳಿಗೆ ಯಾವ ಕೆಲಸ ಮಾಡಲೂ ಬರುತ್ತಿರಲಿಲ್ಲ. ಹೊತ್ತಿಗೆ ಸರಿಯಾಗಿ ಚಿಕ್ಕಮ್ಮ ಬಗೆ ಬಗೆಯಾಗಿ ಮಾಡಿ ಸರಳೆಗೆ ಹಾಕುತ್ತಿದ್ದರು. ಮಾಡಲು ಏನೂ ಕೆಲಸವಿಲ್ಲದಿದ್ದಾಗ ಸರಳಾ ಉಗ್ರಾಣಕ್ಕೆ ಹೋಗಿ ಡಬ್ಬಿಗಳಲ್ಲಿ ತುಂಬಿಸಿರುತ್ತಿದ್ದ ಹುರಿಗಾಳು, ಖಾರದ ಪುರಿ, ಖಾರದ ಕಡಲೇಕಾಯಿ ಮುಂತಾದವುಗಳನ್ನು ಧ್ವಂಸ ಮಾಡುವುದರಲ್ಲಿ ಕಾಲ ಕಳೆಯುತ್ತಿದ್ದಳು. ಒಂದು ಕಾಗದದಲ್ಲಿ ಕಡಲೇಕಾಯಿ ಹೆಚ್ಚಾಗಿರುವ ಹುರಿಗಾಳು ಹಾಕಿಕೊಂಡು ಬಲಗೈಲಿ ಒಂದೊಂದೇ ಕಾಳನ್ನು ಬಾಯಿಗೆಸೆದುಕೊಳ್ಳುತ್ತಾ ಎಡಗೈಲಿ ಒಂದು ಕಾದಂಬರಿ ಹಿಡಿದು ಕುಳಿತಳೆಂದರೆ ಸರಳೆಯ ಪ್ರಪಂಚ ಮುಗಿಯುತ್ತಿತ್ತು.

ಮದುವೆಯಾಗಿ ಅವಳು ವಾಸುವಿನ ಮನೆಗೆ ಬಂದಾಗ ವಾಸುವೇ ಹೆಂಡತಿಗೆ ಎಷ್ಟೋ ಅಡಿಗೆಗಳನ್ನು ಕಲಿಸಿದ್ದ.

ಒರಳುಕಲ್ಲಿಗೆ ಏನಾದರೂ ಹಾಕಿ ಗುಂಡುಕಲ್ಲಿನಲ್ಲಿ ಅವುಗಳನ್ನು ರುಬ್ಬುವುದಂತೂ ಸರಳೆಯ ದೃಷ್ಟಿಯಲ್ಲಿ ಅತ್ಯಂತ ಕಷ್ಟದಾಯಕವಾದ ಕೆಲಸ. ಅವಳು ಮೊದಲನೆಯ ಬಾರಿ ರುಬ್ಬುತ್ತಿದ್ದಾಗ ಎರಡು ಕೈಗಳಿಂದಲೂ ಗುಂಡುಕಲ್ಲನ್ನು ಒರಳಿನಿಂದ [illegible] ಎತ್ತಲು ಪ್ರಯತ್ನಿಸಿ ವಿಫಲಳಾಗಿ ಕೊನೆಗೆ ವಾಸುವಿನ ಸಹಾಯವನ್ನು ಕೋರಿದ್ದಳು. ಅಂತೂ ಗಂಡ, ಹೆಂಡತಿ ಇಬ್ಬರೂ ಸೇರಿ ಕಷ್ಟಪಟ್ಟು ಒರಳನ್ನೂ, ಕಲ್ಲನ್ನೂ ಬೇರೆ ಮಾಡಿದ್ದರು.

ಸರಳೆ ಅಚ್ಚರಿಯಿಂದ "ಅದಕ್ಕೆ ನನ್ನ ಚಿಕ್ಕಮ್ಮ ಬಿಡದೆ ದಿನವೂ ಚಿಕ್ಕಪ್ಪನನ್ನು ಗುಂಡುಕಲ್ಲು ಹೊಯ್ಯಿರಿ ಎಂದು ಕರೆಯುತ್ತಿದ್ದರು. ಅಲ್ವೆ ಹೇಳ್ರಿ?" ಎಂದಳು.

ಸಂಜೆಯೇ ಆ ರಹಸ್ಯ ಬೇಧಿಸಲು ಸರಳೆ ಚಿಕ್ಕಮ್ಮನ ಮನೆಗೆ ಬಂದಳು. ಗುಂಡುಕಲ್ಲಿನ ಕಥೆಯನ್ನು ಸರಳೆ ಚಿಕ್ಕಮ್ಮನಿಗೆ ತಿಳಿಸಿದಾಗ ಆಕೆ ಬಿದ್ದು ಬಿದ್ದು ನಕ್ಕರು.

"ಇಬ್ಬರೇ ಎತ್ತಿದಿರೋ ಅಥವಾ ಅಕ್ಕಪಕ್ಕದ ಮನೆಯವರನ್ನು ಯಾರ ನ್ನಾದರೂ ಕೂಗಿದಿರೋ?"-ಎಂದಾಕೆ ಸರಳೆಯನ್ನು ರೇಗಿಸಿದ್ದರು. ಕೊನೆಗೆ

"ಬಾ. ಹೇಗೆ ಎಂದು ತೋರಿಸುತ್ತೇನೆ" ಎನ್ನುತ್ತಾ ಸರಳೆಯನ್ನು ಅಡಿಗೆ ಮನೆಗೆ ಕರೆದೊಯ್ದು ಒರಳಿಗೆ ಕಲ್ಲನ್ನು ಹಾಕಿ ಅದನ್ನು ಸುಲಭ ವಾಗಿ ಆಡಿಸುತ್ತಾ ಹೊರಗೆ ತೆಗೆದು 'ಈಗ ನೀನು ತೆಗಿ' ಎಂದರು.

ನಾಲ್ಕಾರು ಬಾರಿ ಕಲ್ಲನ್ನು ತೆಗೆದ ನಂತರ ಸರಳೆ

"ಇಷ್ಟೇನೇ!" ಎಂದಿದ್ದಳು.

ಸರಳೆಯೇನೋ ಸುಲಭವಾಗಿ ಅಡಿಗೆ ಮಾಡಿ ಮುಗಿಸಿಬಿಡುತ್ತಿದ್ದಳು. ಆದರೆ ಅದನ್ನು ತಿಂದು ಜೀರ್ಣಿಸಿಕೊಳ್ಳುವುದು ವಾಸುವಿಗೆ ಕಷ್ಟವಾಗು ತ್ತಿತ್ತು. ಸರಳೆ 'ಅಡಿಗೆ ಹೇಗಿದೆ' ಎಂದು ಕೇಳಿದಾಗ ಸತ್ಯಸಂಗತಿ ಹೇಳಲು ಅವನಿಗೆ ಮತ್ತೂ ಕಷ್ಟವಾಗುತ್ತಿತ್ತು.

ಚಿಕ್ಕಮ್ಮನ ಆರೈಕೆಯಲ್ಲಿ ಬೆಳೆದ ಸರಳೆ ಯಾವಾಗಲೂ ದುಂಡಗಿರು ತ್ತಿದ್ದಳು. ತಾನು ಮಾಡಿದ ಕೆಟ್ಟ ಅಡಿಗೆಯನ್ನೇ ತಿಂದರೂ ಸಹ ಅವಳ ತೂಕ ಕೊಂಚವೂ ಕಡಿಮೆಯಾಗಿರಲಿಲ್ಲ.

ಒಂದು ಸಲ ವಾಸು, ಸರಳಾ ವಾಕಿಂಗಿಗೆ ಹೋಗಿದ್ದರು. ದಾರಿಯಲ್ಲಿ ವಾಸುವಿನ ತಂದೆಯ ಸ್ನೇಹಿತರೊಬ್ಬರು ಸಿಕ್ಕಿ ಆದರದಿಂದ ವಾಸುವನ್ನು ಮಾತನಾಡಿಸಿದರು. ಆಗಾಗ್ಗೆ ಸರಳೆಯ ಕಡೆ ನೋಡುತ್ತಿದ್ದ ಅವರು ಕೊನೆಗೆ ತಮ್ಮ ಅನುಮಾನ ಪರಿಹಾರಾರ್ಥವಾಗಿ ವಾಸುವನ್ನು ಕೇಳಿಯೇ ಬಿಟ್ಟರು

"ನಿನ್ನ ಅಕ್ಕನೇ?"

ಸರಳೆಯ ಮುಖ ಕೆಂಪಡರಿತು.

"ಅಲ್ಲ. ನಾನು ಅವನ ತಾಯಿ" - ಎಂದು ಹೇಳಲು ಅವಳ ನಾಲಿಗೆ ಕುಣಿದಾಡಿತು. ಆದರೆ ಪ್ರಶ್ನೆ ಕೇಳಿದಾತ ಕೊಂಚ ವಯಸ್ಸಾದವರಾದುದ ರಿಂದ ಸರಳಾ ಅವರ ವಯಸ್ಸಿಗೆ ಗೌರವ ಕೊಟ್ಟು ಸುಮ್ಮನಿದ್ದಳು.

"ಇಲ್ಲ. ನನ್ನ ಕುಟುಂಬ"—ಎಂದ ವಾಸು.

"ತಪ್ಪು ತಿಳಿಯಬೇಡಮ್ಮ"—ಎಂದರು ಆತ.

ರಾತ್ರಿ ಮನೆಗೆ ಬಂದವಳೇ ಸರಳೆ ಗಂಡನೊಡನೆ ಜಗಳವಾಡಿದಳು. ಆತ ಹಾಗೆ ಪ್ರಶ್ನೆ ಕೇಳಿದ್ದಕ್ಕೆ ವಾಸುವೇ ಕಾರಣನೆಂದು ಸರಳೆಯ ವಾದ. ವಾಸು ಕೊಂಚ ಸ್ಥೂಲವಾಗಿದ್ದಿದ್ದರೆ ಆತ ಎಂದಿಗಾದರೂ ಹಾಗೆ ಕೇಳು ತ್ತಿದ್ದರೇ?

ವಾಸು ಸರಳೆಯನ್ನು ಎಳೆದುಕೊಂಡು ಹೋಗಿ ಕನ್ನಡಿಯ ಮುಂದೆ

ನಿಲ್ಲಿಸಿ ಹೇಳಿದ

"ನನ್ನ ಬೈಯೋಕೆ ಮೊದಲು ನಿನ್ನ ಕೊಂಚ ಪರೀಕ್ಷೆ ಮಾಡಿಕೋ ಸರಳಾ. ನೀನು ಇನ್ನೆರಡು ಸುತ್ತು ಸಣ್ಣಗಾದರೆ ಈ ಜಾರ್ಜೆಟ್ ಸೀರೆ ನಿನ್ನ ಮೇಲೆ ಮತ್ತೂ ಚೆನ್ನಾಗಿ ಶೋಭಿಸುತ್ತಿತ್ತು ಎಂದು ನಿನಗನಿಸುವುದಿಲ್ಲವೆ?"

ವಾಸುವಿನ ಮಾತಿನಲ್ಲಿ ಸತ್ಯವಿದೆಯೆನಿಸಿತು ಸರಳೆಗೆ.

ಮಾರನೆಯ ದಿನದಿಂದಲೇ ಅವಳು ಮಹಿಳೆಯರಿಗೇ ಮೀಸಲಾಗಿದ್ದ ಹಲವಾರು ಮಾಸಪತ್ರಿಕೆಗಳನ್ನು ತರಿಸಿಕೊಂಡು ಮಾಟವಾದ ದೇಹವನ್ನು ಪಡೆಯುವುದು ಹೇಗೆ ಎಂಬ ಶೀರ್ಷಿಕೆಯಲ್ಲಿರುವ ಲೇಖನಗಳನ್ನು ಓದ ತೊಡಗಿದಳು.

ಅನೇಕ ಮಹಿಳೆಯರು ಸಂಪಾದಕರನ್ನು ಕೇಳಿರುವ ಪ್ರಶ್ನೆಗಳೂ ಸಹ ಈ ಸಮಸ್ಯೆಯನ್ನು ಕುರಿತಿದ್ದುದೇ ಆಗಿದ್ದವು.

ಅಂದಿನಿಂದಲೇ ಸರಳಾ ಸಿಹಿತಿಂಡಿಗಳು, ಹಾಲು, ತುಪ್ಪ, ಉಪ್ಪು, ವಾಯುಪದಾರ್ಥಗಳು, ಕರಿದ ತಿಂಡಿ ಮುಂತಾದವುಗಳನ್ನು ವರ್ಜ್ಯ ಮಾಡಿದಳು. ತರಕಾರಿಗಳಲ್ಲಿ ಸೊಪ್ಪು ಎಲ್ಲ ರೀತಿಯಿಂದರೂ ಒಳ್ಳೆಯದು ಎಂದು ಓದಿದ್ದ ಸರಳೆ ಪ್ರತಿದಿನವೂ ಸೊಪ್ಪಿನ ಪಲ್ಯ, ಸೊಪ್ಪಿನ ಹುಳಿ, ಹುಳಿಸೊಪ್ಪು, ಸೊಪ್ಪಿನ ಮಜ್ಜಿಗೆ ಹುಳಿ, ಸೊಪ್ಪಿನ ಸಾರು, ಸೊಪ್ಪಿನ ಅನ್ನ ಮುಂತಾದುವುಗಳನ್ನು ಮಾಡತೊಡಗಿದಳು.

ವಾಸು ಕಂಗೆಟ್ಟ. ದಿಕ್ಕುಗಾಣದಾದ.

ಸರಳೆ ಜಿಹ್ವಾ ಚಾಪಲ್ಯವನ್ನು ತಡೆಗಟ್ಟಿದುದಕ್ಕೆ ಪ್ರತಿಫಲ ದೊರೆಯದೇ ಹೋಗಲಿಲ್ಲ ನಾಲ್ಕು ತಿಂಗಳ ಸತತ ಪ್ರಯತ್ನದ ನಂತರ ಒಮ್ಮೆ ಮಾರ್ಕೆಟ್ಟಿನಲ್ಲಿ ಹೋಗುವಾಗ ದಾರಿಯಲ್ಲಿದ್ದ ತೂಕ ನೋಡುವ ಯಂತ್ರದ ಮೇಲೆ ನಿಲ್ಲುವ ಸಾಹಸ ಮಾಡಿದಳು ಸರಳೆ.

ತೂಕ ನೋಡಿ ಸರಳೆ ಅತ್ಯಂತ ಪ್ರಸನ್ನಳಾಗಿ ವಾಸುವಿನ ಕಡೆ ತಿರುಗಿ ಹೇಳಿದಳು.

"ಎರಡೂವರೆ ಪೌಂಡು ಕಡಿಮೆಯಾಗಿದೀನೀಂದ್ರೆ"

ವಾಸು "ಸಂತೋಷ" ಎಂದ—ಸಂಕಟದಿಂದ.

"ನಿಮ್ಮ ತೂಕ ನೋಡಿ"—ಸರಳೆ ವಾಸುವನ್ನು ಒತ್ತಾಯ ಪಡಿಸಿದಳು.

ವಾಸು ಹನ್ನೆರಡು ಪೌಂಡು ಕಡಿಮೆಯಾಗಿದ್ದ. ಸರಳೆ ವಾಸುವಿನ

ಶೋಕ ಕಡಿಮೆಯಾಗಿದ್ದುದಕ್ಕೆ ಅಷ್ಟು ಲಕ್ಷ್ಯ ಕೊಡಲಿಲ್ಲ.

"ನಾನು ಹೇಳಲಿಲ್ಲವೇ ಆಗಲೇ? ಪುಸ್ತಕದಲ್ಲಿ ಹಾಗೆಲ್ಲಾ ಬೇಕಾಬಿಟ್ಟಿ ಯಾಕೆ ಬರೆಯುತ್ತಾರೆ ಹೇಳು? ಆದರೆ ಈಚೆಗೆ ಹಾಳು ಯಾವ ರವಿಕೆ ಹೊಲಿಸಿದ್ದರೂ ಬಿಗಿಯಾಗಿ ಬಿಡುತ್ತದೆ. ಬಟ್ಟೆ ಒಂದು ಬಗೆತವಾದ ಕೂಡಲೇ ಸುರುಟಿಹೋಗುತ್ತದೆ. ಅದೇನು ಬಟ್ಟೆ ತಯಾರು ಮಾಡುತ್ತಾರೋ....?"

ಎಂದು ಬಟ್ಟೆ ತಯಾರಿಸುವ ಗಿರಣಿಗಳ ಮೇಲೆ ತಪ್ಪನ್ನೆಲ್ಲಾ ಹೊರಿಸಲು ಯತ್ನಿಸಿದಳು—ಸರಳೆ.

"ಬಟ್ಟೆಗಳೆಲ್ಲಾ ಸರಿ. ನಿನ್ನ ಚಿನ್ನದ ಬಳೆಯೋ? ಅದೂ ಶ್ರಿಂಕಾಗುತ್ತಿದೆಯೇನು?"—ಎಂದ ವಾಸು.

ಹಿಂದಿನ ದಿನ ಸರಳೆ ಬಳೆ ಬಿಗಿಯಾಗಿದೆ ಎಂದು ಗೊಣಗುಟ್ಟಿದ್ದಳು—ವಾಸು ಇನ್ನೂ ಮುಂದೆ.

ವಾಸು ಅದನ್ನು ಮರೆತಿರಲಿಲ್ಲ.

ಸರಳೆ ಮಾತನ್ನು ಬದಲಾಯಿಸಲು ಯತ್ನಿಸಿದಳು—

"ನಾಳೆಯಿಂದ ಅನ್ನಕ್ಕೆ ಬದಲು ಗೋಧಿ. ಅನ್ನ, ಗೋಧಿ. ಚಪಾತಿ, ಗೋಧಿ ರೊಟ್ಟಿ."

ಪಥ್ಯದಲ್ಲಿ ಹೋಗುತ್ತಿರುವುದನ್ನು ಅರಿತು ವಾಸು ಸರಳೆಗೆ ಕೈ ಮುಗಿದ.

"ಸರಳಾ, ಪಥ್ಯ ಮಾಡಬೇಕಾಗಿರುವುದು ನಾನೋ ನೀನೋ?"—ಎಂದ.

"ನಾನು"

"ಆದರೆ ಈಗಿನ ಪರಿಸ್ಥಿತಿ ನೋಡಿದರೆ ನಿನ್ನ ಪಥ್ಯದ ಅಡಿಗೆ, ನಿನಗಿಂತಲೂ ನನ್ನ ಮೇಲೆ ಹೆಚ್ಚು ಪ್ರಭಾವವನ್ನು ಬೀರಿದೆ. ಸೊಪ್ಪು ತಿಂದು ತಿಂದು ನನ್ನ ಮೈ ಬಣ್ಣವೇ ಹಸಿರಾಗುತ್ತಿದೆ."

"ಹಾಗಾದರೆ ನಾನೇನು ಮಾಡಲಿ?"

"ನೀನು ಏನು ಬೇಕಾದರೂ ಪಥ್ಯ ಮಾಡಿಕೋ. ಬೇಕಾದರೆ ಊಟ ಮಾಡುವುದನ್ನೇ ಬಿಟ್ಟು ಉಪವಾಸ ಮಾಡು. ಅದಕ್ಕೆ ನಾನು ಬೇಡವೆನ್ನುವುದಿಲ್ಲ. ಆದರೆ ನನಗೆ ಮಾತ್ರ ಮೊದಲಿನ ಹಾಗೆ ಊಟ, ತಿಂಡಿ ಮಾಡಿಕೊಡದಿದ್ದರೆ ನಾನು ಹೋಟೆಲಿನಲ್ಲಿ — ಎಲ್ಲಾದರೂ ಏರ್ಪಾಡು ಮಾಡಿಕೊಳ್ಳುತ್ತೇನೆ"—ಎಂದ ವಾಸು.

ಸರಳೆ ನಾಲ್ಕು ದಿನ ತನಗೆ ಉಪ್ಪು, ತುಪ್ಪ, ಸಕ್ಕರೆಯಿಲ್ಲದ ಅಡಿಗೆ, ತಿಂಡಿ ಮಾಡಿಕೊಂಡು ವಾಸುವಿಗೆ ಬೇರೆ ಬಗೆಯ ಅಡಿಗೆ, ತಿಂಡಿ ತಯಾರಿಸಿದಳು.

ವಾಸುವಿಗೆಂದು ಮಾಡಿದ ಕೊಬ್ಬರಿ ಮಿಠಾಯಿಯನ್ನು 'ಚೂರು ರುಚಿ ನೋಡುತ್ತೇನೆ' ಎಂದು ಹಲವಾರು ಚೂರುಗಳನ್ನು ತಿಂದು ರುಚಿ ನೋಡಿ ನಂತರ ವಾಸುವಿಗೆ ಕೊಡುತ್ತಿದ್ದಳು.

"ತೈರೊಡ್ಡೆ ತುಂಬಾ ಮಿಕ್ಕಿ ಬಿಟ್ಟಿದೆ. ಆದರೆ ಅಷ್ಟೊಂದು ಸಾಮಾನು ಹಾಕಿ ಮಾಡಿದ್ದು ಬಿಸಾಡೋಕಾಗೋದಿಲ್ಲ. ನಾಳೆಗೆ ಇರುವುದಿಲ್ಲ"—ಎಂದು ಸಮಾಧಾನ ಹೇಳಿಕೊಂಡು ವಾಸು ತಿಂದು ಮಿಗಿಸಿದ್ದನ್ನೆಲ್ಲಾ ತಿಂದು ಬಿಟ್ಟಳು.

"ಸಪ್ಪೆಯೂಟ ಉಂಡು ಬಾಯಿ ಕೆಟ್ಟು ಹೋಗಿದೆ"—ಎನ್ನುತ್ತಾ ಬೂದುಗುಂಬಳಕಾಯಿ ಮಜ್ಜಿಗೆ ಹುಳಿಯಲ್ಲಿ ಹಲವು ಸಲ ಕಲೆಸಿ ತಿಂದಳು.

ಊಟ ತಿಂಡಿ ಎಲ್ಲವೂ ಆದನಂತರ ಉದ್ದಿನ ಬೇಳೆ, ಕುಂಬಳಕಾಯಿ ಮಹಾ ವಾಯು ಎಂದು ಅವಳ ನೆನಪಿಗೆ ಬಂತು.

ವಾಸುವಿಗೆ ಅಚ್ಚುಕಟ್ಟಾಗಿ ಅಡಿಗೆ, ತಿಂಡಿ ಮಾಡಿ ಇರಿಸಿ ತಾನು ಮಾತ್ರ ರೋಗಿಯಂತೆ ಸಪ್ಪೆಯೂಟದ ಮೇಲಿರಲು ಸಾಧ್ಯವೇ?

ಸರಳೆಯ ಪಥ್ಯ ಮುಕ್ತಾಯವಾಯಿತು, ಅದರೊಡನೆ ಅವಳ ಸಪ್ಪೆ ಮುಖವೂ ಮತ್ತೆ ಚಿಗುರಿ ನಳನಳಿಸಿತು.

"ಅಯ್ಯೋ ಬಿಡೀಂದ್ರೆ, ಬದುಕಿರುವವರೆವಿಗೆ ಚೆನ್ನಾಗಿ ತಿಂದು ಬಿಡೋಣ. ಆಮೇಲೆ ನಮ್ಮ ಹಣೆಯಲ್ಲಿ ಬರೆದ ಹಾಗಾಗುತ್ತದೆ" ಎಂದು ವೇದಾಂತ ಹೇಳಿದಳು ಸರಳಾ—ವಾಸುವಿಗೆ.

ಆದರೂ ಸಣ್ಣ ಕಳವಳ ಅವಳ ಎದೆಯನ್ನು ಮೀಟುತ್ತಲೇ ಇತ್ತು. ರವಿಕೆ ಬಿಗಿಯಾದ ದಿನ, ವಿಕೆಟ್ ಗೇಟಿನಲ್ಲಿ ತಟ್ಟನೆ ನುಸುಳಿ ಹೋಗಲಾರದ ದಿನ ಸರಳೆ ವಾಸುವಿನೊಡನೆ ಜಗಳ ಕಾಯುತ್ತಿದ್ದಳು.

"ನೀವು ನನ್ನೊಡನೆ ಸಹಕರಿಸಿದ್ದರೆ ನಾನು ಇಷ್ಟು ಹೊತ್ತಿಗೆ ಬಳ್ಳಿಯ ಹಾಗಾಗಿ ಬಿಡುತ್ತಿದ್ದೆ."

ಆಗ ವಾಸು ಶಾಂತವಾದ ದನಿಯಲ್ಲಿ ಹೇಳುತ್ತಿದ್ದ

"ಆಗ ನಾನು ಇಲ್ಲವಾಗುತ್ತಿದ್ದೆ."

ಆದರೆ ಈಗ ಸರಳೆ ಯಾವ ವಿಷಯಕ್ಕೂ ಆತಂಕ ಪಡಬೇಕಾಗಿರಲಿಲ್ಲ.

ರಾತ್ರಿ ವಾಸುವಿನೊಡನೆ ಸರಳಾ ಹೇಳಿದಳು

"ಈ ಸ್ಥಿತಿಯಲ್ಲೂ ಒಂದು ಸುಖವಿದೆ."

"ಏನು?"

"ಇನ್ನು ಮೇಲೆ ನಾನು ಡಯಟಿಂಗ್ ಮಾಡಬೇಕಾಗಿಲ್ಲ. ಬೇಕಾದ ತಿಂಡಿ ತಿನಿಸುಗಳನ್ನು ಹಾಯಾದ ಮನಸ್ಸಿನಿಂದ ಯಾವ ಅಳುಕೂ ಇಲ್ಲದೆ ತಿನ್ನಬಹುದು."

"ಸರಿ."

"ಆದರೆ ಆಮೇಲೆ ನಾನು ಖಂಡಿತ ಮತ್ತೆ ಸಣ್ಣಗಾಗಲು ಪ್ರಯತ್ನಿಸುತ್ತೇನೆ."

"ಮತ್ತೆ ಎನ್ನಲು ನೀನು ಯಾವಾಗ ಸಣ್ಣಗಿದ್ದೆ"—ವಾಸು ಸರಳೆಯನ್ನು ರೇಗಿಸಿದ.

"ನಾನೂ ಸಣ್ಣಗಿದ್ದೆ."

"ಯಾವಾಗ ಹೇಳು?"

"ಏಳೆಂಟು ವರ್ಷದ ಹುಡುಗಿಯಾಗಿದ್ದಾಗ."

"ನಾನೂ ದಪ್ಪಗಿರುತ್ತೇನೆ—ಮುಂದಿನ ಜನ್ಮದಲ್ಲಿ."

ಸರಳೆ ಮುನಿದಳು. ವಾಸು ತಂದಿದ್ದ ಸುಲಭವಾದ 'ಹೆರಿಗೆ' ಎನ್ನುವ ಪುಸ್ತಕವನ್ನು ಬಿಡಿಸಿ ಸರಳಾ ಓದತೊಡಗಿದಳು.

ವಾಸು ರೇಡಿಯೋದಿಂದ ಬರುತ್ತಿದ್ದ ಸುಶ್ರಾವ್ಯವಾದ ವೀಣೆಯನ್ನು ಕೇಳುತ್ತಾ ಕುಳಿತ. ಕೊಂಚ ಹೊತ್ತು ಗಂಡ, ಹೆಂಡಿರ ನಡುವೆ ಮೌನ ಕವಿಯಿತು.

"ಲೇ ಸರಳಾ" – ಎಂದ ವಾಸು.

ಸರಳಾ ಮಾತನಾಡಲಿಲ್ಲ.

ವಾಸು ಎದ್ದು ಹೋಗಿ ಸರಳೆಯ ಕೈ ಹಿಡಿದು ಕರೆತಂದು ಅವಳನ್ನು ರೇಡಿಯೋ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳ್ಳಿರಿಸಿದ. ಸರಳಾ ಪ್ರಶ್ನಾರ್ಥಕವಾಗಿ ವಾಸುವಿನ ಕಡೆ ನೋಡಿದಳು.

ವಾಸು ಪುಟ್ಟ ಭಾಷಣ ಮಾಡಿದ

"ಹಿರಿಯರು ಹೇಳ್ತಾರೆ—ಈ ಸಮಯದಲ್ಲಿ ತಾಯಿಯಾಗಲಿರುವವಳು ಯಾವಾಗಲೂ ಏನನ್ನು ಕೇಳುತ್ತಿರುತ್ತಾಳೋ, ಏನನ್ನು ನೋಡುತ್ತಾಳೋ, ಯಾವುದನ್ನು ಓದುತ್ತಿರುತ್ತಾಳೋ ಅದು ಅವಳ ಗರ್ಭದಲ್ಲಿರುವ ಮಗುವಿನ ಮೇಲೆ ತುಂಬಾ ಪ್ರಭಾವವನ್ನು ಬೀರುತ್ತದೆಯಂತೆ. ನನ್ನ ಮಗ

ದೊಡ್ಡ ಸಂಗೀತಗಾರನಾಗಲಿ ಎಂದು ನನಗೆ ಆಸೆ. ಆದುದರಿಂದ ನೀನು ಇನ್ನು ಮೇಲೆ ಒಳ್ಳೆಯ ಸಂಗೀತ ಕೇಳಬೇಕು ತಿಳಿಯಿತೇ?"

"ಅದಕ್ಕೆ ಬದಲು ಸಿಲೋನ್ ಹಾಕಿದರೆ ನನ್ನ ಮಗ ಹಿನ್ನೆಲೆ ಗಾಯಕನಾಗಿ ಸಾವಿರಾರು ರೂಪಾಯಿ ಸಂಬಳ ಸಂಪಾದಿಸಬಹುದಲ್ಲಾ."

"ನನಗೆ ಇದು ಹಿಡಿಸೋಲ್ಲ."

"ನನಗೆ ಅದು ಹಿಡಿಸುವುದಿಲ್ಲ."

"ಮೊದಲನೆಯ ಮಗನ ಜವಾಬ್ದಾರಿ ನನಗೆ ಬಿಟ್ಟು ಬಿಡು. ಎರಡನೆಯ ಮಗುವಿನ ಜವಾಬ್ದಾರಿ ನಾನು ನಿನಗೆ ಬಿಟ್ಟು ಬಿಡುತ್ತೇನೆ"—ವಾಸು ಸರಳೆಗೆ ಸಮಾಧಾನ ಹೇಳಿದ.

ಸರಳ ಗಂಡನಿಗೆ ಬೇಸರ ಮಾಡಬಾರದೆಂದು ಸಂಗೀತ ಕೇಳುತ್ತಾ ಕುಳಿತಳು. ಗಂಟಲಿನಿಂದ ನುಗ್ಗಿ ಬಂದ ಆಕಳಿಕೆಗಳನ್ನು ಕಷ್ಟಪಟ್ಟು ನುಂಗಿದಳು. ತನಗೆ ನಿದ್ದೆ ಬರುತ್ತಿದೆಯೆಂದು ವಾಸುವಿನ ಎದುರಿಗೆ ಕುಳಿತು ತೂಕಡಿಸುವ ನಟನೆ ಮಾಡಿದಳು. ವಾಸು ಕಠಿಣ ಹೃದಯಿಯಾಗಿದ್ದ. ಅವನು ಸರಳೆಯ ಬೇಸರವನ್ನು ಅರಿತರೂ ಸುಮ್ಮನಿದ್ದುಬಿಟ್ಟ.

ಕೊನೆಗೆ ಸರಳಾ "ರೀ"—ಎಂದಳು.

"ಏನು?"

"ನೀವೊಬ್ಬರೇ ಯಾಕೆ ಯಾತ್ರೆ ಹೋಗಬಾರದೂಂತೀನಿ?"

"ಆಗೋದಿಲ್ಲ. ಆಮೇಲೆ ನಿನ್ನ ಕರೆದುಕೊಂಡು ಹೋಗುವವರು ಯಾರು?"

"ಇಬ್ಬರೂ ಇನ್ನೊಂದು ಸಲ ಹೋದರಾಯಿತು"—ಸರಳಾ ಆಲಸ್ಯದಿಂದ ಹೇಳಿದಳು.

"ಎಲ್ಲಾದರೂ ಗುಪ್ತನಿಧಿ ಇಟ್ಟಿದೀಯೇನು?"

"ನನ್ನ ಹತ್ತಿರ ಎಲ್ಲಿಂದ ಬರಬೇಕು?"

"ಎರಡೆರಡು ಸಲ ಉತ್ತರದ ಕಡೆ ಹೋಗುವುದಕ್ಕಾಗುವುದಿಲ್ಲ. ಮತ್ತೆ ಯಾವಾಗಲಾದರೂ ಹೋಗೋಣ."

ಸರಳಾ ತುಂಟ ನಗು ನಕ್ಕು ಹೇಳಿದಳು "ಹಾಗಲ್ಲ. ಈ ಸಲಹೆ ಕೊಟ್ಟಿದ್ದು ಡಾಕ್ಟರು."

"ಯಾಕಂತೆ? ಅವರಿಗೇನು...."

"ಮಗ ಹುಟ್ಟುವವರೆವಿಗೆ ನಿಮ್ಮ ಯಜಮಾನರು ಒಂಟಿಯಾಗಿ

ಹೋಗಿ ಯಾತ್ರೆ ಮಾಡಿಕೊಂಡು ಬರಲಿ ಎಂದಿದ್ದಾರೆ. ಇದರಿಂದ ನಿಮಗೆ ಪುಣ್ಯ ಬರುತ್ತದೆಯಂತೆ. ನನಗೆ..."

ವಾಸು ನಕ್ಕುಬಿಟ್ಟ. ಅವನು ಸರಳೆಯ ಹತ್ತಿರ ಬಂದ. ಕೈಗೆ ಸುಲಭವಾಗಿ ಸಿಕ್ಕಿದ ಮೂಗನ್ನು ಹಿಡಿದು ಅವಳ ಮುಖವನ್ನು ಅಲುಗಿಸಿದ.

ಅವನು ಮೂಗು ಮುಟ್ಟಿದ ಕೂಡಲೆ ಸರಳಾ ಎಂದಿನಂತೆಯೇ ಮೂರು ಸಲ ಸೀನಿದಳು.

ಸರಳಾ ಮೂಗುಜ್ಜಿಕೊಳ್ಳುತ್ತಾ "ಇನ್ನೂ ಈ ದುರಭ್ಯಾಸ ನೀವು ಬಿಟ್ಟಿಲ್ಲವಲ್ಲ"—ಎಂದಳು.

"ನೀನೂ ಮೂರು ಸಲ ಸೀನುವುದನ್ನು ಬಿಟ್ಟಿಲ್ಲವಲ್ಲ."

ಸರಳೆ ಮತ್ತೆ ಆಕಳಿಸಿದಳು.

ವಾಸು ರೇಡಿಯೋ ನಿಲ್ಲಿಸಿ. "ಹೋಗಲಿ ಮಲಗಿಕೋ"—ಎಂದು ಸರಳೆಯ ಮೇಲೆ ಕಂಬಳಿಯನ್ನು ಹೊದಿಸಿದ.

ಸರಳಾ ಹಾಸಿಗೆಯ ಮೇಲೆ ಮಲಗಿ ರಗ್ಗನ್ನೆಳೆದುಕೊಂಡಳು.

"ಮಾತ್ರೆ ತಗೊಂಡೆಯಾ?"

"ಹೂಂ."

"ಹಾಲು ಕುಡಿದೆಯಾ?"

"ಹೂಂ."

"ಸರಿ, ಮಲಗು...."

ಸರಳೆಯಿಂದ ಯಾವ ಉತ್ತರವೂ ಬರಲಿಲ್ಲ. ಅವಳು ಎಡಗೈಯನ್ನು ಕೆನ್ನೆಯ ಕೆಳಗಿರಿಸಿಕೊಂಡು ಹಗುರವಾದ ನಿದ್ದೆಯ ಮಬ್ಬಿನಲ್ಲಿದ್ದಳು.

* * *

ವಾಸು ಪ್ರಾಕ್ಟೀಸಿನ ಕಡೆ ಹೋದಾಗಲೆಲ್ಲಾ ಹೆರಿಗೆ, ಮಕ್ಕಳನ್ನು ಸಾಕುವ ವಿಚಾರವನ್ನು ಕುರಿತು ಬರೆದಿದ್ದ ದಪ್ಪ ದಪ್ಪ ಪುಸ್ತಕಗಳನ್ನು ಕೊಂಡು ತರುತ್ತಿದ್ದ. ಸರಳೆ ಪ್ರತಿಯೊಂದು ಪುಸ್ತಕವನ್ನೂ ಬಹಳ ಉತ್ಸಾಹದಿಂದ ಓದಲು ಪ್ರಾರಂಭ ಮಾಡುತ್ತಿದ್ದಳು. ಆದರೆ ನಾಲ್ಕಾರು ಪುಟಗಳನ್ನು ಓದುವಷ್ಟರಲ್ಲಿ ಆಲಸ್ಯ, ಆಕಳಿಕೆ ಒಂದರ ಹಿಂದೊಂದು ನುಗ್ಗಿ ಬಂದು ಸರಳೆಯ ಆಸಕ್ತಿಯನ್ನು ಕಬಳಿಸಿ ಬಿಡುತ್ತಿದ್ದವು. ವಾಸು ತಪ್ಪದೇ ಕೇಳುತ್ತಿದ್ದ.

"ಸರಳಾ, ಓದಿದೆಯೇನೆ ನಾನು ತಂದಿದ್ದ ಪುಸ್ತಕಾನ?"

"ಇನ್ನೂ ಇಲ್ಲಾರಿ, ನನಗೆ ಟೈವೆಲ್ಲಿದೆ ಹೇಳಿ?"

"ಲಕ್ಷಣವಾಯ್ತು. ದಿನವೆಲ್ಲಾ ಕುಳಿತು ಏನು ಮಾಡ್ತಿಯು?"

"ಮಲಗಿಕೊಂಡಿರುತ್ತೀನಿ. ಡಾಕ್ಟರು ವಿಶ್ರಾಂತಿ ತಗೊಳ್ಳಿ ಎಂದು ಹೇಳಿದಾರೆ."

"ಮಲಗಿಕೊಂಡೇ ಓದು."

"ಮಲಗಿಕೊಂಡ ಕೂಡಲೇ ನಿದ್ದೆ ಬಂದುಬಿಡುತ್ತದೆ."

"ಮೂರು ಹೊತ್ತೂ ಅದೆಂತಹ ನಿದ್ದೆ?"

"ಅದೇನೋ, ಯಾವಾಗಲೂ ಮಲಗಿ ನಿದ್ದೆ ಮಾಡೋಣಾಂತ ಎನಿಸುತ್ತದೆ."

"ಒಂದು ಕತೆ ಕೇಳಿದೀಯಾ? ಸುಭದ್ರೆಯ ಹೊಟ್ಟೆಯಲ್ಲಿ ಅಭಿಮನ್ಯು ಇದ್ದಾಗ ಅವಳಿಗೆ ಯಾವಾಗಲೂ ವೀರರ ಕತೆಗಳನ್ನು ಕೇಳೋಣವೆನಿಸು ತ್ತಿತ್ತಂತೆ. ಮುಂದೆ ಅವಳಿಗೆ ಎಂತಹ ವೀರಪುತ್ರ ಹುಟ್ಟಿದ ಎನ್ನುವುದನ್ನು ಅದು ಸೂಚಿಸಿತು. ಹಾಗೆಯೇ ನಿನ್ನ ಅತೀ ನಿದ್ದೆ ಮುಂದೆ ಕುಂಭಕರ್ಣ ನಂತಹ. .."

ಸರಳೆ ಮುನಿದು ನುಡಿದಳು "ನನ್ನ ಮಗೂನ ನೀವೇನೂ ಕುಂಭ ಕರ್ಣ ಎನ್ನಬೇಕಾಗಿಲ್ಲ."

"ಇನ್ನೇನು ಹೇಳಬೇಕು? ನಾನು ತಂದಿರುವ ಪುಸ್ತಕಗಳನ್ನು ದಂಡ ಮಾಡಬೇಡ. ಎಲ್ಲವನ್ನೂ ಓದು."

"ಸರಿ. ಆದರೆ ನನಗೊಂದು ವಿಷಯ ಅರ್ಥವಾಗುತ್ತಿಲ್ಲ"—ಸರಳೆ ರಾಗ ಎಳೆದಳು.

"ಏನದು?"

"ನೀವು ತಂದಿರುವ ಪುಸ್ತಕದಲ್ಲಿ ಹೆಂಗಸಿಗೆ ಸಾಮಾನ್ಯವಾಗಿ ಮೂರು, ನಾಲ್ಕು ತಿಂಗಳುಗಳಾಗುವವರೆವಿಗೆ ವಾಂತಿ, ತಲೆಸುತ್ತು, ಹೊಟ್ಟೆ ತೊಳಸು ವುದು ಎಲ್ಲಾ ಇರುತ್ತದೆಯಂತೆ. ಹಾಗೂ ಊಟ, ತಿಂಡಿ ಸರಿಯಾಗಿ ಸೇರು ವುದಿಲ್ಲವಂತೆ."

"ಸರಿ."

"ಆದರೆ ನನಗೆ ಹಾಗೆ ಏನೂ ಆಗುತ್ತಿಲ್ಲವಲ್ಲಾ ಎಂದು ಯೋಚನೆ ಯಾಗಿಬಿಟ್ಟಿದೆ."

ವಾಸು ನಗುತ್ತಾ ಹೇಳಿದ "ಆಗದಿದ್ದರೆ ನಷ್ಟವೇನು? ಹಾಯಾಗಿ ಉಂಡು, ತಿಂದು ಮಲಗಿರು."

"ಎಲ್ಲರಿಗೂ ಹಾಗೆ ಆಗುವಾಗ ನನಗೇಕೆ ಹಾಗೆ ಆಗುವುದಿಲ್ಲ?"

"ಈ ಸಲ ಡಾಕ್ಟರ ಹತ್ತಿರ ಹೋದಾಗ ಅವರನ್ನೇ ಕೇಳು"—ಎಂದು ವಾಸು ಸಲಹೆ ಕೊಟ್ಟ.

ಸರಳಾ ಒಪ್ಪಿದಳು. ತಕ್ಷಣ ಏನನ್ನೋ ನೆನಸಿಕೊಂಡು ಸರಳೆ "ಹುಳಿ ದಾಳಿಂಬರೆ, ಮಾವಿನಕಾಯಿ, ನಿಂಬೇಹಣ್ಣು .ತಗೊಂಡು ಬಂದು ಕೊಡ್ತೀರಾ?" ಎಂದಳು.

"ಎಲ್ಲಿಂದ ತರಲಿ?"

"ಮಾರ್ಕೆಟ್ಟಿನಿಂದ ತನ್ನಿ."

"ಕೆಮ್ಮು ಬರುವುದಿಲ್ಲವೇ?"

"ಚಿಂತೆಯಿಲ್ಲ ತನ್ನಿ. ಮಾವಿನ ಕಾಯಿಗೆ ಉಪ್ಪು ಹಾಕಿಕೊಂಡು ತಿನ್ನುತ್ತೇನೆ."

"ಡಾಕ್ಟರನ್ನು ಕೇಳಿ ತಿನ್ನೇ—ಏನು ತಿಂದರೂ"—ವಾಸು ಕೊಂಚ ಆತಂಕದಿಂದ ನುಡಿದ.

"ಕೂತಿದ್ದು ನಿಂತಿದ್ದಕ್ಕೆಲ್ಲಾ ಡಾಕ್ಟರನ್ನು ಕೇಳಿದರೆ ಅವರು ನಗುತ್ತಾರೆ."

"ಅಂದ ಹಾಗೆ ನೀನು ಡಾಕ್ಟರ ಹತ್ತಿರ ಹೋಗಿ ಎಷ್ಟು ದಿನವಾಯಿತು ಸರಳಾ?"

ಸರಳೆ ಕ್ಯಾಲೆಂಡರಿನ ಕಡೆ ನೋಡಿದಳು. ನಂತರ ಉದ್ವೇಗದಿಂದ "ಒಂದು ತಿಂಗಳಾಗಿದೆ. ನಾಳೆಯೇ ಹೋಗಿ ಬರೋಣ"—ಎಂದಳು.

"ನಾಳೆ ನನಗೆ ಬರೋಕಾಗೋದಿಲ್ಲ. ನೀನು, ಅಮ್ಮ ಹೋಗಿ ಬನ್ನಿ" —ಎಂದ ವಾಸು.

"ಆಗಲಿ. ಹೇಗೆ ಹೋಗುವುದು? ಗಾಡಿಯಲ್ಲಂತೂ ಹೋಗುವ ಹಾಗಿಲ್ಲ."

"ಟ್ಯಾಕ್ಸಿ ತರುತ್ತೇನೆ. ಹೋಗಿ ಬಂದುಬಿಡಿ. ನಮ್ಮ ಪ್ರವಾಸದ ಹಣವೆಲ್ಲಾ ಹೀಗೆ ಖರ್ಚಾಗಬೇಕೆಂದಿದೆ."

"ಹಾಗೇ ಸಿಲೋನ್ ತಿರುಗಿಸೀಂದ್ರೆ. ಬಿನಾಕಾ ಬರುತ್ತದೆ."

"ಊಹೂಂ. ಮದ್ರಾಸು ಹಾಕುತ್ತೇನೆ"—ಎಂದು ವಾಸು ಮದ್ರಾಸು ಹಾಕಿದ.

ತನ್ನ ಮಗ ಅಥವಾ ಮಗಳು ದೊಡ್ಡ ಸಂಗೀತಗಾರನಾಗಲಿ ಎಂದು

ವಾಸುವಿಗೆ ಆಸೆ. ಆದುದರಿಂದಲೇ ಸರಳೆ ವಿರಾಮವಾಗಿ ಕುಳಿತಾಗಲೆಲ್ಲಾ ವಾಸು ಶಾಸ್ತ್ರೀಯ ಸಂಗೀತ ಬರುತ್ತಿದ್ದ ನಿಲಯಕ್ಕೆ ರೇಡಿಯೋ ಬಿರಡೆಯನ್ನು ತಿರುಗಿಸುತ್ತಿದ್ದ. ಆದರೆ ಶಾಸ್ತ್ರೀಯ ಸಂಗೀತ ಕೇಳುವುದೆಂದರೆ ಸರಳೆಗೆ ಎಲ್ಲಿಲ್ಲದ ಬೇಸರ.

"ಅಯ್ಯೋ, ಯಾರ ಕೈಲಾಗುತ್ತದಪ್ಪ ಇದನ್ನು ಕೇಳೋಕೆ"—ಎಂದವಳು ಮುಖ ತಿರುಗಿಸುತ್ತಿದ್ದಳು.

ಸರಳೆಗೆ ಲಘು ಸಂಗೀತದಲ್ಲಿ ಹೆಚ್ಚು ಪ್ರೀತಿ. ಸಾಲದುದಕ್ಕೆ ಸರಳೆಗೆ ತನ್ನ ಮಗ ಸಂಗೀತಗಾರನಾಗುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಅದೂ ಒಂದು ಉದ್ಯೋಗವೇ ಎಂದವಳು ತಾತ್ಸಾರವಾಗಿ ಆಗಾಗ್ಗೆ ನುಡಿಯುತ್ತಿದ್ದುದುಂಟು.

ಅವಳ ಒಲವೆಲ್ಲಾ ಸಾಹಿತ್ಯದೆಡೆಗೆ ಹರಿಯುತ್ತಿತ್ತು.

ಸರಳೆಗೆ ತಾನು ದೊಡ್ಡ ಲೇಖಕಿಯಾಗುವ ಮಹದಭಿಲಾಷೆಯಿತ್ತು. ಆದರೆ ಮದುವೆಯಾದ ನಂತರ ಅವಳು ಸಾಹಿತ್ಯ ಪ್ರಪಂಚದಿಂದ ದೂರವಾಗಿದ್ದರೂ ಕತೆ ಪುಸ್ತಕಗಳಲ್ಲಿನ ಆಸಕ್ತಿ ಕಡಿಮೆಯಾಗಿರಲಿಲ್ಲ.

"ನನ್ನ ಮದುವೆಯಾಗೇ ಆಯಿತು. ನನ್ನ ಬರವಣಿಗೆ ನಿಂತೇ ಹೋಯಿತು"—ಎಂದು ಸರಳಾ ಒಮ್ಮೆ ವಾಸುವಿನ ಎದುರಿಗೆ ಸಂಕಟಪಟ್ಟಿದ್ದಳು.

"ಈಗಲೂ ಬರಿ ನಿನ್ನ ಯಾರು ಬೇಡಾಂದವರು?"

"ನನಗೆ ಟೈಮೆಲ್ಲಿದೆ ಹೇಳಿ?"

"ಸುಮ್ಮನೆ ಮಲಗಿ ಮಲಗಿ ಮೈ ಬೆಳೆಸುವ ಬದಲು ಕುಳಿತು ಬರಿ."

"ಕೆಲಸ ಮಾಡಿ ಸಾಕಾಗಿರುತ್ತದೆ. ಮಧ್ಯಾಹ್ನ ಒಂದು ಗಳಿಗೆ ಮಲಗಿಕೊಂಡರೆ ನಿಮಗೆ ಹೊಟ್ಟೆಯುರಿ."

"ಮಲಗಿಕೋಮ್ಮ. ಸಧ್ಯ, ನೀನು ಸಾಹಿತ್ಯ ಪ್ರಪಂಚದಿಂದ ದೂರವಾಗಿದ್ದಷ್ಟೂ ಕನ್ನಡಿಗರಿಗೆ ಕ್ಷೇಮ. ನೀನು ಸಾಹಿತ್ಯಕ್ಕೆ ಕೈ ಹಾಕದಿದ್ದರೆ ಅದಕ್ಕಿಂತಲೂ ದೊಡ್ಡ ಸಾಹಿತ್ಯಸೇವೆ ಬೇರೊಂದಿಲ್ಲ"–ಎನ್ನುತ್ತಿದ್ದ ವಾಸು.

ಹೀಗಾಗಿ ಮದುವೆಯಾದ ನಂತರ ಪದ್ಮಜಾ ಮಾಯವಾಗಿ ಸರಳೆ ಸರಳೆಯಾಗಿಯೇ ಉಳಿದಳು. ಪ್ರತಿಯೊಬ್ಬರಿಗೂ ಒಂದು ವಯಸ್ಸಿನಲ್ಲಿ ಕೆಲವು ದಿವಸ ಮಾತ್ರ ಕತೆಗಳನ್ನು ಬರೆಯುವ ಚಟವಿರುತ್ತದೆ. ಸರಳೆಯ ಬರವಣಿಗೆ ಈ ವರ್ಗಕ್ಕೆ ಸೇರಿದುದಾಗಿತ್ತು.

ತಾನು ಮಾಡಲಾಗದ ಕೆಲಸವನ್ನು ತನ್ನ ಮಗನೋ, ಮಗಳೋ ಮಾಡಲಿ ಎಂದು ಸರಳೆಗೆ ಆಸೆಯಿತ್ತು.

"ನಾನಂತೂ ಲೇಖನ ಮುಂದುವರಿಸಲಿಲ್ಲ. ನನ್ನ ಮಗನಾದರೂ ಸಾಹಿತಿಯಾಗಲಿ ಎಂದು ನನಗೆ ಆಸೆಯಿದೆ"—ಎನ್ನುತ್ತಾ ಸರಳೆ ಸಂಗೀತ ಶ್ರವಣಕ್ಕೆ ಬೆನ್ನು ತಿರುಗಿಸಿ ಕಾದಂಬರಿ ಹಿಡಿಯುತ್ತಿದ್ದಳು.

"ಯಾವ ಪುಸ್ತಕ ಅದು?"

"ಪತ್ತೇದಾರಿ ಕತೆ."

"ನಿನ್ನ ಮಗ ಕಳ್ಳ, ಕೊಲೆಗಡುಕ ಆಗಲೆಂದು ನಿನಗಾಸೆಯೇ? ಮೊದಲು ಅದನ್ನು ಮುಚ್ಚಿಡು. ಒಂದು ಪಕ್ಷ ಅವನು ಸಾಹಿತಿಯಾದರೂ ಪತ್ತೇದಾರಿ ಕಾದಂಬರಿಗಳನ್ನು ಅವನು ಬರೆಯುವುದು ನನಗಿಷ್ಟವಿಲ್ಲ" —ಎನ್ನುತ್ತಾ ವಾಸು ಅವಳ ಕೈಯಿಂದ ಪುಸ್ತಕ ಕಸಿದುಕೊಳ್ಳುತ್ತಿದ್ದ.

"ನಾವಿಬ್ಬರೂ ಒಂದು ಒಪ್ಪಂದಕ್ಕೆ ಬಾರದಿದ್ದರೆ ಕೊನೆಯುವರೆವಿಗೆ ಹೀಗೆಯೇ ಜಗಳ ಕಾಯುತ್ತಿರಬೇಕಾಗುತ್ತದೆ" ಎಂದಳು ಸರಳಾ.

"ಏನು ಒಪ್ಪಂದ?"—ವಾಸು ಕುತೂಹಲದಿಂದ ಕೇಳಿದ.

"ನಮಗೆ ಹುಟ್ಟುವ ಮಗ ಸಂಗೀತಗಾರನಾಗಲಿ ಎಂದು ನಿಮಗೆ ಆಸೆ. ಸಾಹಿತಿಯಾಗಲಿ ಎಂದು ನನಗೆ ಆಸೆ. ಅವನು ಸಂಗೀತಗಾರ, ಸಾಹಿತಿ ಎರಡೂ ಆಗಬಾರದೇಕೆ?"

ವಾಸುವಿಗೆ ಸರಳೆಯ ಮಾತು ತುಂಬಾ ಹಿಡಿಸಿತು.

"ನಿನ್ನ ಮಾತು ಒಪ್ಪಿದೆ ಸರಳಾ, ನಿನ್ನ ಬುದ್ಧಿಯೇ ಬುದ್ಧಿ. ಇಷ್ಟು ದಿನ ನನಗಿದು ಹೊಳೆದಿರಲಿಲ್ಲ"—ಎಂದ ವಾಸು.

"ಬೆಳಗ್ಗೆ ಸಾಹಿತ್ಯದ ಅಧ್ಯಯನ ನಡೆಸುತ್ತೇನೆ. ಸಂಜೆ, ರಾತ್ರಿ ಸಂಗೀತ ಶ್ರವಣ ಮಾಡುತ್ತೇನೆ. ಒಪ್ಪಿಗೆಯೋ?"

"ಆಗಲಿ. ಹಾಗೆಯೇ ನನ್ನೊಡನೆ ಸಂಗೀತ ಕಛೇರಿಗಳಿಗೂ ಬಾ. ಕಿವಿಯ ಮೇಲೆ ಯಾವಾಗಲೂ ಒಳ್ಳೆಯ ಸಂಗೀತ ಬೀಳುತ್ತಿರಲಿ"—ಎಂದು ತೀರ್ಪಿತ್ತ ವಾಸು.

ಸರಳೆ ಒಪ್ಪಿದಳು.

ಮಾರನೆಯ ದಿನ ವಾಸು ಸರಳೆ ಆಸ್ಪತ್ರೆಗೆ ಹೋಗುವ ಸಲುವಾಗಿ ಟ್ಯಾಕ್ಸಿಯನ್ನು ತಂದು ಮನೆಯ ಮುಂದೆ ನಿಲ್ಲಿಸಿದ. ರಂಗಮ್ಮನವರೂ ತಮ್ಮ ಮುದ್ದು ಸೊಸೆಯೊಡನೆ ಹೊರಡಲು ತಯಾರಾಗಿದ್ದರು.

ಮಧ್ಯಾಹ್ನ ಹನ್ನೊಂದೂವರೆಯ ವೇಳೆಗೆ ಅತ್ತೆ, ಸೊಸೆ ಮನೆಗೆ ಬಂದರು. ವಾಸು ಹೆಂಡತಿಯಿಂದ ತಿಳಿದುಕೊಳ್ಳಬೇಕಾದ ವಿಷಯಗಳು ಹಲವಾರು ಇದ್ದವು. ಆದರೆ ಕಾಲೇಜಿಗೆ ಹೊತ್ತಾಗುವುದರಿಂದ ಅವನು ಸರಳೆಯನ್ನು ಹೆಚ್ಚು ಮಾತನಾಡಿಸದೇ ಹೋಟುಹೋದ.

ಸಂಜೆ ವಾಸು ಮನೆಗೆ ಬಂದಾಗ ತಮ್ಮಯ್ಯನವರು ಮಾತು ತೆಗೆದರು.

"ಪ್ರವಾಸ ನಿಂತ ಹಾಗೇ ಅಲ್ಲವೇ?"

ವಾಸು ನೆಲ ನೋಡುತ್ತಾ 'ಹೂಂ' ಎಂದ.

"ನಾನಿದ್ದು ಏನು ಮಾಡಬೇಕು? ಹಳ್ಳಿಗೆ ಹೋಗಿ ಬರುತ್ತೇನೆ."

"ನಾಲ್ಕು ದಿನ ಇರಣ್ಣಾ."

"ಪುನಃ ಬರಲೇಬೇಕಲ್ಲಾ. ಆವಾಗ ಬರುತ್ತೇನೆ. ಇವಳು ಬೇಕಾದರೆ ಇಲ್ಲಿಯೇ ಇರಲಿ. ಒಟ್ಟಿನಲ್ಲಿ ನಿಮಗೆ ತೊಂದರೆಯಾಗದಿದ್ದರೆ ಸರಿ"—ಎಂದರು ತಮ್ಮಯ್ಯ.

ರಾತ್ರಿ ವಾಸು ಸರಳೆಯನ್ನು ಪ್ರಶ್ನಿಸಿದ

"ಏನಂದರು ಡಾಕ್ಟರು?"

"ಏನೂ ಅನ್ನಲಿಲ್ಲ. ಬೆರಳು ಚುಚ್ಚಿ ರಕ್ತ ಬರಿಸಿ ಪರೀಕ್ಷೆ ಮಾಡಿದರು. ಯಥಾಪ್ರಕಾರ ರಕ್ತದ ಒತ್ತಡ, ನನ್ನ ತೂಕ...ಮೊದಲಿಗಿಂತ ಹತ್ತು ಪೌಂಡು ಜಾಸ್ತಿಯಾಗಿದೀನಿ "

"ನೀನೇನೋ ಪ್ರಶ್ನೆ ಅವರನ್ನು ಕೇಳಬೇಕೆಂದಿದ್ದೆಯಲ್ಲಾ ಕೇಳಿದೆಯಾ?"

"ಹೂಂ. ಎಷ್ಟೋ ಜನರಿಗೆ ಹಾಗೆ ಆಗುವುದಿಲ್ಲವಂತೆ 'ಅದರ ವಿಷಯ ಏನೂ ಯೋಚನೆ ಮಾಡಬೇಡ.ಹಾಯಾಗಿ ತಿಂದು, ಉಂಡು, ಮಲಗಿರು' ಎಂದರು."

"ಮಾವಿನಕಾಯಿ ತಿನ್ನಬಹುದಂತಾ?"

"ಹೂಂ. 'ಮಾವಿನ ಗಿಡವನ್ನೇ ಬೇಕಾದರೆ ತಿನ್ನು' ಎಂದರು ಡಾಕ್ಟರು...."ಎನ್ನುತ್ತಾ ಸರಳೆ ಸಂಗೀತ ಕೇಳಲು ಪ್ರಾರಂಭ ಮಾಡಿದಳು.

"ಸರಳಾ, ನಾಳೆಯ ದಿನ ವಸಂತಕುಮಾರಿಯ ಸಂಗೀತವಿದೆ-ಟೌನ್ ಹಾಲಿನಲ್ಲಿ. ಇಬ್ಬರೂ ಹೋಗಿ ಬರೋಣ"—ಎಂದ ವಾಸು.

"ಆಗಲಿ. ನಾಳೆ ಮಧ್ಯಾನ್ಹದೊಳಗೆ ನಾನು ಓದುತ್ತಿರುವ ಕಾದಂಬರಿಯನ್ನು ಮುಗಿಸಿಬಿಡುತ್ತೇನೆ. ಹೋಗೋಣ"—ಎಂದಳು ಸರಳಾ.

ಸಂಜೆ ನಾಲ್ಕು ಗಂಟೆಯ ವೇಳೆಗೆ ಗಂಡ, ಹೆಂಡತಿ ಇಬ್ಬರೂ ಮನೆ ಬಿಟ್ಟರು. ಸರಳೆ ಮೂರು ಗಂಟೆಯಿಂದಲೂ ಕನ್ನಡಿಯ ಮುಂದೆ ಕುಳಿತು

ಅಲಂಕರಿಸಿಕೊಂಡಳು. ನವಿರಾದ ಜಾರ್ಜೆಟ್ ಸೀರೆ, ಮಕಮಲ್ಲಿನ ರವಿಕೆ ಧರಿಸಿ, ಕಿವಿಗೆ ಜುಮುಕಿಯನ್ನು ಹಾಕಿಕೊಂಡಳು.

ಸೊಸೆ ಹೊರಟಾಗ ರಂಗವ್ವ ಬಾಗಿಲಿನಲ್ಲಿ ನಿಂತು ಕಣ್ತುಂಬ ಸೊಸೆಯನ್ನು ನೋಡುತ್ತಿದ್ದರು.

"ಸರಳಾ, ಬರುವಾಗ ಹೊತ್ತಾಗುತ್ತದೆ. ಹಸಿವಾಗುವುದಿಲ್ಲವೇನೇ?"—ಎಂದರು

"ಆಗುತ್ತದೆ ಏನು ಮಾಡೋದು?"

"ಸ್ವಲ್ಪ ಮೊಸರನ್ನ ತಿನ್ನುತ್ತೀಯಾ?"

"ಹೂಂ."

"ಬೇಡ ನಡಿ, ಹೊತ್ತಾಗುತ್ತೆ"—ಎಂದ ವಾಸು.

"ಬಸುರಿ ಹುಡುಗಿ ಅನ್ನ ತಿನ್ನುತ್ತೀನಿ ಎಂದರೆ ಬೇಡಾಂತ ಹೇಳಲು ನಿನಗೆ ಬಾಯಾದರೂ ಹೇಗೆ ಬಂತು"—ಎಂದು ರಂಗವ್ವ ವಾಸುವನ್ನು ಛೀಸಿದರು.

ಸರಳೆ ಗಂಡನ ಕಡೆ ನೋಡಿ ನಕ್ಕು ಒಳಗೆ ಹೋದಳು. ಅವಳು ಊಟ ಮುಗಿಸಿ ಹೊರಗೆ ಬರುವವರೆವಿಗೆ ವಾಸು ಅಸಹನೆಯಿಂದ ಪಡಸಾಲೆಯಲ್ಲಿ ತಿರುಗಾಡುತ್ತಿದ್ದ. ಸರಳೆ ಊಟ ಮುಗಿಸಿ ಕೈಮೇಲೆ ಸಣ್ಣ ಶಾಲು ಹಾಕಿಕೊಂಡು ಬಂದಳು.

"ಶಾಲು ಯಾಕೆ?"

"ಬರುವಾಗ ಹೊತ್ತಾಗಬಹುದು. ಥಂಡಿಯಾಗುತ್ತದೆ. ಇತಲಿ ಎಂದರು ಅತ್ತೆ."

ವಾಸು, ಸರಳಾ ಬೀದಿಗಿಳಿದರು. ಎದುರಿನಿಂದ ರಾಜಗೋಪಾಲನ ಕಾರು ಸದ್ದು ಮಾಡುತ್ತಾ ಬಂತು. ಕಾರನ್ನು ಗುರುತಿಸಿ ಸರಳಾ

"ರಾಜು ಬರುತ್ತಿದ್ದಾನೆ. ನಾನಿವತ್ತು ಬರೋದಿಲ್ಲ. ನೀವು ಹೋಗಿ ಬನ್ನಿ"—ಎಂದಳು.

ವಾಸುವಿನ ಮನಸ್ಸು ಮತ್ಸರದಿಂದ ಕುದಿಯಿತು.

"ಹಾಗೇ ಮಾಡು. ನನಗೆ ಒಬ್ಬನಿಗೇ ಹೋಗೋಕೆ ಬೇಜಾರು. ಅರುಂಧತೀನ ಕರೆದುಕೊಂಡು ಹೋಗ್ತೀನಿ"—ಎಂದ ವಾಸು.

ಸರಳೆಯ ಉತ್ಸಾಹ ಇಳಿಯಿತು.

"ಹೊರಟಿದ್ದಾಗಿದೆ. ಏನ್ಮಾಡೋದು? ನಾನೇ ಬರ್ತೀನಿ" - ಎಂದಳು ಸರಳಾ.

ರಾಜಗೋಪಾಲ ಕಾರನ್ನು ನಿಲ್ಲಿಸಿದ.

"ಎಲ್ಲಿಗೆ ಹೊರಟಿದ್ದೀರಿ?"—ಎಂದನಾತ

"ಸಂಗೀತ ಕಛೇರಿಗೆ ಹೊರಟಿದೀವಿ"—ವಾಸುವೇ ಹೇಳಿದ.

"ಸರಳಾನೂ ಸಂಗೀತ ಕೇಳೋಕೆ ಹೊರಟಿದ್ದಾಳೆಯೋ?"

"ಹೂಂ."

"ಆಶ್ಚರ್ಯ"—ಎಂದ ರಾಜಗೋಪಾಲ.

ತಾನು ಬಂದಾಗ ಅವರಿಬ್ಬರೂ ಹೊರಗೆ ಹೊರಟಿರುವುದನ್ನು ನೋಡಿ ಅವನಿಗೆ ನಿರಾಶೆಯಾಯಿತು. ಸರಳಾ ಕಾರಿನ ಸಮೀಪದಲ್ಲಿ ನಿಂತು

"ರಾಜೂ, ನಾಳೆ ಬಾ. ಖಂಡಿತ ಮನೆಯಲ್ಲಿರುತ್ತೇವೆ"

"ಆಗಲಿ. ಬನ್ನಿ, ನಿಮ್ಮನ್ನು ಕರೆದುಕೊಂಡುಹೋಗಿ ಬಿಡ್ತೀನಿ" —ಎನ್ನುತ್ತಾ ರಾಜಗೋಪಾಲ ಕಾರಿನ ಬಾಗಿಲನ್ನು ತೆಗೆದ.

ವಾಸುವಿಗೆ ರಾಜಗೋಪಾಲನ ಕಾರಿನಲ್ಲಿ ಹೋಗುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ಸರಳೆಯನ್ನು ನಡೆಸಿಕೊಂಡು ಕರೆದುಕೊಂಡು ಹೋಗುವುದು ಇಷ್ಟವಿರಲಿಲ್ಲ. ಆದುದರಿಂದ ಸರಳೆಯ ಹಿತದೃಷ್ಟಿಯಿಂದ ವಾಸು ವಿಧಿಯಿಲ್ಲದೆ ಕಾರನ್ನು ಹತ್ತಿದ.

ದಾರಿಯುದ್ದಕ್ಕೂ ಸರಳೆ ರಾಜಗೋಪಾಲನೊಡನೆ ನಗುನಗುತ್ತಾ ಮಾತನಾಡತೊಡಗಿದಳು. ಅವನೂ ಗಳಿಗೆಗೊಪ್ಪತ್ತು ಸಲ ಸರಳೆಯೊಡನೆ ಮಾತನಾಡುವ ನೆಪದಿಂದ ಅವಳ ಚೆಲುವನ್ನು ಹೀರುತ್ತಿದ್ದಾನೆ ಎಂದೇ ವಾಸು ಭಾವಿಸಿದ.

ಕೊನೆಗೆ ವ್ಯಂಗ್ಯ, ತಮಾಷೆ ಎರಡನ್ನೂ ಬೆರೆಸಿ ವಾಸು ರಾಜ ಗೋಪಾಲನಿಗೆ ಹೇಳಿದ "ರಸ್ತೆಯ ಮೇಲೆ ನಿಗಾ ಇರಲಿ."

"ನಮ್ಮ ರಾಜು ಹೊಗಸಾದ ಡ್ರೈವರು"— ಎಂದಳು ಸರಳೆ. ಅವಳು 'ನಮ್ಮ ರಾಜು' ಎಂದು ಹೇಳಿದುದನ್ನು ಕೇಳಿ ವಾಸುವಿಗೆ ಬಹಳ ಅಸಮಾಧಾನವಾಯಿತು. ಅವನು ಸೀಟನ್ನೊರಗಿಕೊಂಡು ಮೌನವಾಗಿ ಕುಳಿತು ಬಿಟ್ಟ.

ರಾಜಗೋಪಾಲನೊಡನೆ ಸರಳೆ ಅರಳು ಹುರಿದಂತೆ ಮಾತನಾಡು ತ್ತಲೇ ಇದ್ದಳು.

"ಸರಳಾ, ಅಮ್ಮ ನಿನ್ನ ನೋಡಬೇಕೂಂತಿದಾಳೆ. ನಿನಗೆ ಯಾವ ದಿನ ಬಿಡುವಿರುತ್ತದೆಯೋ ಆವತ್ತು ನನಗೊಂದು ಕಾಗದ ಹಾಕಿದರೆ ನಿನ್ನ

ಬಂದು ಕರೆದುಕೊಂಡು ಹೋಗುತ್ತೇನೆ"—ಎಂದ ರಾಜಗೋಪಾಲ.

ರಾಜಗೋಪಾಲ ಸರಳೆಯನ್ನು 'ನೀನು, ತಾನು' ಎಂದು ಮಾತ ನಾಡಿಸುವುದು ವಾಸುವಿಗೆ ಹಿಡಿಸಲಿಲ್ಲ.

ಸಧ್ಯ! ಕೊನೆಗೂ ಪುರಭವನ ಸಿಕ್ಕಿತು.

ವಾಸು ಪಂಜರದಿಂದ ಬಿಡುಗಡೆ ಹೊಂದಿದ ಹಕ್ಕಿಯಂತೆ ಕೆಳಗಿಳಿದ.

ಸರಳೆ ಕೆಳಗಿಳಿದು ಕಾರಿನ ಬಾಗಿಲನ್ನೊರಗಿ ನಿಂತು ಮತ್ತೆ ಹತ್ತು ನಿಮಿಷ ರಾಜಗೋಪಾಲನೊಡನೆ ಮಾತನಾಡಿದಳು. ರಾಜಗೋಪಾಲ ಸರಳೆಯನ್ನು ರೇಗಿಸಿದ

"ಕಳ್ಳಿ, ನೀನೊಂದು ಕತೆ ಬರೀತಿದೀ ಅಲ್ಲಾ? ಅದು ನಿನ್ನ ಮಹಾ ಕೃತಿ ಅಲ್ಲಾ? ಮುಗಿಯಲು ಏಳೆಂಟು ತಿಂಗಳು ಬೇಕು ಅಲ್ಲಾ?"

ಅದಕ್ಕೆ ಸರಳೆಯ ಉತ್ತರ—ನಗು.

ರಾಜಗೋಪಾಲ ಸರಳೆಯ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುವ ನೆಂದು ವಾಸು ಬೆಂಕಿಬೆಂಕಿಯಾದ. ಕೊನೆಗೆ

"ನೀನು ಬೇಕಾದರೆ ಇಲ್ಲೇ ಇರು. ತಡವಾಗಿ ಹೋದರೆ ಸೀಟು ಸಿಕ್ಕುವುದಿಲ್ಲ" ಎಂದ

ಸರಳೆ ಎಚ್ಚರಗೊಂಡಳು. ರಾಜಗೋಪಾಲನಿಗೆ 'ಥ್ಯಾಂಕ್ಸ್' ಹೇಳಿ ದಳು ಕಾರು ಕಣ್ಮರೆಯಾಗುವವರೆವಿಗೂ ಅಲ್ಲಿಯೇ ಶಿಲಾಪ್ರತಿಮೆಯಂತೆ ನಿಂತಳು.

"ನಮ್ಮ ರಾಜೂ ಚಿನ್ನದಂತಹ ಹುಡುಗ. ಅವನಿಗೊಂದು ಸರಿಯಾದ ಹುಡುಗಿ ಸಿಗಲಿ ಎಂದು ಅತ್ತೆ ಹಂಬಲಿಸುತ್ತಿದ್ದಾರೆ. ನಿಮ್ಮಲ್ಲಿ ಯಾರೂ ಅವನಿಗೆ ಸರಿಯಾದ ಹುಡುಗಿ ಇಲ್ಲವೇ? ಇದ್ದರೆ ಹೇಳಿ."

"ನಾನೇನೂ ಮದುವೆ ದಳ್ಳಾಳಿಯಲ್ಲ"—ಎಂದ ವಾಸು.

ಸಂಗೀತ ಮಂದಿರದಲ್ಲಿ ಸರಳೆ ಹೆಂಗಸರ ಗುಂಪಿನಲ್ಲಿ ಹೋಗಿ ಕುಳಿ ತಳು. ಕಛೇರಿ ಶುರುವಾಯಿತು.

ಸರಳಾ ಸುತ್ತಲೂ ನೋಡತೊಡಗಿದಳು. ಆಗಾಗ್ಗೆ ತಾನು ಸಂಗೀತ ಕೇಳಲೋಸುಗ ಬಂದವಳು ಎಂಬ ಅಂಶ ಹಠಾತ್ತನೆ ನೆನಪಿಗೆ ಬರುತ್ತಿತ್ತು.

ಕಾಲು ಗಂಟೆಯಾಯಿತು, ಅರ್ಧ ಗಂಟೆಯಾಯಿತು. ಸರಳೆಗೆ ಬೆನ್ನು ನೋಯತೊಡಗಿತು. ಅವಳಿಗೆ ಯಾವಾಗಲೂ ಗೋಡೆಗೊರಗಿಕೊಂಡು ಕುಳಿತೇ ಅಭ್ಯಾಸವಾಗಿತ್ತು. ಓದಬೇಕಾದರೆ ಹಾಸಿಗೆಯ ಮೇಲೆ ಮಲಗಿ

ಕೊಂಡೇ ಓದುತ್ತಿದ್ದಳು. ಈಗ ಅವಳಿಗೆ ಕಾಲು ಮಡಿಸಿಕೊಂಡು ಕುಳಿತಿದ್ದುದರಿಂದ ಕಾಲೆಲ್ಲಾ ನೋಯುತೊಡಗಿತ್ತು. ಹೀಗೆ ನೆಲದ ಮೇಲೆ ಕುಳಿತುಕೊಳ್ಳುವುದೆಂದು ಮೊದಲೇ ತಿಳಿದಿದ್ದರೆ ಅವಳು ಖಂಡಿತವಾಗಿಯೂ ಮುತ್ತಿನಂತಹ ಜಾರ್ಜೆಟ್ ಸೀರೆಯನ್ನು ಉಟ್ಟು ಬರುತ್ತಿರಲಿಲ್ಲ. ಅವಳು ಆಗಾಗ್ಗೆ ಕುಳಿತುಕೊಳ್ಳುತ್ತಿದ್ದ ಭಂಗಿಯನ್ನು ಬದಲಾಯಿಸುತ್ತಿದ್ದುದರಿಂದ ಅವಳ ಸೀರೆ ಮುದುರಿ ಸುಕ್ಕಾಗಿತ್ತು. ಸೀರೆಗಾದ ಗತಿ ನೋಡಿ ಸರಳೆಗೆ ಕಣ್ಣಿನಲ್ಲಿ ನೀರೇ ಬರುವಂತಾಯಿತು.

ರಾತ್ರಿ ಹನ್ನೊಂದು ಗಂಟೆಗೆ ಸಂಗೀತ ಮುಗಿಯಿತು. ಜನರು ಸಂಗೀತ ವಿಮರ್ಶೆ ಮಾಡುತ್ತಾ ಗುಂಪುಗುಂಪಾಗಿ ಹೊರಗೆ ಹೊರಟರು. ವಾಸು ಸರಳೆಗಾಗಿ ಕಾಯುತ್ತಿದ್ದ.

ಸರಳೆಯನ್ನು ಕಂಡ ಕೂಡಲೇ ವಾಸು ಕೇಳಿದ

"ಹೇಗಿತ್ತೇ ಸಂಗೀತ?"

"ಚೆನ್ನಾಗಿತ್ತು"—ಎಂದಳು ಸರಳಾ.

ರಾತ್ರಿಯ ಊಟ ಮುಗಿಸಿ ಸರಳೆ ಮಲಗಿದ್ದಳು. ವಾಸು ಕೇಳಿದ "ಆಠಾಣಾ ರಾಗದ ಕೀರ್ತನೆ 'ಏಲ ನೀ ದಯರಾದೂ'—ತುಂಬಾ ಚೆನ್ನಾಗಿತ್ತು ಅಲ್ವಾ?"

"ಹೂಂ. ನೋಡೀಂದ್ರೆ ನನ್ನ ಪಕ್ಕದಲ್ಲಿ ಒಬ್ಬಳು ಹುಡುಗಿ ಕುಳಿತಿದ್ದಳು. ಅವಳೆಷ್ಟು ಚೆನ್ನಾಗಿದ್ದಳು ಗೊತ್ತೆ?"

"ಕಂಡ ಕಂಡ ಹೆಂಗಸರನ್ನೆಲ್ಲಾ ನೋಡಕ್ಕಲ್ಲ ನಾನು ಹೋಗಿದ್ದು"-ಎಂದ ವಾಸು.

"ಆಹಾ, ಶುಕಮುನಿ ನೀವು."

"ಹಂಸಧ್ವನಿಯ ವಾತಾಪಿ ಗಣಪತಿ...."

ವಾಸುವಿನ ಮಾತನ್ನು ತಡೆದು ಸರಳೆ ಅರ್ಧದಲ್ಲಿಯೇ ಹೇಳಿದಳು

"ನೀವು ಹಂಸ ಎನ್ನುತ್ತಲೇ ನನಗೆ ನೆನಪಿಗೆ ಬಂತು. ಆ ಹುಡುಗಿ ಹಂಸದ ಬಾರ್ಡರಿನ ಆಕಾಶ ಬಣ್ಣದ ಕಾಂಜೀವರಂ ಸೀರೆ ಉಟ್ಟಿದ್ದಳು. ಬೆಲೆ ನೂರೆಂಟು ರೂಪಾಯಿ ಮಾತ್ರವಂತೆ. ಆದರೂ ಸೀರೆ ಮಾತ್ರ ತುಂಬಾ ಡಬ್ಬಾಗಿತ್ತೂಂದ್ರೆ. ನನಗೊಂದು ಅಂತಹ ಸೀರೆ ಬೇಕು."

ಸರಳೆ ಸರಳ ರೀತಿಯಿಂದ ತನ್ನ ಮನೋಭಿಲಾಷೆಯನ್ನು ಪ್ರಾಣಪ್ರಿಯನಿಗೆ ತಿಳಿಸಿದಾಗ ಪ್ರಿಯನ ಪ್ರಾಣ ಅರ್ಧ ಹಾರಿಹೋದಂತಾಯಿತು.

ಅವನು ಹೆಂಡತಿಯಿತ್ತ ಪ್ರಹಾರದಿಂದ ಚೇತರಿಸಿಕೊಂಡು ದೇಶಾವರಿ ನಗೆ ಬೀರುತ್ತಾ

"ಸರಳೇ ನೀನು ಸುಂದರಿ, ಸುಂದರಿಯರಿಗೆ...." ಎನ್ನುವಷ್ಟರಲ್ಲಿ ಸರಳೆ ಮುನಿದು

"ಬಿಡಿ ವಾದ ಸಾಕು"-ಎಂದವಳೇ ಮುಸುಕು ಹಾಕಿಕೊಂಡುಬಿಟ್ಟಳು.

ಸರಳೆಯ ಬಯಕೆಯನ್ನು ಪೂರೈಸದಿರಲು ಸಾಧ್ಯವೇ?

ವಾಸು ಒಂದು ಬಿಡುವಿನ ದಿನ ಸರಳೆಯೊಡನೆ ಶಹರಿನಲ್ಲಿರುವ ಪ್ರತಿಯೊಂದು ಜವಳಿ ಅಂಗಡಿಗೂ ಭೇಟಿ ಕೊಟ್ಟ. ಅಂಗಡಿಯವರು ನೂರಾರು ಸೀರೆಗಳನ್ನು ಸರಳೆಯ ಮುಂದೆ ಹರಡಿದರು. ಸೀರೆಯನ್ನು ಬಿಚ್ಚಿ ಅಂಚು, ಸೆರಗನ್ನು ಅವಳ ಮುಖದ ಎದಿರು ಹಿಡಿದರು.

ಆದರೆ ಸರಳೆ ತಲೆ ಅಲುಗಿಸಿದಳು.

"ಆ ಸೀರೆ ಇನ್ನೂ ತೆಳುವಾಗಿತ್ತು. ಬಣ್ಣ ಇನ್ನೂ ಹೊಳಪಾಗಿತ್ತು. ಆ ಅಂಚಿನಲ್ಲಿದ್ದ ಹಂಸ ಕೊರಳು ಬಗ್ಗಿಸಿಕೊಂಡಿತ್ತು. ಈ ಸೀರೆಯಲ್ಲಿರುವ ಹಂಸದ ಹಾಗೆ ಆಕಾಶದ ಕಡೆ ತಿರುಗಿರಲಿಲ್ಲ. ಸೂರ್ಯ ಮುಳುಗುವಾಗಿನ ಆಕಾಶ ನೀಲಿ ನನಗೆ ಬೇಡ. ಸೂರ್ಯ ಹುಟ್ಟುವಾಗಿನ ಆಕಾಶ ನೀಲಿ ಬೇಕು...." ಇತ್ಯಾದಿ.

ವಾಸುವಿಗೆ ರೇಗಿಹೋಯಿತು. ಅವನು ಕೇಳಿದ

"ಸೂರ್ಯ ಹುಟ್ಟುವಾಗಿನ ಆಕಾಶ ನೀಲಿ ನಿನಗೇನು ಗೊತ್ತು ಸರಳಾ? ಆಗ ನೀನು ಎದ್ದೇ ಇರುವುದಿಲ್ಲ...."

ಸರಳೆ ಕಣ್ಣರಳಿಸಿ ವಾಸುವನ್ನು ನೋಡಿದಳು.

ಸರಳೆಯ ಪರದಾಟ ನೋಡಿ ಕೊನೆಗೆ ಅಂಗಡಿಯವನು ಕೇಳಿದ

"ತಾಯೀ, ನೀವು ನಿಮ್ಮ ಸ್ನೇಹಿತರನ್ನು ಸೀರೆ ಎಲ್ಲಿ ತಗೊಂಡಿರಿ ಎಂದು ವಿಚಾರಿಸಿಕೊಂಡು ಬನ್ನಿ."

ಸರಳೆಗೆ ಒಪ್ಪಿಗೆಯಾಯಿತು.

ಅವಳು ವಾಸುವಿನ ಕಡೆ ತಿರುಗಿ "ಹಾಗಾದರೆ ಮತ್ತೊಂದು ಸಂಗೀತ ಕಛೇರಿಯಾಗುವವರೆವಿಗೆ ನಾವು ಕಾಯಬೇಕು"—ಎಂದಳು.

ಹಾಗೆ ಮಾಡದೇ ವಿಧಿಯಿಲ್ಲ. ಈ ಶಹರಿನ ಜವಳಿ ಅಂಗಡಿಗಳನ್ನೆಲ್ಲಾ ಜಾಲಾಡಿದ್ದಾಯಿತು. ಹಾಗೆಯೇ ಮಾಡೋಣ"—ಎಂದ ವಾಸು.

ವಾಸು, ಸರಳೆಯರು ಮನೆಗೆ ಹಿಂತಿರುಗಿದರು. ಅಂದಿನಿಂದ ಸರಳೆ ಪ್ರತಿದಿನವೂ ವಾಸುವನ್ನು ಪ್ರಶ್ನಿಸಲಾರಂಭಿಸಿದಳು

"ಸಂಗೀತ ಕಛೇರಿ ಯಾವತ್ತು ಇದೆ?"

ರಂಗಮ್ಮನವರಂತೂ ಸೊಸೆ ಸಂಗೀತದ ಮೇಲೆ ವ್ಯಕ್ತಪಡಿಸುತ್ತಿರುವ ಅಭಿಮಾನ ಕಂಡು ಹಿಗ್ಗಿ ಹೋದರು.

"ಲೋ ವಾಸೂ, ಸರಳಾ ಸಂಗೀತ ಕೇಳಬೇಕೂಂತಾಳೆ. ಕರೆದು ಕೊಂಡು ಹೋಗೋ"—ಎಂದರಾಕೆ ಮಗನಿಗೆ.

ಕೊನೆಗೂ ವಾಸು ಒಂದು ಶುಭ ಸುದ್ದಿ ಸರಳೆಗೆ ತಂದ.

"ನಾಳಿದ್ದು ಟೌನ್‌ಹಾಲಿನಲ್ಲಿ ಮಹಾಲಿಂಗಂನ ಕೊಳಲಿದೆ."

ಸರಳೆಯ ಮುಖ ಊರಗಲವಾಯಿತು. ಅವಳು

"ಅಲ್ಲಾಂದ್ರೆ, ಸಂಗೀತ ಕಛೇರಿಗೆ ಬರುವಾಗ ಅದೇನು ಅಸಹ್ಯ—ಹಾಗೆ ಎಲೆ ಅಡಿಕೆ ಹಾಕಿಕೊಂಡು ನಾಯಕಸಾನಿಯರ ಹಾಗೆ ಬರೋದು? ಅದಕ್ಕೆ ಬದಲು ತುಟಿಗೆ ರಂಗು ಹಚ್ಚಿದರೆ ಎಷ್ಟೋ ಗಂಭೀರವಾಗಿರುತ್ತದೆ. ನನ್ನ ಸ್ನೇಹಿತೆ ಕಾಮಾಕ್ಷಿ ಹೋದಸಲ ಸಂಗೀತ ಕಛೇರಿಗೆ ಬಂದಿದ್ದಳು. ಅಬ್ಬ! ಅದೇನು ಜಂಭ ಅವಳಿಗೆ! ನನ್ನ ಕಂಡರೂ ಕಾಣದ ಹಾಗೆ ಹೊರಟು ಹೋದಳು. ಆದುದರಿಂದ ನಾನೂ ಅವಳನ್ನು ಮಾತನಾಡಿಸಲಿಲ್ಲ. ಮಹಾ ಅವಳ ಜಂಭ ನನ್ನೇನು ಮಾಡೀತು....ನೀವು ಏನೇ ಹೇಳಿ ಸಂಗೀತ ಕೇಳಲು ಬರುವವರು ಮಕ್ಕಳನ್ನು ಖಂಡಿತ ಕರೆದುಕೊಂಡು ಬರಬಾರದು...."

ಸರಳೆ ಮಾತನಾಡುತ್ತಲೇ ಇದ್ದಳು. ವಾಸು ಸಿದ್ದೆ ಹೋದ.

ಸಂಗೀತ ಕಛೇರಿಯಿದ್ದ ದಿನ ಸರಳೆಯ ಸಂಭ್ರಮ ಹೇಳತೀರದು. ಸಂಜೆಯಾಗುವುದನ್ನೇ ಅವಳು ಎದಿರುನೋಡುತ್ತಿದ್ದಳು.

ಕೈಮಗ್ಗದ ಕಿತ್ತಳೇ ಬಣ್ಣದ ಸೀರೆಯುಟ್ಟು, ಕಡುಹಸುರಿನ ರವಿಕೆ ತೊಟ್ಟು, ಹೆಳಲು ಹಾಕಿ ಸರಳಾ ಶೃಂಗಾರವಾದಳು.

"ಈ ಸೀರೆಗೆ ಹಸಿರು ಒಪ್ಪುತ್ತದೆಯೇನ್ರೀ?"—ಎಂದಳು ಸರಳಾ—ವಾಸುವಿನ ಮುಂದೆ ನಿಂತು.

"ಹೂಂ."

"ಅಥವಾ ಕಡುಗೆಂಪು ಒಪ್ಪುತ್ತದೆಯೋ?"

"ನಿನಗೆ ಯಾವುದಾದರೂ ಒಪ್ಪುತ್ತದೆ" ಎಂದು ವಾಸು ಜಾಣತನದಿಂದ ಜಾರಿಕೊಂಡ.

ಅವರು ಮನೆಗೆ ಬಂದಾಗ ರಾತ್ರಿ ಹತ್ತುಗಂಟೆಯಾಗಿತ್ತು. ಈ ದಿನ ವಾಸು ಸಂಗೀತವನ್ನು ಸರಳೆಯ ಮುಂದೆ ವಿಮರ್ಶಿಸುವ ಹವ್ಯಾಸಕ್ಕೆ

ಹೋಗಲಿಲ್ಲ. ತೋಡಿರಾಗದ ಕೀರ್ತನೆಯ ವಿಷಯ ಹೇಳಿದರೆ ಅವಳೆಲ್ಲಿ ತನಗೊಂದು ಚಿನ್ನದ ತೋಡ ಬೇಕೆಂದು ಹಠ ಹಿಡಿಯುತ್ತಾಳೋ ಎಂಪವ ನಿಗೆ ಭಯ. ಆದುದರಿಂದ ವಾಸು ಈ ಬಾರಿ ಜಾಣನಾದ.

ಊಟ ಮುಗಿಸಿ ರೂಮಿಗೆ ಬಂದಕೂಡಲೇ ಸರಳೆ ಹಿಗ್ಗಿನಿಂದಷೇಳಿದಳು

"ರೀ, ಇವತ್ತು ಒಬ್ಬಳು ಹುಡುಗಿ ಒಂದು ಮುತ್ತಿನ ಕೆನ್ನೆ ಸರಪಳಿ ಹಾಕಿಕೊಂಡಿದ್ದಳು. ತುಂಬಾ ಚೆನ್ನಾಗಿತ್ತು. ಹೋದ ಸಲದ ಹಾಗೆ ಪೆಚ್ಚಾಗ ಬಾರದೆಂದು ಅದರವಿಷಯವೆಲ್ಲಾ ವಿವರವಾಗಿ ತಿಳಿದುಕೊಂಡು ಬಂದಿದೀನಿ"

ವಾಸು ಕುರ್ಚಿಯಲ್ಲಿ ಕುಳಿತಿದ್ದವನು ಹಾಗೆಯೇ ಹಿಂದಕ್ಕೊರಗಿದ

ಚಿನ್ನದ ಮುತ್ತಿನ ಕೆನ್ನೆ ಸರಪಳಿಗಿಂತಲೂ ಸೀರೆಯೇ ವಾಸಿಯೆನಿಸಿತು ವಾಸುವಿಗೆ.

"ಸರಿ. ಸರಳಾ ಹಸಿರು ಸೀರೆ, ಹಂಸದ ಅಂಚು—ವಿವರ ವಿಚಾರಿ ಸಿದೆಯಾ?"—ಎಂದ ವಾಸು.

"ಹಸಿರಲ್ಲಾಂದ್ರೆ. ನೀಲಿ ಸೀರೆ.." ಸರಳೆ ಅಸಹನೆಯಿಂದ ನುಡಿದಳು.

"ಸರಿ ಎಂತಹದೋ ಒಂದು. ವಿಚಾರಿಸಿದೆಯಾ ?" ಸರಳೆಗೆ ಈಗ ನೀಲಿ ಬಣ್ಣದ ಹಂಸದಂಚಿದ್ದ ಸೀರೆಯಲ್ಲಿ ಆಸಕ್ತಿ ಕೊಂಚವೂ ಇರಲಿಲ್ಲ. ಹೊಟ್ಟೆಯಲ್ಲಿ ಒಬ್ಬಮಗ ಹುಟ್ಟಿದೊಡನೆ ಮಲಮಗನನ್ನು ದೂರ ಮಾಡುವ ಮಲತಾಯಿಯಂತೆ, ಸರಳಾ ಈಗ ನೀಲಿ ಸೀರೆಯನ್ನು ಸಂಪೂರ್ಣವಾಗಿ ತನ್ನ ಮನಸ್ಸಿನಿಂದಾಚೆಗೆ ತಳ್ಳಿ ಬದಲು ಅಲ್ಲಿ ಚಿನ್ನದ ಮುತ್ತು ಪೋಣಿಸಿದ್ದ ಕೆನ್ನೆ ಸರಪಳಿಯನ್ನು ಪ್ರತಿಷ್ಠೆ ಮಾಡಿದ್ದಳು.

"ಅಯ್ಯೋ, ನೀವಿನ್ನೂ ಆ ಸೀರೆ ವಿಷಯ ಮರೆತೇ ಇಲ್ಲವೇ ?" ಎಂದಳು ಸರಳಾ.

"ನೀನು ಮರೆಯೋಕೆ ನನಗೆ ಅವಕಾಶ ಕೊಡಲಿಲ್ಲ"—ಎಂದ ವಾಸು

"ಸಧ್ಯಕ್ಕೆ ನನಗೆ ಸೀರೆ ಬೇಡಿ. ಬದಲು ಆ ರೀತಿಯ ಕೆನ್ನೆ ಸರಪಳಿ ಮಾಡಿಸಿಕೊಡಿ. ಒಂದುಜೊತೆಗೆ ಒಂದುತೊಲ ಚಿನ್ನ ಬೇಕಾಗುತ್ತದಂತೆ. ಅರ್ಧ ತೊಲಕ್ಕೂ ಮಾಡುತ್ತಾರಂತೆ. ಆದರೆ ಅದು ಗಟ್ಟಿಯಾಗಿರುವುದಿಲ್ಲ ವಂತೆ. ಒಂದೊಂದು ಕೆನ್ನೆ ಸರಪಳಿಗೂ ಆರು ಮುತ್ತುಗಳು—ಅಂದರೆ ಒಟ್ಟು ಹನ್ನೆರಡು ಮುತ್ತುಗಳು ಬೇಕಾಗುತ್ತವೆ. ಮಜೂರಿ...."

ಸರಳ ಮನಸ್ಸಿನಲ್ಲಿ ಲೆಕ್ಕಾಚಾರ ಮಾಡುತ್ತಿದ್ದಳು.

ವಾಸು ತಲೆಯಮೇಲೆ ಕೈ ಹೊತ್ತು ಕುಳಿತುಬಿಟ್ಟ. ಹೆಂಡತಿಯ ಬಯಕೆಯನ್ನು ಅವನು ಪೂರಯಿಸಲಾರ, ಪೂರಯಿಸದಿರಲಾರ. ಹೀಗಾಗಿ

ವಾಸು ಉಭಯ ಸಂಕಟಕ್ಕೆ ಸಿಕ್ಕಿದ್ದ. 'ಹಣವಿಲ್ಲ'—ಎನ್ನುವ ಕಾರಣವನು ಸರಳೆ ಖಂಡಿತ ಒಪ್ಪುತ್ತಿರಲಿಲ್ಲ. ಪ್ರವಾಸ ಹೋಗುವ ಸಲುವಾಗಿ ವಾಸು ಹಣ ಕೂಡಿಟ್ಟಿರುವ ವಿಚಾರ ಅವಳಿಗೆ ತಿಳಿದಿತ್ತು. ಅಪರೂಪಕ್ಕೆ ತಾಯಿಯಾಗಲಿರುವ ಹೆಂಡತಿಯ ಮನೋಭಿಲಾಷೆಯನ್ನು ಪೂರಯಿಸಬೇಕೇ, ಬೇಡವೇ? ಆಕೆಯ ಮನಸ್ಸನ್ನು ಸರ್ವವಿಧದಿಂದಲೂ ಪ್ರಸನ್ನವಾಗಿಡುವುದು ತನ್ನ ಕರ್ತವ್ಯವಲ್ಲವೇ?

ವಾಸು ಚಿಂತಿಸಿ ಹಣ್ಣಾದ.

"ಒಟ್ಟು ಇನ್ನೂರು ರೂಪಾಯಿಯಾದರೆ ಸಾಕೂಂತ್ರೆ, ಧರ್ಮಶೆಟ್ಟರ ಅಂಗಡಿಯಲ್ಲಿ ಆಕೆ ಮಾಡಿಸಿಕೊಂಡಳಂತೆ—"

ಮಾರನೆಯ ದಿನವೇ ಸರಳೆ ಗಂಡನನ್ನು ಕಟ್ಟಿಕೊಂಡು ಧರ್ಮಶೆಟ್ಟರ ಅಂಗಡಿಗೆ ಹೋದಳು. ಅಲ್ಲಿ ಆತನೊಡನೆ ಚೌಕಾಸಿ ಮಾಡಿ ವಾಸು ಅರ್ಧ ತೊಲದಲ್ಲೇ ಕೆನ್ನೆ ಸರಪಳಿ ಮಾಡುವಂತೆ ಹೇಳಿದ. ಆತ ಹದಿನೈದು ದಿನಗಳ ನಂತರ ಒಡವೆಯನ್ನು ಕೊಡುವುದಾಗಿ ಹೇಳಿದ.

ಸರಳೆಯಂತೂ ಸಂತೋಷದಿಂದ ಹಿಗ್ಗಿ ಹೂವಾದಳು. 'ಇದೂ ಒಂದು ಸಮಯ, ಈಗ ಮನಸ್ಸಿಗೆ ಬೇಕಾದ್ದನ್ನೆಲ್ಲಾ ಮಾಡಿಸಿಕೊಂಡು ಬಿಡಬೇಕು. ಇಂತಹ ಸುಸಮಯ ಮತ್ತೆ ಯಾವಾಗ ಬರುತ್ತದೋ'—ಎಂದವಳು ಯೋಚಿಸಿದಳು.

ವಾಸು, ಸರಳಾ ಮನೆಗೆ ಬಂದಾಗ ರಂಗಮ್ಮನವರು ಮನೆಯಲ್ಲಿರಲಿಲ್ಲ. ಆಕೆ ಮಗಳ ಮನೆಗೆ ಹೋಗಿದ್ದರು. ಸರಳೆ ಹಸಿದ ಹುಲಿಯಾಗಿದ್ದಳು. ರಂಗಮ್ಮನವರು ಹದವಾಗಿ ಮಾಗಿದ ಪರಂಗಿ ಹಣ್ಣನ್ನು ಕೊಂಡು ಅಡಿಗೆ ಮನೆಯ ಬೀರುವಿನಲ್ಲಿಟ್ಟಿದ್ದರು.

ಸರಳೆ ಉತ್ಸಾಹದಿಂದ ಹಣ್ಣು ಹೆಚ್ಚಿ, ತಾನು ಅರ್ಧ ಹಣ್ಣನ್ನು ತಿಂದು ವಾಸುವಿಗೆ ಕಾಲುಭಾಗ ಕೊಟ್ಟು, ಉಳಿದ ಕಾಲು ಭಾಗವನ್ನು ಅತ್ತೆಗೆಂದು ಉದಾರ ಮನಸ್ಸಿನಿಂದ ತೆಗೆದಿರಿಸಿದಳು.

ರಾತ್ರಿ ಎಂಟುಗಂಟೆಯ ಹೊತ್ತಿಗೆ ರಂಗಮ್ಮ ಮನೆಗೆ ಬಂದರು. ಮಗಳ ಮನೆಯಲ್ಲಿ ತಿಂಡಿಗಾಗಿ ಮಾಡಿದ್ದ ಅಂಬೊಡೆಯನ್ನು ಸರಳೆಗೆಂದು ಅವರು ಕೇಳಿ ತೆಗೆದುಕೊಂಡು ಬಂದಿದ್ದರು. ಸರಳೆಗೆ ಪ್ರತಿನಿತ್ಯ ಉಪ್ಪು, ಹುಳಿ, ಖಾರವಾಗಿ ಏನನ್ನಾದರೂ ತಿನ್ನಬೇಕೆನಿಸುತ್ತಿತ್ತು.

"ಸರಳಾ, ಅಂಬೊಡೆ ತಂದಿದೀನಿ, ತಗೋ"—ಎಂದು ಹೇಳುತ್ತಿರು

ವಾಗಲೇ ಅವರ ಕಣ್ಣುಗಳು ಬೀರುವಿನ ಕಡೆ ಹೊರಳಿದವು. ಅವರು ಇರಿಸಿದ್ದ ಪರಂಗಿ ಹಣ್ಣು ಮಾಯವಾಗಿತ್ತು.

"ಸರಳಾ, ಪರಂಗಿ ಹಣ್ಣು ಎಲ್ಲಿ?"

"ತಿಂದುಬಿಟ್ಟೆ."

"ಒಬ್ಬಳೇ ತಿಂದೆಯಾ?"–ರಂಗಮ್ಮನವರು ಗಾಬರಿಯಿಂದ ಕೇಳಿದರು.

"ಇಲ್ಲ. ನಾನು ಅರ್ಧ ತಿಂದು, ನಿಮ್ಮ ಮಗನಿಗೆ ಕೊಂಚ ಕೊಟ್ಟು, ನಿಮಗೆ ಸ್ವಲ್ಪ ಇಟ್ಟಿದ್ದೀನಿ."

"ಅಯ್ಯೋ ಅದನ್ನು ಯಾಕೆ ತಿಂದೆಯೋ? ಪರಂಗಿ ಹಣ್ಣು ಉಷ್ಣ ಎಂದರೆ ವಿಪರೀತ ಉಷ್ಣ. ದೇವರೇ...." ಎನ್ನುತ್ತಾ ರಂಗಮ್ಮನವರು ದೇವರಿಗೆ ತುಪ್ಪದ ದೀಪ ಹಚ್ಚಿ

"ಅವಳಿಗೆ ಏನೂ ಆಗದಿರಲಿ"– ಎಂದು ಸರಳೆಯ ಪರವಾಗಿ ತಾವು ದೇವರಿಗೆ ನಮಸ್ಕಾರ ಮಾಡಿದರು.

ಸರಳೆಗೆ ಭೀತಿಯುಂಟಾಯಿತು. ಅವಳು ಅಳು ದನಿಯಲ್ಲಿ

"ಏನಾಗುತ್ತೆ ಅತ್ತೆ?"—ಎಂದಳು.

"ನಿನ್ನಂತಹವರು ಪರಂಗಿ ಹಣ್ಣು, ಗಿಣ್ಣು ಹಾಲು ಮುಂತಾದವುಗಳನ್ನು ತಿನ್ನಬಾರದಮ್ಮ. ಅಚಾತುರ್ಯವಾಗಿ ಬಿಡುತ್ತದೆ."

ಅತ್ತೆಯ ಮಾತು ಕೇಳಿದ ಕೂಡಲೇ ಸರಳೆಗೆ ಹೊಟ್ಟೆ ನೋಯುತ್ತಿರುವಂತೆ ಭಾಸವಾಯಿತು.

"ಏನು ಗತಿ ಅತ್ತೆ? ಯಾಕೋ ಹೊಟ್ಟೆ ನೋಯುತ್ತಿದೆ."

"ಡಾಕ್ಟರ ಹತ್ತಿರ ಹೋಗೋಣವೇ ಸರಳಾ?"

ಸರಳಾ ಕೂಡಲೇ ವಾಸುವಿನ ಬಳಿಗೋಡಿ ಬಂದಳು. ಹೆದರಿಕೆಯಿಂದ ಅವಳ ಮುಖ ಬಿಳಚಿಕೊಂಡಿತ್ತು.

"ಏನು ಮಾಡಲೀಂದ್ರೆ? ಹೀಗಾಯಿತಲ್ಲಾ...." ಸರಳಾ ಕೈ ಕೈ ಹಿಸುಕಿಕೊಂಡಳು.

ವಾಸುವೂ ಗಾಬರಿಯಾದ. ಹೆಂಡತಿಯ ಮೇಲೆ ಅವನಿಗೆ ಕೊಂಚ ಸಿಟ್ಟೂ ಬಂತು.

"ಮನುಷ್ಯನಿಗೆ ಇಷ್ಟೊಂದು ಹೊಟ್ಟೆ ಹಸಿವಿರಬಾರದು. ಅರ್ಧ ಪರಂಗಿ ಹಣ್ಣು ಒಬ್ಬಳೇ ತಿಂದಿದೀಯ. ನಡಿ ಹೊರಡೋಣ"—ಮಾತ ಆಡುತ್ತಿದ್ದಂತಯೇ ವಾಸು ಕೋಟು ಹಾಕಿಕೊಂಡ.

ವಾಸು, ಸರಳೆ ಸಮೀಪದಲ್ಲಿಯೇ ಹೊಸದಾಗಿ ಷಾಪು ತೆಗೆದಿದ್ದ ಹೊಸ ವೈದ್ಯನ ಬಳಿಗೆ ಬಂದರು.

"ಗಂಡಸರು ಡಾಕ್ಟ್ರೇನ್ರಿ....ಮತ್ತೆ"—ಎಂದಳು ಸರಳಾ.

ವಾಸು ಮಾತನಾಡಲಿಲ್ಲ.

ಷಾಪಿನಲ್ಲಿ ಹಲವರು ರೋಗಿಗಳಿದ್ದರು. ವಾಸು ವೈದ್ಯರನ್ನು ಪ್ರತ್ಯೇಕವಾಗಿ ಕರೆದು ಸರಳೆ ಮಾಡಿದ ಅಪರಾಧವನ್ನು ಪಿಸುಮಾತಿನಲ್ಲಿ ತಿಳಿಸಿದ.

ವೈದ್ಯರಿಗೆ ನಗುಬಂತು.

ಅವರು ಸರಳೆಯನ್ನು ಕರೆದು ನಾಡಿ ನೋಡಿದರು.

"ಏನೂ ಭಯವಿಲ್ಲ. ಆದರೆ ನೀವು ಹೆದರಿಕೊಳ್ಳಬಾರದು. ಪರಂಗಿ ಹಣ್ಣೇನೋ ಉಷ್ಣ. ಆದರೆ ಅದರಿಂದ ಅಪಾಯವಿಲ್ಲ. ನೀವು ಇನ್ನೊಂದು 'ಲ್ಯೂಟೋಸೈಕ್ಲಿನ್' ಮಾತ್ರೆ ತಗೊಳ್ಳಿ. ಜೊತೆಗೆ ಇದು—ನಿದ್ದೆಯ ಮಾತ್ರೆ—ತಗೊಳ್ಳಿ ಆತಂಕ, ಕಳವಳ ಬೇಡ."

ಸರಳೆ ನಿರಾತಂಕವಾಗಿ ಉಸಿರಾಡಿದಳು.

ರಾತ್ರಿ ಸರಳೆ ಎಂದಿಗಿಂತಲೂ ಹೆಚ್ಚು ಊಟಮಾಡಿದಳು. ಪರಂಗಿ ಹಣ್ಣು ಅನ್ನದಲ್ಲಿ ಮುಚ್ಚಿಹೋಗಲಿ ಎಂಬುದೇ ಅವಳ ಒಳ ಉದ್ದೇಶವಾಗಿತ್ತು.

ನಿದ್ರೆಯ ಮಾತ್ರೆಯನ್ನು ನುಂಗಿ ಸರಳೆಯೇನೋ ನಿರಾತಂಕವಾಗಿ ಕಣ್ಣು ಮುಚ್ಚಿ ಮಲಗಿ ನಿದ್ರಿಸಿದಳು. ವಾಸುವಿಗೆ ಮಾತ್ರ ಆತಂಕದಿಂದ ನಿದ್ದೆಯೇ ಬರಲಿಲ್ಲ. ಅವನು ಗಳಿಗೆಗೊಪ್ಪತ್ತು ಸಲ ದೀಪಹಾಕಿ ಸರಳೆಯನ್ನು ನಿಟ್ಟಿಸಿ ನೋಡುತ್ತಿದ್ದ. ಕೊನೆ ಕೊನೆಗೆ ಅವನ ಆತಂಕ ಎಷ್ಟು ಮೇರೆ ಮೀರಿತೆಂದರೆ ಅವನಿಗೆ ತಾನೂ ಡಾಕ್ಟರನ್ನು ಕೇಳಿ ಒಂದು ನಿದ್ದೆ ಗುಳಿಗೆ ತೆಗೆದುಕೊಂಡು ಬರಬೇಕಾಗಿತ್ತು ಎನಿಸಿಬಿಟ್ಟಿತ್ತು.

ಸರಳೆ ಗಂಡಾಂತರದಿಂದ ಪಾರಾದಳು. ರಂಗಮ್ಮನವರು ಸರಳೆಗೆ ಕಟ್ಟಪ್ಪಣೆ ಮಾಡಿದರು

"ಏನನ್ನೂ ನನ್ನ ಕೇಳದೆ ತಿನ್ನಕೂಡದು."

ಸರಳೆ ಒಪ್ಪಿಕೊಂಡಳು.

ಡಾಕ್ಟರು ಕೊಟ್ಟಿದ್ದ ಮೂರು ತಿಂಗಳ ಅವಧಿಯನ್ನು ಸರಳೆ ದಾಟಿದಳು. ಇನ್ನು ಭಯವಿಲ್ಲವೆಂದು ಎಲ್ಲರೂ ನಿರಾತಂಕವಾಗಿ ಉಸಿರಾಡಿದರು. ಆದರೆ ಈ ಅವಧಿಯಲ್ಲಿ ಸರಳೆ ತುಂಬಾ ಸೋಮಾರಿಯಾಗಿ ಬಿಟ್ಟಿದ್ದಳು.

ಕೂತರೆ ಏಳಲು ಅವಳಿಗೆ ಬೇಜಾರಾಗುತ್ತಿತ್ತು. ಎದ್ದರೆ ಓಡಾಡಲು ಬೇಜಾರಾಗುತ್ತಿತ್ತು.

ದೇಹ ಅರಳತೊಡಗಿತ್ತು. ಅದರೊಡನೆ ಸರಳೆಯ ಮನಸೂ ಹೂವಾಗಿತ್ತು. ಸಾಹಿತ್ಯದ ಅಭ್ಯಾಸವೇನೋ ನಿರಾತಂಕವಾಗಿ ಸಾಗಿತ್ತು. ಸಂಗೀತ ಕಛೇರಿಗಳಿಗೆ ಸರಳೆ ಭೇಟಿ ಕೊಡಲು ಉತ್ಸುಕಳಾಗಿದ್ದರೂ ವಾಸುವೇ ಅವಳನ್ನು ಕರೆದುಕೊಂಡು ಹೋಗುವ ಉತ್ಸಾಹ ತೋರಲಿಲ್ಲ.

ಒಮ್ಮೆ ವಾಸು ಸಂಗೀತ ಕಛೇರಿಗೆ ಹೊರಟ. ಸರಳಾ ಅವನೊಡನೆ ಹೋಡಲು ತುದಿಗಾಲಿನಲ್ಲಿ ನಿಂತಿದ್ದಳು.

ವಾಸು "ಬೇಡ ಸರಳಾ: ಅಷ್ಟುಹೊತ್ತು ಕುಳಿತಿರಲು ನಿನಗಾಗುವುದಿಲ್ಲ" – ಎಂದ.

ಸರಳೆಯನ್ನು ಒಂದೊಂದು ಸಂಗೀತ ಕಛೇರಿಗೆ ಕರೆದುಕೊಂಡು ಹೋದಾಗಲೂ ನೂರು ರೂಪಾಯಿಗೆ ಕಡಿಮೆಯಿಲ್ಲದಂತೆ ಜುಲ್ಮಾನೆ ತೆರಬೇಕಾಗುವುದೆಂದು ಅವನು ಅನುಭವದಿಂದ ತಿಳಿದುಕೊಂಡಿದ್ದ. ರಂಗಮ್ಮನವರಿಗೂ ಸೊಸೆ ನಾಲ್ಕೈದು ಗಂಟೆಗಳ ಕಾಲ ನೆಲದ ಮೇಲೆ ಕೂತಿರುಕೊಳ್ಳುವುದು ಸಹನವಾಗಲಿಲ್ಲ. ವಾಸುವಿಗಂತೂ ತನ್ನ ಮಗ ಏನಾದರೂ ಸರಿ ಸಂಗೀತಗಾರನಾಗದಿದ್ದರೂ ಚಿಂತೆಯಿಲ್ಲ ಎನಿಸಿಬಿಟ್ಟಿತ್ತು.

ಹೀಗಾಗಿ ಸಂಗೀತ ಪ್ರಪಂಚ ಒಬ್ಬ ಸಂಗೀತಾಭಿಮಾನಿಯನ್ನು ಕಳೆದುಕೊಂಡಿತು. ವಾಸುವೂ ಮೈ ಚಳಿ ಬಿಟ್ಟು ಹಗುರವಾದ ಮನಸ್ಸಿನಿಂದ ಸಂಗೀತ ಕಛೇರಿಗೆ ಹೋಗತೊಡಗಿದ.

* * *

ಸರಳೆಯ ನೆಂಟರಿಷ್ಟರಿರಲಿ, ಅಕ್ಕಪಕ್ಕದ ಮನೆಯವರೂ ಸರಳೆಯ ವಿಷಯಕ್ಕೆ ಸಂಭ್ರಮ ಪಡುತ್ತಿದ್ದರು.

ವಸುಧಾ "ಸರಳಾ, ಅಮ್ಮ ನುಚ್ಚಿನುಂಡೆ, ಮಜ್ಜಿಗೆ ಹುಳಿ ಮಾಡಿದಾರೆ ಕೊಟ್ಟು ಕಳುಹಿಸಿದಾರೆ" – ಎಂದು ಪಾತ್ರೆಯನ್ನು ಹೊತ್ತುಕೊಂಡು ತರುತ್ತಿದ್ದಳು.

"ಸರಳಾ, ಅಮ್ಮ ಬಟಾಣಿ ಹಾಕಿ ಕೊಟು ಮಾಡಿದಾಳೆ. ನೀವು ಖಂಡಿತ ತಿನ್ನಬೇಕಂತೆ"—ಎನ್ನುತ್ತಾ ಎದಿರು ಮನೆಯ ರಾಮು ಪಾತ್ರೆ ತಂದು ಸರಳೆಯ ಕೈಗೆ ಕೊಡುತ್ತಿದ್ದ.

"ಸರಳಾ ಇದೊಂದು ಹೊಸ ತರಹಾ ಉಪ್ಪಿನ ಕಾಯಿ ಮಾಗಳೀಬೇರಿನದು"—ಎಂದು ವೆಂಕಮ್ಮ ಪುಟ್ಟದೊಂದು ಜಾಡಿಯನ್ನು ತರುತ್ತಿದ್ದರು.

ಗರ್ಭಿಣಿ ಸರಳೆ ಯಾವುದನ್ನೂ 'ಬೇಡ' ಎನ್ನುತ್ತಿರಲಿಲ್ಲ. ಮನೆಯಲ್ಲಿ ಯಾವುದಕ್ಕೆ ಕೊರತೆಯಿಲ್ಲದಿದ್ದರೂ ಅದೇನೋ ಕಂಡವರ ಮನೆಯಲ್ಲಿ ಮಾಡಿದ ಅಡಿಗೆ, ತಿಂಡಿ ಅವಳಿಗೆ ಹೆಚ್ಚು ರುಚಿಕರವಾಗಿ ತೋರುತ್ತಿತ್ತು.

ಈಗಲಂತೂ ಅವಳಿಗೆ ಯಾವಾಗಲೂ ಹಸಿವಾಗುತ್ತಿತ್ತು. ಮಧ್ಯಾಹ್ನ ಹನ್ನೊಂದು ಗಂಟೆಗೆ ಅಚ್ಚುಕಟ್ಟಾಗಿ ಸಾರು, ಹುಳಿ, ಚಟ್ನಿ ಎಲ್ಲದರಲ್ಲಿಯೂ ಎರಡೆರಡು ಸಲ ಕಲಿಸಿಕೊಂಡು ತಿಂದು ಮಲಗಿಬಿಟ್ಟರೆ ಮೂರು ಗಂಟೆಗೆ ಏಳುತ್ತಿದ್ದಳು. ಸರಳೆ ಎದ್ದ ಕೂಡಲೆ ಮೂಸುಂಬಿ, ಸೇಬಿನ ಹಣ್ಣುಗಳನ್ನು ತಿಂದು ತಿಂಡಿಯ ಸಮಯ ಯಾವಾಗ ಬರುವುದೋ ಎಂದು ಕಾಯುತ್ತಿದ್ದಳು. ಈಗ್ಗೆ ಮೂರುವರೆ ತಿಂಗಳಿನಿಂದಲೂ ಸರಳೆಯ ಮನೆಯಲ್ಲಿ ಸಿಹಿ ತಿಂಡಿ ತಪ್ಪಿಹೋಗಿತ್ತು. ಮಧ್ಯಾಹ್ನದ ವೇಳೆಗೆ ಏನಾದರೂ ಎರಡು ಬಗೆಯ ಖಾರದ ತಿಂಡಿ ತಯಾರಾಗುತ್ತಿತ್ತು. ವಾಸು ಕಾಲೇಜಿನಿಂದ ಮನೆಗೆ ಬರುವುದನ್ನೂ ಕಾಯದೇ ಸರಳೆ ತಿಂಡಿ ಮುಗಿಸುತ್ತಿದ್ದಳು. ರಾತ್ರಿ ಊಟದವರೆವಿಗೆ ಹುರಿಗಾಳು, ಹುರಕಲು ಏನಾದರೂ ಬಾಯಾಡಿಸುತ್ತಲೇ ಇದ್ದು ನಂತರ ಸರಳೆ ರಾತ್ರಿ ಊಟ ಮುಗಿಸಿ, ಹಾಲುಕುಡಿದು ಮಲಗುತ್ತಿದ್ದಳು.

ತನಗಾಗುತ್ತಿದ್ದ ಹಸಿವಿನ ಆಳ ನೆನೆದು ಒಮ್ಮೊಮ್ಮೆ ಸರಳೆ ಅಚ್ಚರಿಪಡುತ್ತಿದ್ದಳು.

ಒಂದು ಸಲ ಸರಳೆ ಬೇಗ್ಗೆ ವಾಸುವಿನೊಡನೆ ಊಟಕ್ಕೆ ಕುಳಿತಿದ್ದಳು. ವಾಸು ಮೊಸರನ್ನ ತಿಂದು ಮುಗಿಸಿದ್ದರೂ ಸರಳೆ ಮಾತ್ರ ಎರಡನೆಯ ಬಾರಿ ಚಟ್ನಿಯಲ್ಲಿ ಕಲಸುತ್ತಿದ್ದಳು. ವಾಸು ಊಟ ಮಾಡಿ ಸರಳೆಯೊಡನೆ ಮಾತನಾಡುತ್ತಾ ಕುಳಿತ. ಸರಳೆ ಹುಳಿಯಲ್ಲಿ ಕಲಸಿ ತಿಂದಳು. ಅಷ್ಟರಲ್ಲಿ ರಾಮು 'ಸರಳಾ, ಅಮ್ಮ ಮೆಂತ್ಯದ ಹಿಟ್ಟಿನ ಗೊಜ್ಜು ಕಳಿಸಿದಾಳೆ' ಎನ್ನುತ್ತಾ ಬಂದ. ಸರಳೆ ಅದಕ್ಕೂ ವಂಚನೆ ಮಾಡಲಿಲ್ಲ. ಮುಂದಿನ ಥಾಳಿ ನಿಂಬೆ ಹಣ್ಣಿನ ಅನ್ನದ ಪಾಳಿ ಆಯಿತು

ವಾಸು ಬಿಟ್ಟ ಬಾಯಿ, ನೆಟ್ಟ ಕಣ್ಣಿನಿಂದ ಸರಳೆಯ ಊಟವನ್ನು ನೋಡುತ್ತಿದ್ದ. ಸರಳೆ ಎಂದೂ ಹಾಗೆ ಊಟ ಮಾಡುತ್ತಿರಲಿಲ್ಲ. ಅವನು ಅಚ್ಚರಿಯಿಂದ,

"ಸರಳಾ, ನಿನಗೆ ಬಹುಶಃ ಬಕಾಸುರ ಹುಟ್ಟುತ್ತಾನೆಂತ ತೋರುತ್ತದೆ" – ಎಂದ.

ಸರಳೆ ಅವನನ್ನು ಅಣಕಿಸಿ ಉಪ್ಪಿನಕಾಯಿ ನೆಕ್ಕಿದಳು.

"ಒಳ್ಳೇ ಹಂದಿಯಹಾಗೆ ತಿನ್ನುತ್ತೀಯಲ್ಲೇ"—ವಾಸು ರೇಗಿಸಿದ.

ಸರಳೆಗೆ ಮುಕ್ತ ಹಸ್ತದಿಂದ ಬಡಿಸುತ್ತಿದ್ದ ರಂಗಮ್ಮನವರಿಗೆ ಮಗನ ಮಾತು ಕೇಳಿಸಿತು ಸರಳೆಗೆ ಬಡಿಸುವಾಗ ರಂಗಮ್ಮನವರಂತೂ ಸಾಕ್ಷಾತ್ ಅನ್ನಪೂರ್ಣೆಯಾಗುತ್ತಿದ್ದರು. ಮಾಡಿದ ತಿಂಡಿ ಹೆಚ್ಚಾಗಿಲ್ಲದಿದ್ದರೆ ಮಗನಿಗೆ ವಂಚನೆ ಮಾಡಿ ಮೊಮ್ಮಗುವಿನ ಸಲುವಾಗಿ ತಿಂಡಿಯನ್ನು ಸರಳೆಗೆ ತೆಗೆದಿರಿಸುತ್ತಿದ್ದರು.

"ಛೀ ಎಂತಹ ಮಾತನಾಡ್ತೀಯೋ? ವಸಂತಲಕ್ಷ್ಮಿಯಹಾಗೆ ನಾಲ್ಕು ತಿಂಗಳ ಬಸುರಿ ಹುಡುಗಿ ಪಕ್ಕದಲ್ಲಿ ಕೂತಿದ್ದಾಳೆ. ಅವಳನ್ನು ಹಂದಿಗೆ ಹೋಲಿಸುತ್ತೀಯಾ ? ಬಿಡ್ತು ಅನ್ನು. ಸರಳಾ ನೀನು ಇನ್ನುಮೇಲೆ ವಾಸು ಜೊತೆ ಊಟಕ್ಕೆ ಕೂತುಕೊಳ್ಳಬೇಡಮ್ಮ ನೀನೊಬ್ಬಳೇ ಅಡಿಗೆಮನೆಯಲ್ಲಿ ಕೂತುಕೋ. ಅವನು ನಿನ್ನ ಊಟಕ್ಕೆ ಕಣ್ಣು ಹಾಕುತ್ತಾನೆ"—ಎಂದಾಕೆ ಮಗನ ಮೇಲೆ ರೇಗಿದರು.

ವಾಸು ತೆಪ್ಪನೆ ಎದ್ದುಹೋಗಿ ಕೈ ತೊಳೆದುಕೊಂಡ. ಸರಳೆ ಊಟ ಮುಗಿಸಿ ಕ್ಯಾಲ್ಸಿಯಂ ಮಾತ್ರೆನುಂಗಿ, ನೀರು ಕುಡಿದು ರೂಮಿಗೆ ಬಂದಳು, ಹಾಸಿದ್ದ ಹಾಸಿಗೆಯಮೇಲೆ ಸರಳಾ ಉರುಳಿಕೊಂಡವಳು ತಟ್ಟನೆ ಮತ್ತೆ ಎದ್ದು ಕೂತಳು. ಅವಳ ಮುಖದಲ್ಲಿ ಗಾಬರಿ ಇತ್ತು.

"ಏನಾಯಿತೇ ?"—ಎಂದ ವಾಸು.

"ಏನೋ ಒಂದು ತರಹಾ ಆಯಿತು."

"ತರಹಾ ಅಂದರೆ?"

"ನಿಮಗೆಅದೆಲ್ಲಾ ಹೇಗೆಹೇಳಲಿ?ನಿಮ್ಮಹಿಡಿಯಲ್ಲಿ ಅವರೇಕಾಯಿಹುಳು ಸೆರೆ ಹಿಡಿದಿಟ್ಟರೆ ಅದು ಮಿಲುಗುಟ್ಟಿದಾಗ ನಿಮಗೆ ಹೇಗಾಗುತ್ತದೆ? ಹಾಗೆ...."

"ಓ" ಎಂದು ವಾಸು ನಕ್ಕುಬಿಟ್ಟ.

ಸರಳೆ ಮತ್ತೆ ಆರಾಮವಾಗಿ ಮಲಗಿಕೊಂಡಳು.

"ಈಗ ನಿನ್ನ ಮಾತು ಅಮ್ಮ ಕೇಳಿದ್ದರೆ ಏನು ಹೇಳುತ್ತಿದ್ದಳು ಗೊತ್ತೇ?"

"ಏನು?"

"ಚಂದ್ರನಂತಹ ಮಗೂನ ಅವರೇಕಾಯಿ ಹುಳುಗೆ ಹೋಲಿಸುತ್ತೀಯಾ ಎಂದು ನಿನ್ನ ಬೈಯುತ್ತಿದ್ದಳು."

ಸರಳೆ ನಕ್ಕಳು.

"ನಿಮಗೆ ಹಾಗೆ ಆಗಬೇಕು"—ಎಂದಳಾಕೆ.

"ಸರಳಾ, ಅದು ಯಾಕೆ ನೀನು ಅಷ್ಟೊಂದು ಊಟ ಮಾಡ್ತೀಯಾ"?

"ಅದೇನೋ ಗೊತ್ತಿಲ್ಲ. ಎಷ್ಟು ತಿಂದರೂ ಹಸಿವಾಗುತ್ತಿರುತ್ತದೆ. ಬಹುಶಃ ನೀವು ಹೇಳಿದ ಹಾಗೆ ಅವನು ಬಕಾಸುರನೇ ಇರಬೇಕು."

"ಈಗಲೇ ಅವನು ಹೀಗಾದರೆ ನಾವು ಮುಂದೆ ಅವನನ್ನು ಹೇಗೆ ಸಾಕೋದು ಸರಳಾ? ಆಮೇಲೆ ನನ್ನ ಸಂಪಾದನೆಯೆಲ್ಲಾ ಅವನೊಬ್ಬನಿಗೇ ಸಾಕಾಗುತ್ತದೆ"

"ನಿಮ್ಮ ಸಂಪಾದನೆ! ನನ್ನ 'ಸಂಪಾದನೆ'ಯಲ್ಲಿ ಒಂದೆರಡು ವರ್ಷ ನಾನು ಸಾಕಬೇಕಾಗುತ್ತದೆ ಅಲ್ಲವೇ?"

ವಾಸುವಿಗೆ ಅವಳ ಮಾತು ತಟ್ಟನೆ ಅರ್ಥವಾಗಲಿಲ್ಲ. ಅವಳ ಮಾತಿನ ಅರ್ಥ ಅವನಿಗಾಗುತ್ತಲೇ ವಾಸು ನಗುತ್ತಾ ಅವಳ ಮೂಗು ಹಿಡಿದು ಅಲುಗಿಸಲು ಸರಳೆಯ ಬಳಿಗೆ ಬಂದ.

ಸರಳೆ ಹಿಂಜರಿಯುತ್ತಾ "ನಿಮ್ಮ ದಮ್ಮಯ್ಯಾಂದ್ರೆ, ಮೂಗು ಹಿಂಡಬೇಡಿ. ಸೀನುವಾಗ ಬಲು ಹಿಂಸೆಯಾಗುತ್ತದೆ"—ಎಂದಳು.

ವಾಸು ಮತ್ತೂ ಮುಂದಕ್ಕೆ ಬಂದ.

ಸರಳೆಗೆ ಚಟುವಟಿಕೆಯಿಂದ ಮಂಚದಿಂದ ಇಳಿಯುವುದಾಗಲಿಲ್ಲ. ವಾಸು ಅವಳ ಮೂಗು ಹಿಡಿದು ಅಲುಗಿಸಿದ ಕೂಡಲೇ ಸರಳೆ ಗಟ್ಟಿಯಾಗಿ ಮೂರು ಸಲ ಸೀನಿದಳು

ನಂತರ ಅವಳಿಗೆ ಗಂಡನ ಮೇಲೆ ಅಗಾಧ ಕೋಪ ಬಂತು.

"ಬೇಡಾಂದ್ರೆ ಕೇಳೋದಿಲ್ಲ. ಇನ್ನೊಂದು ದಿನ ನನ್ನ ಮೂಗಿನ ತಂಟೆಗೆ ಬನ್ನಿ, ಆಗ ಮಾಡ್ತೀನಿ"—ಎಂದಳು ಸರಳಾ.

ಮಾರನೆಯ ದಿನದಿಂದ ಮೂರು ದಿನ ಸರಳೆಯನ್ನು ಹಾಲು ಅನ್ನದ ಪಥ್ಯದ ಮೇಲಿರಿಸಲು ರಂಗಮ್ಮನವರು ನಿರ್ಧರಿಸಿದ್ದರು. ಮಗುವಿಗೆ 'ಕೆಂಬೋರು' ಆಗದಂತೆ ತಡೆಗಟ್ಟಲು ಮರುದಿನ ಬೆಳಗ್ಗೆ ರಂಗಮ್ಮ ಬೇರು, ನಾರಿನಿಂದ ಕಷಾಯ ಸಿದ್ಧಪಡಿಸಿದರು. ಅಂದಿನ ಕಾಫಿ ವಜಾ ಆಯಿತು. ಸರಳಾ ಕಷಾಯ ಕುಡಿದಳು.

ಹತ್ತು ಗಂಟೆಯ ಹೊತ್ತಿಗೇ ಸರಳೆಗೆ ಹಸಿವಿನಿಂದ ಪ್ರಾಣ ಹೋಗುವಂತಾಯಿತು. ರಂಗಮ್ಮನವರು ಸರಳೆಗೆ ಹಾಲನ್ನವನ್ನು ಮಾತ್ರ ಬಡಿಸಿ

ದರು. ಸರಳೆಗಂತೂ ಹಾಲನ್ನ ತಿನ್ನುವಾಗ ಜುಗುಪ್ಸೆಯಿಂದ ಓಕರಿಕೆ ಬರು ವಂತಾಯಿತು.

"ಅಯ್ಯೋ, ನನ್ನ ಕೈಲಾಗುವುದಿಲ್ಲ ಅತ್ತೆ"—ಎಂದು ಸರಳೆ ರಂಗಮ್ಮ ನವರೆದುರಿಗೆ ಗೋಳಾಡಿದಳು.

"ಅಪಥ್ಯ ಮಾಡಬೇಡ ಸರಳಾ ಮಗೂಗೆ ಒಳ್ಳೆಯದಾಗಲಿ, ಶೋಭಿದ ಮುತ್ತಿನಂತಹ ಮಗ ಹುಟ್ಟಲಿ ಎಂದೇ ಔಷಧಿ ಕೊಟ್ಟಿರುವುದು. ಹೆಚ್ಚು ದಿನ ಪಥ್ಯವಿಲ್ಲ. ಮೂರೇ ಮೂರು ದಿನ"—ಎಂದು ರಂಗಮ್ಮ ಸರಳೆಗೆ ಸಮಾಧಾನ ಹೇಳಿದರು.

"ಮೂರು ದಿನ ನನ್ನ ಪಾಲಿಗೆ ಮೂರು ಯುಗವಾಗಿದೆ. ಸಾಲದ್ದಕ್ಕೆ ಇವತ್ತು ನೀರು ಬೇರೆ ಹಾಕಿದೀರಿ. ನನಗಂತೂ ವಿಪರೀತ ಹಸಿವು. ಹಾಲನ್ನ ತಿಂದರೆ ಕಸ ತಿಂದ ಹಾಗಿದೆ"—ಎಂದು ಸರಳಾ ಎಲೆಯ ಮುಂದೆ ಕುಳಿತು ಸಂಕಟಪಟ್ಟಳು. ವಾಸು ನಿರಾಸಕ್ತಿಯಿಂದ ತಿನ್ನುತ್ತಿದ್ದ ಗೊಜ್ಜನ್ನು ಸರಳೆ ಆಸೆಯಿಂದ ನೋಡಿದಳು. ವಾಸು ತುಂಟನಗೆ ಬೀರಿ ತನ್ನ ತಟ್ಟೆಯನ್ನು ಕೊಂಚ ದೂರಕ್ಕೆ ಎಳೆದುಕೊಂಡ.

ಮೂರು ದಿನ ಕಳೆಯುವಷ್ಟರಲ್ಲಿ ಸರಳೆಗೆ ಸಾಕಾಗಿ ಹೋಯಿತು. ಮೂರು ದಿನವೂ ಅವಳು ಎಲೆಯ ಮುಂದೆ ಕುಳಿತು ಕಣ್ಣೀರುಗರೆದಳು. ಸಾಲದುದಕ್ಕೆ ಕಾಫಿ, ತಿಂಡಿ ಯಾವುದೂ ಅವಳಿಗೆ ಕೈಗೆಟುಕದ ವಸ್ತು ಗಳಾಗಿದ್ದವು. 'ಹಾಲು' ಎಂದೊಡನೆ ಸರಳೆ ತೆನ್ನಾಲಿ ರಾಮಕೃಷ್ಣನ ಬೆಕ್ಕಿ ನಂತಾಡುತ್ತಿದ್ದಳು. ರಂಗಮ್ಮನವರಿಗೂ ಕೊನೆಗೆ ಯಾಕಾದರೂ ಸರಳೆಗೆ ಔಷಧಿ ಕೊಟ್ಟೆನೋ ಎನಿಸಿಬಿಟ್ಟಿತು.

ನಾಲ್ಕನೆಯ ದಿನ ಬೇಗ್ಗೆ ಐದು ಗಂಟೆಗೆ ಸರಳೆಗೆ ಎಚ್ಚರವಾಯಿತು. ಪ್ರತಿದಿನವೂ ಏಳು ಗಂಟೆಯಾಗುವವರೆವಿಗೆ ಮಿಸುಕಾಡದೇ ಮಲಗು ತ್ತಿದ್ದವಳು ಆ ದಿನ ಕತ್ತಲಿರುವಾಗಲೇ ಎದ್ದು, ಮುಖ ತೊಳೆದು ಸಡಗರ ದಿಂದ ಕಾಫಿಗೆ ನೀರಿಟ್ಟಳು. ಬಹಳ ಕಾಲದ ವಿರಹದ ನಂತರ ನಲ್ಲನನ್ನು ಎದಿರು ನೋಡುವ ಪ್ರೇಯಸಿಯಂತೆ ಸರಳೆ ಹಾಲಿನ ಬರವಿಗಾಗಿ ಕಾದು ನಿಂತಳು. ಹಾಲು ಬಂದ ಕೂಡಲೇ ಎರಡು ಲೋಟ ಗಟ್ಟಿಯಾದ ಕಾಫಿ ಹೀರಿ ಸರಳಾ ಅರ್ಧ ತೃಪ್ತಿ ಹೊಂದಿದಳು.

"ಅತ್ತೇ ತುಂಬಾ ಖಾರವಾಗಿ ಹುಳಿಯನ್ನದ ಗೊಜ್ಜು ಕುದಿಸಿಡಿ"– ಎಂದಳು ಸರಳಾ.

"ಬೇಡ ಸರಳಾ, ನೀನು ಅಷ್ಟೊಂದು ಖಾರ ತಿನ್ನಬಾರದು. ಅದು ಮಗುವಿನ ಕಣ್ಣಿಗೆ ತುಂಬಾ ಅಪಾಯ"—ಎಂದರು ರಂಗಮ್ಮ.

ತನಗೆ ಎಷ್ಟೇ ಕಷ್ಟವಾದರೂ ಮಗುವಿನ ಹೆಸರೆತ್ತಿದರೆ ಸರಳೆ ಕೂಡಲೇ ಒಪ್ಪಿಬಿಡುತ್ತಿದ್ದಳು.

ಅಡಿಗೆಯಾದ ಕೂಡಲೇ ಸಾವಿರಾರು ಜನ್ಮಗಳಿಂದ ಅನ್ನ ಕಾಣದವಳಂತೆ ಸರಳೆ ಊಟಕ್ಕೆ ಕುಳಿತಳು.

ಮೊದಲ ತುತ್ತಿಗೇ ಅವಳು ಹುಳಿಯನ್ನ ಕಲಸುವುದನ್ನು ನೋಡಿ ರಂಗಮ್ಮ ಹೇಳಿದರು

"ಬೇಡ ಸರಳಾ, ಮೊದಲನೆಯ ತುತ್ತು ಮಗುವಿಗೆ ಹೋಗುತ್ತದೆ. ಆದುದರಿಂದ ಅದು ಖಾರವಾಗಿರಬಾರದು ಮೊದಲು ಬಿಸಿ ಅನ್ನಕ್ಕೆ ಉಪ್ಪು ತುಪ್ಪ ಹಾಕಿಕೊಂಡು ಎರಡು ತುತ್ತು ತಿನ್ನು. ನೀನು ಮೊದಲೇ ಉಪ್ಪಿನ ಕಾಯಿ ರಸ, ಚಟ್ನಿಯಲ್ಲಿ ತಿಂದುಬಿಡಬೇಡ. ಮಗುವಿಗೆ ಒಳ್ಳೆಯದಲ್ಲ."

ಸರಳಾ ವಿಧಿಯಿಲ್ಲದೇ ಉಪ್ಪು, ತುಪ್ಪದಲ್ಲಿ ಕಲಸಿದಳು.

"ಮೊಸರನ್ನಕ್ಕೆ ನಂಚಿಕೊಳ್ಳೋಕೆ ಇನ್ನೂ ಸ್ವಲ್ಪ ಹುಳಿಸೊಪ್ಪು ಹಾಕಿ ಅತ್ತೆ"– ಎಂದಳು ಸರಳಾ.

"ಬಾರದಮ್ಮ ಸರಳಾ. ನೀನು ಹೀಗೆ ಸೊಪ್ಪು ತಿನ್ನಬಾರದು. ಆಮೇಲೆ ಮಗುವಿನ ಮೈಯೆಲ್ಲಾ ಹಸಿರುಗಟ್ಟಿ ಹೋಗುತ್ತದೆ. ಹಾಗೆಯೇ ಬೆಟ್ಟದ ನಲ್ಲಿಕಾಯಿ ಉಪ್ಪಿನಕಾಯಿಯೂ ತಿನ್ನಬಾರದು. ಮಗು ಕಪ್ಪಾಗುತ್ತದೆ"

"ಹುಳಿಸೊಪ್ಪು ತುಂಬಾ ಚೆನ್ನಾಗಿದೆ ಅತ್ತೆ."

"ಚಿಂತೆಯಿಲ್ಲ, ಮಗು ಹಸಿರಾಗಿರುತ್ತೆ. ಸಾಕು"–ಎಂದರು ರಂಗಮ್ಮ ಖಂಡಿತವಾದ ದನಿಯಲ್ಲಿ.

ಸರಳೆ ಸುಮ್ಮನಾದಳು. ಅಂದಿನಿಂದ ಅವಳು ಸೊಪ್ಪುಗಳು, ಬೆಟ್ಟದ ನಲ್ಲಿಕಾಯಿ ಉಪ್ಪಿನಕಾಯಿ ಮುಂತಾದವುಗಳನ್ನು ತ್ಯಾಗಮಾಡಿದಳು.

ಅವಳ ಬಾಯಿಂದ ಬರುವ ಬಯಕೆಯನ್ನು ಪೂರಯಿಸಲು ತಾಯಿ, ಮಗ ತುದಿಗಾಲಿನ ಮೇಲೆ ನಿಂತಿರುತ್ತಿದ್ದರು.

ಒಂದು ದಿನ ಸರಳೆಗೆ ಕಾಬೂಲ್ ದ್ರಾಕ್ಷಿ ತಿನ್ನುವ ಆಸೆಯಾಯಿತು. ಅವಳು ಕೂಡಲೇ ವಾಸುವಿಗೆ

"ನನಗೆ ಕಾಬೂಲ್ ದ್ರಾಕ್ಷಿ ಬೇಕು" —ಎಂದಳು

"ಅದಕ್ಕೇನು ಸಂಜೆ ತಂದರಾಯಿತು"—ಎಂದ ವಾಸು.

"ಒಳಗೆ ಬೀಜವಿರುವುದಿಲ್ಲ. ದ್ರಾಕ್ಷಿ ಹುಳಿ, ಸಿಹಿಯಾಗಿರುತ್ತದೆ. ಪುಟ್ಟಗೆ, ದುಂಡಗೆ, ನಸುಹಸಿರು ಬಣ್ಣದ ಮೇಲಿರುತ್ತದೆ. ಒಳಗೆ ತುಂಬಾ ರಸವಿರುತ್ತದೆ...." ಸರಳೆ ದ್ರಾಕ್ಷಿಯನ್ನು ವರ್ಣಿಸತೊಡಗಿದಳು.

"ಗೊತ್ತಾಯ್ತು ಬಿಡೆ"—ಎಂದ ವಾಸು.

ಸಂಜೆ ಹೆಂಡತಿ ಬಯಸಿದ ವಸ್ತು ತಂದುಕೊಡಲು ವಾಸು ಹಣ್ಣಿನ ಮಾರ್ಕೆಟ್ಟಿನಲ್ಲಿ ಸುತ್ತಾಡಿದ. ಆದರೆ ಸರಳೆ ಬಯಸಿದಂತಹ ದ್ರಾಕ್ಷಿ ಎಲ್ಲಿಯೂ ದೊರೆಯಲಿಲ್ಲ. ಹಣ್ಣಿನಂಗಡಿಯವರು

"ಈಗ ಅದರ ಕಾಲವಲ್ಲ ಸ್ವಾಮಿ ಇನ್ನೊಂದು ತಿಂಗಳು ಬಿಟ್ಟು ಕೊಂಡು ಬನ್ನಿ. ಕೊಡುತ್ತೇವೆ" – ಎಂದರು

ಸರಳೆಗಾದ ನಿರಾಶೆಗಿಂತಲೂ ವಾಸುವಿಗಾದ ನಿರಾಶೆ ಅಗಾಧ. ತನ್ನ ವಂಶೋದ್ಧಾರಕನನ್ನು ಹೊತ್ತಿರುವ ಹೆಂಡತಿಯ ಒಂದು ಸಣ್ಣ ಆಸೆಯನ್ನು ಪೂರಯಿಸದಿದ್ದರೆ ಹೇಗೆ? ಅಂದಿನಿಂದಲೂ ವಾಸುವಿಗೆ ಹಗಲಿರುಳು ದ್ರಾಕ್ಷಿಯದೇ ಧ್ಯಾನವಾಯಿತು. ಕನಸಿನಲ್ಲೆಲ್ಲಾ ದ್ರಾಕ್ಷಿ ಬಳ್ಳಿಗಳು, ತೂಗಾಡುತ್ತಿದ್ದ ದ್ರಾಕ್ಷಿ ಗೊಂಚಲುಗಳು ವಾಸುವನ್ನು ಕಾಡುತ್ತಿದ್ದವು. ಕೈಗೆಟಕುವಂತೆ ಬಳ್ಳಿಗಳು ತೂಗಾಡುತ್ತಿದ್ದರೂ ವಾಸು ಕೈನೀಡಿದಾಗ ಗೊಂಚಲು ಮಾಯವಾಗಿ ಬಿಡುತ್ತಿತ್ತು. ಪ್ರತಿದಿನವೂ ವಾಸು ಮಾರ್ಕೆಟ್ಟಿನ ದಾರಿ ಹಿಡಿದು ಹಣ್ಣಿನಂಗಡಿಗಳ ಸುತ್ತಲೂ ಒಂದು ಪ್ರದಕ್ಷಿಣೆ ಬರುತ್ತಿದ್ದ.

ಸುಮಾರು ಒಂದೂವರೆ ತಿಂಗಳಿನ ನಂತರ ವಾಸುವಿನ ಬಯಕೆ ಈಡೇರಿತು. ಅವನು ಎಂದಿನಂತೆ ಅಂಗಡಿಯ ಬಳಿಗೆ ಬಂದ ಕೂಡಲೇ, ವಾಸುವಿನ ಮುಖ ನೋಡಿ ಅಂಗಡಿಯವನು ನಕ್ಕು "ಬನ್ನಿ ಸ್ವಾಮಿ, ಪರಮಾಯಿಷಿ ಹಣ್ಣು ಬಂದಿದೆ" ಎಂದ.

ಒಂದು ಸೇರಿಗೆ ಒಂದೂಕಾಲು ರೂಪಾಯಿನಂತೆ ಕೆತ್ತು ವಾಸು ಎರಡು ಸೇರು ಹಣ್ಣನ್ನು ಕೊಂಡು ಜಾಗರೂಕತೆಯಿಂದ ಸೈಕಲ್ ತಳ್ಳಿಕೊಂಡು ಮನೆಗೆ ಬಂದ. ಸೈಕಲ್ ಒತ್ತಿದರೆ ಕುಲುಕಾಟಕ್ಕೆ ಹಣ್ಣು ಹಿಸುಕಿ ಹೋದರೆ ಎಂಬುದೇ ಅವನ ಹೆದರಿಕೆಯಾಗಿತ್ತು.

ವಾಸು ಮನೆಗೆ ಬಂದಾಗ ಸರಳೆ ರಂಗಮ್ಮನವರೊಡನೆ ಪಗಡೆಯಾಡುತ್ತಿದ್ದಳು ವಾಸುವನ್ನು ನೋಡಿ ರಂಗಮ್ಮ ವಾತ್ಸಲ್ಯದಿಂದ

"ಕಾಫಿ, ತಿಂಡಿಗೂ ಬರದೇ ಅದೆಲ್ಲಿಗೆ ಹೋಗಿಬಿಟ್ಟಿದ್ದೆಯೋ?" ಎನ್ನುತ್ತಾ ವಾಸುವಿಗೆ ಕಾಫಿ ತರಲು ಅಡಿಗೆ ಮನೆಗೆ ಹೋದರು.

"ಸರಳಾ, ತುಂಬಾ ಪಗಡೆ ಆಡಬೇಡವೇ. ಆಮೇಲೆ ನಿನ್ನಮಗ ಜೂಜುಕೋರನಾಗಿ ಬಿಟ್ಟರೆ ಕಷ್ಟ"—ಎಂದ ವಾಸು.

"ಸಾಕು ಹಾಸ್ಯ."

"ನಾನು ಏನು ತಂದಿದೀನಿ ಹೇಳು?"—ವಾಸುವಿಗೆ ಸರಳೆಯನ್ನು ಆಟವಾಡಿಸಬೇಕೆನಿಸಿತು.

"ನನಗೆ ಹೇಗೆ ಗೊತ್ತಾಗಬೇಕು?"—ಸರಳೆಗೆ ಎಲ್ಲಿಲ್ಲದ ಆಲಸ್ಯ ಬಂದುಬಿಟ್ಟಿತು.

ವಾಸು ಕರವಸ್ತ್ರದಲ್ಲಿ ಕಟ್ಟಿಕೊಂಡಿದ್ದ ಹಣ್ಣನ್ನು ಸರಳೆಯಮುಂದೆ—ದೇವರ ಮುಂದೆ ನೈವೇದ್ಯಕ್ಕಿಡುವ ಭಕ್ತನಂತೆ—ಇರಿಸಿದ.

ಸರಳೆ ಗಂಟು ಬಿಚ್ಚಿ ನೋಡಿ ಒಂದೊಂದೇ ಹಣ್ಣನ್ನು ಬಾಯಿಗೆಸೆದು ಕೊಳ್ಳುತ್ತಾ

"ತುಂಬಾ ಹುಳಿ ಹಣ್ಣು. ಎಷ್ಟು ಕೊಟ್ಟಿರಿ?"—ಎಂದಳು.

"ಎರಡೂವರೆ ರೂಪಾಯಿಯಾಯಿತು."

"ಸುಮ್ಮನೆ ದುಡ್ಡು ದಂಡ ಮಾಡಿದಿರಿ"—ಸರಳೆ ಹೇಳಿದಳು.

"ನೀನು ಬೇಕೂಂತ ಬಯಸಿದೆಯಲ್ಲೇ"—ವಾಸುವಿಗೆ ಸರಳೆಯ ಮಾತು ಕೇಳಿ ತುಂಬಾ ಆಚ್ಚರಿಯಾಯಿತು

"ನಾನೇ! ದ್ರಾಕ್ಷಿಹಣ್ಣು ಕೇಳಿದ್ದೆನೇ!"—ಸರಳೆಗೆ ವಾಸುವಿಗಿಂತಲೂ ಅಚ್ಚರಿ.

"ಹೂಂ. ಒಂದು ತಿಂಗಳ ಹಿಂದೆ ಕೇಳಿದೆ."

"ಅಯ್ಯೊ, ನಾನು ಕೇಳಿದ್ದು ಕಿತ್ತಳೇ ಹಣ್ಣೂಂತ್ರಿ ದ್ರಾಕ್ಷಿಯಲ್ಲ. ನೀವೆಲ್ಲೋ ಮರೆತುಬಿಟ್ಟಿರಬೇಕು."

"ಇಲ್ಲ ಸರಳಾ. ನೀನು ದ್ರಾಕ್ಷಿ...."

"ಹೋಗಲಿ ಬಿಡಿ. ತಂದಿದ್ದಾಯಿತು ಇನ್ನು ಮಾತನಾಡಿ ಪ್ರಯೋಜನವಿಲ್ಲ. ನಾನು ಕೇಳಿದ್ದು ಕಿತ್ತಲೇಹಣ್ಣು."

ಸರಳೆ ಕೊನೆಗೂ ತಾನುಕೇಳಿದ್ದು ಕಿತ್ತಳೇ ಹಣ್ಣೆಂದೇ ಸಾಧಿಸಿಬಿಟ್ಟಳು

ವಾಸು ಸುಮ್ಮನಿರಲೇ ಬೇಕಾಯಿತು

ರಾತ್ರಿಊಟಮಾಡಿ ಮಲಗಿದಾಗ ಸರಳೆಮಾತಿಗೆ ಪ್ರಾರಂಭಮಾಡಿದಳು

"ರೀ"

"ಏನು?"

"ನನಗೆ ಉಲ್ಲನ್ ಬೇಕು."

"ಎಂತಹದೇ?"

"ಸ್ವೆಟರು, ಕಾಲುಚೀಲ ಹಾಕೋ ಉಲ್ಲನ್ ಬೇಕು. ನಾಳೆ ಇಬ್ಬರೂ ಅಂಗಡಿಗೆ ಹೋಗಿ ಉಲ್ಲನ್ ತರೋಣ."

"ನಿನಗೆ ಕುಲಾವಿ, ಕಾಲುಚೀಲ, ಸ್ವೆಟರ್ ಎಲ್ಲಾ ಹಾಕೋಕೆ ಬರುತ್ತದೆಯೇನೇ?"

"ಬಾರದಿದ್ದರೆ ಕಲಿತುಕೊಂಡರಾಯಿತು. ಅದೇನು ಬ್ರಹ್ಮ ವಿದ್ಯೆಯೇ?"

"ಯಾರ ಹತ್ತಿರ ಹೇಳಿಸಿಕೊಳ್ಳುತ್ತೀಯಾ?"

"ರಾಮು ತಾಯಿಗೆ ಸ್ವೆಟರ್ ಹಾಕೋಕೆ ಬರುತ್ತದೆ. ಅವರಿಂದ ಕಲಿತುಕೊಳ್ಳುತ್ತೇನೆ."

"ಸರಳಾ, ನಿನಗೆ ಸ್ವೆಟರ್ ಕಲಿತು ಹಾಕುವ ಸಹನೆ ಖಂಡಿತ ಇಲ್ಲ. ನಿನ್ನ ಮಗನಿಗೆ ಹೊಲಿದು ಸಿದ್ಧಪಡಿಸಿದ ಸ್ವೆಟರ್ ತಂದರೆ ಆಗದೇ?"

"ಕೊಂಡುಕೊಂಡ ಸ್ವೆಟರು ಹಾಕಿದರೆ ಹೇಗಿರುತ್ತದೆ? ನಾವು ಪ್ರೀತಿಯಿಂದ ಹಾಕಿದ ಸ್ವೆಟರು ಹೇಗಿರುತ್ತದೆ?"

"ನೀನು ಯಾಕೆ ಕಷ್ಟಪಡಬೇಕು ಸರಳಾ? ದುಡ್ಡು ಕೊಟ್ಟು ತಂದರಾಗದೇ?"

"ದುಡ್ಡು ಮುಖ್ಯವಲ್ಲ. ನಾವು ಹಾಕಿದರೆ ಒಂದೊಂದು ಹೆಣಿಗೆಯಲ್ಲೂ ಪ್ರೀತಿ ತುಂಬಿಸಿ ಹಾಕುತ್ತೇವೆ. ಅದು ಮುಖ್ಯ."

ಸರಳೆಯ ವಾಕ್ಚಾತುರ್ಯಕ್ಕೆ ವಾಸು ಸೋತುಹೋದ.

ಸ್ವಲ್ಪಹೊತ್ತು ಗಂಡ ಹೆಂಡಿರ ನಡುವೆ ಮೌನ ಕವಿಯಿತು.

"ಸರಳಾ" - ಎಂದ ವಾಸು.

"ಏನು?"

"ಏನಂತಾನೆ ನಿನ್ನ ಮಗ?"

"ಈಚೀಚೆಗೆ ಬಲೆ ಹಿಂಸೆ ಕೊಡ್ತಾನೆ."

ವಾಸುವಿಗೆ ಮಗನ ಬಗ್ಗೆ ಮಿತಿಯಿಲ್ಲದ ಕುತೂಹಲ.

"ಹಿಂಸೆ ಎಂದರೆ?"

ಅವನು ಒಂದು ಗಳಿಗೆ ಹಸಿವು ತಡೆಯಲಾರ. ಅರ್ಥಾತ್ ನನಗೆ ಹಸಿವಾದಾಗ ಅವನಓಡಾಟ, ಗಲಾಟೆ ಜಾಸ್ತಿಯಾಗುತ್ತದೆ. ನಾನು ತುತ್ತಿನ ಮೇಲೆ ತುತ್ತೇರಿಸಿದಂತೆ ಅವನು ಕೊಂಚ ಸಮಾಧಾನ ಪಡೆಯುತ್ತಾನೆ...."

ವಾಸು ನೆಟ್ಟನೋಟದಿಂದ ಸರಳೆಯನ್ನೇ ನೋಡುತ್ತಿದ್ದವನು

"ಮುಂದೆ?"—ಎಂದ.

"ಅವನು ತುಂಬಾ ಬಿಸಿ ಕಾಫಿ, ಬಿಸಿಹಾಲು ಸಹಿಸಲಾರ. ಬಿಸಿಯಾಗಿ ಊಟ ಮಾಡಿದರೆ ಕೊಂಚ ಹಿಂಸೆ ಮಾಡುತ್ತಾನೆ.".

"ಓಹೋ, ಅದಕ್ಕೋ ಅಮ್ಮ ತುಂಬ ಬಿಸಿ ಕುಡಿಯಬೇಡ ಸರಳಾ ಎಂದು ಹೇಳೋದು."

"ಹೌದು."

"ಮುಂದೆ?"

"ನಾನು ಉದ್ರೇಕಗೊಂಡಾಗ ಅವನೂ ಉದ್ರೇಕಗೊಳ್ಳುತ್ತಾನೆ. ಆಗ ಅವನ ತಳಮಳ ಜಾಸ್ತಿಯಾಗುತ್ತದೆ. ಒಮ್ಮೊಮ್ಮೆ ನಿದ್ದೆ ಮಾಡುವಾಗ ನನ್ನ ಒಳಗಿನಿಂದ ಒದ್ದು, ಗುದ್ದಿ ಎಬ್ಬಿಸುತ್ತಾನೆ. ಕುಳಿತಿರುವಾಗ ತಟಕ್ಕನೆ ನನ್ನನ್ನು ಏಳಗೊಡಿಸುವುದಿಲ್ಲ. ನೆಲದ ಮೇಲೆ ಕೈಯೂರಿ ಏಳಬೇಕು. ಒಟ್ಟಿನಲ್ಲಿ ಅವನ ಇರುವು ನನಗೆ ಪ್ರಿಯವಾದರೂ, ಅವನ ಇರುವಿಕೆಯಿಂದ ನನಗೆ ಕೊಂಚ ಹಿಂಸೆಯೂ ಇದೆ."

ವಾಸು ಪವಾಡವನ್ನು ನೋಡುವವನಂತೆ, ಅಚ್ಚರಿಯ ವಿಷಯ ಆಲಿಸುವವನಂತೆ ಸರಳೆ ಹೇಳಿದ ಸೋಜಿಗದ ಸುದ್ದಿ ಕೇಳುತ್ತಾ ಕುಳಿತ.

ಸ್ವಲ್ಪ ಹೊತ್ತು ಕಳೆದ ಮೇಲೆ ವಾಸು ಮೆಲುದನಿಯಲ್ಲಿ

"ಸರಳಾ"—ಎಂದ.

"ಏನು?"

"ನಾನೂ ನೋಡಬೇಕಲ್ಲೇ ಅವನನ್ನ?"

"ಇನ್ನು ಮೂರು ತಿಂಗಳು ಕಳೆದಮೇಲೆ ನೋಡುವಿರಂತೆ."

"ಆಗೋದಿಲ್ಲ. ಇವತ್ತೇ ನೋಡಬೇಕು."

"ಆಗಲಿ"—ಎಂದಳು ಸರಳಾ.

ಸರಳೆ ತೂಕಡಿಸತೊಡಗಿದಳು. ವಾಸು ಅದನ್ನು ಗಮನಿಸಿ "ಮಲಗು ಸರಳಾ"—ಎಂದ.

ಅರ್ಧರಾತ್ರಿಯ ಸಮಯ. ವಾಸುವಿಗೆ ಗಾಢನಿದ್ದೆ ಹತ್ತಿತ್ತು. ಇದ್ದಕ್ಕಿದ್ದಂತೆ ಯಾರೋ ಅವನನ್ನು ಬಲವಾಗಿ ಹಿಡಿದು ಕುಲುಕಿ ಅಲುಗಿಸಿದಂತಾಯಿತು. ವಾಸು ಗಾಬರಿಯಾಗಿ ಎದ್ದು ಕುಳಿತು

"ಯಾರು?" ಎಂದ.

"ನಾನು" —ಎಂದಳು ಸರಳಾ.

"ಏನಾಯಿತು ಸರಳಾ?"—ಗಾಬರಿಯಿಂದ ವಾಸುವಿನ ದನಿ ನಡುಗು ತ್ತಿತ್ತು. ಅರ್ಧರಾತ್ರಿಯಲ್ಲಿ ಸರಳೆ ಹೀಗೆ ತನ್ನನ್ನು ಎಚ್ಚರಿಸಬೇಕಾದರೆ? ಅವನ ದನಿಯಲ್ಲಿದ್ದ ಕಂಪನವನ್ನು ಗಮನಿಸಿ ಸರಳೆ ನಸುನಕ್ಕು

"ಹೆದರಿಕೋಬೇಡಿ. ನಾನು ಹುಷಾರಾಗಿದೀನಿ. ಆದರೆ .."ಎಂದಳು.

"ಏನು?"

"ನಿಮ್ಮ ಮಗನ್ನ ನೋಡಬೇಕೂಂತ ಹೇಳಿದ್ದಿರಲ್ಲಾ, ಆದುದರಿಂದ ಎಬ್ಬಿಸಿದೆ. ಅವನು ತುಂಬಾ ಗಲಾಟೆ ಮಾಡಿ ನನ್ನ ಎಬ್ಬಿಸಿದ."

ವಾಸು ಸಂಭ್ರಮದಿಂದ ದೀಪಹಚ್ಚಿ ಸರಳೆಯ ಬಳಿಗೆ ಬಂದು ಹೆಂಡತಿ ಯನ್ನು ದಿಟ್ಟಿಸುತ್ತಾ ಕುಳಿತ ಅರ್ಧ ಗಂಟೆಯಾಯಿತು ಒಂದು ಗಂಟೆ ಯಾಯಿತು. ಆದರೆ ವಾಸುವಿನ ಪುತ್ರ ತಂದೆಯ ಮೇಲೆ ದಯತೋರದೆ ತಾಯಿಯ ಗರ್ಭದಲ್ಲಿ ಸುರಕ್ಷಿತವಾಗಿ ಮಿಸುಕಾಡದೆ ಮಲಗಿಬಿಟ್ಟಿದ್ದ.

ಕೊನೆಗೆ ವಾಸುವಿಗೆ ಬೇಜಾರಾಯಿತು.

"ಎಲ್ಲೇ ಸರಳಾ?"—ಎಂದ.

"ಅಯ್ಯೋ ಅವನು ಹಾಗೇರಿ. ಸುಮ್ಮನೆ ಆಟವಾಡಿಸುತ್ತಾನೆ. ನೀವು ಮಲಗಿ. ನಾನು ಪುನಃ ಅವನು ಎದ್ದಾಗ ನಿಮ್ಮನ್ನೂ ಎಬ್ಬಿಸುತ್ತೇನೆ."

ವಾಸು ಮಲಗಿದ ಸರಳೆ ಮಗ ಎಚ್ಚರಗೊಳ್ಳಲಿ ಎಂದು ಕಾದು ಕುಳಿತಳು. ವಾಸುವಿಗೆ ನಿದ್ದೆ ಹತ್ತಿದ ಅರ್ಧಗಂಟೆಯ ನಂತರ ಸರಳಾ ಮತ್ತೆ ವಾಸುವನ್ನು ಎಬ್ಬಿಸಿದಳು. ವಾಸು ದೀಪ ಹಚ್ಚಿದ

ಒಂದು ಗಂಟೆಯಾದರೂ ಮಗ ಮೌನವಾಗಿದ್ದ.

"ಎಲ್ಲೇ ಸರಳಾ?"—ಎಂದ ವಾಸು.

ರಾತ್ರಿ ನಾಲ್ಕುಬಾರಿ ಮಗನೊಂದಿಗೆ ಕಣ್ಣಾಮುಚ್ಚಾಲೆಯಾಟವಾಡಿ ವಾಸುವಿಗೆ ಬೇಜಾರಾಯಿತು. ಕೊನೆಗೂ ಅವನಿಗೆ ತಂದೆಯ ಮೇಲೆ ಕರುಣೆ ಬರಲಿಲ್ಲ.

"ಹೂಂ. ನಾನಿನ್ನು ಮಲಗುತ್ತೇನೆ. ಇನ್ನು ನನ್ನ ಎಬ್ಬಿಸಬೇಡ"— ಎಂದ ವಾಸು.

ಬೆಳಗ್ಗೆ ಏಳು ಗಂಟೆಗೆ ವಾಸುವಿಗೆ ಎಚ್ಚರವಾಯಿತು. ರಾತ್ರಿಯೆಲ್ಲಾ ನಿದ್ದೆಗೆಟ್ಟದ್ದರಿಂದ ಸರಳೆ ಗಾಢವಾಗಿ ನಿದ್ದೆ ಮಾಡುತ್ತಿದ್ದಳು. ಅವಳು ಹೊದೆದಿದ್ದ ಹೊದಿಕೆ ಮಂಚದಿಂದ ಜಾರಿ ನೆಲದಮೇಲೆ ಬಿದ್ದಿತ್ತು. ವಾಸು

ಹೊದಿಕೆ ಕೈಲಿಹಿಡಿದು ಹೆಂಡತಿಗೆ ಹೊದಿಸಲೆಂದು ಹತ್ತಿರ ಬಂದವನೇ ತಟ್ಟನೆ ಶಿಲೆಯಂತೆ ಸರಳೆಯನ್ನೇ ನೋಡುತ್ತಾ ನಿಂತುಬಿಟ್ಟ. ವಾಸುವಿನ ಮಗ— ಯಾರೂ ತನ್ನನ್ನು ಗಮನಿಸುತ್ತಿಲ್ಲವೆಂಬ ಧೈರ್ಯದಿಂದಲೋ ಏನೋ ನಿಧಾನವಾಗಿ-ಬಹು ನಿಧಾನವಾಗಿ ಈಜುತ್ತಿದ್ದುದು ವಾಸುವಿಗೆ ಗೋಚರ ವಾಯಿತು. ವಾಸು ಮೆಲ್ಲನೆ ಮೃದುವಾಗಿ ಅವನ ಮೇಲೆ ಕೈಯಿಟ್ಟ. ಆದರೆ ಆ ಪುಂಡನಯವಾಗಿಮೆಲ್ಲನೆ ಅವನ ಕೈಕೆಳಗಿನಿಂದ ಮೀನಿನಂತೆ ಜಾರಿಕೊಂಡ

ವಾಸು ತನ್ನ ಮೇಲೆ ಕೈಯಿಟ್ಟಿದ್ದರಿಂದಲೋ ಏನೋ ಸರಳಾ ಹೊರಳಿದಳು. ವಾಸು ತಟ್ಟನೆ ದೂರ ಸರಿದ.

ರಂಗಮ್ಮ ವಾಸುವಿಗೆ ಕಾಫಿ ಕೊಟ್ಟರು.

"ಸರಳಾ ಎದ್ದಿಲ್ಲವೇನೋ ವಾಸೂ?"

"ಇಲ್ಲಮ್ಮ."

"ಹುಷಾರಾಗಿದಾಳೆ ತಾನೆ?"

"ಹೂ. ಎಬ್ಬಿಸಲೇ ? ಸರಳಾ ...ಸರಳಾ ."

"ಶ್" — ರಂಗಮ್ಮ ಬಾಯಿಮೇಲೆ ಕೈಯಿಟ್ಟರು.

"ಯಾಕಮ್ಮ? ಎಬ್ಬಿಸುತ್ತೇನೆ."

"ಹಾಗೆಲ್ಲಾ ಬಸುರಿ ಹುಡುಗೀನ ಎಬ್ಬಿಸಬಾರದು."

"ಯಾಕೆ?"

"ಬ್ರಹ್ಮ ಮಗುವಿನ ಹಣೆಬರಹಾನ ತಾಯಿ ಮಲಗಿದಾಗ ಬರೆಯು ತ್ತಿರುತ್ತಾನಂತೆ. ನಾವು ನಿದ್ರಾಭಂಗ ಮಾಡಿದರೆ ಆತನು ತನ್ನ ಬರಹಾನ ನಿಲ್ಲಿಸಿಬಿಡುತ್ತಾನಂತೆ. ಆದುದರಿಂದ ಇನ್ನು ಮೇಲೆ ಅವಳು ನಿದ್ದೆ ಮಾಡು ವಾಗ ನೀನು ಅವಳನ್ನು ಎಬ್ಬಿಸಬೇಡ, ತಿಳಿಯಿತೇ?"

ವಾಸು "ಹೂಂ"—ಎಂದ.

ಸರಳೆಗೆ ಎಂಟು ಗಂಟೆಗೆ ಎಚ್ಚರವಾಯಿತು. ಅವಳು ಎದ್ದು ಮೈ ಮುರಿದು ಆಕಳಿಸಿದಳು. ವಾಸುವಿನ ಕಡೆ ತಿರುಗಿ

"ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ"—ಎಂದಳು.

"ಚಿಂತೆಯಿಲ್ಲ. ಕಾಫಿ ಕುಡಿದು ಮತ್ತೆ ಮಲಗು" — ಎಂದ ವಾಸು.

"ಇವತ್ತು ಸಂಜೆಯ ಕಾರ್ಯಕ್ರಮ ಜ್ಞಾಪಕವಿದೆಯೇನ್ರಿ?"

"ಏನು ಸಮಾಚಾರ?"—ಎಂದ.

ಸರಳೆಗೆ ತುಂಬಾ ಸಿಟ್ಟುಬಂತು ಅವಳು ರಾತ್ರಿಯೆಲ್ಲಾ ತಾನುಯಾವ

ಯಾವ ಬಣ್ಣದ ಉಲ್ಲನ್ ತೆಗೆದುಕೊಳ್ಳಬೇಕೆಂದು ಲೆಕ್ಕಾಚಾರ ಹಾಕಿದ್ದಳು. ಆದರೆ ಗಂಡಸಿಗೆ ತನ್ನ ಮಗುವಿನ ಮೇಲೆ ತಾಯಿಯಷ್ಟು ಮಮತೆ ಎಲ್ಲಿಂದ ಬರಬೇಕು?

ವಾಸು ಎಷ್ಟೇ ಆಗಲಿ ಗಂಡಸು!

"ಆಗಲೇ ಮರೆತುಬಿಟ್ಟಿರಾ ? ನಮ್ಮ ವಿಷಯವೆಂದರೆ ನಿಮಗೆ ಬಹಳ ಅನಾದರ, ಅಲಕ್ಷ್ಯ, ಉದಾಸೀನ."

ಇತ್ತೀಚೆಗೆ ಸರಳೆ ಒಮ್ಮೊಮ್ಮೆ 'ನಾನು' ಎನ್ನುವುದಕ್ಕೆ ಬದಲಾಗಿ 'ನಾವು' ಎನ್ನುತ್ತಿದ್ದಳು.

ವಾಸುವಿಗೆ ಸರಳೆ ಏನು ಮಾತನಾಡುತ್ತಿದ್ದಾಳೆಂಬುದೇ ತಿಳಿಯಲಿಲ್ಲ.

"ಕೋಪ ಮಾಡಿಕೋಬೇಡ ಸರಳಾ, ವಿಷಯವೇನು ಹೇಳು?"

"ನಾನು ಹೇಳೋದಿಲ್ಲ. ನೀವೇ ಜ್ಞಾಪಿಸಿಕೊಳ್ಳಿ."

"ನನಗೆ ನೆನಪಿಗೆ ಬರೋದಿಲ್ಲ. ನೀನೇ ಹೇಳಿಬಿಡು."

ವಾಸುವಿನೊಡನೆ ಸೆಣಸಾಡಿ ಪ್ರಯೋಜನವಿಲ್ಲವೆಂದು ಸರಳೆಗೆ ತಿಳಿಯಿತು.

"ಸಂಜೆ ಮಾರ್ಕೆಟ್ಟಿಗೆ ಹೋಗೋಣಾಂತ...."

"ಹೂಂ. ನೆನಪಿಗೆ ಬಂತು."

"ಬರದೇ ಏನು ಮಾಡುತ್ತದೆ?"—ಎಂದು ಮೂದಲಿಸಿದಳು ಸರಳೆ.

ಸಂಜೆ ವಾಸು ಮನೆಗೆ ಬರುವ ಹೊತ್ತಿಗೆ ಸರಳೆ ಸಿಂಗಾರವಾಗಿದ್ದರೂ ಸೀರೆಯನ್ನು ಮಾತ್ರ ಬದಲಿಸಿರಲಿಲ್ಲ. ವಾಸುವಿನ ಕಾಫಿ, ತಿಂಡಿ, ಅಲಂಕಾರ ಐದು ಮಿನಿಟುಗಳಲ್ಲಿ ಮುಗಿಯಿತು.

ಸರಳಾ "ರೀ" ಎಂದಳು.

"ಏನು?"

"ಯಾವ ಸೀರೆ ಉಡಲಿ?"

"ಧರ್ಮಾವರಂ ಸೀರೆ ಉಡು"—ವಾಸು ತನ್ನ ತಲೆಗೆ ಮೊದಲು ಹೊಳೆದ ಸಲಹೆಯನ್ನು ಸರಳೆಗೆ ಸೂಚಿಸಿದ.

"ಯಾಕೆ, ಜಾರ್ಜೆಟ್ ಉಟ್ಟರೆ ಚೆನ್ನಾಗಿರುವುದಿಲ್ಲವೆಂದು ಧರ್ಮಾವರಂ ಸೀರೆ ಉಡಲು ಹೇಳ್ತೀರೇನೋ ? ಹೋಗಿ, ನಾನು ನಿಮ್ಮ ಜೊತೆ ಬರುವುದೇ ಇಲ್ಲ"—ಎಂದಳು ಸರಳಾ.

"ಹಾಗಲ್ಲ ಸರಳಾ, ತಪ್ಪು ತಿಳಿಯಬೇಡ. ಬೇಕಾದರೆ ಜಾರ್ಜೆಟ್ ಸೀರೆಯನ್ನೇ ಉಟ್ಟುಕೊ."

"ಏನೂ ಬೇಡ. ನಿಮಗೆ ನನ್ನ ಜೊತೆ ಬರಲು ಅವ[illegible] ತೋರುತ್ತದೆ. ಆದುದರಿಂದಲೇ ಹೀಗೆ ಮಾತನಾಡುತ್ತೀರಿ."

"ಇಲ್ಲ ಸರಳಾ."

ಸರಳೆಯನ್ನು ಸಮಾಧಾನಗೊಳಿಸಿ ಹೊರಡಿಸಬೇಕಾದರೆ ವಾಸುವಿಗೆ ಸಾಕಾಯಿತು.

ಅಂಗಡಿಯಲ್ಲಿ ಸರಳೆ ತನ್ನ ಕಣ್ಣಿಗೆ ಅಂದವಾಗಿ ಕಂಡ ಬಣ್ಣಗಳ ದಾರವನ್ನೆಲ್ಲಾ ಕೊಂಡಳು. ವಾಸು ಅವಳ ವ್ಯಾಪಾರವನ್ನು ನೋಡಿ ಬೆದರಿ

"ಸರಳಾ, ಈಗ ಯಾವುದಾದರೂ ಎರಡು ಬಣ್ಣ ತಗೋ ಸಾಕು ಅದನ್ನು ಹಾಕಿ ಮುಗಿಸಿದ ನಂತರ ಬೇಕಾದರೆ ಬೇರೆ ಬಣ್ಣದ ಉಲ್ಲನ್ ತೆಗೆದುಕೊಳ್ಳುವಿಯಂತೆ" ಎಂದ.

"ಕುಲಾವಿ, ಕಾಲು ಚೀಲ, ಸ್ವೆಟರ್ ಎಲ್ಲಾ ನಾಲ್ಕು ದಿನದಲ್ಲಿ ಹಾಕಿ ಮುಗಿಸಿಬಿಡಬಹುದು. ಪುನಃ ಪುನಃ ಯಾರು ಮಾರ್ಕೆಟ್ಟಿಗೆ ಬರುತ್ತಾರೆ, ಬೇಜಾರು. ಈಗಲೇ ಎಲ್ಲವನ್ನೂ ಕೊಂಡುಕೊಂಡು ಬಿಡುತ್ತೇನೆ. ಎಲ್ಲಾ ಬಣ್ಣಗಳಲ್ಲೂ ಒಂದೊಂದು ಜೊತೆ ಕಾಲು ಚೀಲ, ಕುಲಾವಿ, ಸ್ವೆಟರು ಹಾಕುತ್ತೇನೆ."

ವಾಸು ಎಂದಿನಂತೆ ಸುಮ್ಮನಾದ.

ಸರಳೆಯ ವ್ಯಾಪಾರ ಮುಗಿಯಿತು. ವಾಸು ಜೇಬಿನಿಂದ ಪರ್ಸು ತೆಗೆದು ಹಣ ಕೊಟ್ಟ. ಅವರು ಬಾಗಿಲು ದಾಟಿ ಹೋಗುವಷ್ಟರಲ್ಲಿ ಅಂಗಡಿಯವನು

"ತಾಯೀ, ನಿಟ್ಟಿಂಗ್ ಕಡ್ಡಿಗಳು ಬೇಡವೇ?"—ಎಂದ.

ನಿಜ. ಸರಳೆಗೆ ನಿಟ್ಟಿಂಗ್ ಕಡ್ಡಿಗಳು ಮರೆತೇಹೋಗಿದ್ದವು.

"ಹೌದು ಬೇಕು"—ಎನ್ನುತ್ತಾ ಸರಳೆ ಹಿಂತಿರುಗಿದಳು.

"ಎಷ್ಟನೇ ನಂಬರು ಕಡ್ಡಿ ಬೇಕು?" ಅಂಗಡಿಯವನು ಕೇಳಿದ.

ಸರಳೆ ಕಣ್ಣು ಕಣ್ಣು ಬಿಟ್ಟಳು. ನಿಟ್ಟಿಂಗ್ ಕಡ್ಡಿಗಳಿಗೆ ನಂಬರುಗಳಿರುತ್ತವೆಯೆಂದು ಅವಳಿಗೆ ತಿಳಿದಿರಲೇ ಇಲ್ಲ. ಆದರೂ ಅದನ್ನು ಅಂಗಡಿಯವನೆದುರಿಗೆ ತೋರಗೊಡಬಾರದೆಂದು "ಎಷ್ಟನೇ ನಂಬರುಗಳಿವೆ?"—ಎಂದಳು.

"ಒಂದನೇ ನಂಬರು, ಎರಡನೇ ನಂಬರು."

"ಎರಡೂ ಒಂದೊಂದು ಜೊತೆ ಕೊಡು."

ವಾಸು ದಾರಿಯಲ್ಲಿ ಸರಳೆಯನ್ನು ರೇಗಿಸಿದ

"ಸ್ವೆಟರನ್ನು ಕಡ್ಡಿಯಿಲ್ಲದೇ ಕೈ ಬೆರಳುಗಳಿಂದಲೇ ಹಾಕಬಹು ದೊಂತ ಮಾಡಿದ್ದೆಯೇನೆ?"

ಸರಳೆ ಮೌನವಾಗಿದ್ದಳು.

ಎದುರಿನಿಂದ ಲಕ್ಷಣವಾದ ಹದಿನೆಂಟು ವರ್ಷ ವಯಸ್ಸಿನ ಹುಡುಗಿ ಯೊಬ್ಬಳು ಬಂದಳು. ವಾಸು, ಸರಳಾ ಸಹಜವಾಗಿ ಅವಳನ್ನು ನೋಡಿದರು. ಹುಡುಗಿ ಅವರನ್ನು ಹಾದುಹೋಗುವಾಗ ಸರಳಾ ವಾಸುವಿನ ಕಡೆ ನೋಡಿ ದಳು. ವಾಸು ಹುಡುಗಿಯ ಕಡೆ ನೋಡುತ್ತಿದ್ದ. ಸರಳೆಯ ಮನಸ್ಸು ಅಸಮಾಧಾನದಿಂದ ಕುದಿಯಿತು. ಅವಳು ಹುಡುಗಿಯ ಕಡೆಗೊಮ್ಮೆ ನೋಡಿ ನಂತರ ತನ್ನನ್ನು ನೋಡಿಕೊಂಡಳು.

"ಹುಡುಗಿ ಚೆನ್ನಾಗಿದಾಳೆ, ಅಲ್ಲವೇ?"—ಸರಳೆ ಕೇಳಿದಳು.

"ಓಕೋ"—ಎಂದ ವಾಸು.

ಈ ಬಗೆಯ ಮಾತುಗಳು ವಾಸುವಿಗೆ, ಸರಳೆಗೆ ಹೊಸದಲ್ಲ. ಹಿಂದೆ ಎಷ್ಟೋಬಾರಿ ವಾಸು ಗಮನಿಸದ ಹುಡುಗಿಯನ್ನು ಸರಳೆ ತಾನಾಗಿಯೇ ನಿರ್ದೇಶಿಸಿ "ನೋಡಿ, ಆ ಹುಡುಗಿ ಚೆನ್ನಾಗಿದಾಳೆ. ಅಲ್ಲವೇ?"—ಎನ್ನುತ್ತಿದ್ದುದುಂಟು.

ಮನೆಗೆ ಬಂದವಳೇ ಸರಳೆ ವಾಸುವಿನೊಡನೆ ಜಗಳವಾಡಿದಳು.

"ಆ ಹುಡುಗಿ ಚೆನ್ನಾಗಿದಾಳೆ ಅಲ್ಲಾ? ನಾನು ಮಾತ್ರ ನಿಮಗೆ ಚೆನ್ನಾಗಿಲ್ಲವೇನೋ? ನೀವು ಅವಳನ್ನು ಯಾಕೆ ಹಾಗೆ ನೋಡಿದಿರಿ. ಮಾಟವಾದ ಶರೀರವಿದೆ, ಫಿಗರ್ ಇದೇಂತ ನೋಡಿದಿರಿ. ಅಲ್ಲಾ...."

"ಸರಳಾ, ಕೇಳ್ಲಿ... ಹಿಂದೆ ಎಷ್ಟೋಸಲ ನೀನಾಗೇ...."

"ನೀವೇನೂ ಹೇಳಬೇಡಿ. ನಿಮ್ಮ ಮನಸ್ಸು ನನಗೆ ಇವತ್ತು ಅರ್ಥ ವಾಯಿತು. ಆ ಹುಡುಗಿಗೆ ಮದುವೆಯಾದರೆ ಒಂದಲ್ಲ ಒಂದುದಿನ ಅವಳೂ ನನ್ನ ಹಾಗೆ ಆಗೇ ಆಗ್ತಾಳೆ."

"ಸರಳಾ, ಯಾಕೆ ಉದ್ವೇಗಗೊಳ್ತೀಯ? ಕೇಳ್ಲಿ. ಎಷ್ಟು ದಿನ ನೀನು ನನಗೆ...."

"ಸುಮ್ಮನಿರಿ. ಸಾಕು"—ಎಂದವಳೆ ಸರಳೆ ದಿಂಬಿನ ಮೇಲೆ ತಲೆ ಯಿಟ್ಟು ಅತ್ತಳು.

ವಾಸು ನಿರ್ವಿಣ್ಣನಾದ. ಸರಳೆಯ ಬಳಿ ಕುಳಿತು ಅವಳ ತಲೆ ಸವರುತ್ತಾ

"ಸರಳಾ ಆಯಾಸಮಾಡಿಕೋಬೇಡ. ನಿನ್ನ ಮಗೂನ ನಲುಗಿಸ. ಬೇಡ"—ಎಂದ.

ತನ್ನಲ್ಲಿ ಈಗ ಕಾಣದಾಗಿದ್ದ ವೈವಾಟವನ್ನು ಆ ಹುಡುಗಿಯಲ್ಲಿ ವಾಸು ನೋಡಲು ಯತ್ನಿಸಿದನೆಂದೇ ಸರಳೆಯ ವಾದ.

"ನಿನ್ನಾಣೆಗೂ ಹಾಗೆ ನಾನು ನೋಡಲಿಲ್ಲ ಸರಳಾ. ಮುದ್ದಾದ ಹುಡುಗಿಯನ್ನು ಸಹಜವಾಗಿ ದಾರಿಯಲ್ಲಿ ನೋಡುವ ಅಸಂಖ್ಯಾತ ದಾರಿ ಹೋಕರ ಪೈಕಿ ನಾನೂ ಒಬ್ಬ ಅಷ್ಟೆ. ಆದರೆ ಅಷ್ಟಕ್ಕೇನೀನು ಸಿಟ್ಟಾಗಬೇಕೆ? ಆ ಹುಡುಗಿ ಎಂದಿಗಾದರೂ ಸರಳೆಯಾಗಲು ಸಾಧ್ಯವೇ?"

"ಬಿಡಿ. ನಿಮ್ಮ ಗಂಡಸರ ಹಣೆಬರಹವೇ ಇಷ್ಟು. ಯಾವುದಾದರೂ ಚೆನ್ನಾಗಿರುವ ಹುಡುಗಿ ಕಣ್ಣಿಗೆ ಬಿದ್ದರೆ ಸಾಕು—ಅವಳ ಒಂದೆ ಹೋಗೋದು—ಪಕ್ಕದಲ್ಲಿರುವ ಹೆಂಡತಿಯನ್ನೂ ಮರೆತು "

"ಸರಳಾ, ನೀನು ನನಗೆ ಬಹಳ ಅನ್ಯಾಯ ಮಾಡ್ತಿದೀಯ. ಯೋಚಿಸಿ ಮಾತನಾಡು"—ಎಂದ ವಾಸು.

"ಗಂಡಸರ ಸ್ವಭಾವವೇ ಅದು"—ಎಂದು ಸರಳಾ ಒಂದು ಸಿದ್ಧಾಂತ ಸ್ಥಾಪಿಸಿಯೇ ಬಿಟ್ಟಳು. ವಾಸು ಎರಡು ಗಂಟೆಗಳ ಕಾಲ ಕಷ್ಟಪಟ್ಟು ಮುರಿದು ಹೋಗಿದ್ದ ಅವಳ ಮನಸ್ಸನ್ನು ರಿಪೇರಿ ಮಾಡಿದ.

"ಗಂಟಲೊಣಗಿರಬೇಕು. ಕೇಸರೀ ಹಾಲು ಕುಡಿ"—ಎಂದ ವಾಸು. ಸರಳೆ ಸಮಾಧಾನಗೊಂಡು ಹಾಲುಕುಡಿಯಲು ಎದ್ದು ಲೋಟದ ಕಡೆ ಕೈ ಚಾಚಿದಳು.

ಸರಳೆ ವಕ್ರರೇಖೆಯಂತಾಗಿರುವುದನ್ನು ನೋಡಿ ವಾಸು ಎಂದು ಕೊಂಡ ಅವಳ ದೇಹಸ್ಥಿತಿಯೇ ಅವಳ ಈಗಿನ ಮನಸ್ಥಿತಿಗೆ ಕಾರಣ.'

ಅರ್ಧರಾತ್ರಿಯಲ್ಲಿ ಸರಳಾ ವಾಸುವನ್ನು ಎಬ್ಬಿಸಿದಳು.

"ಏನಾಯಿತೇ?"—ಎಂದ ವಾಸು —ಗಾಬರಿಯಾಗಿ.

"ಏನಿಲ್ಲ. ತುಂಬಾ ಹಸಿವಾಗುತ್ತಿದೆ"—ಸರಳೆ ಸರಳವಾದ ದನಿಯಲ್ಲಿ ಹೇಳಿದಳು..

"ಈಗೆಂತಹ ಹಸಿವೇ ? ರಾತ್ರಿ ಅಂಥ ಚೆನ್ನಾಗಿ ನಾಲ್ಕು ಜನ ಮಾಡುವ ಊಟವನ್ನು ನೀನೊಬ್ಬಳೇ ಮಾಡಿದೆ."

"ಅದೇನೋ ಅಂತೂ ಹಸಿವಾಗ್ತಿದೆ."

"ಅಡಿಗೆಮನೆಯಲ್ಲೇನಾದರೂ ತಂಗಳು ಅನ್ನವಿಕ್ಕಿದೆಯೋ ನೋಡು"

—ವಾಸು ಹೇಳಿದ

"ಅತ್ತೆ ಏನೆಂದುಕೊಂಡಾರು?"

"ಸೊಸೆಗೆ, ಮೊಮ್ಮಗನಿಗೆ ಹಸಿವಾಗಿರಬೇಕು ಎಂದುಕೊಳ್ಳುತ್ತಾರೆ."

"ನಂಗೆ ನಾಚಿಕೆ"—ಎಂದು ಸರಳಾ ಸ್ವಲ್ಪ ಹೊತ್ತು ಕೊಸರಾಡಿ ನಂತರ ತಂಗಳನ್ನಕ್ಕೆ ಕೈ ಹಾಕುವ ಸಾಹಸಕ್ಕೆ ಹೋಗದೇ ಮಲಗಿದಳು.

ಮಾರನೆಯ ದಿನ ವಾಸು ಊಟ ಮುಗಿಸಿ ಹೊರಗೆ ಬಂದಾಗ ರಾಮುವಿನ ತಾಯಿ ಸರಳೆಯ ಪಕ್ಕದಲ್ಲಿ ಕುಳಿತಿದ್ದರು. ಆಕೆಯ ಕೈಲಿ ನಿಟ್ಟಿಂಗಿನ ಕಡ್ಡಿಗಳಿದ್ದವು. ರಾಮುವಿನ ತಾಯಿಗೆ ವಾಸುವಿನ ಪರಿಚಯ ವಿತ್ತು. ಆಕೆ ವಾಸುವನ್ನು ಕಂಡು

"ಯಾವ ಬಣ್ಣದ ಸ್ವೆಟರು ಮೊದಲು ಹಾಕಬೇಕೆಂದು ಸರಳೆ ಇನ್ನೂ ನಿಶ್ಚಯಿಸಿಲ್ಲ"—ಎಂದರು.

"ಯಾವುದು ಹಾಕಲಿ?"—ಎಂದಳು ಸರಳೆ.

"ಹಳದಿಯದು ಹಾಕು"—ಎಂದ ವಾಸು.

"ಯಾವುದಾದರೂ ಹಾಕು" ಎಂದರೆ 'ನನ್ನ ವಿಷಯದಲ್ಲಿ ನಿಮಗೆ ತುಂಬಾ ಅಲಕ್ಷ್ಯ 'ಎಂದು ಸೇರಿ ಕೆರಳುವಳೆಂಬುದು ವಾಸುವಿಗೆ ತಿಳಿದಿತ್ತು. ಆದುದರಿಂದ ಅವನು 'ಹಳದಿಯದು ಹಾಕು' ಎಂದು ಜಾಣತನದ ಉತ್ತರ ಕೊಟ್ಟ. ಮರುಕ್ಷಣ ವಾಸು ಅಳುಕಿದ

'ಸರಳೆ ಹಳದಿ ಬಣ್ಣದ ಉಲ್ಲನ್ ತೆಗೆದುಕೊಂಡಿಲ್ಲದಿದ್ದರೆ?'

ಸರಳೆ ಪ್ರಸನ್ನ ವದನಳಾಗಿ 'ಆಗಲಿ' ಎಂದಳು.

'ಸಧ್ಯ, ಬದುಕಿದೆ' ಎಂದುಕೊಂಡು ವಾಸು ಹೊರಟುಹೋದ.

ಸಂಜೆ ವಾಸು ಮನೆಗೆ ಬಂದಾಗಲೂ ಸರಳೆ ಕೈಲಿ ನಿಟ್ಟಿಂಗ್ ಕಡ್ಡಿ ಹಿಡಿದು ಕುಳಿತಿದ್ದಳು. ಎರಡು ಬೆಟ್ಟಗಲ ಆವಳ ಹಣೆಗೆ ಪ್ರಕಾಶಿಸುತ್ತಿತ್ತು. ವಾಸು ಅತ್ಯಂತ ಆಸಕ್ತಿಯಿಂದ ಹತ್ತಿರ ಬಂದು 'ಎಷ್ಟಾಯಿತೇ?'—ಎಂದ.

"ಮಾತನಾಡಿಸಬೇಡಿ. ಲೆಕ್ಕ ತಪ್ಪು ತಪ್ಪಾಗುತ್ತದೆ." ಹೀಗೆಂದವಳೇ ಸರಳೆ 'ನಾಲ್ಕು ನಿಟ್ಟು, ಎರಡು ಪರ್ಲು, ನಾಲ್ಕು ನಿಟ್ಟು'—ಎಂದು ಎಣಿಸ ತೊಡಗಿದಳು.

ವಾಸುವಿಗೆ ತಿಂಡಿ ಕೊಟ್ಟು ರಂಗಮ್ಮ ಸೊಸೆಯ ಬಳಿಗೆ ಬಂದರು.

"ಸರಳಾ, ಒಂದೇಸಮ ಹಾಕಬೇಡಮ್ಮಾ. ಬೆನ್ನು, ಕತ್ತು ನೋಯುತ್ತದೆ"—ಎಂದರು.

"ಇಲ್ಲ ಅತ್ತೆ. ನಿಟ್ಟಿಂಗ್ ಎಂದರೆ ನಾನು ಏನೋಂತ ಮಾಡಿದ್ದೆ. ಬಹಳ ಸುಲಭ ಅತ್ತೆ. ಈ ಉಲ್ಲನ್ ಮುಗಿದಾದ ಮೇಲೆ ನಾನು ನಿಮಗೆ, ಅವರಿಗೆ, ಮಾವನವರಿಗೆ ಎಲ್ಲರಿಗೂ ಒಂದೊಂದು ಸ್ವೆಟರ್ ಹಾಕಿಕೊಡು ತ್ತೇನೆ"—ಎಂದಳು

ಆದೇತಾನೆ ಒಳಗೆಬಂದ ವಾಸು, ಸರಳೆಯ ಮಾತು ಕೇಳಿಸಿಕೊಂಡು ದೀನನಾಗಿ ಹೆಂಡತಿಗೆ ಕೈ ಮುಗಿದು

"ಸರಳಾ, ನಿನ್ನ ಪಟ್ಟಿಯಿಂದ ನನ್ನ ಹೆಸರನ್ನು ಹೊಡೆದು ಹಾಕಿ ಬಿಟ್ಟರೆ ನಾನು ಧನ್ಯ. ನನ್ನ ಮಾತ್ರ ಹಿಂಸೆ ಮಾಡಬೇಡ" ಎಂದ.

ಗಂಡನ ದೀನ ವದನ ನೋಡಿ ಸರಳೆಗೆ ನಗು ಬಂತು.

"ಹೌದು. ನಿಮಗೆ ನಾನು ಹಾಕಿಕೊಟ್ಟರೆ ಹಿಡಿಸುವುದಿಲ್ಲ. ಒಂದಕ್ಕೆ ಎರಡರಷ್ಟು ಹಣ ತೆತ್ತು ರೆಡಿಮೇಡ್ ತಗೊಂಡರೆ ನಿಮಗೆ ಪ್ರೀತಿ ಅಲ್ಲ ಒಂದು ಸ್ವೆಟರಿಗೆ ಕೊಡುವ ದುಡ್ಡಿನಲ್ಲಿ ನಾವೇ ಹಾಕಿಕೊಂಡರೆ ಎರಡು ಸ್ವೆಟರಾಗುತ್ತದೆ"—ಎಂದಳಾಕೆ.

ರಂಗಮ್ಮನೂ ಮಗನನ್ನು ಆಕ್ಷೇಪಿಸಿದರು—"ಹೌದು. ಅವಳು ಅಷ್ಟು ಪ್ರೀತಿಯಿಂದ ಹಾಕಿಕೊಡುತ್ತೇನೆ ಎನ್ನುವಾಗ ನೀನು ಬೇಡ ಎನ್ನಬಾರದು. ಹಾಕಿಸಿಕೋ "

"ನನಗಂತೂ ಬೇಡವೇ ಬೇಡ"—ಎಂದುಬಿಟ್ಟ ವಾಸು ನಿರ್ದಯ ವಾಗಿ.

ಸ್ವೆಟರು ಶುರು ಮಾಡಿದ ಗಳಿಗೆಯಿಂದ ಸರಳೆ ಸ್ವೆಟರಿನ ಹೊರತು ಬೇರೆ ವಿಷಯ ಮಾತನಾಡುತ್ತಿರಲಿಲ್ಲ. ವಾಸುವಿಗೂ, ರಂಗಮ್ಮನವರಿಗೂ ಅವನ್ನು ಕೇಳಿ ಕೇಳಿ ತಲೆ ಚಿಟ್ಟು ಹಿಡಿದುಹೋಯಿತು. ತುಂಬಾ ಬೇಸರ ವಾದಾಗ ವಾಸು ಕಾಲೇಜಿರಲಿ, ಇಲ್ಲದಿರಲಿ ಅದರ ನೆಪ ಹಾಕಿಕೊಂಡು ಹೊರಗೆ ಹೊರಟುಬಿಡುತ್ತಿದ್ದ. ಆದರೆ ಪಾಪ! ರಂಗಮ್ಮನವರೆಲ್ಲಿಗೆ ಹೋಗ ಬೇಕು!

ನಾಲ್ಕಾರು ದಿನಗಳಾದವು. ಕ್ರಮೇಣ ಸರಳೆ ಸ್ವೆಟರಿನ ವಿಷಯ ಮಾತನಾಡುವುದನ್ನು ಕಡಿಮೆ ಮಾಡಿದಳು. ವಾಸು ನಿರಾತಂಕವಾಗಿ ಉಸಿರಾಡಿದ. ಒಂದು ಸಂಜೆ ವಾಸು ಮನೆಗೆ ಬಂದ ಕೂಡಲೇ ಸರಳೆ ಮೈ ಮುರಿದು

"ಅಬ್ಬ ! ನಾನು ಏನೋಂತಿದ್ದೆ. ಈ ಸ್ವೆಟರು ಹಾಕುವುದು ಬಹಳ ಕಷ್ಟ"— ಎಂದಳು.

"ಯಾಕೇ ಏನಾಯಿತು?"

"ನೋಡಿ, ಸ್ವೆಟರು ಮುಕ್ಕಾಲುಪಾಲು ಹಾಕಿದ್ದೆ. ಹೆಣಿಗೆ ಎಲ್ಲಿ ಕಳಚಿಕೊಂಡಿತೋ ಏನೋ ನಾನು ಒಂದು ಕಡೆಯಿಂದ ಹಾಕುತ್ತಿದ್ದರೆ ಅದು ಮತ್ತೊಂದು ಕಡೆಯಿಂದ ಬಿಚ್ಚಿಕೊಂಡು ಬಂದಿದೆ"—ಎನ್ನುತ್ತಾ ಗೋಜುಗೋಜಾಗಿದ್ದ ಸ್ವೆಟರಿನ ತುಂಡನ್ನು ವಾಸುವಿನ ಮುಂದೆ ಎಸೆದಳು.

ವಾಸು ಅದನ್ನು ಕೈಗೆತ್ತಿಕೊಂಡು ಪರೀಕ್ಷಿಸಿದ. ಅದರ ತಲೆ, ಬಾಲ ಯಾವುದೂ ಅವನಿಗೆ ಅರ್ಥವಾಗಲಿಲ್ಲ.

"ಏನೇ ಇದು?"—ಎಂದ ವಾಸು.

"ಸ್ವೆಟರೊಂದ್ರೆ."

"ಇದ್ಯಾಕೆ ಹೀಗಿದೆ?"

"ಅದು ಇರೋದೇ ಹಾಗೆ. ನನಗಂತೂ ನಿಟ್ಟಿಂಗ್ ಕಡ್ಡಿ ಹಿಡಿದು ಹಿಡಿದು ಬೆರಳು, ತೋಳು, ಕತ್ತು, ಬೆನ್ನು ಎಲ್ಲಾ ನೋಯುತ್ತಿವೆ."

"ಹಾಗಾದರೆ ನಿನ್ನ ಮಗನ ಗತಿ?"

"ಎರಡು ದಿನ ವಿಶ್ರಾಂತಿ ತಗೊಂಡು ಮತ್ತೆ ಹಾಕುತ್ತೇನೆ. ರಾಮೂ ತಾಯಿ ಮನೆಗೆ ಹೋಗಿ ಇದನ್ನು ರಿಪೇರಿ ಮಾಡಿಸುತ್ತೇನೆ"—ಎಂದಳು ಸರಳಾ

ವಾಸು 'ಸೋಡಿಯಂ' ಮೇಲೆ ಉಪನ್ಯಾಸ ಕೊಡಬಲ್ಲವನಾಗಿದ್ದನೇ ಹೊರತು ಸ್ವೆಟರಿನ ವಿಷಯ ಅವನಿಗೇನು ಗೊತ್ತು?

ಸರಳೆಯ ಎರಡು ದಿನದ ವಿಶ್ರಾಂತಿ ನಾಲ್ಕಾರು ದಿನಗಳವರೆವಿಗೆ ಮುಂದುವರಿಯಿತು. 'ಇವತ್ತು ನೆಗಡಿ, ನಾಳೆ ಸೊಂಟ ನೋವು' ಎನ್ನುತ್ತಾ ಸರಳೆ ತನ್ನ ಐಜವನ್ನು ರೆಚ್ಚಿಸಿಕೊಂಡಳು.

ಒಂದು ದಿನ ವಾಸು ಮನೆಗೆ ಬಂದಾಗ ಸರಳೆ ಮುದ್ದೆ ಮುದ್ದೆಯಾಗಿದ್ದ ಹಳದಿ ಉಲ್ಲನಿನ ಉಂಡೆಯನ್ನು ವಾಸುವಿನ ಮುಂದೆ ಹಾಕಿ "ಅಯ್ಯೋ, ಬರಿಯ ತಪ್ಪಾಗಿ ಬಿಟ್ಟಿತು. ರಾಮೂನ ತಾಯಿ ಎಲ್ಲವನ್ನೂ ಬಿಚ್ಚಿ ಮೊದಲಿನಿಂದಲೂ ಹಾಕು ಎಂದರು. ಸ್ವೆಟರ್ ಹಾಕುವುದು ಎಷ್ಟು ಕಷ್ಟವೋ, ಹಾಕಿದುದನ್ನು ಬಿಚ್ಚುವುದು ತುಂಬಾ ಸುಲಭ ಅಂದ್ರೆ. ನಾನು ಅಷ್ಟು ದಿನದಿಂದ ಹಾಕಿದುದನ್ನೆಲ್ಲಾ ಎರಡು ನಿಮಿಷದಲ್ಲಿ ಬಿಚ್ಚಿಬಿಟ್ಟೆ—"

ಅದೇನೋ ಸಾಹಸದ ಕೆಲಸ ಎನ್ನುವಂತೆ ಸರಳೆ ಹೇಳಿಕೊಂಡಳು.

ವಾಸು 'ಸರಿ' ಎಂದ.

"ರಾಮೂ ತಾಯಿಗೆ ನಾನು ಬೇರೆ ಪ್ಯಾಟ್ರನ್ ಹೇಳಿಕೊಡಿ— ಸುಲಭವಾಗಿರೋದು ಎಂದೆ. ಅವರು ಮತ್ತೇನೋ ಹೇಳಿಕೊಟ್ಟರು. ಅದಂತೂ ನಾನು ಮೊದಲು ಕಲಿತುಕೊಂಡಿದ್ದ ಪ್ಯಾಟ್ರನ್‌ಗಿಂತಲೂ ತುಂಬಾ ಕಷ್ಟ."

"ಸರಿ."

"ರೀ"—ಎಂದಳು ಸರಳಾ ರಾಗವಾಗಿ—ಮೋಹಕ ದನಿಯಲ್ಲಿ.

"ಏನು?"

"ನನ್ನ ಕೈಲಾಗೋಲ್ಲಾಂದ್ರೆ ಈ ಸ್ವೆಟರ್ ಹಾಕೋದು. ಕತ್ತು, ಬೆನ್ನು ಎಲ್ಲಾ ನೋಯುತ್ತದೆ. ನಾನು ಮನಸ್ಸುಮಾಡಿ ಹಾಕಿದರೆ ಎರಡು ದಿನಗಳಲ್ಲಿ ಹಾಕಬಲ್ಲೆ." ಎನ್ನುತ್ತಾ ಸರಳೆ ವಾಸುವಿನ ಕಡೆ ಓರೆನೋಟ ಬೀರಿದಳು.

ವಾಸುವಿನ ಕಣ್ಣುಗಳಲ್ಲಿ ಆಶ್ಚರ್ಯವಿರಲಿಲ್ಲ. ಅವನು ಸರಳೆಯ ಈ ಬಗೆಯ ಪರೀಕ್ಷೆಗಳಿಗೆ ಹೊಸಬನಾಗಿರಲಿಲ್ಲ. ಆದುದರಿಂದಲೇ ವಾಸು ಮುಂಜಾಗ್ರತೆ ವಹಿಸಿದ್ದ.

ಸರಳೆ ಹುರುಪಿನಿಂದ ಮುಂದುವರಿಸಿದಳು.

"ಆದರೆ ಹಾಕಿದ್ದು ಬೆನ್ನು ನೋವು ನನಗೆ. ಏನೊಂದ್ರೆ ರೆಡಿಮೇಡ್ ಉಲ್ಲನ್ ಬಟ್ಟೆಗಳನ್ನೇ ಕೊಂಡು ಬಿಡೋಣ. ಪಾಪ! ಅವರೂ ಬದುಕಬೇಡವೆ?"

"ಯಾರು ? ನಾನೇ?"—ವಾಸು ಕೇಳಿದ.

"ಅಲ್ಲ ರೆಡಿಮೇಡ್ ಬಟ್ಟೆ ತಯಾರಿಸುವವರು. ಪಾಪ! ಅವರೂ ಬದುಕಲಿ."

"ಆಗಲಿ. ಆದರೆ ಈಗ ಕೊಂಡಿರುವ ಉಲ್ಲನ್ ಏನು ಮಾಡುವುದು?"—ವಾಸು ಕೇಳಿದ.

ಸರಳೆ ತುಟಿ ಕಚ್ಚುತ್ತಾ "ಜಡೆಗೆ ಟೇಪಿಗೆ ಬದಲು, ನಾರಿಗೆ ಬದಲು ಉಲ್ಲನ್ ಉಪಯೋಗಿಸಿದರೆ ಹೇಗೆ?" - ಎಂದಳು.

"ಯಾರು ಹಾಕಿಕೊಳ್ಳುತ್ತೀರಿ? ನೀನು, ಅಮ್ಮನೇ?"

"ಅಮ್ಮ ಜಡೆ ತುದಿಗೆ ಏನೂ ಹಾಕುವುದಿಲ್ಲ. ಅವರು ಸುಮ್ಮನೆ ಹೆರಳು ಸುತ್ತುತ್ತಾರೆ."

ವಾಸು ತಾನೇ ಎಷ್ಟು ಹೊತ್ತು ಗಾಭೀರ್ಯದಿಂದಿರಲು ಸಾಧ್ಯ ?

ನಗು ಅವನ ಹೃದಯವನ್ನೊಡೆದುಕೊಂಡು ಗಂಟಲಿನಿಂದ ಅಲೆ ಅಲೆಯಾಗಿ ಹೊರಹೊಮ್ಮಿತು. ಸರಳೆ ಹುಬ್ಬು ಗಂಟಿಕ್ಕಿದಳು.

"ಸರಳಾ, ನನಗೊಂದು ಉಲ್ಲನ್ನಿನ ಪಂಚೆ ಹೆಣೆಯಬಹುದಾದಷ್ಟು ಉಲ್ಲನ್ ತಗೊಂಡಿದೀಯ. ಎಷ್ಟು ದಿನ, ಎಷ್ಟು ಜನರ ಜಡೆಗೆ ಉಲ್ಲನ್ ಹಾಕಲು ಸಾಧ್ಯ ಹೇಳು. ಒಂದುಪಕ್ಷ ನಿನಗೆ ಹತ್ತು ಹೆಣ್ಣು ಮಕ್ಕಳಾಗಿ, ಒಬ್ಬೊಬ್ಬ ಹೆಣ್ಣು ಮಗಳಿಗೂ ಮತ್ತೆ ಹತ್ತು ಹೆಣ್ಣು ಮಕ್ಕಳುಗಳಾಗಿ, ಇನ್ನೂ ಆರೇಳು ತಲೆಮಾರು ನಮ್ಮ ವಂಶದಲ್ಲಿ ಹೆಣ್ಣು ಮಕ್ಕಳೇಹುಟ್ಟಿ, ಅವರೊಬ್ಬೊಬ್ಬರಿಗೂ ನಾಲ್ಕು ನಾಲ್ಕು ಜಡೆ ಪ್ರಕಾರ ಹೆಣೆದರೂ ಈಗ ನೀನು ತಂದಿರುವ ಉಲ್ಲನ್ ಮುಗಿಯೋದಿಲ್ಲ."

ಸರಳೆಗೆ ಅವನ ಮಾತು ನಿಜವೆನಿಸಿತು.

"ಹಾಗಾದರೆ ಏನು ಮಾಡೋದು? ಇನ್ನೊಂದು ಕೆಲಸ ಮಾಡು ತ್ತೀನೆ. ಗೋಜಾಗಿರುವ ಉಲ್ಲನ್ ನಾವೇ ಇಟ್ಟುಕೊಂಡು ಬಿಡೋಣ. ಉಳಿದವುಗಳನ್ನು ಸ್ವೆಟರ್ ಹಾಕುವ ನನ್ನ ಗೆಳತಿಯರಿಗೆ ಮಾರಿಬಿಡುತ್ತೀನೆ. ಆಗದೇ?"—ಎಂದಳು ಸರಳಾ.

"ಆಗಬಹುದು"—ಎಂದ ವಾಸು.

ಒಂದುವಾರದ ನಂತರ ಸರಳೆ ಅತ್ಯಂತ ಹಸನ್ಮುಖದಿಂದ ವಾಸು ವನ್ನು ಎದಿರುಗೊಂಡು ಹೇಳಿದಳು

"ಉಲ್ಲನ್ ಮಾರಿಬಿಟ್ಟೆ. ಸೆಕೆಂಡ್ ಹ್ಯಾಂಡ್ ಎಂದು ನನ್ನ ಗೆಳತಿ ಯರು ಕಡಿಮೆ ದುಡ್ಡಿಗೆ ತಗೊಂಡರು. ಅದರಿಂದ ನಮಗೆ ಎರಡು ರೂಪಾಯಿ ನಷ್ಟವಾಯಿತು. ಅಂತೂ ಉಲ್ಲನ್ ದಾಟಿಸಿ ಕೈತೊಳೆದು ಕೊಂಡೆ—ಬೇಕಿದ್ದರೆ ರೆಡಿಮೇಡ್ ತಗೊಂಡರಾಯಿತು. ಪಾಪ! ಅಂಗಡಿ ಯವನೂ ಬದುಕಬೇಡವೇ?"

"ಸಂತೋಷ. ಬದುಕಲಿ" – ಎಂದ ವಾಸು.

* * *

ಸರಳೆಯ ಚಿಕ್ಕಮ್ಮ, ಚಿಕ್ಕಪ್ಪ ಸರಳೆಯಿಂದ ದೂರವಿದ್ದರು. ರಂಗಸ್ವಾಮಿಯವರಿಗೆ ಸಣ್ಣ ಊರಿಗೆ ವರ್ಗವಾಗಿದ್ದುದರಿಂದ ಅವರು ಸರಳೆ ಯನ್ನು ಮೊದಲಿನಂತೆ ಆಗಾಗ್ಗೆ ನೋಡುವುದು ಸಾಧ್ಯವಾಗಿರಲಿಲ್ಲ.

ರಂಗಮ್ಮನವರಿಂದ ಪಂಕಜಮ್ಮನಿಗೆ ಶುಭ ಸಮಾಚಾರ ತಿಳಿದಿತ್ತು. ಅವರು ಸರಳೆಯನ್ನು ತಮ್ಮಲ್ಲಿಗೆ ಕರೆಸಿಕೊಳ್ಳಲು ತುದಿಗಾಲಿನಲ್ಲಿನಿಂತಿದ್ದರು. ಆದರೆ ವೈದ್ಯರ ಸಲಹೆಯಮೇರೆಗೆ ವಾಸು ಹೆಂಡತಿಯನ್ನು ಬೆಂಗಳೂರು ಬಿಟ್ಟು ಎಲ್ಲಿಯೂ ಕಳುಹಿಸಿ ಕೊಡುವಂತಿರಲಿಲ್ಲ. ಡಾಕ್ಟರ ಮಾತನ್ನು ಮೀರಿ ಹೋಗುವುದು ಸರಳೆಗೂ ಇಷ್ಟವಿರಲಿಲ್ಲ. ಮಗನ ತಾಯಿಯಾಗುವುದಕ್ಕಿದ್ದ ಸರಳೆಯನ್ನು ಚಿಕ್ಕಮ್ಮ ಏಳು ತಿಂಗಳವರೆವಿಗೆ ನೋಡುವಂತಾಗಲಿಲ್ಲ.

ಆರು ತಿಂಗಳು ತುಂಬಿ ಏಳನೆಯ ತಿಂಗಳು ಕಾಲಿಡುತ್ತಲೇ ರಂಗಮ್ಮ ಸೊಸೆಗೆ ಬಳೆತೊಡಿಸುವ ಶಾಸ್ತ್ರ ಮಾಡಲು ಸಂಭ್ರಮಪಟ್ಟರು. ಈ ಉತ್ಸವದಲ್ಲಿ ಸರೋಜಮ್ಮ, ಅರುಂಧತಿ, ರಾಜಗೋಪಾಲ ಎಲ್ಲರೂ ಭಾಗ ವಹಿಸಿದರು.

ನೆಂಟರಿಷ್ಟರೆಲ್ಲರೂ ಒಂದೊಂದು ದಿನ ಒಬ್ಬೊಬ್ಬರು ಸರಳೆಯನ್ನು ಊಟ, ತಿಂಡಿಗೆ ಆಹ್ವಾನಿಸಿದರು. ಮೊದಲನೆಯ ಆಹ್ವಾನ ಸರೋಜಮ್ಮನವರಿಂದ ಸರಳೆ, ವಾಸುವಿಗೆ ಬಂತು. ಆ ದಿನ ಸರಳೆಗೆ ಪ್ರಿಯವಾದ ತಿಂಡಿ, ಭಕ್ಷ್ಯಗಳನ್ನು ಸರೋಜಮ್ಮ ತಯಾರು ಮಾಡಿದ್ದರು. ಬೆಳಗಿನ ಸ್ನಾನ, ಕಾಫಿ ಮುಗಿಸಿ ಸರಳಾ ಸರೋಜಮ್ಮನ ಮನೆಗೆ ಹೋಗಿದ್ದಳು. ವಾಸು ಊಟದ ಹೊತ್ತಿಗೆ ಬಂದರೆ ಸಾಕೆಂದು ಸರಳೆ ಹೇಳಿದರೂ ವಾಸುವೂ ಏನೇನೋ ನೆಪ ಹೂಡಿ ಅಕ್ಕನ ಮನೆಗೆ ಬೇಗನೆ ಬಂದ.

ಅವನು ಅರುಂಧತಿಗಾಗಿಯೇ ಬಂದ ಎಂದು ಸರಳೆಯ ಅಭಿಪ್ರಾಯ. ವಾಸುವಿನ ಉತ್ಸುಕತೆ ನೋಡಿ ಸರಳೆಯ ಮುಖ ದಪ್ಪಗಾಯಿತು. ಉತ್ಸಾಹದಿಂದ ಸರೋಜಮ್ಮನ ಎರಡನೆಯ ಮಗಳೊಡನೆ ಮಾತನಾಡುತ್ತಿದ್ದವಳು ಕೂಡಲೇ ತನ್ನ ಉತ್ಸಾಹವನ್ನೆಲ್ಲಾ ಕಳೆದುಕೊಂಡು ಪೆಚ್ಚಾದಳು, ಮೌನಿಯಾದಳು.

ಅಲ್ಲಿಂದ ಮುಂದೆ ಮಾತು, ಕತೆಯಲ್ಲಾಗಲಿ, ಕೇರಂ, ಪಗಡೆ ಆಟಗಳಲ್ಲಾಗಲಿ ಸರಳೆ ಭಾಗವಹಿಸಲಿಲ್ಲ. ವಾಸು ಅರುಂಧತಿಯೊಡನೆ ತಡೆಬಡೆಯಿಲ್ಲದೆ ಮಾತನಾಡುತ್ತಿದ್ದ. ಅವಳನ್ನು ಕೀಟಲೆ ಮಾಡಿ ಅಳಿಸಿದ, ಮತ್ತೆ ತಮಾಷೆ ಮಾಡಿ ನಗಿಸಿದ.

ವಾಸುವಿನ ಮೇಲೆ ಸರಳೆಗೆ ಕೋಪವಿದ್ದರೂ ಊಟವೇನೋ ಚೆನ್ನಾಗಿಯೇ ಸೇರಿತು. ಸಾಲದುದಕ್ಕೆ ಅವಳಿಗೆ ಪ್ರಿಯವಾದ ಹಾಲುಪೇಣಿ, ಬೊಂಬಾಯಿ ಜೋಂಡ ಮಾಡಿರುವಾಗ ಸರಳೆಯಾದರೂ ನಿರಾಸಕ್ತಿ

ಯಿಂದಿರಲು ಹೇಗೆ ಸಾಧ್ಯ ?

ಊಟದ ಸಮಯದಲ್ಲಿದ್ದ ಗೆಲುವನ್ನು ಅವಳು ಊಟವಾದ ನಂತರ ಮತ್ತೆ ಕಳೆದುಕೊಂಡಳು ಊಟವಾದ ಕೂಡಲೇ ಎರಡು ಗಂಟೆಗಳಕಾಲ ನಿದ್ದೆ ತೆಗೆಯುವುದು ಸರಳೆಗೆ ಅಭ್ಯಾಸವಾಗಿತ್ತು. ಆದರೆ ಈ ದಿನ ಭಾರಿ ಊಟವಾದರೂ ನಿದ್ದೆ ಸರಳೆಯ ಬಳಿಗ ಸುಳಿಯಲಿಲ್ಲ ಸರಳೆ ಮುಖವನ್ನು ಬೊಗಸೆಯಲ್ಲಿರಿಸಿಕೊಂಡು ಎವೆ ಪಿಳುಕಿಸದೆ ವಾಸು, ಅರುಂಧತಿಯಾಡು ತ್ತಿದ್ದ ಚದುರಂಗದಾಟವನ್ನು ನೋಡುತ್ತಿದ್ದಳು.

ಸಂಜೆ ಲಘು ಉಪಹಾರ ಸ್ವೀಕರಿಸಿದ ನಂತರ ಸರಳೆ ಮನೆಗೆ ಹೊರಡಲು ಅನುವಾದಳು.

"ರಾತ್ರೀಗೆ ಹೋದರಾಯಿತು"—ಎಂದು ವಾಸುವೇ ಸರಳೆಗೆ ಉಪ ಚಾರ ಹೇಳಿದ. ಆಮೇಲೆ ಸರೋಜಮ್ಮನೂ ತಮ್ಮನ ಮಾತನ್ನು ಅನು ಮೋದಿಸಿದರು.

ಸಂಜೆ ಎಲ್ಲರೂ ಚಿತ್ರಕ್ಕೆ ಹೋಗೋಣವೆಂದು ಅರುಂಧತಿ ಸೂಚಿ ಸಿದಳು. ವಾಸು ಕೂಡಲೇ ಒಪ್ಪಿಬಿಟ್ಟ. ಸರಳೆ ಏನೇನೋ ನೆಪ ಹೇಳಿ ದಳು

"ನನಗೆ ಅಷ್ಟು ಹೊತ್ತು ಕುಳಿತಿರಲು ಆಗುವುದಿಲ್ಲ—" ಎಂದಳು ಸರಳ.

ಆದರೆ ಅರುಂಧತಿಯ ತಾಯಿ, ತಂದೆ ಬಲವಂತ ಮಾಡಿ ಸರಳೆ ಯನ್ನು ಹೊರಡಿಸಿದರು.

ತಾಂಬೂಲದಿಂದ ರಂಗೇರಿದ ತುಟಿಯನ್ನು ಬಿರುಕಿಸಿ ಕೊನೆಗೆ ಸರಳೆ 'ಹೂಂ'—ಎಂದಳು.

ಅರುಂಧತಿಯ ಶೃಂಗಾರ ನಡೆಯಿತು. ಸರಳೆ ತಾನುಟ್ಟಿದ್ದ ಸೀರೆಯಲ್ಲಿ ಬರುವುದಿಲ್ಲವೆಂದು ಹಟ ಹಿಡಿದಳು. ಅವಳ ಹಠ ನೋಡಿ ಸರೋಜಮ್ಮ ಕಿರುನಗೆ ಬೀರಿ

"ಬೇಡ ಸರಳಾ, ಈ ಸೀರೆ ಖಂಡಿತ ಬೇಡ, ಹೊಸಸೀರೆ ಉಟ್ಟು ಬರುವಿಯಂತೆ"—ಎನ್ನುತ್ತಾ ಒಳಗೆ ಹೋದರು. ಒಂದು ಅಗಲವಾದ ಬೆತ್ತದ ತಟ್ಟೆಯಲ್ಲಿ ಹಣ್ಣುಗಳು, ಕಾಯಿ, ಎಲೆ ಅಡಿಕೆ, ಕಲ್ಲುಸಕ್ಕರೆ, ಬಾದಾಮಿ, ಒಂದು ಸೀರೆ, ಖಣ ಇರಿಸಿ ನಾದಿನಿಯ ಮುಂದೆ ತಂದರು. ಸರಳೆಯ ಹಣೆಗೆ ತಾವೇ ಕುಂಕುಮವಿರಿಸಿ, ಜಡೆಗೆ ಹೂ ಮುಡಿಸಿದರು.

ಕಾಗದದ ಚೀಲದಲ್ಲಿದ್ದ ಉಡುಗೊರೆಯನ್ನು ಅವರು ಹೊರಗೆ ತೆಗೆದು ಅದರ ಸೆರಗಿಗೆ ಅರಿಶಿನ ಕಂಡೂ ಕಾಣದಂತೆ ಸವರಿ ಸೀರೆಯನ್ನು ಬಿಚ್ಚಿ ಸರಳೆಯ ಕೈಗಿತ್ತು,

"ಉಟ್ಟುಕೋ" ಎಂದರು.

ಸರಳೆಗೆ ಒಳಗೊಳಗೇ ಸಂತೋಷವಾಯಿತು. ಆದರೂ ಮೇಲೆ "ಯಾಕೆ ಅತ್ತಿಗೆ ಈಗ?" - ಎಂದಳು.

"ಈಗಲೇ ಕೊಡೋದು"— ಎಂದರಾಕೆ.

ಕೆಂಪು ಅಂಚು, ಕೆಂಪು ಸೆರಗಿದ್ದ ಬಿಳಿಯ ಕಾಶ್ಮೀರ ಸಿಲ್ಕಿನ ಸೀರೆಯನ್ನು ಸರಳೆ ಉಟ್ಟು ನಿಂತಳು. ಅವಳು ತೊಟ್ಟಿದ್ದ ಕೆಂಪಿನ ರವಿಕೆ ಸೀರೆಗೆ ಹೊಂದಿಕೆಯಾಗಿತ್ತು.

ಅರುಂಧತಿ ಹೊರಗೆ ಬಂದಳು. ಎಲ್ಲರೂ ಚಿತ್ರಕ್ಕೆ ಹೊರಟರು. ಅರುಂಧತಿಯ ತಂದೆಯೇ ಕಾರನ್ನು ನಡೆಸಿದರು

ಚಿತ್ರಮಂದಿರದಲ್ಲಿ ವಾಸು ಬೇಕೆಂದೇ ಅರುಂಧತಿಯ ಪಕ್ಕದಲ್ಲಿ ಕುಳಿತಿರುವನೆಂದು ಸರಳೆ ಭಾವಿಸಿದಳು. ಅರುಂಧತಿಯ ಪಕ್ಕದಲ್ಲಿ ಕುಳಿತುಕೊಳ್ಳಲು ಅಷ್ಟು ಹಂಬಲಿಸುವವನು ಅವಳನ್ನೇ ಮದುವೆಯಾಗಬಹುದಿತ್ತಲ್ಲಾ.

ಚಿತ್ರಮುಗಿದರೆ ಸಾಕೆಂದು ಸರಳೆ ಚಡಪಡಿಸಿದಳು. ಸರಳೆ, ವಾಸುವನ್ನು ಅವರ ಮನೆಯಬಳಿ ಇಳಿಸಿ—ಸರೋಜಮ್ಮನ ಸಂಸಾರ ಹೊತ್ತು ಕಾರು ಮುಂದೆ ಸಾಗಿತು

ರಾತ್ರಿ ಸರಳೆ ಅಕಾರಣವಾಗಿ ವಾಸುವಿನ ಮೇಲೆ ಸಿಡಿಮಿಡಿಗೊಂಡಳು ಅದಕ್ಕೆ ವಾಸುವಿನ ಉತ್ತರ-ಮುಗುಳುನಗೆ. ಸರಳೆ ಸುಮ್ಮನೆ ವಾಸುವಿನೊಡನೆ ಮಾತು ಬಿಟ್ಟಳು.

ಮಾರನೆಯ ದಿನ ಯಾರನ್ನೂ ಗಮನಿಸದವನಂತೆ ವಾಸು ಕಾಲೇಜಿಗೆ ಹೊರಟು ಹೋದ. ಅವನು ಹೊರಟು ಹೋದಮೇಲೆ ಸರಳೆಗೆ ತುಂಬಾ ಬೇಸರವಾಯಿತು. ತಾನು ವೃಥಾ ಗಂಡನನ್ನು ನೋಯಿಸಿದೆನೆಂದು ಸರಳೆಗೆ ತೋರಿತು.

ಮಧ್ಯಾಹ್ನ ಊಟವಾದ ಮೇಲೆ ಸರಳೆ ಹಾಸಿಗೆಯೊರಗಿದ್ದಳು. ವಾಸುವಿನ ವಿಷಯವಾಗಿ ಅವಳ ಮನಸ್ಸು ಯೋಚಿಸುತ್ತಿತ್ತು.

ಬೀದಿಯಲ್ಲಿ "ಸೊಪ್ಪಿನ ಕಡಲೇಕಾಯಿ"—ಎಂದು ಮಾರುವವನು

ಕೂಗಿಕೊಂಡು ಹೋಗುತ್ತಿದ್ದ. ಸರಳೆ ಚಟುವಟಿಕೆಯಿಂದ ಎದ್ದು ಕಿಟಕಿಯ ಬಳಿ ಹೋಗಿ ಅವನನ್ನು ಕರೆದು ಒಂದು ರೂಪಾಯಿಗೆ ಕಡಲೆಕಾಯಿ ವ್ಯಾಪಾರ ಮಾಡಿದಳು.

ಸರಳೆ ಕಿಟಕಿಯಲ್ಲಿ ನಿಂತು ಸೊಪ್ಪಿನ ಕಡಲೇಕಾಯಿಯನ್ನು ಬಿಡಿಸಿಕೊಂಡು ತಿನ್ನುತ್ತಿರುವಾಗ, ವಾಸುವಿನ ಕಾಲೇಜಿನ ಹುಡುಗನೊಬ್ಬ ಬೀದಿಯಲ್ಲಿ ಹೋಗುತ್ತಿದ್ದ.

ಸರಳೆಗೆ ತಟಕ್ಕನೆ ಯೋಚನೆಯೊಂದು ಸುಳಿಯಿತು.

"ಶ್ರೀಹರಿ....ಶ್ರೀಹರಿ..." ಎಂದು ಅವಳು ತನಗೆ ಮೊದಲಿನಿಂದಲೂ ಪರಿಚಯವಿದ್ದ ಆ ಹುಡುಗನನ್ನು ಕೂಗಿದಳು. ಅವನು ಕಿಟಕಿಯ ಹತ್ತಿರ ಬಂದ.

"ಮತ್ತೆ ಇವರನ್ನು ಮನೆಗೆ ಬರಹೇಳ್ತೀಯಾ?"—ಸರಳೆ ಕೇಳಿದಳು.

"ಆಗಲಿ ನಾನೂ ಈಗ ಕಾಲೇಜಿಗೆ ಹೊರಟಿದೀನಿ."

"ಮತ್ತೆ ಖಂಡಿತ ಬರಬೇಕೆಂದು ಹೇಳು."

ಹುಡುಗ ಒಪ್ಪಿಕೊಂಡು ಹೊರಟುಹೋದ. ಸರಳೆ ತನ್ನ ಸುತ್ತಲೂ ಸೊಪ್ಪಿನ ಕಡಲೇಕಾಯಿಯನ್ನು ಹರಡಿ ಬಿಡಿಸಿಕೊಂಡು ತಿನ್ನುತ್ತಾ ಕುಳಿತಳು.

ಮುಕ್ಕಾಲು ಗಂಟೆಯ ನಂತರ ವಾಸು ತುಂಬಾ ಗಾಬರಿಯಿಂದ ಮನೆಗೆ ಬಂದ. ಅವನ ಕಣ್ಣುಗಳಲ್ಲಿ ಗಾಬರಿ, ಆತಂಕ, ಕಳವಳ ಮನೆ ಮಾಡಿದ್ದವು ಅವನು ವೇಗವಾಗಿ ಧಾವಿಸಿ ಬಂದಿದ್ದರಿಂದ ಉಸಿರು ಬೇಗ ಬೇಗ ಹುಯ್ಯುತ್ತಿತ್ತು.

ಮನೆಗೆ ಬಂದವನೇ ವಾಸು 'ಸರಳಾ' ಎಂದು ಕೂಗಿ ಗಲಾಟೆ ಮಾಡಿದ ತನ್ನ ರೂಮಿನ ಬಾಗಿಲನ್ನು ತಳ್ಳಿ ಒಳಗೆ ಕಾಲಿಟ್ಟವನೇ ಗಕ್ಕನೆ ನಿಂತುಬಿಟ್ಟ.

ಚಾಪೆಯ ಮೇಲೆ ಕುಳಿತ ಸರಳಾ ಸುತ್ತಲೂ ಸೊಪ್ಪನ್ನು ಹರಡಿಕೊಂಡಿದ್ದಳು. ಅವಳು ಆಲಸ್ಯದಿಂದ ಪುಸ್ತಕದ ಪುಟವೊಂದನ್ನು ಮಗುಚಿ ಹಾಕುತ್ತ ಕಡಲೆಕಾಯಿಯನ್ನು ಬಿಡಿಸಿ ತಿನ್ನುತ್ತಿದ್ದಳು. ಬಾಯಾಡಿಸುತ್ತಾ ಪುಸ್ತಕದಮೇಲೆ ಕಣ್ಣೋಡಿಸುತ್ತಿದ್ದಳು: ಸರಳೆ.

"ಸರಳಾ"— ಎಂದ ವಾಸು.

"ಏನು?"—ಎನ್ನುತ್ತಾ ಸರಳೆ ತಲೆಯೆತ್ತಿ ವಾಸುವಿನ ಕಡೆ ನೋಡಿದಳು.

"ಶ್ರೀ ಹರಿ ಕೈಲಿ ಯಾಕೆ ಹೇಳಿ ಕಳುಹಿಸಿದೆ?"

"ಒಬ್ಬಳೇ ಬೇಜಾರಾಯಿತು. ನೀವೂ ಸೊಪ್ಪಿನ ಕಡಲೇಕಾಯಿ ತಿನ್ನಲೆಂದು... "

"ಸರಳಾ!" ವಾಸು ತಾಳ್ಮೆಗೆಟ್ಟು ಕೂಗಿದ.

"ಏನು?" ಸರಳಾ ಶಾಂತಳಾಗಿ ಕೇಳಿದಳು.

"ನೀನು ಹೇಳಿಕಳುಹಿಸಿದುದನ್ನು ನೋಡಿ ನಾನು ಕ್ಲಾಸು ತೆಗೆದುಕೊಂಡಿದ್ದವನು, ಕ್ಲಾಸನ್ನು ಬಿಟ್ಟು ರಜ ಹಾಕಿ ಮನೆಗೆ ಬಂದೆ. ಸುಮ್ಮನೆ ಹೇಳಿ ಕಳಿಸೋಕೆ ನಿನಗೆ ಏನಾಗಿತ್ತು? ನಾನು ಏನಾಗಿದೆಯೋ ಎಂದು ಗಾಬರಿಯಾಗಿ ಬಂದೆ."

ತಾನು ಹಾಗೆ ಹೇಳಿ ಕಳುಹಿಸಿದರೆ ವಾಸುವಿಗೆ ಗಾಬರಿಯಾಗಬಹುದು ಎಂದು ಸರಳೆ ಯೋಚಿಸಿರಲಿಲ್ಲ. ಒಬ್ಬಳೇ ಕುಳಿತಿದ್ದು ಬೇಸರವಾಗಲು ಆವಳು ಶ್ರೀಹರಿಯ ಕೈಲಿ ಹಾಗೆ ಹೇಳಿ ಕಳುಹಿಸಿಬಿಟ್ಟಳು. ನಂತರ ಆ ವಿಷಯವನ್ನೇ ಮರೆತು ಕಡಲೆಕಾಯಿ, ಪುಸ್ತಕದಲ್ಲಿ ಮಗ್ನಳಾಗಿದ್ದಳು.

ವಾಸುವನ್ನು ನೋಡಿದ ಕೂಡಲೇ ಅವಳಿಗೆ ಮೊದಲು 'ಇದೇನು ಇಷ್ಟು ಬೇಗ ಮನೆಗೆ ಬಂದುಬಿಟ್ಟರು!' ಎಂದು ವಿಸ್ಮಯವಾಗಿತ್ತು. ನಂತರ ತಾನು ಅವನಿಗೆ ಹೇಳಿ ಕಳುಹಿಸಿದುದು ನೆನಪಿಗೆ ಬಂದಿತು

"ಹುಷಾರಾಗಿದೀಯಾ?" ವಾಸು ಮತ್ತೆ ಕೇಳಿದ.

"ಹೂಂ."

"ಹಾಗಾದರೆ ಯಾಕೆ ಹೇಳಿ ಕಳುಹಿಸಿದೆ?"

"ನೀವೂ ಸೊಪ್ಪಿನ ಕಡಲೇಕಾಯಿ ತಿನ್ನಲಿ ಎಂದು ಹೇಳಿಕಳುಹಿಸಿದೆ" —ಎನ್ನುತ್ತಾ ಸರಳೆ ನಕ್ಕಳು.

ವಾಸು ಕ್ರೋಧದಿಂದ ಮೂಕನಾದ. ಎದುರಿಗೆ ಕುಳಿತು ಶಾಂತವಾಗಿ ಕಡಲೇಕಾಯಿ ತಿನ್ನುತ್ತಿದ್ದ ಹೆಂಡತಿಯನ್ನು ಹೊಡೆದುಬಿಡೋಣವೆನಿಸಿತು—ವಾಸುವಿಗೆ.

ಅಬ್ಬ! ತಾನೆಷ್ಟು ಹೆದರಿಬಿಟ್ಟಿದ್ದೆ !

ವಾಸು ಸರಳೆಯ ಬಳಿ ಸರಿದು ಕುಳಿತು "ಯಾಕೆ ಸರಳಾ, ನನ್ನ ಹೆದರಿಸುತ್ತೀಯಾ?"— ಎಂದ.

ಸರಳೆ ಮರು ಮಾತನಾಡದೆ ಕೈಲಿ ಹಿಡಿದಿಟ್ಟುಕೊಂಡಿದ್ದ ಕಾಳುಗಳನ್ನು ಅವನ ಬಾಯೊಳಗಿಟ್ಟು "ನಾನು ಹೇಳಿ ಕಳುಹಿಸಿದ ಮಾತ್ರಕ್ಕೆ ನೀವು ಬಂದೇ ಬರುತ್ತೀರಿ ಎಂದು ನಾನು ತಿಳಿದಿರಲಿಲ್ಲ"—ಎಂದಳು.

ಸಂಜೆ ವಾಸು ತಿರುಗಾಡಲು ಹೋಗಿದ್ದ. ಸರಳೆ ಆರಾಮವಾಗಿ ಕುಳಿತು 'ವಿವಿಧ ಭಾರತಿ' ಕೇಳುತ್ತಿದ್ದಳು. ಹೊರಗೆ ಕಾರಿನ ಸದ್ದಾಯಿತು. 'ಅರುಂಧತಿಯಿರಬೇಕು' ಎಂದುಕೊಂಡು ಸರಳೆ ಉದಾಸೀನಳಾಗಿ ಕುಳಿತಿದ್ದಳು. ಬಾಗಿಲಿನ ಬಳಿ ಬೂಟ್ಸಿನ ಸದ್ದಾಯಿತು. ಸರಳಾ ತಲೆ ಎತ್ತಿದಳು.

"ರಾಜೂ, ಬಾ ಒಳಗೆ"—ಸರಳಾ ಸ್ವಾಗತಿಸಿದಳು. ರಾಜಗೋಪಾಲ ಒಳಗೆ ಬಂದು ಸರಳೆಯ ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತ.

"ಏನು ರಾಜೂ ಅಪರೂಪ?"

"ಸರಳಾ, ನಾಳೆ ನೀನು, ವಾಸು ನಮ್ಮ ಮನೆಗೆ ಊಟಕ್ಕೆ ಬರಬೇಕಂತೆ. ಅಮ್ಮ ಹೇಳಿ ಕಳಿಸಿದ್ದಾಳೆ."

ಸರಳೆ ಕೊರಳು ಕೊಂಕಿಸಿ "ಅತ್ತೆ ಹೇಳಿ ಕಳುಹಿಸಿದರೆ ನಾವು ಬರೋದಿಲ್ಲ"—ಎಂದಳು.

"ಯಾರು ಕರೆಯಬೇಕು?"

"ನೀನು ಕರೆದರೆ ಮಾತ್ರ ನಾನು ಬರುವುದು."

"ಅಚ್ಛಾ" – ಎನ್ನುತ್ತಾ ರಾಜಗೋಪಾಲ ಮೇಲೆದ್ದು ಸರಳೆಯ ಬೀರುವಿನ ಬಾಗಿಲನ್ನು ತೆರೆದು ಕುಂಕುಮದ ಭರಣಿಯನ್ನು ಸರಳೆಯ ಮುಂದೆ ಹಿಡಿದು

"ಸರಳಾದೇವಿ, ತಾವು ನಮ್ಮ ಮನೆಗೆ ಬರಬೇಕು-- ಊಟಕ್ಕೆ"—ಎಂದ.

ಸರಳೆ ಕುಂಕುಮ ಹಣೆಗೆ ಹಚ್ಚಿಕೊಂಡು "ಆಗಲಿ" ಎಂದಳು.

"ನಾಳೆ ನಾನು ಕಾರು ತರುತ್ತೇನೆ ಹಾಗೆಯೇ ಕಂಟೋನ್ಮೆಂಟಿನಲ್ಲಿ ಸಿನಿಮಾ ನೋಡಿಕೊಂಡು ವಾಪಸಾಗಬೇಕು."

"ತಥಾಸ್ತು."

"ಸರಳಾ, ಹುಷಾರಾಗಿದೀಯಾ?"

"ಹೂಂ."

"ವಾಸು ಎಲ್ಲಿ?"

"ಎಲ್ಲೋ ಹೊರಗೆ ಹೋಗಿದಾರೆ."

"ಕತೆ ಬರೀತಿದಿಯಾ?"—ರಾಜಗೋಪಾಲ ಕುಂಟ ದನಿಯೊಡನೆ ಕೇಳಿದ.

"ಹೂಂ."

"ಇನ್ನೂ ಎಷ್ಟು ದಿನವಾಗುತ್ತದೆ?".

"ಸುಮಾರು ಎರಡೂವರೆ ತಿಂಗಳಾಗಬಹುದು."

"ಸರಳಾ, ಅಗತ್ಯ ಬಿದ್ದರೆ ನನಗೆ ಫೋನು ಮಾಡಿಸು. ನನ್ನ ಫೋನು ನಂಬರು ಕೊಟ್ಟಿರುತ್ತೇನೆ. ಕಾರು ಬೇಕಾದರೆ ತರುತ್ತೇನೆ."

"ಓಹೋ, ಏನಪ್ಪ ನಿನಗೆ ಇಷ್ಟೊಂದು ಆಸಕ್ತಿ?"

"ನಿನ್ನ ಮಗಳನ್ನು ನಾನು ಮದುವೆಯಾಗುತ್ತೇನೆ. ಆದ್ದರಿಂದಲೇ ಹೆಂಡತಿಯ ಬಗ್ಗೆ ಇಷ್ಟು ಆಸಕ್ತಿ."

ಸರಳೆ ನಕ್ಕಳು. ಮಾತು ಕತೆಯಾಡುತ್ತಿದ್ದಂತೆ ಸರಳೆ ಎದ್ದು ಹೋಗಿ ರಾಜಗೋಪಾಲನಿಗೆ ಹಾಲು ಹಣ್ಣು ತಂದಿತ್ತಳು.

ವಾಸು ಮನೆಗೆ ಬರುವವರೆವಿಗೆ ಸರಳೆ ರಾಜಗೋಪಾಲನೊಡನೆ ಹರಟೆ ಹೊಡೆಯುತ್ತಿದ್ದಳು. ವಾಸು ಬಂದ ಕೂಡಲೇ ರಾಜಗೋಪಾಲ ಎದ್ದು ನಿಂತು ವಾಸುವನ್ನು ಆಹ್ವಾನಿಸಿದ. ವಾಸು ಬಹಳ ಬಿಗಿಯಾಗಿದ್ದ.

"ಖಂಡಿತ ಬರಬೇಕು."—ಎಂದ ರಾಜಗೋಪಾಲ. ವಾಸು 'ಆಗಲಿ' ಎಂದು ಹೇಳದೇ ವಿಧಿಯಿರಲಿಲ್ಲ.

"ನಾಳೆ ಬೆಳಿಗ್ಗೆ ಕಾರನ್ನು ಒಂಭತ್ತು ಗಂಟೆಯ ವೇಳೆಗೆ ತರುತ್ತೇನೆ. ಸಿದ್ಧವಾಗಿರಿ"—ಎಂದ ರಾಜಗೋಪಾಲ.

"ಆಗಲಿ"—ಎಂದಳು ಸರಳೆ.

"ಆದರೆ ನನಗೆ ಕ್ಲಾಸಿದೆ. ಅಷ್ಟು ಬೇಗ ನನಗೆ ಬರುವುದಕ್ಕಾಗುವುದಿಲ್ಲ. ನಾನು ಮಧ್ಯಾಹ್ನ ಒಂದು ಗಂಟೆಗೆ ಬರುತ್ತೇನೆ" ಎಂದ ವಾಸು.

ಸರಳೆಯೂ ತನ್ನೊಡನೆ ಒಂದು ಗಂಟೆಗೆ ಹೊರಡಲಿ ಎಂದು ವಾಸುವಿಗೆ ಇಷ್ಟವಿತ್ತು. ಆದರೆ ಹಾಗೆಂದು ಅವನು ಧೈರ್ಯವಾಗಿ ಬಾಯಿಬಿಟ್ಟು ನುಡಿಯಲಾರ.

"ಹಾಗಾದರೆ ನಾನು ಬಂದು ಸರಳೆಯನ್ನು ಕರೆದುಕೊಂಡು ಹೋಗುತ್ತೇನೆ. ನೀವು ಕಾಲೇಜು ಮುಗಿಸಿಕೊಂಡು ಬನ್ನಿ"-ಎಂದ ರಾಜಗೋಪಾಲ

ಸರಳೆ ಒಪ್ಪಿದಳು. ವಾಸು 'ಹೂ'ಗುಟ್ಟಿದ.

ರಾಜಗೋಪಾಲ ಒಂಭತ್ತು ಗಂಟೆಯ ವೇಳೆಗೆ ಕಾರನ್ನು ತೆಗೆದುಕೊಂಡು ಬರುವುದಾಗಿ ಹೇಳಿದ್ದರೂ ಸರಳೆಯ ಅಲಂಕಾರ ಎಂಟು ಗಂಟೆಗೇ ಮೊದಲಾಯಿತು. ಆಕೆ ಕನ್ನಡಿಯೆದುರು ಕುಳಿತು ತನ್ನ ಕುರುಳುಗಳನ್ನು ತಿದ್ದಿ, ತೀಡಿ ಹೆರಳು ಹಾಕಿಕೊಂಡು ಮೇಲಿನ ದೋಷ, ನ್ಯೂನತೆಗಳನ್ನು

ಕಪ್ಪು ರೇಶಿಮೆಯ ಬಲೆಯಿಂದ ಮುಚ್ಚಿ, ಹೆರಳಿನ ನಡುವೆ ಕೆಂಪಿನ ಜಡೆ ಬಿಲ್ಲೆಯನ್ನು ಸೆಕ್ಕಿಸಿದಳು.

ಮುಖದ ಅಲಂಕಾರ, ಸೀರೆ, ರವಿಕೆಗಳ ಆಯ್ಕೆ ಮುಗಿಯುವಂತೆಯೇ ತೋರಲಿಲ್ಲ. ಸರಳೆ ತನ್ನ ಅಲಂಕಾರದಲ್ಲಿ ಮಿತಿಮೀರಿದ ಉತ್ಸಾಹ ತೆಗೆದು ಕೊಳ್ಳುತ್ತಿರುವಳೆಂದು ವಾಸುವಿಗೆ ಎನಿಸಿತು. ಸರಳೆ ಅಲಂಕಾರ ಪ್ರಿಯೆ ಎಂಬುದು ವಾಸುವಿಗೆ ತಿಳಿದಿತ್ತು. ಆದರೆ ಇಷ್ಟೊಂದು ಅಲಂಕಾರವೇಕೆ ಎಂದು ಅವನಿಗನಿಸದಿರಲಿಲ್ಲ

ಒಂಭತ್ತು ಗಂಟೆಗೆ ಸರಿಯಾಗಿ ರಾಜಗೋಪಾಲ ಹಾಜರಾದ. ಸರಳೆ ಅವನ ಆಗಮನವನ್ನೇ ಎದುರು ನೋಡುತ್ತಿದ್ದಳು. ರಾಜಗೋಪಾಲ ನೊಡನೆ ಹೊರಟ ಸರಳಾ ವಾಸುವಿನ ಕಡೆ ತಿರುಗಿ

"ಬರ್ತೀರಿ ತಾನೆ?"—ಎಂದಳು.

"ನೋಡಬೇಕು ಬಿಡುವಿದ್ದರೆ ಬರ್ತೀನಿ"—ಎಂದ ವಾಸು.

ವಾಸು ಹೆಂಡತಿಯನ್ನು ಕಳುಹಿಸಿಕೊಡಲೆಂದು ಕಾರಿನವರೆವಿಗೆ ಹೋದ. ರಾಜಗೋಪಾಲ ಕಾರಿನ ಮುಂದುಗಡೆಯ ಸೀಟಿನ ಬಾಗಿಲನ್ನು ತೆರೆದ. ಸರಳೆ ಹತ್ತಿ ರಾಜಗೋಪಾಲನ ಪಕ್ಕದಲ್ಲಿಯೇ ಕುಳಿತಳು. ವಾಸು ಅದನ್ನು ನೋಡಿ ಮುಳ್ಳು ತುಳಿದವನಂತೆ ಚಡಪಡಿಸಿದ.

ಹಿಂದುಗಡೆಯ ಸೀಟಿನಲ್ಲಿ ವಿಶಾಲವಾದ ಜಾಗವಿರುವಾಗ ಮುಂದು ಗಡೆ ಇಕ್ಕಟ್ಟಾದ ಸ್ಥಳದಲ್ಲಿ ಇರುಕಿಕೊಂಡು ಕುಳಿತುಕೊಳ್ಳಬೇಕೆ?

"ಹಿಂದುಗಡೆಯೇ ಕುಳಿತುಕೊಂಡಿದ್ದರಾಗಿತ್ತು—ಆರಾಮವಾಗಿ" —ಎಂದ ವಾಸು.

ಸರಳೆ ಬದಲು ಹೇಳದೆ ನಕ್ಕಳು. ರಾಜಗೋಪಾಲ ಕಾರನ್ನು ಸ್ಟಾರ್ಟ ಮಾಡಿದ. ಕಾರು ಕಣ್ಮರೆಯಾಯಿತು.

ವಾಸು ಅಸಮಾಧಾನದಿಂದ ಕುದಿಯುತ್ತಾ ಒಳಗೆ ಬಂದ. ಅವನ ಮನಶ್ಶಾಂತಿಯೆಲ್ಲ ಎಲ್ಲೊ ಮಾಯವಾಗಿತ್ತು. ಸರಳೆ ಹೀಗೇಕೆ ತನ್ನನ್ನು ಹಿಂಸೆ ಮಾಡುತ್ತಾಳೆ ಎಂಬುದು ಅವನಿಗೆ ಅರ್ಥವಾಗಲಿಲ್ಲ.

ವಾಸು ಕಾಲೇಜಿಗೆ ಹೋದರೂ ಅವನ ಮನಸ್ಸು ಎಲ್ಲಿಯೋ ಅಲೆ ದಾಡುತ್ತಿತ್ತು. ಕಂಟೋನ್ಮೆಂಟಿಗೆ ತಾನು ಹೋಗುವುದೇ ಬೇಡವೇ ಎಂದು ಯೋಚಿಸಿ ಯೋಚಿಸಿ ಅವನು ಹಣ್ಣಾದ.

ರಾಜಗೋಪಾಲ ತನ್ನನ್ನು ಅಷ್ಟೊಂದು ಒತ್ತಾಯದಿಂದ ಕರೆದಿದ್ದಂತೆ

ವಾಸುವಿಗೆ ತೋರಲಿಲ್ಲ.

ಹೂಂ. ಅವರಿಗೆ ಮುಖ್ಯವಾಗಿ ಸರಳೆ ಹೋಗಬೇಕು. ತಾನು ಹೋದರೆಷ್ಟು, ಬಿಟ್ಟರೆಷ್ಟು ಎಂದುಕೊಂಡ ವಾಸು.

ಮೂರು ಗಂಟೆಯವರೆಗೆ ಯೋಚಿಸಿ ಕೊನೆಗೆ ವಾಸು ಹೊರಡುವುದೆಂದು ತೀರ್ಮಾನಿಸಿ ಕಂಟೋನ್ಮೆಂಟಿಗೆ ಹೊರಟ. ರಾಜಗೋಪಾಲನ ಬಂಗಲೆ ವಾಸು ಸೇರುವ ಹೊತ್ತಿಗೆ ಗಂಟೆ ಮೂರೂವರೆಯಾಗಿತ್ತು. ಬಂಗಲೆಯ ಮುಂದಿದ್ದ ಆಲ್‌ಸೇಷಿಯನ್ ನಾಯಿ ಬೊಗಳಿತು. ನಾಯಿಯ ಗಲಾಟೆ ಕೇಳಿ ರಾಜಗೋಪಾಲನ ತಾಯಿ ರುಕ್ಕಮ್ಮ ಹೊರಗೆ ಬಂದರು.

ವಾಸುವಿನ ಮುಖ ನೋಡಿ ಆಕೆ ನಕ್ಕು "ಬನ್ನಿ"—ಎಂದರು.

"ತುಂಬಾ ತಡವಾಯಿತು. ಮೂರು ಗಂಟೆಯವರೆವಿಗೆ ಕ್ಲಾಸಿತ್ತು" —ಎಂದು ವಾಸು ಒಂದು ಸುಳ್ಳು ಹೇಳಿದ. ಅವನಿಗೆ ಒಂದು ಗಂಟೆಗೇ ಕ್ಲಾಸು ಮುಗಿದಿತ್ತು.

"ಚಿಂತೆಯಿಲ್ಲ ಬನ್ನಿ" ಎಂದರು ರುಕ್ಕಮ್ಮ.

"ರಾಜಗೋಪಾಲ ಎಲ್ಲಿ?"

"ಅವರಿಬ್ಬರೂ ಸಿನಿಮಾಗೆ ಹೋದರು"—ಎಂದರಾಕೆ.

"ಅವರಿಬ್ಬರೂ ಎಂದರೆ?"

"ಸರಳಾ, ರಾಜು"-ರುಕ್ಕಮ್ಮ ಹೇಳಿದರು. ವಾಸು ಗರ ಬಡಿದವನಂತೆ ನಿಂತುಬಿಟ್ಟ.

"ಸಿನಿಮಾಕ್ಕೆ?"—ಎಂದು ವಾಸು ತೊದಲಿದ.

"ಹೂಂ. ನೀವು ಒಂದು ಗಂಟೆಗೇ ಬರುವಿರೇನೋ ಎಂದು ಇಬ್ಬರೂ ಕಾದು ನೋಡಿದರು. ನೀವು ಬರಲಿಲ್ಲ. ಮನೆಯಲ್ಲಿ ಕುಳಿತು ಮಾಡುವುದೇನು ಎಂದು ಇಬ್ಬರೂ ಇಲ್ಲಿಯೇ ಹತ್ತಿರವಿರುವ ಥಿಯೇಟರಿಗೆ ಹೋಗಿದ್ದಾರೆ. ಆರು ಗಂಟೆಯ ಹೊತ್ತಿಗೆ ಬಂದುಬಿಡುತ್ತಾರೆ. ಬನ್ನಿ".-ಎಂದರು ರುಕ್ಕಮ್ಮ

"ಯಾವ ಥಿಯೇಟರು ಎಲ್ಲಿ?" ಮುಂತಾಗಿ ಸಾವಿರಾರು ಪ್ರಶ್ನೆಗಳನ್ನು ಕೇಳಬೇಕೆಂದಿದ್ದ ವಾಸು ತನ್ನೆಲ್ಲಾ ಬೇಗುದಿಯನ್ನು ನುಂಗಿಕೊಂಡು ಒಳಗೆ ಹೋದ.

ಸರಳೆಯನ್ನು ಸತ್ಕರಿಸುವ ಸಲುವಾಗಿ ರಾಜಗೋಪಾಲ ಮಾಡಿಸಿದ ತಿಂಡಿಗಳು ಹಲವು ಬಗೆಯವು. ಮೇಜಿನ ಮೇಲೆ ಶುಭ್ರವಾದ ಬಟ್ಟೆ ಹಾಸಿ, ಗಾಜಿನ ಎರಡು ತಟ್ಟೆಗಳನ್ನಿರಿಸಿ ರುಕ್ಕಮ್ಮ ಬಡಿಸತೊಡಗಿದರು.

"ಬಾದಾಮಿಹಾಲು, ಆಂಬೊಡೆ, ವೆಜಿಟಬಲ್ ಭಾತು, ಕೆನೆಮೊಸರು, ಹಣ್ಣುಗಳ ರಸಾಯನ, ಕೋಸಂಬರಿಗಳು, ಚಟ್ನಿ, ಮಿಠಾಯಿ, ಪಲ್ಯ, ಮಜ್ಜಿಗೆ ಪಳದ್ಯ, ಜಾಮೂನು....

ರುಕ್ಕಮ್ಮ ಸ್ಟೀಲಿನ ಪಾತ್ರೆಗಳಲ್ಲಿ ಒಂದೊಂದಾಗಿ ಖಾದ್ಯಗಳನ್ನು ತಂದು ಬಡಿಸಿದರು ವಾಸುವಿಗೆ ಎಷ್ಟೇ ಅಸಮಾಧಾನವಿದ್ದರೂ ಊಟ ಮಾತ್ರ ಚೆನ್ನಾಗಿ ಸೇರಿತು ರುಕ್ಕಮ್ಮ ವಾಸುವಿಗೆ ಉಪಚಾರ ಮಾಡುತ್ತಾ ಬಡಿಸಿದರು ಬೇಡ ಬೇಡವೆನ್ನುತ್ತಾ ವಾಸು ಪದಾರ್ಥಗಳ ರುಚಿಗೆ ಮನ ಸೋತು ಇಮ್ಮಡಿಯಾಗಿ ತಿಂದ.

ಊಟ ಮುಗಿಸಿ ಕೈ ತೊಳೆದು ವಾಸು ಸೋಫಾಕ್ಕೆ ಒರಗಿ ಕುಳಿತ. ಅಷ್ಟರಲ್ಲಿ ರುಕ್ಕಮ್ಮ ಬಿಸಿ ಬಿಸಿಯಾಗಿ ಹೊಗೆಯಾಡುತ್ತಿದ್ದ ಕಾಫಿಯನ್ನು ತಂದು ವಾಸುವಿನ ಕೈಗಿತ್ತರು.

"ಇದೇ ಊಟವಾಗಿ ಕಾಫಿ ಬೇರೆ .."—ಎಂದ. ವಾಸು ಅಚ್ಚರಿ ಪಟ್ಟ.

"ಇದು ನಮ್ಮ ರಾಜು ಹೊಸದಾಗಿ ಮಾಡಿರುವ ಪದ್ಧತಿ. ಊಟ ವಾದ ಕೂಡಲೇ ಒಂದು ಲೋಟ ಬಿಸಿಯಾಗಿ ಕಾಫಿ ಕುಡಿದರೆ ತಿಂದುದೆಲ್ಲಾ ಚೆನ್ನಾಗಿ ಅರಗುತ್ತದೆಯಂತೆ. ಊಟವಾದ ಮೇಲೆ ಅವನಿಗೆ ಕಾಫಿ ಬೇಕು."—ಎಂದರು ರುಕ್ಕಮ್ಮ.

ವಾಸು ಕಾಫಿ ಕುಡಿದು ಮುಗಿಸಿದ.

ನಮ್ಮ ರಾಜೂಗೆ ಎಲ್ಲಿಯಾದರೂ ಒಂದು ಹೆಣ್ಣು ನೋಡಪ್ಪ ವಾಸು. ಹುಡುಗಿ ಲಕ್ಷಣವಾಗಿರಬೇಕು ..." ರುಕ್ಕಮ್ಮ ತಮ್ಮ ಕಷ್ಟವನ್ನು ವಾಸುವಿನ ಮುಂದೆ ತೋಡಿಕೊಂಡರು.

"ನಿಮ್ಮ ಮಗ ಮದುವೆಯಾಗಲು ಒಪ್ಪಿದರೆ ಸಾಕು. ನೂರಾರು ಜನ ಕಾಲಿಗೆ ಬಿದ್ದು ಹೆಣ್ಣು ಕೊಡುತ್ತಾರೆ. ಕೈತುಂಬಾ ಸಂಬಳ ತರುತ್ತಾನೆ. ಅವನಿಗೇನು ಕಮ್ಮಿ?"—ಎಂದ ವಾಸು.

"ಏನೋಪ್ಪ, ಮದುವೆಯೇ ಬೇಡಾಂತ ಕೂತಿದಾನೆ. ಅವನಿಗೂ ಇಪ್ಪತ್ತೇಳು ವರ್ಷವಾಯಿತು. ಇನ್ನು ಯಾವಾಗ ಮದುವೆ ಮಾಡಿಕೊಳ್ಳುವುದು ಹೇಳು? ನನಗೂ ವಯಸ್ಸಾಯಿತು. ಸೊಸೆ, ಮೊಮ್ಮಕ್ಕಳನ್ನು ನೋಡುವ ಆಸೆಯಿದೆ"-- ಎನ್ನುತ್ತಾ ರುಕ್ಕಮ್ಮ ನಿಟ್ಟುಸಿರುಬಿಟ್ಟರು. ಬಹುಶಃ ಅವರಿಗೆ ಸರಳೆಯ ನೆನಪಾಗಿರಬೇಕು.

ವಾಸು ಸಹಾನುಭೂತಿಯಿಂದ ಲೊಚಗುಟ್ಟಿದ.

“ನಿದ್ದೆ ಬರುವ ಹಾಗಿದ್ದರೆ ಮಲಗಿಕೋ. ಅವರು ಬಂದರೆ ನಾನು ಎಬ್ಬಿಸುತ್ತೇನೆ”—ಎನ್ನುತ್ತಾ ರುಕ್ಕಮ್ಮ ಹೊರಗೆ ಹೋದರು.

ವಾಸುವಿಗೆ ನಿದ್ದೆ ದೂರವಾಗಿತ್ತು. ಅವನು ಮೇಜಿನ ಮೇಲಿದ್ದ ಮಾಸಪತ್ರಿಕೆ ಓದುತ್ತಾ ಮಲಗಿದ.

ಸಂಜೆ ಆರುಗಂಟೆಯ ವೇಳೆಗೆ ಹೊರಗೆ ಕಾರಿನ ಸದ್ದಾಯಿತು. ಸರಳೆಯ ದನಿ—ಹಾಗೂ ನಗು ಕೇಳಿಸಿದವು.

ವಾಸು ಎದ್ದು ಕುಳಿತು ಬಾಗಿಲಿನ ಕಡೆ ನೋಡಿದ.

ಸರಳೆ ರಾಜಗೋಪಾಲನ ಮನೆಗೆ ಹೊರಡುವಾಗ ಹಸಿರು ನೀಲಿ, ಹಸಿರು ಅಂಚಿದ್ದ ಧರ್ಮಾವರದ ಸೀರೆಯುಟ್ಟಿದ್ದಳು. ಆದರೆ ಈಗ ಆ ಸೀರೆಗೆ ಬದಲಾಗಿ ಅವಳು ಕಡಲು ನೀಲಹಸುರಿನ ಬಿನ್ನಿ ಜಾರ್ಜೆಟ್ ಸೀರೆಯುಟ್ಟಿದ್ದಳು. ಸೀರೆಯ ಒಡಲಿನ ತುಂಬ ಜರಿಯ ಚೌಕಳಿಗಳು ಹೊಳೆಯುತ್ತಿದ್ದವು. ಸೊಗಸಾದ ಸೀರೆಗೆ ಆರು ಇಂಚಿನ ಗಂಡಭೇರುಂಡದ ಜರಿಯ ಅಂಚು ತುಂಬಾ ಹೊಂದಿಕೆಯಾಗಿತ್ತು. ಜರಿಯ ಚೌಕಳಿಗಳಿಂದ ತುಂಬಿದ ಸೆರಗಿಗೆ ಪುಟ್ಟ ಪುಟ್ಟ ಜರಿಯ ಕುಚ್ಚುಗಳು ಚಿನ್ನದ ಗೆಜ್ಜೆಗಳಂತೆ ಕಾಣಿಸುತ್ತಿದ್ದವು. ಆ ಸೀರೆಗೆ ಕಡು ಹಸುರಿನ ಸಾಕ್ಸ್ ರವಿಕೆ ತುಂಬಾ ಒಪ್ಪುತ್ತಿತ್ತು. ರವಿಕೆಯ ಕೊರಳು, ತೋಳು, ಬೆನ್ನಿನ ಮೇಲೆ ಸಣ್ಣ ಮುತ್ತಿನ ಮಣಿಗಳಿಂದ ಅನೇಕ ರೀತಿಯ ಹೂವು, ಬಳ್ಳಿಗಳನ್ನು ಹೆಣೆದಿತ್ತು.

ವಾಸು ಸರಳೆಯನ್ನು ಹೊಸಬಳನ್ನು ನೋಡುವಂತೆ ನೋಡಿದ. ತಾಂಬೂಲರಾಗದಿಂದ ಕೆಂಪೇರಿದ ತುಟಿ, ನಗುವಿನಿಂದ ಮಿನುಗುತ್ತಿದ್ದ ಕಣ್ಣುಗಳು, ತುಂಬಿಕೊಂಡ ಮೈ ಇವುಗಳನ್ನು ನೋಡಿ ಅವನಿಗೆ ಫಲಭಾರದಿಂದ ಜಗ್ಗುತ್ತಿದ್ದ ಹಸಿರು ಎಲೆಗಳಿಂದ ತುಂಬಿದ ಮಾವಿನ ಮರವನ್ನು ನೋಡಿದಂತಾಯಿತು.

ಕೈಯಲ್ಲಿದ್ದ ಕೋಕಿ ಚೀಲವನ್ನು ಸರಳಾ ಗಿರಗಿರನೆ ತಿರುಗಿಸುತ್ತಿದ್ದಳು. ವಾಸುವನ್ನು ನೋಡಿ ಅವಳು ಆಶ್ಚರ್ಯದಿಂದ

“ಬಂದಿರಾ? ನೀವು ಬರೋದಿಲ್ಲವೇನೋಂತಿದ್ದೆ”—ಎಂದಳು.

“ಯಾಕೆ ಬರಬಾರದಾಗಿತ್ತೇನು?”—ವಾಸು ಮುನಿದು ಕೇಳಿದ.

“ಛೇ....ಹಾಗೇಕೆ ಎನ್ನುತ್ತೀರಿ”—ಎನ್ನುತ್ತಾ ರಾಜಗೋಪಾಲ ಮುಂದೆ ಬಂದು ವಾಸುವಿನ ಕೈ ಕುಲುಕಿದ.

"ಊಟವಾಯಿತೇ?"—ಎಂದು ಅತಿಥಿಯನ್ನು ರಾಜಗೋಪಾಲ ವಿಚಾರಿಸಿದ.

ರಾತ್ರಿ ಎಂಟುಗಂಟೆಯ ವೇಳೆಗೆ ಸರಳೆ, ವಾಸುವಿಗೆ ಲಘುವಾಗಿ ಉಪಾಹಾರವಾಯಿತು.

ಆ 'ಲಘು' ಎಂಬುದಕ್ಕೆ ಏನರ್ಥವೋ ದೇವರಿಗೇ ಗೊತ್ತು.

ಸರಳೆಯಂತೂ ಒಂದು ನಿಮಿಷವೂ ಬಿಡದೆ ಅರಳು ಹುರಿದಂತೆ ಒಂದೇ ಸಮನೆ ಮಾತನಾಡುತ್ತಿದ್ದಳು. ರಾಜಗೋಪಾಲ ಅವಳು ಹೇಳಿದು ದನ್ನೆಲ್ಲಾ ಒಪ್ಪುತ್ತಿದ್ದ.

ರಾತ್ರಿ ಒಂಭತ್ತು ಗಂಟೆಯ ವೇಳೆಗೆ ವಾಸುವೇ ಸರಳೆಯನ್ನು ಎಚ್ಚರಿಸಿದ.

"ಸರಳಾ, ಮನೆಗೆ ಹೋಗೋಣವೇ? ಅಥವಾ ಇಲ್ಲಿಯೇ ಉಪಚಾರ ಮಾಡಿಸಿಕೊಳ್ಳುತ್ತಾ ಇರೋಣವೊ?"

"ಇರಿ"– ಎಂದ ರಾಜಗೋಪಾಲ

ಸರಳೆ ಸ್ನೇಹದಿಂದ ರಾಜಗೋಪಾಲನ ಕಡೆ ನೋಡಿ "ರಾಜೂನ ಉಪಚಾರ ಎಂದಿಗೂ ಬೇಡವಾಗುವುದಿಲ್ಲ"—ಎಂದಳು.

ಅವಳ ಮಾತಿನಿಂದ ರಾಜಗೋಪಾಲ ತೃಪ್ತಿಗೊಂಡ.

"ಮತ್ತೆ ಯಾವಾಗ ಬರ್ತಿಯಾ ಸರಳಾ?" - ರಾಜಗೋಪಾಲ ಸರಳೆಯನ್ನು ಕೇಳಿದ.

"ನಾನು ಆಗಾಗ್ಗೆ ಇಲ್ಲಿಗೆ ಬರುತ್ತಿರಬೇಕೆಂದು ನಿನಗನಿಸುತ್ತದೆಯೇ?"

"ನನ್ನ ಮನಸ್ಸು ಹೇಗಿದೆಯೆಂಬುದು ನನಗಿಂತಲೂ ನಿನಗೆ ಚೆನ್ನಾಗಿ ಗೊತ್ತಿದೆ."

ನೋವನ್ನಡಗಿಸುವ ಸಲುವಾಗಿ ಸರಳಾ ನಕ್ಕಳು. ಸರಳೆ ಸುಖಿ. ಅವಳಿಗಂಟಾದ ನೋವು ತನಗಾಗಿಯಲ್ಲ. ರಾಜಗೋಪಾಲನ ಒಂಟಿ ಜೀವನಕ್ಕಾಗಿ ಅವಳ ಹೃದಯದಲ್ಲಿ ಉಕ್ಕಿಬಂದ ನೋವು—ಅದು. ಅವನ ಇದುವರೆವಿಗಿನ ಒಂಟಿತನಕ್ಕೆ ತಾನು ಕಾರಣಳೇನೋ ಎಂಬ ಅಳುಕು ಅವಳ ಮನಸ್ಸನ್ನು ಕೊರೆಯುತ್ತಿತ್ತು. ವಾಸುವನ್ನು ಬಿಟ್ಟರೆ ಅವಳಿಗೆ ರಾಜಗೋಪಾಲನಲ್ಲಿ ಅಪಾರ ಸ್ನೇಹ, ಅಭಿಮಾನ. ವಾಸು ಬೇರೆಯಲ್ಲ, ತಾನು ಬೇರೆಯಲ್ಲ ಎಂದವಳು ಭಾವಿಸಿದ್ದಳು. ರಾಜಗೋಪಾಲನಲ್ಲಿ ಅವಳಿಗೆಷ್ಟು ಸ್ನೇಹ, ಅಭಿಮಾನ, ಸಲಿಗೆಯಿದ್ದವೆಂದರೆ ಒಮ್ಮೊಮ್ಮೆ ನೋಡಿದವರು ಅಪಾರ್ಥ

ಮಾಡಿಕೊಳ್ಳುವವರೆವಿಗೂ ಅವಳ ಹೃದಯ ಅವನಿಗಾಗಿ ಕಾತರಿಸುತ್ತಿತ್ತು. 'ನಮ್ಮ ರಾಜು' ಎನ್ನದೆ ಅವಳು ಅವನ ವಿಷಯವಾಗಿ ಎಂದೂ ಮಾತನಾಡಿದ್ದೇ ಇಲ್ಲ. ನಿಷ್ಕಲ್ಮಶವಾದ ತನ್ನ ಸ್ನೇಹ ಪ್ರೀತಿಯನ್ನು ನೋಡಿದವರು ತಪ್ಪು ತಿಳಿಯಬಹುದೆಂಬ ಕಲ್ಪನೆಯೂ ಇಲ್ಲದೇ ಬಹಿರಂಗವಾಗಿ ವ್ಯಕ್ತಗೊಳಿಸುತ್ತಿದ್ದಳು—ಸರಳಾ.

ತಾನು ಅನುಭವಿಸುತ್ತಿರುವ ಈ ಅಪೂರ್ವ ಸ್ವರ್ಗಸುಖ, ಹರ್ಷ ತುಂಬಿ ತುಳುಕಾಡುತ್ತಿದ್ದ ದಾಂಪತ್ಯ ಜೀವನ, ತನ್ನ ಅತ್ಯಂತ ಪ್ರಿಯ ಅತ್ತಿಗೆಯಸಿಗೆ ಎರವಾಗಬೇಕೆ?

"ರಾಜೂ"—ಎಂದಳು ಸರಳಾ—ಮೃದುವಾಗಿ.

"ಏನು?"

"ನಾನು ನಿಮ್ಮಲ್ಲಿಗೆ ಬರುತ್ತಿರಬೇಕೆ?"

"ಹೂಂ."

"ಹಾಗಾದರೆ ನನಗೊಬ್ಬ ಅತ್ತಿಗೆಯನ್ನು ಕರೆದು ತಾ."

ಅವಳೇನು ಹೇಳುವಳೋ ಎಂದು ಉತ್ಸುಕತೆಯಿಂದ ಅವಳ ಮುಖವನ್ನೇ ನೋಡುತ್ತಿದ್ದ ರಾಜಗೋಪಾಲನ ಮುಖ ಚಿಕ್ಕದಾಯಿತು.

ವಾಸು ಮನಃಪೂರ್ವಕವಾಗಿ ನಕ್ಕ.

"ಸರಿಯಾದುದನ್ನು ಹೇಳಿದೆ ಸರಳಾ. ಇನ್ನು ನಿಮ್ಮ ಮನೆಯಲ್ಲಿ ಊಟ ಮಾಡಿದರೆ ಮದುವೆಯ ಊಟ"—ವಾಸು ಹೇಳಿದ.

ಸರಳೆ ಅಷ್ಟು ಹೇಳಿದುದೇ ಸಾಕೆಂದು ರುಕ್ಕಮ್ಮ ಸರಳೆಯೆದುರಿಗೆ ತಮ್ಮ ಸಂಕಟ ಹೇಳಿಕೊಂಡರು.

ಯಾರ ಪ್ರಶ್ನೆಗೂ, ಯಾವ ಟೀಕೆಗೂ ಉತ್ತರ ಕೊಡದೆ ರಾಜಗೋಪಾಲ ನಗುತ್ತಾ ಕುಳಿತಿದ್ದ.

ಸರಳಾ, ವಾಸು ಮನೆಗೆ ಹೊರಟರು. ರಾಜಗೋಪಾಲ ಕಾರನ್ನು ಡ್ರೈವ್ ಮಾಡುತ್ತಿದ್ದಂತೆ ಸರಳೆಯನ್ನು ಕೇಳಿದ

"ಸರಳಾ, ನಾನು ಹೇಳುವುದನ್ನು ಕೇಳ್ತೀಯಾ?"

"ಹೇಳು ಕೇಳೋಣ"—ಎಂದಳು ಸರಳಾ.

ಕಂಟೋನ್ಮೆಂಟಿನಿಂದ ವಾಪಸು ಬರುವಾಗ ಸರಳಾ ವಾಸುವಿನೊಡನೆ ಹಿಂದಿನ ಸೀಟಿನಲ್ಲಿಯೇ ಕುಳಿತಿದ್ದಳು.

"ನಿನಗೆ ಏನಾದರೂ ಆಸೆಯಾದರೆ ನನಗೆ ಹೇಳ್ತೀಯಾ? ಏನಾದರೂ

ತಿಂಡಿ, ಹಣ್ಣು, ನೋಟ, ಹೂವು... "

"ನನಗೆ ಬೇಕಾದ ತಿಂಡಿ, ಹಣ್ಣು, ನೋಟ, ಹೂವು ಎಲ್ಲಾ ಇಲ್ಲಿದೆಯಲ್ಲಾ"—ಎಂದಳು ಸರಳಾ.

"ಎಲ್ಲಿ?"

"ಇಲ್ಲೇ"—ಎನ್ನುತ್ತಾ ಸರಳಾ ಮುದ್ದಿನಿಂದ ವಾಸುವಿನ ಕೆನ್ನೆ ತಿವಿದಳು.

ರಾಜಗೋಪಾಲ ನಕ್ಕುಬಿಟ್ಟು ಹೇಳಿದ "ಸರಿ. ಆದರೆ ನಿನಗೇನಾದರೂ ಬೇಕೆನಿಸಿದರೆ ನನಗೆ ಹೇಳು ಸರಳಾ."

"ಆಗಲಿ. ನಮ್ಮನ್ನು ಮನೆಯ ಹತ್ತಿರ ಇಳಿಸಿದಾಗ ಹೇಳುತ್ತೇನೆ"—ಎಂದಳು ಸರಳಾ.

ಮನೆಯ ಬಳಿ ವಾಸು, ಸರಳಾ ಕಾರಿನಿಂದ ಕೆಳಗಿಳಿದರು. ವಾಸು ಮೆಟ್ಟಿಲು ಹತ್ತುತ್ತಿದ್ದ. ಸರಳಾ ಹೇಳಿದಳು

"ರಾಜೂ, ನನಗೊಂದು ನೋಟ ನೋಡುವ ಆಸೆಯಿದೆ."

"ಏನದು? ಹೇಳು ಸರಳಾ "

"ಖಂಡಿತ ಆ ನೋಟ ತೋರಿಸಬೇಕು "

"ಆಗಲಿ. ನೀನು ಏನು ನೋಡಬೇಕು? ಜಂಬೂಸವಾರಿ? ದಸರಾ?"

"ಛೀ ಅವಲ್ಲ."

"ಏನದು ಹೇಳು "

ಕಾರಿನ ಬಾಗಿಲಿನ ಮೇಲೆ ಇದ್ದ ರಾಜಗೋಪಾಲನ ಕೈಮೇಲೆ ತನ ಕೈ ಇರಿಸಿ ಅವನ ಕಣ್ಣಲ್ಲಿ ಕಣ್ಣಿಟ್ಟು ಸರಳಾ ಮೆಲುದನಿಯಲ್ಲಿ ಹೇಳಿದಳು

"ನಿನ್ನ ಮದುವೆ ನೋಡಬೇಕು ನಾನು. ನನ್ನ ಈ ಬಯಕೆಯನ್ನು ಪೂರೈಸುತ್ತೀಯಾ?"

ರಾಜಗೋಪಾಲ "ನನಗೆ ಸರಿಯಾದ, ನನ್ನ ಮನಸ್ಸೊಪ್ಪುವ ಹುಡುಗಿ ಸಿಕ್ಕಿದರೆ ಖಂಡಿತ ನಿನ್ನಾಸೆಯನ್ನು ಪೂರೈಸುತ್ತೇನೆ"—ಎಂದವನೇ ಕಾರನ್ನು ಹೊರಡಿಸಿದ.

ರಂಗಮ್ಮ ಸರಳೆಯ ಆಗಮನವನ್ನು ಎದಿರು ನೋಡುತ್ತಿದ್ದರು ಸರಳೆಯನ್ನು ನೋಡಿ ಅವರ ಕಣ್ಣುಗಳು ಅಗಲವಾದವು. ಶ್ವೇತಾಂಬರಿಯಾಗಿ ಹೊರಗೆ ಹೊರಟ ಸರಳಾ ಜಲಕನ್ಯೆಯಂತೆ ನೀಲಹಸಿರು ಜರಿಯ ಝಗಝಗಿಸುವ ಸೀರೆಯುಟ್ಟು ಒಳಗೆ ಬಂದುದನ್ನು ನೋಡಿ ಅವರು ಅಚ್ಚರಿಯಿಂದ

"ಯಾವುದು ಸರಳಾ ಈ ಸೀರೆ?"—ಎಂದರು.

"ನಮ್ಮ ರಾಜುವಿನ ಉಡುಗೊರೆ ನನಗೆ"—ಎಂದಳು ಸರಳಾ.

ರಂಗಮ್ಮ ಹತ್ತಿರ ಬಂದು ಸೀರೆಯ ಅಂಚು, ಸೆರಗನ್ನು ಕೈಯಿಂದ ಮುಟ್ಟಿ ಪರೀಕ್ಷಿಸಿ

"ಸೀರೆ ತುಂಬಾ ಚೆನ್ನಾಗಿದೆ. ಭಾರಿ ಸೀರೆ"—ಎಂದರು

"ಊಂ...ಸೀರೆಗೆ ನೂರ ನಲವತ್ತೆಂಟು ರೂಪಾಯಿ ಆಯಿತು. ಚೆನ್ನಾಗಿರದೇ ಏನಾಗಿರುತ್ತದೆ?"

"ಸೀರೆಯ ಆಯ್ಕೆ ಯಾರದ್ದು? ರಾಜುವಿನದೋ, ರುಕ್ಮಮ್ಮನದೋ?" — ರಂಗಮ್ಮ ಕೇಳಿದರು.

"ಇಬ್ಬರದೂ ಅಲ್ಲ. ನಿಮ್ಮ ಮುದ್ದು ಸೊಸೆಯದು."

"ಆಂ? ಹೇಗೆ "

"ಬೆಳಗ್ಗೆ ಇಲ್ಲಿಂದ ರಾಜು ನನ್ನ ಜತೆ ಅಂಗಡಿಗೆ ಕರೆದೊಯ್ದು. ನನಗೆ ಬೇಕಾದ ಸೀರೆಯನ್ನು ಆಯ್ದುಕೊಳ್ಳುವಂತೆ ಹೇಳಿದ. ನನ್ನದೇ ಆಯ್ಕೆ"—ಎನ್ನುತ್ತಾ ಸರಳಾ ರೂಮಿಗೆ ಹೊರಟಳು.

"ಊಟ ಬೇಡವೇನಮ್ಮ?"—ರಂಗಮ್ಮ ಕೇಳಿದರು.

"ಬೇಡ. ಒಂದು ಲೋಟ ಹಾಲು ಸಾಕು."

ರಂಗಮ್ಮ ತಂದಿತ್ತ ಕೇಸರಿ ಹಾಲನ್ನು ಸರಳೆ ಕುಡಿದು ಮಲಗುವ ಮನೆಗೆ ಹೋದಳು. ವಾಸು ಹಾಸಿಗೆಯ ಸುರುಳಿಯನ್ನೊರಗಿ ಅರ್ಧ ಮಲಗಿದ್ದ.

ಅವನು ಸರಳೆಯನ್ನು ನೋಡಿ "ಸರಳಾ, ಬಾ ಇಲ್ಲಿ" ಎಂದ.

"ಏನು?"—ಎನ್ನುತ್ತಾ ಸರಳೆ ಬಂದು ಮಂಚದ ಮೇಲೆ ವಾಸುವಿನ ಒತ್ತಿನಲ್ಲಿ ಕುಳಿತುಕೊಂಡಳು. ವಾಸು ಅವಳ ಮುಖ ನೋಡದೇ ಬೆರಳುಗಳೊಡನೆ ಆಟವಾಡುತ್ತಾ

"ಸರಳಾ, ಈ ಸೀರೆ ನೀನು ಆರಿಸಿಕೊಂಡೆಯಾ?" ಎಂದ.

"ಹೌದು. ಯಾಕೆ ಸೀರೆ ಚೆನ್ನಾಗಿಲ್ಲವೇ? ನನಗೆ ಒಪ್ಪುದಿಲ್ಲವೇ?"

ಸರಳೆಗೆ ಆತಂಕ.

"ಸೀರೆ ಸೊಗಸಾಗಿದೆ. ನಿನಗೆ ಒಪ್ಪುತ್ತದೆ."

ಸರಳೆ ಪ್ರಸನ್ನಗೊಂಡಳು.

"ಆದರೆ, ಆತ ಸೀರೆ ನೀನೇ ಆರಿಸಿಕೋ ಎಂದ ಮಾತ್ರಕ್ಕೇ ನೀನು

ಇಷ್ಟು ಭಾರಿ ಸೀರೆ ತೆಗೆದುಕೊಳ್ಳಬಾರದಾಗಿತ್ತು. ಸಾಧಾರಣವಾದುದೊಂದು ಸೀರೆ ತಗೊಂಡಿದ್ದರೆ ಸಾಕಾಗಿತ್ತು.”

ಸರಳೆ ಮಂಚದಿಂದಿಳಿದು ಕನ್ನಡಿಯ ಮುಂದೆ ಹೋಗಿ ಕೂತು ಹೆರಳಿಗೆ ಸಿಕ್ಕಿಸಿದ ಪಿನ್ನುಗಳನ್ನು ಕಳಚುತ್ತಾ

“ನಾನು ಸಾಧಾರಣವಾದ ನಲವತ್ತು ರೂಪಾಯಿನ ಸೀರೆಯನ್ನೇ ತಗೊಂಡಿದ್ದೆ. ಆದರೆ ನಮ್ಮ ರಾಜು ಒಪ್ಪಬೇಕಲ್ಲ? ನೂರೈವತ್ತು ರೂಪಾಯಿನ ಸೀರೆ ತಗೊಳ್ಳಬೇಕೆಂದು ಹಠ ಮಾಡಿ ಭಾರಿ ಸೀರೆಗಳನ್ನು ತೆಗೆಸಿದ. ಕೊನೆಗೆ ಈ ಸೀರೆ, ಮತ್ತೊಂದು ನೀಲವರ್ಣದ ಸೀರೆಗಳಲ್ಲಿ ನಾನು ಇದನ್ನು ಆರಿಸಿಕೊಂಡೆ ”

“ಇಷ್ಟು ಭಾರಿ ಸೀರೆ ಬೇಡವೆಂದು ನೀನು ಹೇಳಬೇಕಾಗಿತ್ತು.”

“ಹೇಳಿದೆ. ಆದರೆ ಅವನು ಕೇಳಲಿಲ್ಲ. ಮುಖ ಚಿಕ್ಕದು ಮಾಡಿಕೊಂಡ. ಅವನನ್ನು ನೋಯಿಸುವುದು ನನಗಾಗಲಿಲ್ಲ. ಅವನಿಂದ ಭಾರಿ ಉಡುಗೊರೆ ಪಡೆದು ಅವನನ್ನು ಪ್ರಸನ್ನಗೊಳಿಸುವುದರಿಂದ ನನಗೇನು ನಷ್ಟ ಎಂದುಕೊಂಡು ಈ ಸೀರೆ ತಗೊಂಡೆ”

ಸರಳಾ ಹೆರಳನ್ನು ಬಿಚ್ಚ ತೊಡಗಿದಳು.

“ಮತ್ತೆ ರವಿಕೆ?”

ಆ ದಿನ ನಮ್ಮ ಮನೆಗೆ ಬಂದಿದ್ದಾಗ ಸ್ಟಾಂಡಿನ ಮೇಲಿದ್ದ ನನ್ನ ರವಿಕೆಯನ್ನು ತಗೊಂಡುಹೋಗಿ ಮಕಮಲ್ಲು ಬಟ್ಟೆ ತೆಗೆದು ಅದರ ಅಳತೆಗೆ ಹೋಲಿಸಿದ ನಂತೆ ಅವನ ಮನೆಯಲ್ಲಿ ನನಗೆ ಸರಿಯಾದ ಹೊಸ ರವಿಕೆ ನೋಡಿ ನನಗೆ ಆಶ್ಚರ್ಯವಾಯಿತು. ರುಕ್ಕಮ್ಮ ಅವರಿಗೆ ಪರಿಚಯವಿದ್ದ ಸಿಂಧಿ ಹೆಂಗಸೊಬ್ಬಳಿಗೆ ಬಟ್ಟೆ ಕೊಟ್ಟು ಮುತ್ತಿನ ಕೆಲಸ ಮಾಡಿಸಿದರಂತೆ. ” ಎನ್ನುತ್ತಾ ಸರಳೆ ಬಂದು ಮತ್ತೆ ಮಂಚದಮೇಲೆ ಕುಳಿತಳು.

“ಮತ್ತೆ ನಿನ್ನ ಒಳಗಿನ ಉಡುಪು?”

“ಕೈ ಚೀಲದಲ್ಲಿದೆ ನಾನು ಸಿನಿಮಾಗೆ ಹೊರಟಾಗ ಹೊಸ ಸೀರೆ ಉಟ್ಟುಕೊಳ್ಳಲೇಬೇಕೆಂದು ರಾಜು, ಅತ್ತೆ ಗಲಾಟೆ ಮಾಡಿದರು. ಸರಿ, ಉಟ್ಟುಕೊಂಡೆ.”

“ನಾನು ಬರುವೆನೆಂದು ಗೊತ್ತಿದ್ದರೂ ನೀನು ಸಿನಿಮಾಕ್ಕೆ ಯಾಕೆ ಹೋದೆ?”—ವಾಸು ಮುನಿಸಿನಿಂದ ಕೇಳಿದ

“ನೀವು ಬರೋದಿಲ್ಲವೇನೋಂತ ನನಗೆ ಎನಿಸಿತ್ತು.”

“ಯಾಕೆ?”

"ನೀವು ಬೇಗೆ ಮಾತನಾಡಿದ ರೀತಿ ಹಾಗಿತ್ತು"—ಸರಳಾ ಶಾಂತಳಾಗಿ ಹೇಳಿದಳು.

ವಾಸು ತಡೆತಡೆದು ಕೊನೆಯ ಪ್ರಶ್ನೆಯನ್ನು ಕೇಳಿದ

"ರಾಜಗೋಪಾಲನಿಗೆ ನಿನ್ನಲ್ಲಿ ಯಾಕೆ ಇಷ್ಟೊಂದು ಆಸಕ್ತಿ ಸರಳಾ?"

ವಾಸು ನೇರವಾಗಿ ಸರಳೆಯನ್ನು ದಿಟ್ಟಿಸಿ ನೋಡುತ್ತಿದ್ದ. ಸರಳೆ ಮುಗ್ಧತೆಯೇ ಮೂರ್ತಿವೆತ್ತವಂತೆ ಕುಳಿತಿದ್ದವಳು ತನ್ನ ಅಗಲವಾದ ಹರಿಣ ಗಣ್ಣುಗಳ ರೆಪ್ಪೆಗಳನ್ನು ಪಟಪಟನೆ ಬಡಿದು

"ಚಿಕ್ಕ ವಯಸ್ಸಿನಿಂದಲೂ ನಾವು ಆಡಿ ಬೆಳೆದಿದ್ದೇವೆ. ಆದುದರಿಂದ ನಾವು ಸ್ನೇಹಿತರು"—ಎಂದಳು.

"ಅಷ್ಟೇನೆ?" ಎನ್ನುತ್ತಾ ವಾಸು ಸರಳೆಯ ಎರಡು ಭುಜವನ್ನೂ ಹಿಡಿದುಕೊಂಡ.

"ಅಷ್ಟೇ"

"ನಿಜವಾಗಿ?"

"ಈ ಮುತ್ತಿನಾಣೆಗೂ"—ಎನ್ನುತ್ತಾ ಸರಳಾ ಬಾಗಿದಳು. ಬಿಚ್ಚಿದ ಅವಳ ತಲೆಗೂದಲು - ಬೆನ್ನ ತುಂಬ ಹರಡಿಕೊಂಡಿದ್ದ ತಲೆಗೂದಲು ಅವಳು ಬಾಗುತ್ತಲೇ ಮುಂದೆ ಬಂದು ವಾಸುವಿನ ಮುಖವನ್ನೆಲ್ಲಾ ಕವಿಯಿತು. ಪರಿಮಳಯುಕ್ತ ಕಾರ್ಮೋಡವೊಂದು ತನ್ನನ್ನು ಆವರಿಸಿದಂತಾಯಿತು ವಾಸುವಿಗೆ. ಅವಳ ರವಿಕೆಯ ತೋಳಿಗೆ ಹೆಣೆದಿದ್ದ ಮುತ್ತಿನ ಮಣಿಗಳು ವಾಸುವಿನ ಕೆನ್ನೆಯನ್ನು ಒಡತಿಯ ತುಟಿಗಳೊಡನೆ ಸ್ಪರ್ಧಿಸಿ ತಾವೂ ಅವಳು ಬಿಟ್ಟುಕೊಟ್ಟಿದ್ದ ಕೆನ್ನೆಯನ್ನು—ಒತ್ತಿದವು.

ಸರಳೆ ಹಿಂದೆ ಸರಿದು ಕೂದಲನ್ನು ಒಂದಕ್ಕೆ ಕಟ್ಟಿದಳು ಮತ್ತೆ. ಆಕೆ ಎದ್ದು ಹೋಗಿ ಕನ್ನಡಿಯ ಮುಂದೆ ಕುಳಿತು ಸೀರೆಯ ಅಂದ ಚೆಂದವನ್ನು ಕನ್ನಡಿಯಲ್ಲಿ ನಿರುಕಿಸುತ್ತಿದ್ದಳು

ವಾಸು ಚೈತನ್ಯಗತನಂತೆ ಹಾಸಿಗೆಗೊರಗಿದ್ದ. ಅವನ ಮನಸ್ಸು ಮಾತ್ರ ಕಲ್ಪನೆಯ ಕುದುರೆಯನ್ನೇರಿ ಎಲ್ಲಿಯೋ ಹೊರಟಿತ್ತು. ಹತ್ತು ನಿಮಿಷಗಳ ಕಾಲ ಗಂಡ ಹೆಂಡತಿಯರಿಬ್ಬರೂ ಮೌನವಾಗಿ ಕುಳಿತಿದ್ದರು.

ನಂತರ ವಾಸು ಹಾಗೆಯೇ ಹೊರಳಿ ಸರಳೆಯ ಕಡೆ ನೋಡಿದ. ಕನ್ನಡಿಯಲ್ಲಿ ತಾನು ಕಂಡ ಪ್ರತಿಬಿಂಬದಿಂದ ಆಕರ್ಷಿಸಲ್ಪಟ್ಟವನಾದರೂ 'ಮುಗಿಲ

ವೆಲ್ಲಗೆ'ಯನ್ನು ಕೇಳುವ ಹುಚ್ಚು ಸಾಹಸಕ್ಕೆ ಹೋಗದೆ ಕುಳಿತಲ್ಲಿಂದಲೇ

"ಸರಳಾ"—ಎಂದ.

"ಏನು?"

"ನೀನು ತುಂಬಾ ಚೆನ್ನಾಗಿ ಕಾಣಿಸುತ್ತಿದೀಯಾ."

"ಧನ್ಯವಾದಗಳು."

"ಏನೋ ತುಂಬಾ ಯೋಚನೆ ಮಾಡುತ್ತಿದ್ದ ಹಾಗಿತ್ತಲ್ಲಾ ಏನದು?"—ವಾಸು ಪ್ರೀತಿಯಿಂದ ಕೇಳಿದ.

"ಏನಿಲ್ಲ"—ಎಂದು ಸರಳೆ ಕಳ್ಳನಗೆ ನಕ್ಕಳು.

"ಹೇಳು ಪರವಾಗಿಲ್ಲ"—ವಾಸು ಒತ್ತಾಯಪಡಿಸಿದ.

"ಒಂದು ಪಕ್ಷ ನಾವು ಕಾಶಿಗೆ ಹೋಗಿದ್ದಿದ್ದರೆ ಅಲ್ಲಿಂದ ಬರುವಾಗ ನಾವು ನಮಗೆ ಇಷ್ಟವಾದುದನ್ನು ಏನಾದರೂ ಬಿಟ್ಟು ಬರಬೇಕಂತೆ. ಆಗ ನಾನು ಏನನ್ನ ಬಿಡಬಹುದಿತ್ತು ಎಂದು ಆಗಿನಿಂದ ಯೋಚಿಸುತ್ತಿದ್ದೇನೆ."

ಸರಳೆಯ ಮುಖದ ಗಾಂಭೀರ್ಯ ಗಮನಿಸಿ ವಾಸು ನಕ್ಕುಬಿಟ್ಟ.

"ಸರಳಾ, ನೀನು ಹದಿನಾರಾಣೆ ಹೆಂಗಸು"—ಎಂದ.

"ನಿಮ್ಮ ಈ ಮೆಚ್ಚುಗೆಯ ನುಡಿಗೆ ಧನ್ಯವಾದಗಳು."

"ನಾನು ನಮ್ಮ ಜೀವನದ ರಸಗಳಿಗೆಗಳನ್ನು ಸವಿಯುತ್ತಿದ್ದರೆ ನೀನು ಕಾಶಿಯಲ್ಲಿ ಏನು ಬಿಡಬೇಕೆಂದು ಯೋಚನೆ ಮಾಡ್ತಿದೀಯ."

"ಹೂಂ. ನನಗೆ ಏನು ಬಿಡಬೇಕೆಂದು ಬಹಳ ಕಷ್ಟವಾಗುತ್ತಿತ್ತೋ ಏನೋ? ಯಾಕೆಂದರೆ ನನಗೆ ಹಾಗಲಕಾಯಿಂದ ಹಿಡಿದು ಹಲಸಿನ ಹಣ್ಣಿನ ವರೆವಿಗೆ ಸೇರುತ್ತದೆ. ಯಾವುದಾದರೂ ನನಗೆ ಸೇರದಿರುವ ಹಣ್ಣು, ತರಕಾರಿಯನ್ನು ಬಿಡೋಣವೆಂದರೆ ನನಗೆ ಪ್ರತಿಯೊಂದೂ ಸೇರುತ್ತದೆ. ಯಾವುದನ್ನು ಬಿಡುವ ಮನಸ್ಸೂ ಇಲ್ಲ. ಏನು ಮಾಡಲಿ?"—ಎನ್ನುತ್ತಾ ಸರಳೆ ವಾಸುವನ್ನು ಕೇಳಿದಳು.

ಕಾಶಿಯಲ್ಲಿ ಪುರೋಹಿತರು ಏನು ಬಿಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳಿ ಉತ್ತರ ನಿರೀಕ್ಷಿಸುತ್ತಾ ನಿಂತಿರುವರೋ ಎಂಬಂತ ಸರಳಾ ಮಾತನಾಡಿದಳು.

ವಾಸು ಕುಚೋದ್ಯದ ದನಿಯಲ್ಲಿ "ಸರಳಾ, ನೀನು ಹದಿನೆಂಟಾಣೆ ಹೆಂಗಸು"—ಎಂದ.

ಸರಳ ಅವನ ಮಾತಿಗೆ ಮೆಚ್ಚುಗೆ ಗಮನಿಸಿಕೊಡದೆ

"ಒಂದು ಪಕ್ಷ ನಿಮಗೆ ಇಷ್ಟವಾದ ಯಾವುದಾದರೂ ಪದಾರ್ಥ ಬಿಡಬೇಕೆಂದರೆ ನೀವೇನು ಬಿಡುತ್ತೀರಾ?"—ಎಂದಳು.

"ಹೇಳಲೇ?"

"ಹೇಳಿ"—ಸರಳೆಗೆ ಕುತೂಹಲ.

"ನಾನು ನನ್ನ ಹೆಂಡತಿಯನ್ನು ಬಿಡುತ್ತೇನೆ ಎಂದು ಪುರೋಹಿತರಿಗೆ ಹೇಳುತ್ತೇನೆ."

ಸರಳೆಗೆ ಕೋಪ ಬಂತು.

"ಬಿಡೋದಕ್ಕಲ್ಲ ಕಟ್ಟಿಕೊಂಡಿದ್ದು" ಎಂದಳವಳು.

"ಕಟ್ಟಿಕೊಳ್ಳುವುದಕ್ಕೆ ಮುಂಚೆ ನೀನು ಇಷ್ಟೊಂದು ಭಾರ ಎಂದು ನನಗೆ ತಿಳಿದಿರಲಿಲ್ಲ."

ಸರಳೆ ಮುನಿಸಿದು ಮುಖ ತಿರುಹಿದಳು.

ತನಗಾಗಿ ಗಾಜಿನ ತಟ್ಟೆಯಲ್ಲಿರಿಸಿಕೊಂಡಿದ್ದ ಬಾದಾಮಿ, ಖರ್ಜೂರ, ದ್ರಾಕ್ಷಿಯನ್ನು ತಿನ್ನುವುದಿಲ್ಲವೆಂದು ಸರಳಾ ಹಠ ಮಾಡಿದಳು. ವಾಸು ಹೆಂಡತಿಯೊಡನೆ ರಾಜಿಯಾಗಬೇಕಾದರೆ ಒಂದು ಗಂಟೆ ಬೇಕಾಯಿತು.

"ನಾನು ತಮಾಷಿಗೆ ಕಣೇ ಹಾಗಂದಿದ್ದು"—ಎಂದು ವಾಸು ಕೊನೆಯಲ್ಲಿ ಕ್ಷಮಾಪಣೆ ಕೇಳಿಕೊಂಡ ಮೇಲೆ ಸರಳಾ ಶಾಂತಳಾಗಿ ಗಾಜಿನ ತಟ್ಟೆಯನ್ನು ಖಾಲಿ ಮಾಡಿದಳು.

ರಾತ್ರಿ ಸುಮಾರು ಎರಡು ಗಂಟೆಯ ವೇಳೆಗೆ ಸರಳೆಗೆ ಎಚ್ಚರವಾಯಿತು. ಪಕ್ಕದಲ್ಲಿ ವಾಸು ಶಾಂತವಾಗಿ ಮಲಗಿ ನಿದ್ರಿಸುತ್ತಿದ್ದ. ಅವನ ಸುಖವಾದ ನಿದ್ರೆಯನ್ನು ನೋಡಿ ಸರಳೆಗೆ ಮತ್ಸರ ಉಂಟಾಯಿತು. ತಾನು ಒಂದು ಮಗ್ಗುಲಿನಿಂದ ಮತ್ತೊಂದು ಮಗ್ಗುಲಾಗಬೇಕಾದರೆ ಹಾಸಿಗೆಯ ಮೇಲೆ ಕೈಯೂರಿ ಎದ್ದು ಕುಳಿತು, ಬೇರೆ ಮಗ್ಗುಲಾಗಬೇಕು. ಮಲಗುವಾಗಲೂ ಧಡಕ್ಕನೆ ಮುನ್ನಿನಂತೆ ಉರುಳಿಕೊಳ್ಳುವ ಹಾಗಿಲ್ಲ. ಮೊಳಕೈಯನ್ನು ಹಾಸಿಗೆಯ ಮೇಲೆ ಅರ್ಧ ಊರಿ ನಂತರ ದಿಂಬಿನ ಮೇಲೆ ನಿಧಾನವಾಗಿ ತಲೆ ಇರಿಸಬೇಕು.

ಸಾಲದುದಕ್ಕೆ ಆ ಅಡಗಿದ್ದ ಮಹರಾಯ ಬೇರೆ ಆಗಾಗ್ಗೆ ಸರಳೆಯನ್ನು ಗುದ್ದಿ, ಒದ್ದು ಹಿಂಸೆ ಮಾಡಿ ಎಚ್ಚರಗೊಳಿಸುತ್ತಿದ್ದ.

ಸರಳೆಗೆ ಹೇಗೆ ಕುಳಿತರೂ ಹಿಂಸೆ, ಹೇಗೆ ಮಲಗಿದರೂ ಹಿಂಸೆ. ಐದು ನಿಮಿಷದ ಮೇಲೆ ಆಧಾರವಿಲ್ಲದೆ ನಿಲ್ಲುವುದೆಂದರೆ ಅವಳಿಗೆ ಬಹಳ ಪ್ರಯಾಸದ ಕೆಲಸವಾಗಿತ್ತು.

ಇರಳು ದೀಪದ ನಸುಬೆಳಕಿನಲ್ಲಿ ಸರಳೆ ಮತ್ತೆ ವಾಸುವಿನ ಕಡೆ ನೋಡಿದಳು. ವಾಸು ನಿದ್ರೆಯ ಮೋಡಿಗೆ ಸಂಪೂರ್ಣ ಬಲಿಯಾಗಿದ್ದ.

ಸರಳೆಗೆ ವಾಸುವಿನ ಮೇಲೆ ಕೋಪ ಬಂತು. ಸರಳಾ ಮೆಲ್ಲನೆ 'ರೀ' —ಎಂದಳು.

ವಾಸುವಿನಿಂದ ಉತ್ತರವಿಲ್ಲ.

ಸರಳೆಗೆ ಇದ್ದಕ್ಕಿದ್ದಂತೆ ಹಸಿವಾಯಿತು ಅವಳು ಸ್ಟೂಲಿನ ಮೇಲಿರಿಸಿ ಕೊಂಡಿದ್ದ ಬಿಸ್ಕತ್ತುಗಳನ್ನು ತಿಂದು ಕೊಂಚ ನೀರನ್ನು ಕುಡಿದಳು.

ವಾಸು ಮಿಸುಕಾಡದೇ ಮಲಗಿದ್ದ.

ಸರಳ ಮತ್ತೆ "ರೀ, ನಿದ್ದೆ ಬಂತೇ?"—ಎಂದಳು.

'ಏನು?'—ಎನ್ನುತ್ತಾ ವಾಸು ಗಡಬಡಿಸಿ ಕುಳಿತ.

"ಯಾಕೋ ನಿದ್ದೇನೇ ಬರೋದಿಲ್ಲ"—ಸರಳಾ ತನ್ನ ಸಂಕಟ ಹೇಳಿ ಕೊಂಡಳು

"ಜೋಗುಳ ಹಾಡಲೇ?"

"ಸಾಕು ಹುಡುಗಾಟ"—ಎಂದಳು ಸರಳಾ.

ವಾಸು ಮತ್ತೆ ಹೊದಿಕೆ ಹೊದ್ದು ಮಲಗಿದ. ಸರಳ ಪುನಃ "ರೀ"— ಎಂದಳು.

"ಏನು?"—ಸರಳೆಯಿಂದಾಗಿ ವಾಸುವಿನ ನಿದ್ರೆಯೂ ದೂರ ವಾಗಿತ್ತು.

"ನಮ್ಮ ಮಗೂಗೆ ಏನು ಹೆಸರಿಡೋಣ?"

ಅರ್ಧ ರಾತ್ರಿಯಲ್ಲಿ ನಿದ್ರಿಸುತ್ತಿದ್ದ ಗಂಡನನ್ನು ಎಚ್ಚರಗೊಳಿಸಿ ಸರಳೆ ಕೇಳಿದ ಪ್ರಶ್ನೆಯಿದು.

"ಈಗಿಂದ ಯಾಕೆ ಯೋಚನೆ ಮಾಡೋಣ?"—ವಾಸು ಕೇಳಿದ.

"ನನ್ನ ಮಗೂ ವಿಷಯದಲ್ಲಿ ನಿಮಗೆ ಆಸಕ್ತಿಯೇ ಇಲ್ಲ"—ಸರಳೆ ಗುಡುಗಿದಳು.

"ಛೀ"—ಎಂದ ವಾಸು.

"ಹಾಗಾದರೆ ಹೇಳಿ. ನಮ್ಮ ಮಗೂಗೆ ಅಪರೂಪದ ಹೆಸರನ್ನಿಡಬೇಕು. ಅಂತಹ ಹೆಸರನ್ನು ಹಿಂದೆ ಯಾರೂ ಇಟ್ಟಿರಬಾರದು, ಮುಂದೆ ಇಡಬಾರದು ಹೇಳಿ."

"ಹೆಣ್ಣಾದರೆ ಪೂತನಿ, ಗಂಡಾದರೆ ಬಕಾಸುರ ಎಂದಿಡೋಣ."

ಮಾಡಿಕೊಳ್ಳುವವರೆವಿಗೂ ಅವಳ ಹೃದಯ ಅವನಿಗಾಗಿ ಕಾತರಿಸುತ್ತಿತ್ತು. 'ನಮ್ಮ ರಾಜು' ಎನ್ನದೆ ಅವಳು ಅವನ ವಿಷಯವಾಗಿ ಎಂದೂ ಮಾತನಾಡಿದ್ದೇ ಇಲ್ಲ. ನಿಷ್ಕಲ್ಮಶವಾದ ತನ್ನ ಸ್ನೇಹ ಪ್ರೀತಿಯನ್ನು ನೋಡಿದವರು ತಪ್ಪು ತಿಳಿಯಬಹುದೆಂಬ ಕಲ್ಪನೆಯೂ ಇಲ್ಲದೇ ಬಹಿರಂಗವಾಗಿ ವ್ಯಕ್ತಗೊಳಿಸುತ್ತಿದ್ದಳು—ಸರಳಾ.

ತಾನು ಅನುಭವಿಸುತ್ತಿರುವ ಈ ಅಪೂರ್ವ ಸ್ವರ್ಗಸುಖ, ಹರ್ಷ ತುಂಬಿ ತುಳುಕಾಡುತ್ತಿದ್ದ ದಾಂಪತ್ಯ ಜೀವನ, ತನ್ನ ಅತ್ಯಂತ ಪ್ರಿಯ ಆತ್ಮೀಯನಿಗೆ ಎರವಾಗಬೇಕೆ?

"ರಾಜೂ"—ಎಂದಳು ಸರಳಾ—ಮೃದುವಾಗಿ.

"ಏನು?"

"ನಾನು ನಿಮ್ಮಲ್ಲಿಗೆ ಬರುತ್ತಿರಬೇಕೆ?"

"ಹೂಂ."

"ಹಾಗಾದರೆ ನನಗೊಬ್ಬ ಅತ್ತಿಗೆಯನ್ನು ಕರೆದು ತಾ."

ಅವಳೇನು ಹೇಳುವಳೋ ಎಂದು ಉತ್ಸುಕತೆಯಿಂದ ಅವಳ ಮುಖವನ್ನೇ ನೋಡುತ್ತಿದ್ದ ರಾಜಗೋಪಾಲನ ಮುಖ ಚಿಕ್ಕದಾಯಿತು.

ವಾಸು ಮನಃಪೂರ್ವಕವಾಗಿ ನಕ್ಕ.

"ಸರಿಯಾದುದನ್ನು ಹೇಳಿದೆ ಸರಳಾ. ಇನ್ನು ನಿಮ್ಮ ಮನೆಯಲ್ಲಿ ಊಟ ಮಾಡಿದರೆ ಮದುವೆಯ ಊಟ"—ವಾಸು ಹೇಳಿದ.

ಸರಳೆ ಅಷ್ಟು ಹೇಳಿದುದೇ ಸಾಕೆಂದು ರುಕ್ಮಮ್ಮ ಸರಳೆಯೆದುರಿಗೆ ತಮ್ಮ ಸಂಕಟ ಹೇಳಿಕೊಂಡರು.

ಯಾರ ಪ್ರಶ್ನೆಗೂ, ಯಾವ ಟೀಕೆಗೂ ಉತ್ತರ ಕೊಡದೆ ರಾಜಗೋಪಾಲ ನಗುತ್ತಾ ಕುಳಿತಿದ್ದ.

ಸರಳಾ, ವಾಸು ಮನೆಗೆ ಹೊರಟರು. ರಾಜಗೋಪಾಲ ಕಾರನ್ನು ಡ್ರೈವ್ ಮಾಡುತ್ತಿದ್ದಂತೆ ಸರಳೆಯನ್ನು ಕೇಳಿದ

"ಸರಳಾ ನಾನು ಹೇಳಿದುದನ್ನು ಕೇಳ್ತೀಯಾ?"

"ಹೇಳು ಕೇಳೋಣ"—ಎಂದಳು ಸರಳಾ.

ಕಂಟೋನ್ಮೆಂಟಿನಿಂದ ವಾಪಸು ಬರುವಾಗ ಸರಳಾ ವಾಸುವಿನೊಡನೆ ಹಿಂದಿನ ಸೀಟಿನಲ್ಲಿಯೇ ಕುಳಿತಿದ್ದಳು.

"ನಿನಗೆ ಏನಾದರೂ ಆಸೆಯಾದರೆ ನನಗೆ ಹೇಳ್ತೀಯಾ? ಏನಾದರೂ

ತಿಂಡಿ, ಹಣ್ಣು, ನೋಟ, ಹೂವು... ”

“ನನಗೆ ಬೇಕಾದ ತಿಂಡಿ, ಹಣ್ಣು, ನೋಟ, ಹೂವು ಎಲ್ಲಾ ಇಲ್ಲಿದ್ದೆಯಲ್ಲಾ”—ಎಂದಳು ಸರಳಾ.

“ಎಲ್ಲಿ?”

“ಇಲ್ಲೇ”—ಎನ್ನುತ್ತಾ ಸರಳಾ ಮುದ್ದಿನಿಂದ ವಾಸುವಿನ ಕೆನ್ನೆ ತಿವಿದಳು.

ರಾಜಗೋಪಾಲ ನಕ್ಕುಬಿಟ್ಟು ಹೇಳಿದ “ಸರಿ. ಆದರೆ ನಿನಗೇನಾದರೂ ಬೇಕೆನಿಸಿದರೆ ನನಗೆ ಹೇಳು ಸರಳಾ.”

“ಆಗಲಿ. ನಮ್ಮನ್ನು ಮನೆಯ ಹತ್ತಿರ ಇಳಿಸಿದಾಗ ಹೇಳುತ್ತೇನೆ”—ಎಂದಳು ಸರಳಾ.

ಮನೆಯ ಬಳಿ ವಾಸು, ಸರಳಾ ಕಾರಿನಿಂದ ಕೆಳಗಿಳಿದರು. ವಾಸು ಮೆಟ್ಟಿಲು ಹತ್ತುತ್ತಿದ್ದ. ಸರಳಾ ಹೇಳಿದಳು

“ರಾಜೂ, ನನಗೊಂದು ನೋಟ ನೋಡುವ ಆಸೆಯಿದೆ.”

“ಏನದು? ಹೇಳು ಸರಳಾ ”

“ಖಂಡಿತ ಆ ನೋಟ ತೋರಿಸಬೇಕು ”

“ಆಗಲಿ. ನೀನು ಏನು ನೋಡಬೇಕು? ಜಂಬೂಸವಾರಿ? ದಸರಾ?”

“ಛೀ ಅದಲ್ಲ.”

“ಏನದು ಹೇಳು ”

ಕಾರಿನ ಬಾಗಿಲಿನ ಮೇಲೆ ಇದ್ದ ರಾಜಗೋಪಾಲನ ಕೈಮೇಲೆ ತನ್ನ ಕೈ ಇರಿಸಿ ಅವನ ಕಣ್ಣಲ್ಲಿ ಕಣ್ಣಿಟ್ಟು ಸರಳಾ ಮೆಲುದನಿಯಲ್ಲಿ ಹೇಳಿದಳು

“ನಿನ್ನ ಮದುವೆ ನೋಡಬೇಕು ನಾನು ನನ್ನ ಈ ಬಯಕೆಯನ್ನು ಪೂರೈಸುತ್ತೀಯಾ?”

ರಾಜಗೋಪಾಲ “ನನಗೆ ಸರಿಯಾದ, ನನ್ನ ಮನಸ್ಸೊಪ್ಪುವ ಹುಡುಗಿ ಸಿಕ್ಕಿದರೆ ಖಂಡಿತ ನಿನ್ನಾಸೆಯನ್ನು ಪೂರೈಸುತ್ತೇನೆ”—ಎಂದವನೇ ಕಾರನ್ನು ಹೊರಡಿಸಿದ.

ರಂಗಮ್ಮ ಸರಳೆಯ ಆಗಮನವನ್ನು ಎದುರು ನೋಡುತ್ತಿದ್ದರು. ಸರಳೆಯನ್ನು ನೋಡಿ ಅವರ ಕಣ್ಣುಗಳು ಅಗಲವಾದವು. ಶ್ರೀಮಂತರಿಯಾಗಿ ಹೊರಗೆ ಹೊರಟ ಸರಳಾ ಜಲಕನ್ಯೆಯಂತೆ ನೀಲಿಹಸಿರು ಜರಿಯ ಚಾಕಲೀಯ ಸೀರೆಯುಟ್ಟು ಒಳಗೆ ಬಂದುದನ್ನು ನೋಡಿ ಅವರು ಆಶ್ಚರ್ಯಗೊಂಡರು.

"ಯಾವುದು ಸರಳಾ ಈ ಸೀರೆ?"—ಎಂದರು.

"ನಮ್ಮ ರಾಜುವಿನ ಉಡುಗೊರೆ ನನಗೆ"—ಎಂದಳು ಸರಳಾ.

ರಂಗಮ್ಮ ಹತ್ತಿರ ಬಂದು ಸೀರೆಯ ಅಂಚು, ಸೆರಗನ್ನು ಕೈಯಿಂದ ಮುಟ್ಟಿ ಪರೀಕ್ಷಿಸಿ

"ಸೀರೆ ತುಂಬಾ ಚೆನ್ನಾಗಿದೆ. ಭಾರಿ ಸೀರೆ"—ಎಂದರು.

"ಊಂ... ಸೀರೆಗೆ ನೂರ ನಲವತ್ತೆಂಟು ರೂಪಾಯಿ ಆಯಿತು. ಚೆನ್ನಾಗಿರದೇ ಹೇಗಿರುತ್ತದೆ?"

"ಸೀರೆಯ ಆಯ್ಕೆ ಯಾರದ್ದು? ರಾಜುವಿನದೋ, ಲಕ್ಷ್ಮಮ್ಮನದೋ?"—ರಂಗಮ್ಮ ಕೇಳಿದರು.

"ಇಬ್ಬರದೂ ಅಲ್ಲ. ನಿಮ್ಮ ಮಗನದ್ದು ನೋಡೆಯದು."

"ಅಂದ್ರೆ ಹೇಗೆ.."

"ಬೆಳಗ್ಗೆ ಇಲ್ಲಿಂದ ರಾಜು ನೆಟ್ಟಗೆ ಜವಳಿ ಅಂಗಡಿಗೆ ಕರೆದೊಯ್ದು, ನನಗೆ ಬೇಕಾದ ಸೀರೆಯನ್ನು ಆರಿಸಿಕೊಳ್ಳುವಂತೆ ಹೇಳಿದ. ನನ್ನದೇ ಆಯ್ಕೆ"—ಎನ್ನುತ್ತಾ ಸರಳಾ ಒಳಗೆ ಹೊರಟಳು.

"ಊಟ ಬೇಡವೇನಮ್ಮ?"—ರಂಗಮ್ಮ ಕೇಳಿದರು.

"ಬೇಡ. ಒಂದು ಲೋಟ ಹಾಲು ಸಾಕು."

ರಂಗಮ್ಮ ತಂದಿತ್ತ ಕೇಸರಿ ಹಾಲನ್ನು ಸರಳೆ ಕುಡಿದು ಮಲಗುವ ಮನೆಗೆ ಹೋದಳು. ವಾಸು ಹಾಸಿಗೆಯ ಸುರುಳಿಯನ್ನೊರಗಿ ಅರ್ಧ ಮಲಗಿದ್ದ.

ಅವನು ಸರಳೆಯನ್ನು ನೋಡಿ "ಸರಳಾ, ಬಾ ಇಲ್ಲಿ" ಎಂದ.

"ಏನು?"—ಎನ್ನುತ್ತಾ ಸರಳೆ ಬಂದು ಮಂಚದ ಮೇಲೆ ವಾಸುವಿನ ಒತ್ತಿನಲ್ಲಿ ಕುಳಿತುಕೊಂಡಳು. ವಾಸು ಅವಳ ಮುಖ ನೋಡದೇ ಬೆರಳು ಬೆರಳೊಡನೆ ಆಟವಾಡುತ್ತಾ

"ಸರಳಾ, ಈ ಸೀರೆ ನೀನೇ ಆರಿಸಿಕೊಂಡೆಯಾ?" ಎಂದ.

"ಹೌದು. ಯಾಕೆ ಸೀರೆ ಚೆನ್ನಾಗಿಲ್ಲವೇ? ನನಗೆ ಒಪ್ಪುವುದಿಲ್ಲವೇ?"—ಸರಳೆಗೆ ಆತಂಕ.

"ಸೀರೆ ಸೊಗಸಾಗಿದೆ. ನಿನಗೆ ಒಪ್ಪುತ್ತದೆ."

ಸರಳೆ ಪ್ರಸನ್ನಗೊಂಡಳು.

"ಆದರೆ, ಆತ ಸೀರೆ ನೀನೇ ಆರಿಸಿಕೋ ಎಂದ ಮಾತ್ರಕ್ಕೆ ನೀನು

ಇಷ್ಟು ಭಾರಿ ಸೀರೆ ತೆಗೆದುಕೊಳ್ಳಬಾರದಾಗಿತ್ತು. ಸಾಧಾರಣವಾದು ದೊಂದು ಸೀರೆ ತಗೊಂಡಿದ್ದರೆ ಸಾಕಾಗಿತ್ತು."

ಸರಳೆ ಮಂಚದಿಂದಿಳಿದು ಕನ್ನಡಿಯ ಮುಂದೆ ಹೋಗಿ ಕುಳಿತು ಹೆರಳಿಗೆ ಸಿಕ್ಕಿಸಿದ ಪಿನ್ನುಗಳನ್ನು ಕಳಚುತ್ತಾ

"ನಾನು ಸಾಧಾರಣವಾದ ನಲವತ್ತು ರೂಪಾಯಿನ ಸೀರೆಯನ್ನೇ ತಗೊಂಡಿದ್ದೆ. ಆದರೆ ನಮ್ಮ ರಾಜು ಒಪ್ಪಬೇಕಲ್ಲ? ನೂರೈವತ್ತು ರೂಪಾಯಿನ ಸೀರೆ ತಗೊಳ್ಳಬೇಕೆಂದು ಹಠ ಮಾಡಿ ಭಾರಿ ಸೀರೆಗಳನ್ನು ತೆಗೆಸಿದ. ಕೊನೆಗೆ ಈ ಸೀರೆ, ಮತ್ತೊಂದು ನೀಲವರ್ಣದ ಸೀರೆಗಳಲ್ಲಿ ನಾನು ಇದನ್ನು ಆರಿಸಿಕೊಂಡೆ."

"ಇಷ್ಟು ಭಾರಿ ಸೀರೆ ಬೇಡವೆಂದು ನೀನು ಹೇಳಬೇಕಾಗಿತ್ತು."

"ಹೇಳಿದೆ. ಆದರೆ ಅವನು ಕೇಳಲಿಲ್ಲ. ಮುಖ ಚಿಕ್ಕದು ಮಾಡಿ ಕೊಂಡ. ಅವನನ್ನು ನೋಯಿಸುವುದು ನನಗಾಗಲಿಲ್ಲ. ಅವನಿಂದ ಭಾರಿ ಉಡುಗೊರೆ ಪಡೆದು ಅವನನ್ನು ಪ್ರಸನ್ನಗೊಳಿಸುವುದರಿಂದ ನನಗೇನು ನಷ್ಟ ಎಂದುಕೊಂಡು ಈ ಸೀರೆ ತಗೊಂಡೆ"

ಸರಳಾ ಹೆರಳನ್ನು ಬಿಚ್ಚ ತೊಡಗಿದಳು.

"ಮತ್ತೆ ರವಿಕೆ?"

ಆ ದಿನ ನಮ್ಮ ಮನೆಗೆ ಬಂದಿದ್ದಾಗ ಸ್ಟ್ಯಾಂಡಿನ ಮೇಲಿದ್ದ ನನ್ನ ರವಿಕೆಯನ್ನು ತಗೊಂಡುಹೋಗಿ ಮಕಮಲ್ಲು ಬಟ್ಟೆ ತೆಗೆದು ಅದರ ಅಳತೆಗೆ ಹೋಲಿಸಿದ ನಂತೆ ಅವನ ಮನೆಯಲ್ಲಿ ನನಗೆ ಸರಿಯಾದ ಹೊಸ ರವಿಕೆ ನೋಡಿ ನನಗೆ ಆಶ್ಚರ್ಯವಾಯಿತು. ರುಕ್ಕಮ್ಮ ಅವರಿಗೆ ಪರಿಚಯವಿದ್ದ ಸಿಂಧಿ ಹೆಂಗಸೊಬ್ಬಳಿಗೆ ಬಟ್ಟೆ ಕೊಟ್ಟು ಮುತ್ತಿನ ಕೆಲಸ ಮಾಡಿಸಿದರಂತೆ.."
ಎನ್ನುತ್ತಾ ಸರಳೆ ಬಂದು ಮತ್ತೆ ಮಂಚದಮೇಲೆ ಕುಳಿತಳು.

"ಮತ್ತೆ ನಿನ್ನ ಬೆಳಗಿನ ಉಡುಪು?"

"ಕೈ ಚೀಲದಲ್ಲಿದೆ ನಾನು ಸಿನಿಮಾಗೆ ಹೊರಟಾಗ ಹೊಸ ಸೀರೆ ಉಟ್ಟುಕೊಳ್ಳಲೇಬೇಕೆಂದು ರಾಜು, ಅತ್ತೆ ಗಲಾಟೆ ಮಾಡಿದರು. ಸರಿ, ಉಟ್ಟುಕೊಂಡೆ."

"ನಾನು ಬರುವೆನೆಂದು ಗೊತ್ತಿದ್ದರೂ ನೀನು ಸಿನಿಮಾಕ್ಕೆ ಯಾಕೆ ಹೋದೆ?"—ವಾಸು ಮುನಿಸಿನಿಂದ ಕೇಳಿದ

"ನೀವು ಬರೋದಿಲ್ಲವೇನೋಂತ ನನಗೆ ಎನಿಸಿತ್ತು."

"ಯಾಕೆ?"

"ನೀವು ಬೆಳಿಗ್ಗೆ ಮಾತನಾಡಿದ ರೀತಿ ಹಾಗಿತ್ತು"—ಸರಳಾ ಶಾಂತಳಾಗಿ ಹೇಳಿದಳು.

ವಾಸು ತಡೆತಡೆದು ಕೊನೆಯ ಪ್ರಶ್ನೆಯನ್ನು ಕೇಳಿದ

"ರಾಜಗೋಪಾಲನಿಗೆ ನಿನ್ನಲ್ಲಿ ಯಾಕೆ ಇಷ್ಟೊಂದು ಆಸಕ್ತಿ ಸರಳಾ?"

ವಾಸು ನೇರವಾಗಿ ಸರಳೆಯನ್ನು ದಿಟ್ಟಿಸಿ ನೋಡುತ್ತಿದ್ದ. ಸರಳೆ ಮುಗ್ಧತೆಯೇ ಮೂರ್ತಿವೆತ್ತವಳಂತೆ ಕುಳಿತಿದ್ದವಳು ತನ್ನ ಅಗಲವಾದ ಹರಿಣ ಗಣ್ಣುಗಳ ರೆಪ್ಪೆಗಳನ್ನು ಪಟಪಟನೆ ಬಡಿದು

"ಚಿಕ್ಕ ವಯಸ್ಸಿನಿಂದಲೂ ನಾವು ಆಡಿ ಬೆಳೆದಿದ್ದೇವೆ. ಆದುದರಿಂದ ನಾವು ಸ್ನೇಹಿತರು"—ಎಂದಳು

"ಅಷ್ಟೇನೆ?" ಎನ್ನುತ್ತಾ ವಾಸು ಸರಳೆಯ ಎರಡು ಭುಜವನ್ನೂ ಹಿಡಿದುಕೊಂಡ.

"ಅಷ್ಟೇ."

"ನಿಜವಾಗಿ?"

"ಈ ಮುತ್ತಿನಾಣೆಗೂ"—ಎನ್ನುತ್ತಾ ಸರಳೆ ಬಾಗಿದಳು. ಬಿಚ್ಚಿದ ಅವಳ ತಲೆಗೂದಲು ಬೆನ್ನ ತುಂಬ ಹರಡಿಕೊಂಡಿದ್ದ ತಲೆಗೂದಲು ಅವಳು ಬಾಗುತ್ತಲೆ ಮುಂದೆ ಬಂದು ವಾಸುವಿನ ಮುಖವನ್ನೆಲ್ಲಾ ಕವಿಯಿತು. ಪರಿಮಳಯುಕ್ತ ಕಾರ್ಮೋಡವೊಂದು ತನ್ನನ್ನು ಆವರಿಸಿದಂತಾಯಿತು ವಾಸುವಿಗೆ ಅವಳ ರವಿಕೆಯ ಕೊರಳಿಗೆ ನೇತುಬಿದ್ದ ಮುತ್ತಿನ ಮಣಿಗಳು ವಾಸುವಿನ ಕೆನ್ನೆಯನ್ನು ಒಡತಿಯ ತುಟಿಗಳೊಡನೆ ಸ್ಪರ್ಶಿಸಿ ತಾವೂ ಅವಳು ಬಿಟ್ಟುಕೊಟ್ಟಿದ್ದ ಕೆನ್ನೆಯನ್ನು—ಒತ್ತಿದವು

ಸರಳೆ ಹಿಂದೆ ಸರಿದು ಕೂದಲನ್ನು ಹಿಂದಕೆ ತಳ್ಳಿದಳು ಮತ್ತೆ ಆಕೆ ಎದ್ದು ಹೋಗಿ ಕನ್ನಡಿಯ ಮುಂದೆ ಕುಳಿತು ಸೀರೆಯ ಅಂದ ಚಂದವನ್ನು ಕನ್ನಡಿಯಲ್ಲಿ ನಿರುಕಿಸುತ್ತಿದ್ದಳು

ವಾಸು ಚೈತನ್ಯರಹಿತನಂತೆ ಹಾಸಿಗೆಗೊರಗಿದ್ದ. ಅವನ ಮನಸ್ಸು ಮಾತ್ರ ಕಲ್ಪನೆಯ ಕುದುರೆಯನ್ನೇರಿ ಎಲ್ಲಿಯೋ ಹೊರಟಿತ್ತು. ಹತ್ತು ನಿಮಿಷಗಳ ಕಾಲ ಗಂಡ ಹೆಂಡತಿಯರಿಬ್ಬರೂ ಮೌನವಾಗಿ ಕುಳಿತಿದ್ದರು.

ನಂತರ ವಾಸು ಹಾಗೆಯೇ ಹೊರಳಿ ಸರಳೆಯ ಕಡೆ ನೋಡಿದ. ಕನ್ನಡಿಯಲ್ಲಿ ತಾನು ಕಂಡ ಪ್ರತಿಬಿಂಬದಿಂದ ಆಕರ್ಷಿಸಲ್ಪಟ್ಟವನಾದರೂ 'ಮುಗಿಲ

ಮಲ್ಲಿಗೆ'ಯನ್ನು ಕೇಳುವ ಹುಚ್ಚು ಸಾಹಸಕ್ಕೆ ಹೋಗದೆ ಕುಳಿತಲ್ಲಿಂದಲೇ,

"ಸರಳಾ"—ಎಂದ.

"ಏನು?"

"ನೀನು ತುಂಬಾ ಚೆನ್ನಾಗಿ ಕಾಣಿಸುತ್ತಿದೀಯಾ."

"ಧನ್ಯವಾದಗಳು."

"ಏನೋ ತುಂಬಾ ಯೋಚನೆ ಮಾಡುತ್ತಿದ್ದ ಹಾಗಿತ್ತಲ್ಲಾ ಏನದು?" —ವಾಸು ಪ್ರೀತಿಯಿಂದ ಕೇಳಿದ.

"ಏನಿಲ್ಲ"—ಎಂದು ಸರಳೆ ಕಳ್ಳನಗೆ ನಕ್ಕಳು.

"ಹೇಳು ಪರವಾಗಿಲ್ಲ"—ವಾಸು ಒತ್ತಾಯಪಡಿಸಿದ.

"ಒಂದು ಪಕ್ಷ ನಾವು ಕಾಶಿಗೆ ಹೋಗಿದ್ದಿದ್ದರೆ ಅಲ್ಲಿಂದ ಬರುವಾಗ ನಾವು ನಮಗೆ ಇಷ್ಟವಾದದ್ದನ್ನು ಏನಾದರೂ ಬಿಟ್ಟು ಬರಬೇಕಂತೆ. ಆಗ ನಾನು ಏನನ್ನು ಬಿಡಬಹುದಿತ್ತು ಎಂದು ಆಗಿನಿಂದ ಯೋಚಿಸುತ್ತಿದ್ದೇನೆ."

ಸರಳೆಯ ಮುಖದ ಗಾಂಭೀರ್ಯ ಗಮನಿಸಿ ವಾಸು ನಕ್ಕುಬಿಟ್ಟ.

"ಸರಳಾ, ನೀನು ಹದಿನಾರಾಣೆ ಹೆಂಗಸು"—ಎಂದ.

"ನಿಮ್ಮ ಈ ಮೆಚ್ಚುಗೆಯ ನುಡಿಗೆ ಧನ್ಯವಾದಗಳು."

"ನಾನು ನಮ್ಮ ಜೀವನದ ರಸಗಳಿಗೆಗಳನ್ನು ಸವಿಯುತ್ತಿದ್ದರೆ ನೀನು ಕಾಶಿಯಲ್ಲಿ ಏನು ಬಿಡಬೇಕೆಂದು ಯೋಚನೆ ಮಾಡ್ತಿದೀಯ."

"ಹೂಂ, ನನಗೆ ಏನು ಬಿಡಬೇಕೆಂದು ಬಹಳ ಕಷ್ಟವಾಗುತ್ತಿದ್ದೋ ಏನೋ? ಯಾಕೆಂದರೆ ನನಗೆ ಹಾಗಲಕಾಯಿಯಿಂದ ಹಿಡಿದು ಹಲಸಿನ ಹಣ್ಣಿನವರೆವಿಗೆ ಸೇರುತ್ತದೆ. ಯಾವುದಾದರೂ ನನಗೆ ಸೇರದಿರುವ ಹಣ್ಣು, ತರಕಾರಿಯನ್ನು ಬಿಡೋಣವೆಂದರೆ ನನಗೆ ಪ್ರತಿಯೊಂದೂ ಸೇರುತ್ತದೆ. ಯಾವುದನ್ನು ಬಿಡುವ ಮನಸ್ಸೂ ಇಲ್ಲ. ಏನು ಮಾಡಲಿ?"—ಎನ್ನುತ್ತಾ ಸರಳೆ ವಾಸುವನ್ನು ಕೇಳಿದಳು.

ಕಾಶಿಯಲ್ಲಿ ಪುರೋಹಿತರು ಏನು ಬಿಡುತ್ತೀರಾ ಎಂಬ ಪ್ರಶ್ನೆಯನ್ನು ಕೇಳಿ ಉತ್ತರ ನಿರೀಕ್ಷಿಸುತ್ತಾ ನಿಂತಿರುವರೋ ಎಂಬಂತೆ ಸರಳಾ ಮಾತನಾಡಿದಳು.

ವಾಸು ಕುಚೋದ್ಯದ ದನಿಯಲ್ಲಿ "ಸರಳಾ, ನೀನು ಹದಿನೆಂಟಾಣೆ ಹೆಂಗಸು"—ಎಂದ.

ಸರಳ ಅವನ ಮಾತಿಗೆ ಹೆಚ್ಚು ಗಮನ ಕೊಡದೆ

"ಒಂದು ಪಕ್ಷ ನಿಮಗೆ ಇಷ್ಟವಾದ ಯಾವುದಾದರೂ ಪದಾರ್ಥ ಬಿಡಬೇಕೆಂದರೆ ನೀವೇನು ಬಿಡುತ್ತೀರಾ?"—ಎಂದಳು.

"ಹೇಳಲೇ?"

"ಹೇಳಿ"—ಸರಳೆಗೆ ಕುತೂಹಲ.

"ನಾನು ನನ್ನ ಹೆಂಡತಿಯನ್ನು ಬಿಡುತ್ತೇನೆ ಎಂದು ಪುರೋಹಿತರಿಗೆ ಹೇಳುತ್ತೇನೆ."

ಸರಳೆಗೆ ಕೋಪ ಬಂತು.

"ಬಿಡೋದೇಕ್ಕಲ್ಲಿ ಕಟ್ಟಿಕೊಂಡಿದ್ದು" ಎಂದಳವಳು.

"ಕಟ್ಟಿಕೊಳ್ಳುವುದಕ್ಕೆ ಮುಂಚೆ ನೀನು ಇಷ್ಟೊಂದು ಭಾರ ಎಂದು ನನಗೆ ತಿಳಿದಿರಲಿಲ್ಲ."

ಸರಳೆ ಮುನಿದು ಮುಖ ತಿರುಗಿಸಿದಳು.

ತನಗಾಗಿ ಗಾಜಿನ ತಟ್ಟೆಯಲ್ಲಿರಿಸಿಕೊಂಡಿದ್ದ ಬಾದಾಮಿ, ಖರ್ಜೂರ ದ್ರಾಕ್ಷಿಯನ್ನು ತಿನ್ನುವುದಿಲ್ಲವೆಂದು ಸರಳಾ ಹಠ ಮಾಡಿದಳು. ವಾಸು ಹೆಂಡತಿಯೊಡನೆ ರಾಜಿಯಾಗಬೇಕಾದರೆ ಒಂದು ಗಂಟೆ ಬೇಕಾಯಿತು.

"ನಾನು ತಮಾಷಿಗೆ ಕಣೇ ಹಾಗಂದಿದ್ದು"—ಎಂದು ವಾಸು ಕೊನೆಯಲ್ಲಿ ಕ್ಷಮಾಪಣೆ ಕೇಳಿಕೊಂಡ ಮೇಲೆ ಸರಳಾ ಶಾಂತಳಾಗಿ ಗಾಜಿನ ತಟ್ಟೆಯನ್ನು ಖಾಲಿ ಮಾಡಿದಳು.

ರಾತ್ರಿ ಸುಮಾರು ಎರಡು ಗಂಟೆಯ ವೇಳೆಗೆ ಸರಳೆಗೆ ಎಚ್ಚರವಾಯಿತು. ಪಕ್ಕದಲ್ಲಿ ವಾಸು ಶಾಂತವಾಗಿ ಮಲಗಿ ನಿದ್ರಿಸುತ್ತಿದ್ದ. ಅವನ ಸುಖವಾದ ನಿದ್ರೆಯನ್ನು ನೋಡಿ ಸರಳೆಗೆ ಮತ್ಸರ ಉಂಟಾಯಿತು. ತಾನು ಒಂದು ಮಗ್ಗುಲಿನಿಂದ ಮತ್ತೊಂದು ಮಗ್ಗುಲಾಗಬೇಕಾದರೆ ಹಾಸಿಗೆಯ ಮೇಲೆ ಕೈಯೂರಿ ಎದ್ದು ಕುಳಿತು ಬೇರೆ ಮಗ್ಗುಲಾಗಬೇಕು. ಮಲಗುವಾಗಲೂ ಧಡಕ್ಕನೆ ಮುನ್ನಿನಂತೆ ಉರುಳಿಕೊಳ್ಳುವ ಹಾಗಿಲ್ಲ. ಮೊಳಕೈಯನ್ನು ಹಾಸಿಗೆಯ ಮೇಲೆ ಅರ್ಧ ಊರಿ ನಂತರ ದಿಂಬಿನ ಮೇಲೆ ನಿಧಾನವಾಗಿ ತಲೆ ಇರಿಸಬೇಕು.

ಸಾಲದುದಕ್ಕೆ ಆ ಅಡಗಿದ್ದ ಮಹರಾಯ ಬೇರೆ. ಆಗಾಗ್ಗೆ ಸರಳೆಯನ್ನು ಗುದ್ದಿ, ಒದ್ದು ಹಿಂಸೆ ಮಾಡಿ ಎಚ್ಚರಗೊಳಿಸುತ್ತಿದ್ದ.

ಸರಳೆಗೆ ಹೇಗೆ ಕುಳಿತರೂ ಹಿಂಸೆ, ಹೇಗೆ ಮಲಗಿದರೂ ಹಿಂಸೆ. ಐದು ನಿಮಿಷದ ಮೇಲೆ ಆಧಾರವಿಲ್ಲದೆ ನಿಲ್ಲುವುದೆಂದರೆ ಅವಳಿಗೆ ಬಹಳ ಪ್ರಯಾಸದ ಕೆಲಸವಾಗಿತ್ತು.

ಇರುಳು ದೀಪದ ಮಸುಬೆಳಕಿನಲ್ಲಿ ಸರಳೆ ಮತ್ತೆ ವಾಸುವಿನ ಕಡೆ ನೋಡಿದಳು. ವಾಸು ನಿದ್ರೆಯ ಮೋಡಿಗೆ ಸಂಪೂರ್ಣ ಬಲಿಯಾಗಿದ್ದ.

ಸರಳೆಗೆ ವಾಸುವಿನ ಮೇಲೆ ಕೋಪ ಬಂತು. ಸರಳಾ ಮೆಲ್ಲನೆ 'ರೀ' —ಎಂದಳು.

ವಾಸುವಿನಿಂದ ಉತ್ತರವಿಲ್ಲ.

ಸರಳೆಗೆ ಇದ್ದಕ್ಕಿದ್ದಂತೆ ಹಸಿವಾಯಿತು ಅವಳು ಸ್ಟೂಲಿನ ಮೇಲಿರಿಸಿ ಕೊಂಡಿದ್ದ ಬಿಸ್ಕತ್ತುಗಳನ್ನು ತಿಂದು ಕೊಂಚ ನೀರನ್ನು ಕುಡಿದಳು.

ವಾಸು ಮಿಸುಕಾಡದೇ ಮಲಗಿದ್ದ.

ಸರಳ ಮತ್ತೆ "ರೀ, ನಿದ್ದೆ ಬಂತೇ?"—ಎಂದಳು:

'ಏನು?'—ಎನ್ನುತ್ತಾ ವಾಸು ಗಡಬಡಿಸಿ ಕುಳಿತ.

"ಯಾಕೋ ನಿದ್ದೇನೇ ಬರೋದಿಲ್ಲ"—ಸರಳಾ ತನ್ನ ಸಂಕಟ ಹೇಳಿ ಕೊಂಡಳು

"ಜೋಗುಳ ಹಾಡಲೇ?"

"ಸಾಕು ಹುಡುಗಾಟ"—ಎಂದಳು ಸರಳಾ.

ವಾಸು ಮತ್ತೆ ಹೊದಿಕೆ ಹೊದ್ದು ಮಲಗಿದ. ಸರಳ ಪುನಃ "ರೀ"— ಎಂದಳು.

"ಏನು?"—ಸರಳೆಯಿಂದಾಗಿ ವಾಸುವಿನ ನಿದ್ರೆಯೂ ದೂರ ವಾಗಿತ್ತು.

"ನಮ್ಮ ಮಗೂಗೆ ಏನು ಹೆಸರಿಡೋಣ?"

ಅರ್ಧ ರಾತ್ರಿಯಲ್ಲಿ ನಿದ್ರಿಸುತ್ತಿದ್ದ ಗಂಡನನ್ನು ಎಚ್ಚರಗೊಳಿಸಿ ಸರಳೆ ಕೇಳಿದ ಪ್ರಶ್ನೆಯಿದು.

"ಈಗಿಂದ ಯಾಕೆ ಯೋಚನೆ ಮಾಡೋಣ?"—ವಾಸು ಕೇಳಿದ.

"ನನ್ನ ಮಗೂ ವಿಷಯದಲ್ಲಿ ನಿಮಗೆ ಆಸಕ್ತಿಯೇ ಇಲ್ಲ" – ಸರಳೆ ಗುಡುಗಿದಳು.

"ಛೀ"—ಎಂದ ವಾಸು.

"ಹಾಗಾದರೆ ಹೇಳಿ. ನಮ್ಮ ಮಗೂಗೆ ಅಪರೂಪದ ಹೆಸರನ್ನಿಡಬೇಕು. ಅಂತಹ ಹೆಸರನ್ನು ಹಿಂದೆ ಯಾರೂ ಇಟ್ಟಿರಬಾರದು, ಮುಂದೆ ಇಡಬಾರದು ಹೇಳಿ."

"ಹೆಣ್ಣಾದರೆ ಪೂತನಿ, ಗಂಡಾದರೆ ಬಕಾಸುರ ಎಂದಿಡೋಣ."

ಸರಳೆ ಮುನಿಸಿನಿಂದ "ನಾನು ಜಾಸ್ತಿ ಊಟಮಾಡ್ತೀನಿ ಎಂದು ಹಾಗೆ ಹೇಳ್ತೀರ ಹೋಗಿ ನಿಮ್ಮನ್ನು ಮಾತನಾಡಿಸುವುದಿಲ್ಲ"—ಎಂದಳು.

ರಗ್ಗು ಹೊದೆದು ಸಿಡುಕಿನಿಂದ ಮಲಗಿದ ಹೆಂಡತಿಯನ್ನು ರಮಿಸಿ ವಾಸು ಮತ್ತೆ ಅವಳನ್ನು ಮೊದಲಿನ ಸ್ಥಿತಿಗೆ ತಂದ.

"ಹೆಸರು ತುಂಬಾ ಸುಂದರವಾಗಿರಬೇಕು. ಚಿಕ್ಕದಾಗಿರಬೇಕು. ಸಂಗೀತದಂತೆ .."

"ಬಿಡು. ಸಂಗೀತದ ವಿಷಯ ನೀನಾಡಬೇಡ"—ಎಂದ ವಾಸು.

"ಹೆಣ್ಣಾದರೆ ಏನು ಹೆಸರಿಡೋಣ ಹೇಳೀಂದ್ರೆ. ಶೈಲಾ ಎನ್ನುವ ಹೆಸರು ಚೆನ್ನಾಗಿಲ್ಲವೇ?"

"ಊಹೂಂ. ಆ ಹೆಸರು ಚೆನ್ನಾಗಿಲ್ಲ"—ವಾಸುವಿನ ಪ್ರತಿಕ್ರಿಯೆ ಆದು.

ಒಂದು ಪಕ್ಷ ಶೈಲಾ ಎನ್ನುವ ಹೆಸರು ಚೆನ್ನಾಗಿದೆಯೆಂದು ವಾಸು ಒಪ್ಪಿಕೊಂಡು ಬಿಟ್ಟಿದ್ದರೆ ಸರಳೆ ಅದನ್ನು ಒಪ್ಪುತ್ತಿರಲಿಲ್ಲವೇನೋ? ಆದರೆ ಈಗ ವಾಸು ಆ ಹೆಸರನ್ನು ಮೆಚ್ಚಿಕೊಳ್ಳದಿದ್ದರಿಂದಲೋ ಏನೋ ಸರಳೆಗೆ ಆ ಹೆಸರೇ ತುಂಬಾ ಪ್ರೀತಿಯಾಯಿತು.

"ಏನಾಗಿದೆ ಆ ಹೆಸರು?"

"ನನಗೇನೋ ಚೆನ್ನಾಗಿಲ್ಲ."

"ಅದೇ ಇರಲಿ. ನನಗೆ ಆ ಹೆಸರೇ ಇಷ್ಟ."

"ಖಂಡಿತ ಬೇಡ"

"ಆ ಹೆಸರು ಬಿಟ್ಟು ನನ್ನ ಮಗಳಿಗೆ ಬೇರೊಂದು ಹೆಸರು ಇಡುವುದಿಲ್ಲ ನಾನು. ನನಗೆ ಅಷ್ಟು ಸ್ವಾತಂತ್ರ್ಯ ಬೇಡವೇ?"—ಸರಳಾ ಹಠ ಹಿಡಿದಳು.

ವಾಸು ಆರೆಗಳಿಗೆ ಸರಳೆಯನ್ನು ದಿಟ್ಟಿಸಿ ನೋಡಿ ನಂತರ ನಸುನಕ್ಕು

"ಹಾಗೇ ಆಗಲಿ ಸರಳಾ. ಆ ಹೆಸರನ್ನೇ ನಮ್ಮ ಮಗಳಿಗೆ ಇರೋಣ. ನಾನು ಕಾಲೇಜಿನಲ್ಲಿ ಓದುವಾಗ ನನ್ನೊಡನೆ ಶೈಲ ಎನ್ನುವ ಹೆಸರಿನ ಹುಡುಗಿಯೊಬ್ಬಳಿದ್ದಳು. ಅವಳು ಎಂತಹ ಸುಂದರಿ ಎನ್ನುತ್ತೀಯಾ? ಅವಳೇ ನನ್ನ ಮೊದಲನೆಯ ಪ್ರೀತಿಯ ಹುಡುಗಿ ಎಂದು ಹೇಳಬೇಕು."

ಎರಡು ನಿಮಿಷ ಮೌನ ಕವಿಯಿತು

"ನನ್ನ ಮಗಳಿಗೆ ಆ ಹೆಸರಿಟ್ಟರೆ ಅವಳ ನೆನಪಿನಲ್ಲಿ ಇಟ್ಟಂತೆ ಆಗುತ್ತದೆ. ಅದೇ ಹೆಸರಿರಲಿ."

"ಬಿಡಿ. ಏನೂ ಬೇಡ. ನಿಮಗೆ ಆ ಹೆಸರು ಇಷ್ಟವಿಲ್ಲವೆಂದು ಮೊದಲೇ ಹೇಳಿದಿರಿ. ನಿಮ್ಮ ಇಷ್ಟಕ್ಕೆ ವಿರೋಧವಾಗಿ ಆ ಹೆಸರಿಡುವುದು ಬೇಡ."

"ಶೈಲೆಯೇ ಇರಲಿ, ಬಿಡು."

"ಅಂಥ್ಯೋ ಬೇಡಾಂದ್ರೆ."

"ಇರಲಿ. ಬಹಳ ಕಷ್ಟಪಟ್ಟು ಹೆಸರು ಹುಡುಕಿದೀಯ."

"ಬೇಡ. ನಿಮಗಿಷ್ಟವಿಲ್ಲದ ಹೆಸರು ನನ್ನ ಮಗಳಿಗೆ ಬೇಡ."

'ಶೀ ಲೀ' ಬೇಡವೇ ಬೇಡವೆಂದು ಸರಳ ಹಠ ಹಿಡಿದಳು.

ಗಂಡ, ಹೆಂಡತಿ ಯಾವ ನಿರ್ಧಾರಕ್ಕೂ ಬರಲಿಲ್ಲ. ಸರಳೆ ಹೆಸರುಗಳನ್ನು ಯೋಚಿಸುತ್ತಾ ಮಲಗಿದ್ದಳು.

ಹತ್ತು ನಿಮಿಷಗಳ ನಂತರ ವಾಸುವಿಗೆ ಹೆಸರೊಂದು ಹೊಳೆಯಿತು. ಅವನು ಉತ್ಸಾಹದಿಂದ "ಸರಳಾ"—ಎಂದ.

ಸರಳಾ ನಿದ್ದೆಯ ಲೋಕದಲ್ಲಿ ವಿಹರಿಸುತ್ತಿದ್ದಳು.

ತನ್ನ ಉತ್ಸಾಹದಲ್ಲಿ ಸರಳೆಯನ್ನು ಎಬ್ಬಿಸಲು ವಾಸು ತವಕಗೊಂಡ. ಆದರೆ ಕೂಡಲೇ ತಾಯಿ ಹೇಳಿದ ಬ್ರಹ್ಮನ ಹಣೆಬರಹದ ವಿಷಯ ನೆನಪಿಗೆ ಬಂದು ವಾಸು ಸುಮ್ಮನಾದ.

ಉಳಿದ ರಾತ್ರಿಯನ್ನು ಅವನು ನಿದ್ದೆಯಿಲ್ಲದೆ ಹೊರಳಾಡುತ್ತಾ ಕಳೆದ.

ಮಾರನೆಯ ದಿನ ವಾಸು ಸಂಜೆಯ ತಿರುಗಾಟಕ್ಕೆಂದು ಹೊರಗೆ ಹೊಟು ನಿಂತಾಗ ಸರಳೆ ಅವನ ಬಳಿಗೆ ಬಂದು

"ಮಾರ್ಕೆಟ್ಟಿಗೆ ಹೋಗ್ತೀರಾ?"—ಎಂದಳು.

"ಯಾಕೆ?"

"ನೀವು ಹೋಗ್ತೀರೇನು ಹೇಳಿ."

"ನೀನು ಹೋಗಬೇಕೆಂದರೆ ಹೋಗುತ್ತೇನೆ."

ಸರಳೆ ತುಟಿ ಕಚ್ಚುತ್ತಾ, ಸೆರಗನ್ನು ತಿರುಚುತ್ತಾ

"ನನಗೊಂದು ಸೀಸೆ ಹಿಪ್ಪೆ ಎಣ್ಣೆ ಬೇಕು" ಎಂದಳು.

"ಯಾಕೆ?"

"ಯಾಕೋ ನಿಮಗ್ಯಾಕೆ ಅದು? ಆದರೆ ಹಿಪ್ಪೆ ಎಣ್ಣೆ ಇಂಡಿಯಾ ದೇಶದ್ದು ಬೇಡ. ಅಪ್ಪಟ ಇಟಲಿ ದೇಶದ ಹಿಪ್ಪೆ ಎಣ್ಣೆ ತನ್ನಿ."

"ಯಾಕೆ? ನಿನ್ನ ಮಗ ಹಿಪ್ಪೆ ಎಣ್ಣೆ ಕುಡಿಯಬೇಕೆಂದು ಆಸೆ ಪಡುತ್ತಾನೇನು?"—ವಾಸು ಕೇಳಿದ.

"ಅಯ್ಯೋ ಅಲ್ಲಾರೀ."

"ಮತ್ತೆ?"

"ನಾನು ಕಾರಣ ಹೇಳಿದರೆ ನಗಬಾರದು"—ಸರಳೆ ವಾಸುವಿಗೆ ಎಚ್ಚರಿಕೆ ಕೊಟ್ಟಳು.

"ಇಲ್ಲ, ಹೇಳು.

"ಖಂಡಿತ ನಗಬಾರದು."

"ಇಲ್ಲ."

"ಮತ್ತೇ ಕಂಟೋನ್ಮೆಂಟ್‌ನಲ್ಲಿ ನಮ್ಮ ರಾಜು ಮನೆಯ ಹತ್ತಿರ ಮೊದಲಿಯಾರರ ಒಂದು ಕುಟುಂಬವಿದೆಯಂತೆ. ಅವರು ಗಂಡ ಹೆಂಡತಿ ಇಬ್ಬರೂ ಕಪ್ಪಂತೆ ಅವರ ಮೊದಲೆರಡು ಮಕ್ಕಳೂ ಕಪ್ಪಂತೆ. ಆದರೆ ಅವರ ಮೂರನೆಯ ಮಗು ಬೆಳ್ಳಗಿದೆಯಂತೆ. ಅವರಿಗೆ ಯಾರೋ ಹೇಳಿದರಂತೆ ಇಟಲಿ ದೇಶದ ಹಿಪ್ಪೆ ಎಣ್ಣೆ ಕುಡಿದರೆ ಮಗು ಬೆಳ್ಳಗಾಗುತ್ತದೆ ಎಂದು. ಆದುದರಿಂದ ನಾನೂ ಇನ್ನು ಮೇಲೆ ದಿನಾ ಒಂದು ಚಮಚ ಹಿಪ್ಪೆ ಎಣ್ಣೆ ಕುಡಿಯೋಣ ಅಂದುಕೊಂಡಿದ್ದೀನಿ."

ವಾಸುವಿಗೆ ನಗು ಉಕ್ಕಿ ಬಂತು. ಅವನು ಬಹಳ ಕಷ್ಟದಿಂದ ನಗುವನ್ನು ಅಡಗಿಸಿಕೊಂಡು

"ನಿನಗೆ ಹಾಗೆಂದು ಯಾರು ಹೇಳಿದರು?"—ಎಂದ.

"ಮೊದಲಿಯಾರರ ಹೆಂಡತಿ ಹೇಳಿದರಂತೆ—ರುಕ್ಕಮ್ಮನ ಹತ್ತಿರ."

"ಸರಿ" ಎಂದ ವಾಸು.

"ಕುಡೀಲಾ?"

"ಹೂಂ."

ಅಂದಿನಿಂದ ಸರಳೆ ಪ್ರತಿ ರಾತ್ರಿ ಮಲಗುವಾಗ ಒಂದು ಚಮಚ ಹಿಪ್ಪೆ ಎಣ್ಣೆ ಕುಡಿಯಲು ಮೊದಲು ಮಾಡಿದಳು.

* * *

ಅತ್ತೆ ಸರಳೆಯ ಸೀಮಂತಕ್ಕೆ ಮುಹೂರ್ತವಿಡಿಸಿದರು. ಸರಳೆಯ ಚಿಕ್ಕಪ್ಪ ರಂಗಸ್ವಾಮಿಯವರಿಗೆ ಸಾಲ್ಲಾ ತಾಲ್ಲೂಕಿಗೆ ವರ್ಗವಾಗಿದ್ದುದರಿಂದ ಪಂಕಜಮ್ಮ ಸರಳೆಯನ್ನು ತಮ್ಮಲ್ಲಿಗೆ ಕರೆಸಿಕೊಳ್ಳಲು ಭಯಪಡುತ್ತಿದ್ದರು.

ಆದರೆ ಸರಳೆಗೆ ಬಳೆ ತೊಡಿಸುವುದೆಂದಮೇಲೆ ಅವರು ಬಾರದಿದ್ದರಾಗುತ್ತದೆಯೇ?

ವಾಸುವಿನ ಮನೆಗೆ ಮದುವೆ ಮನೆಯ ಕಳೆಬಂದುಬಿಟ್ಟಿತು. ಮನೆಯ ಮುಂದೆ ತೋರಣ, ಚಪ್ಪರ, ಓಲಗ ಮಾತ್ರವಿರಲಿಲ್ಲ ಅಷ್ಟೆ.

ಹದಿನೈದು ದಿನಗಳಿಂದಲೂ ಮುಂಚಿತವಾಗಿ ಇಬ್ಬರು ಹೆಂಗಸರು ಹುರುಕಲು, ಚಕ್ಕುಲಿಹಿಟ್ಟು, ಪುರಿಉಂಡೆ ಇತ್ಯಾದಿ ಬಾಗಿನದ ಸಾಮಾನುಗಳನ್ನು ತಯಾರು ಮಾಡುತ್ತಿದ್ದರು.

ಸರಳೆಯ ಚಿಕ್ಕಮ್ಮ ಊ ಹದಿನೈದು ದಿನ ಮುಂಚಿತವಾಗಿ ಉತ್ಸವದಲ್ಲಿ ಭಾಗವಹಿಸಲು ಬಂದಿದ್ದರು. ರಂಗಮ್ಮ. ಪಂಕಜಮ್ಮನ ನೇತೃತ್ವದಲ್ಲಿ ಉತ್ಸವದ ತಯಾರಿ ನಡೆಯಿತು ಸರಳೆ ಎಲ್ಲರ ಗಮನದ ಕೇಂದ್ರ ವ್ಯಕ್ತಿಯಾಗಿ ಮನ್ನಣೆ ಪಡೆದಳು.

ಸೀಮಂತ ಇನ್ನೂ ನಾಲ್ಕು ದಿನಗಳಿವೆ ಎನ್ನುವಾಗ ಪಂಕಜಮ್ಮ ಸರಳೆಗೆ

"ಸರಳಾ ಪೇಟೆಗೆ ಹೋಗಿ ಬರೋಣ"—ಎಂದರು.

"ಯಾಕೆ?"

"ನಿನಗೊಂದು ಸೀರೆ ತರಬೇಕು."

"ಅಯ್ಯೋ ಬೇಡ ಚಿಕ್ಕಮ್ಮ"

"ಹಾಗೆಲ್ಲಾ ಅನ್ನಬಾರದು. ನಡಿ, ಹೋಗೋಣ."

ಅರ್ಧಗಂಟೆಯಲ್ಲಿ ಸರಳೆ ಹೊರಡುವ ಸಿದ್ಧತೆ ನಡೆಸಿದಳು. ಅರುಂಧತಿ ತನ್ನ ಮನೆಯ ಕಾರನ್ನು ತಂದು ವಾಸುವಿನ ಮನೆಯಮುಂದೆ ನಿಲ್ಲಿಸಿದಳು.

ವಾಸು,ಅರುಂಧತಿ,ಪಂಕಜಮ್ಮ ಮೂವರೂ ಸರಳೆಗಾಗಿ ಕಾಯುತ್ತಾ ಕಾರಿನಲ್ಲಿ ಕುಳಿತಿದ್ದರು. ಆದರೆ ಎಷ್ಟು ಹೊತ್ತಾದರೂ ಸರಳೆ ಬರಲಿಲ್ಲ.

ವಾಸು ಅಸಹನೆಯಿಂದ ಮನೆಯೊಳಗೆ ಹೋದ. ಅಲ್ಲಿ ಸರಳ ಮೇಜಿನ ಮುಂದೆ ಪುಸ್ತಕ, ಪೆನ್ಸಿಲ್ಲು ಹಿಡಿದು ಕುಳಿತಿದ್ದಳು.

"ನೀನು ಬರಲಿ ಎಂದು ನಾವು ಕಾರಿನಲ್ಲಿ ಕಾಯುತ್ತಿದ್ದರೆ ನೀನುಇಲ್ಲಿ ಕತೆ ಬರೀತಿದೀಯಾ ಪದ್ಮಜಾ."

ಸರಳೆ ಉತ್ತರಿಸಲಿಲ್ಲ. ಅವಳು ಏನನ್ನೋ ಯೋಚಿಸುತ್ತಿದ್ದಳು.

"ಪದ್ಮಜಾ"— ವಾಸು ಮತ್ತೆ ಕೂಗಿದ.

ಸರಳೆ ಮಾತನಾಡಲಿಲ್ಲ. ವಾಸು ಅವಳ ಹತ್ತಿರ ಹೋಗಿ ಭುಜ ಅಲುಗಿಸಿ

"ಪದ್ಮಜೆಗೆ ಸ್ಫೂರ್ತಿ ಬಂದ ಹಾಗಿದೆ" ಎಂದ

"ಏನೆಂದಿರಿ?"—ಸರಳೆ ಕೊನೆಗೂ ಎಚ್ಚರಗೊಂಡಳು.

"ಪದ್ಮಜಾ ಎಂದೆ"

"ಯಾರು ಅವಳು ಪದ್ಮಜೆ"—ಎಂದು ಸರಳೆ ಕಣ್ಣು ಕೆಂಪು ಮಾಡುವಷ್ಟರಲ್ಲಿ ಅವಳಿಗೆ ತನ್ನ ತಪ್ಪಿನ ಅರಿವಾಗಿ ನಾಲಿಗೆ ಕಚ್ಚಿಕೊಂಡಳು

ವಾಸು ಮನಸಾರೆ ನಕ್ಕುಬಿಟ್ಟ

"ಪದ್ಮಜಾ ಮರೆತು ಹೋದಳೇ?". ವಾಸು ಕೇಳಿದ.

"ಹೂಂ. ಹೆಚ್ಚು ಕಡಿಮೆ ಮರೆತು ಹೋಗಿದ್ದಾಳೆ."

"ನೀನು ಕತೆ ಬರೀತಿದೀಯಾ?" ಎಂದು ಕೇಳಿದ

"ಇಲ್ಲವಲ್ಲಾ"—ಸರಳೆ ಅಚ್ಚರಿಸಿದ್ದಳು.

"ನಾವೆಲ್ಲಾ ನಿನಗೆ ಕಾಣುತ್ತಿದ್ದ ಹಾಗೆ ನೀನೇನು ಬರೆಯುತ್ತಿದೀಯಾ?" —ವಾಸು ಕೇಳಿದ.

ಸರಳೆ ಮಾತನಾಡದೇ ಕಾಗದದ ಹಾಳೆಯನ್ನು ವಾಸುವಿನ ಕೈಗೆ ಕೊಟ್ಟಳು.

ವಾಸು ಓದಿಕೊಂಡ—ಮನಸ್ಸಿನಲ್ಲಿ.

'ಇನ್ನೊಂದು ಕ್ಷಣಕ್ಕೆ ಮರೆಯಾಗಲಿರುವ ನೀಲಗಪ್ಪು ಮೋಡದ ಬಣ್ಣದ ಒಡಲಿಗೆ, ಸೂರ್ಯ ಪಶ್ಚಿಮದಲ್ಲಿ ಅರ್ಧ ಮುಳುಗಿರುವಾಗ ಆಕಾಶದಲ್ಲಿ ಹರಡುವ ಅರುಣರಾಗದ ಅಂಚಿದ್ದು, ಅಮಾವಾಸ್ಯೆಯ ರಾತ್ರಿಯಲ್ಲಿ ಆಗಸದ ತುಂಬ ಹರಡಿರುವ ಕಿರುತಾರೆಗಳಂತೆ ಒಡಲಿನ ತುಂಬಾ ನಕ್ಷತ್ರಗಳಿರುವ ರೇಶಿಮೆಯ ಸೀರೆ...."ವಾಸುವಿಗೆ ಯಾವುದೂ ಅರ್ಥವಾಗಲಿಲ್ಲ.

"ಸರಳಾ, ಇದು ಕವಿತೆಯೇನೆ?"

"ಅಲ್ಲಾಂದ್ರೆ, ನಾನು ಈ ಕಾಗದದಲ್ಲಿ ವರ್ಣಿಸಿದೀನಲ್ಲಾ ಅಂತಹ ಸೀರೆ ತಗೋಳ್ಳೋಣಾಂತ ಮಾಡಿದೀನಿ ಅಂಗಡಿಯವನಿಗೆ ಈ ಕಾಗದ ಕೊಟ್ಟು...."

"ಈ ಭಾಷೆ ಅವನಿಗೆ ಅರ್ಥವಾಗುವುದಿಲ್ಲ. ಬೇಡ ಸರಳಾ."

"ಎಲ್ಲಾ ಆಗುತ್ತದೆ."

ಗಂಡ, ಹೆಂಡತಿ ಮಾತಿನಲ್ಲಿ ಮುಳುಗಿದ್ದಾಗ ಅವರನ್ನು ಎಚ್ಚರಗೊಳಿಸಲು ಅರುಂಧತಿ ರೂಮಿನ ಬಾಗಿಲಿನಲ್ಲಿ ಪ್ರತ್ಯಕ್ಷಳಾದಳು.

"ಗಂಡ, ಹೆಂಡತಿ ಏಕಾಂತವಾಗಿದ್ದಾಗ ಕೂತುಬಿಟ್ಟರೇನೋ ಹೋಗಿ

ನೋಡಿಕೊಂಡು ಬಾಂತ ಪಂಕಜಮ್ಮ ಕಳಿಸಿದರು"—ಎಂದಳು ಅರುಂಧತಿ ಬಾಗಿಲಿನಲ್ಲಿ ನಿಂತು.

"ಕೊಂಚ ಒಳಗೆ ಬಾ ಅರುಂಧತಿ."

"ಏನು?"—ಎನ್ನುತ್ತಾ ಆವಳು ಒಳಗೆ ಬಂದಳು.

ವಾಸು ಮಾತನಾಡದೆ ಕೈಲಿ ಹಿಡಿದಿದ್ದ ಕಾಗದವನ್ನು ಅರುಂಧತಿಯ ಕೈಗೆ ಕೊಟ್ಟ. ಅರುಂಧತಿ ಸೀರೆಯ ವರ್ಣನೆ ಓದಿ ವ್ಯಾಖ್ಯಾನ ಮಾಡ ತೊಡಗಿದಳು.

"ಸೀರೆಯ ಬಣ್ಣ ನೀಲಗಪ್ಪು. ಸೂರ್ಯ ಅರ್ಧ ಮುಳುಗಿದಾಗಿನ ಕೆಂಪು ಎಂದರೆ ನಸುಗೆಂಪು ಅಥವಾ ಕಿತ್ತಲೇ ಕೆಂಪು...."

"ಕಿತ್ತಲೇ ಕೆಂಪಲ್ಲ. ಚಂದ್ರಗೆಂಪು"—ಎಂದಳು ಸರಳಾ.

ಅರುಂಧತಿ ಹೆಚ್ಚು ಚರ್ಚೆ ಮಾಡದೇ "ಆಗಲಿ, ನೀಲಗಪ್ಪಿನ ಸೀರೆಗೆ ಚಂದ್ರಗೆಂಪಿನಂಚು ಇದ್ದು ಒಡಲಿನಲ್ಲಿ ಜರಿಯ ನಕ್ಷತ್ರಗಳಿರುವ ಸೀರೆ...."

"ಹಾಂ. ಈಗ ಅರುಂಧತಿ ಭಾವಾನುವಾದ ಮಾಡಿದ್ದು ಸರಿಯಾ ಯಿತೇ ಸರಳಾ?"—ವಾಸು ಕೇಳಿದ.

"ಚಿಂತೆಯಿಲ್ಲ. ಪಾಸಾಗುವಷ್ಟು ಅಂಕ ಪಡೆದಿದ್ದಾರೆ"—ಸರಳೆ ಎಂದಳು.

" ಸೆರಗು ಎಂತಹದಿರಬೇಕು? "

ಅರುಂಧತಿ ಅವರ ಮುಂದೆ ಮತ್ತೊಂದು ಸಮಸ್ಯೆಯನ್ನು ತಂದಿರಿಸಿ ದಳು.

ಅಷ್ಟರಲ್ಲಿ ಪಂಕಜಮ್ಮ ರೂಮಿನೊಳಗೆ ನುಗ್ಗಿ ಬಂದು

"ಏನ್ಮಾಡ್ತಿದೀರಿ ಇಲ್ಲಿ ನೀವೆಲ್ಲಾ ? ನನಗೆ ಅಲ್ಲಿ ಕಾದು ಕಾದು ಸಾಕಾಯಿತು"—ಎಂದರು.

ಅರುಂಧತಿ ತನ್ನಕೈಲಿದ್ದ ಕಾಗದವನ್ನು ಪಂಕಜಮ್ಮನ ಕೈಗೆಕೊಟ್ಟಳು. ಆಕೆ ವರ್ಣನೆ ಓದಿ ನಸುನಕ್ಕು

'ಏಳು ಸರಳಾ, ಈ ಸಲದ ಸೀರೆಯ ಆಯ್ಕೆ ನಿನ್ನದಲ್ಲ, ನನ್ನದು. ಮುಂದೆ ಮಾತೇ ಇಲ್ಲ. ವಾಸು ತೆಗೆದು ಕೊಡುವ ಸೀರೆಯನ್ನು ನೀನೇ ಆರಿ ಸಿಕೋ"—ಎಂದವರೇ ಒಂದು ನಿಮಿಷದಲ್ಲಿ ಸರಳೆಯನ್ನು ಹೊರಡಿಸಿದರು.

ಸರಳಾ ಎದಿರು ಮಾತನಾಡದೇ ಹೊರಟು ನಿಂತಳು.

ಅರುಂಧತಿಯ ಪಕ್ಕದಲ್ಲಿ ವಾಸು ಕುಳಿತ. ಸರಳೆ, ಪಂಕಜಮ್ಮ ಹಿಂದಿನ

ಸೀಟಿನಲ್ಲಿ ಕುಳಿತರು. ವಾಸು ಹಿಂತಿರುಗಿ ಸರಳೆಯ ಕಡೆ ನೋಡಿ ಚಿಕ್ಕಮ್ಮನಿಗೆ ಹೇಳಿದ

"ಚಿಕ್ಕಮ್ಮಾ, ಇಷ್ಟು ದಿನ ನೀವು ಸರಳೆಯನ್ನು ಹೇಗೆ ಸಾಕಿದಿರಿ ಎಂದು ನನಗೆ ತಿಳಿದಿರಲಿಲ್ಲ. ಇವತ್ತು ತಿಳಿಯಿತು."

"ಹೇಗೆ ಸಾಕಿದೆ?"—ಚಿಕ್ಕಮ್ಮ ಕೇಳಿದರು.

"ಗಾಡಿಗೆ ಅವಳೇ ಸ್ವತಃ ಸಾರಥಿಯಾದರೆ ಅನಾಹುತವಾಗುತ್ತದೆ. ನಾವು ಸಾರಥಿಯಾಗಿ ಲಗಾಮು ನಮ್ಮ ಕೈಲಿರಬೇಕು....ಆಗಲೇ ಗಾಡಿಯ ಓಟ ಸುಗಮ."

"ಸರಿ. ಹಾಗೆಂದು ಈಗ ಅರುಂಧತಿಯ ಕೈಯಿಂದ ಸ್ಟೀರಿಂಗ್ ವೀಲ್ ತೆಗೆದುಕೊಂಡು ಬಿಡಬೇಡಿ ಮಹರಾಯರೇ"—ಎಂದು ಸರಳಾ ಗಂಡನನ್ನು ರೇಗಿಸಿದಳು.

"ಅರುಂಧತಿ ಸರಳೆಯಲ್ಲ. ಅರುಂಧತಿಯ ಕೈಲಿ ಲಗಾಮಿದ್ದರೂ ಏನೂ ಭಯವಿಲ್ಲ"....ಎಂದ ವಾಸು.

ಸರಳೆಯ ಮುಖ ಕೋಪದಿಂದ ಕೆಂಪಾಯಿತು. ವಾಸುವಿಗೆ ಮತ್ತೆ ಮತ್ತೆ ಅವಳ ಕೆಂಪು ಮುಖ ನೋಡುವ ಆಸೆಯಾಯಿತು. ಆದರೆ ಅರುಂಧತಿ, ಪಂಕಜಮ್ಮ ಏನಾದರೂ ತಿಳಿದುಕೊಂಡಾರೆಂದು ಅವನು ಸುಮ್ಮನಾದ.

ಪಂಕಜಮ್ಮ ಸರಳೆಯ ಮುಖ ನೋಡಿ ನಕ್ಕು "ಈ ಸಮಯದಲ್ಲಿ ಹಸಿರು ಸೀರೆಯನ್ನೇ ತರಬೇಕೆಂಬ ನಿಯಮವಿದೆ. ಆದುದರಿಂದ ನಾನು ಹಸಿರು ಸೀರೆ ತರುತ್ತೇನೆ. ನೀನು ವರ್ಣಿಸಿರುವಂತಹ ಸೀರೆಯನ್ನು ವಾಸುವಿನ ಹತ್ತಿರ ತೆಗೆಸಿಕೋ"....ಎಂದರು.

ವಾಸು "ತಥಾಸ್ತು"....ಎಂದ.

ಸರಳೆಯನ್ನು ಅರುಂಧತಿಯಲ್ಲ ಎಂದು ಹೇಳಿ ಕೀಟಲೆ ಮಾಡಿದ್ದುದರಿಂದ ವಾಸು ತಾನು ಮತ್ತೂ ಹೆಚ್ಚಿನ ಬೆಲೆಯ ಸೀರೆ ತರಬೇಕಾದೀತು ಎಂದುಕೊಂಡ.

ನಗರದ ಪ್ರಮುಖ ಜವಳಿ ಅಂಗಡಿಯೊಂದರ ಮುಂದೆ ಕಾರು ನಿಂತಿತು.

ಸೀರೆಗಳ ಆಯ್ಕೆ ನಡೆಯಿತು....ನಡೆಯಿತು....ನಡೆಯಿತು. ಸರಳೆಗೆ ಒಪ್ಪಿಗೆಯಾದ ಸೀರೆ ಪಂಕಜಮ್ಮನಿಗೆ ಒಪ್ಪಿಗೆಯಿಲ್ಲ. ಇಬ್ಬರಿಗೂ ಒಪ್ಪಿಗೆಯಾದುದು ಅರುಂಧತಿಗೆ ಒಪ್ಪಿಗೆಯಿಲ್ಲ. ಮೂವರಿಗೂ ಒಪ್ಪಿಗೆಯಾದ ಸೀರೆ

ಕೊಂಚ ಡ್ಯಾಮೇಜು ಆಗಿರೋಣ.

ವಾಸು ತಲೆಯ ಮೇಲೆ ಕೈಹೊತ್ತು ಒಂದು ಕುರ್ಚಿಯ ಮೇಲೆ ನಿಟ್ಟುಸಿರು ಬಿಡುತ್ತಾ ಕುಳಿತುಬಿಟ್ಟ. ಇನ್ನು ಮುಂದೆ ಎಂದೆಂದಿಗೂ ಹೆಂಗಸರೊಡನೆ ಸೀರೆ ಅಂಗಡಿಗೆ ಹೋಗುವುದಿಲ್ಲವೆಂದು ಶಪಥ ಮಾಡಿದ ತನ್ನ ಮನಸ್ಸಿನೊಳಗೆ.

ಹೆಂಗಸರೊಡನೆ ಜವಳಿ ಅಂಗಡಿಗೆ ಬಂದುದರಿಂದ ವಾಸುವಿಗಾದ ಪ್ರಯೋಜನವೇನೆಂದರೆ ಕೆಲವು ಹೊಸ ಪದಗಳ ಪರಿಚಯ ಅವನಿಗಾಯಿತು

"ಈ ಸೀರೆ ಬಹಳ ಡಬ್ಬ."

"ಇದರ ಸೆರಗು ತುಂಬಾ ಧಡೂತಿಯಾಗಿದೆ."

"ಅದರ ಅಂಚು ತುಂಬಾ ಸಾದಾ ಆಯಿತು."

"ಈ ಸೀರೆಗೆ ಆ ಸೀರೆಯ ಅಂಚು, ಹಾಗೂ ಮತ್ತೊಂದು ಸೀರೆಯ ಸೆರಗು, ಇನ್ನೊಂದು ಸೀರೆಯ ಒಡಲು ಇದ್ದಿದ್ದರೆ ಚೆನ್ನಾಗಿತ್ತು."

"ಕಂಜೀವರಂ, ಧರ್ಮಾವರಂ, ಮಾಯಾವರಂ, ಸಾಫ್ಟ್‌ಸಿಲ್ಕ್, ಕೈಮಗ್ಗ, ಬಿನ್ನಿ, ಮೈಸೂರುಸಿಲ್ಕ್, ಷಿಫಾನ್, ಡೋರಿಯ...."

ವಾಸು ಕ್ರಾಪಿನೊಳಗೆ ಬೆರಳಾಡಿಸುತ್ತಾ ಕುಳಿತ. ಅಂಗಡಿಯಲ್ಲಿದ್ದ ಹಲವು ನೂರು ಕ್ಯಾಂಡಲಿನ ಬಲ್ಬುಗಳು ವಾಸುವಿನ ಹಣೆಯ ಮೇಲೆ ಬೆವರಿನ ಹನಿಗಳನ್ನು ಮೂಡಿಸುತ್ತಿದ್ದವು. ವಾಸು ಹತಾಶನಾಗಿ ಕೈ ಸೊಸೆಯುತ್ತಿದ್ದ.

ಕೊನೆಗೆ ಸರಳಾ ಸೀರೆಯೊಂದನ್ನು ಹಿಡಿದು ವಾಸುವಿನ ಬಳಿಗೆ ಬಂದಳು.

"ಈ ಸೀರೆ ನೋಡಿ ಚೆನ್ನಾಗಿದೆಯೇ?"

ವಾಸು ಕಣ್ಣರಳಿಸಿ ಸೀರೆಯನ್ನು ನೋಡಿದ.

ಅದೊಂದು ಕಿಲುಬು ಹಸುರಿನ ಸೀರೆಯೆಂದು ವಾಸುವಿಗೆನಿಸಿತು. ಆದರೆ ಹಾಗೆಂದು ಬಾಯಿಯಲ್ಲಿ ಆಡಿ ತೋರಿಸುವ ಧೈರ್ಯ ಅವನಿಗೆ ಬರಲಿಲ್ಲ. ಹಾಗೆ ಅವನು ಹೇಳಿದರೆ ಮತ್ತೆ ಸೀರೆಯ ಆಯ್ಕೆಗೆ ಮೊದಲಾದರೆ ಅವನ ಗತಿಯೇನು?

ವಾಸು ಈ ವಿಷಯಗಳಲ್ಲಿ ಬಹಳ ಜಾಣ.

"ಚೆನ್ನಾಗಿದೆ"....ಎಂದು ತಲೆದೂಗಿದ ವಾಸು.

ವಾಸುವಿನ ರುಜು ಬಿದ್ದಮೇಲೆ ಪಂಕಜಮ್ಮ ಸೀರೆಗೆ ಶಕ್ಯ ಖಣ

ಯೊಂದನ್ನು ಆಯ್ದು, ಹಣ ಕೊಟ್ಟು ರಶೀತಿ ಪಡೆದರು.

"ವಾಸೂ, ಇನ್ನು ಸರಳೆ ವರ್ಣಿಸಿರುವ ಸೀರೆ ಬೇಕಾದರೆ ತಗೋಪ್ಪ" —ಎಂದರು ಪಂಕಜಮ್ಮ.

"ಒಂದು ದಿವಸಕ್ಕೆ ನನಗೆ ಇಷ್ಟು ಅನುಭವ ಸಾಕು. ಇದನ್ನು ಜೀರ್ಣಿಸಿಕೊಂಡು ಮತ್ತೊಂದು ದಿನ ಇಲ್ಲಿಗೆ ಸರಳೆಯೊಡನೆ ಬರುತ್ತೇನೆ"—ಎಂದ ವಾಸು.

"ಪಾಪ ! ತುಂಬಾ ಕಷ್ಟ ನಿಮಗೆ" ಸರಳೆ ಮೂದಲಿಸಿದಳು.

"ತಲೆ ದಿಮ್ ಎನ್ನುತ್ತಿದೆ" ಎಂದ ವಾಸು.

ಅಲ್ಲಿಂದ ಎಲ್ಲರೂ ಮಾರ್ಕೆಟ್ಟಿಗೆ ಹೊರಟರು. ಕೈ ಚೀಲಗಳನ್ನು— ಸೀರೆ ಕೊಳ್ಳುವ ಸಂಭ್ರಮದಲ್ಲಿ ಎಲ್ಲರೂ ಮರೆತು ಬಂದಿದ್ದರು. ಹೀಗಾಗಿ ಮೊದಲು ಮಾರ್ಕೆಟ್ಟಿನಲ್ಲಿ ಬಿದಿರಿನ ಕುಕ್ಕೆಯೊಂದನ್ನು ಪಂಕಜಮ್ಮ ವ್ಯಾಪಾರ ಮಾಡಿದರು.

ಅಲ್ಲಿಂದ ಎಲ್ಲರೂ ತರಕಾರಿ ಅಂಗಡಿಗಳ ಬಳಿಗೆ ಬಂದರು. ಸರಳಾ ಕೈಲಿ ಕುಕ್ಕೆ ಹಿಡಿದು ನಿಂತಿದ್ದಳು. ಪಂಕಜಮ್ಮ ಹುರುಳೀಕಾಯಿ ವ್ಯಾಪಾರ ಮಾಡುತ್ತಿದ್ದರು.

ಪಂಕಜಮ್ಮನ ಗೆಳತಿಯೊಬ್ಬರು ಆಕೆಯನ್ನು ನೋಡಿ ನಕ್ಕು ಹತ್ತಿರ ಬಂದು ಮಾತನಾಡಿಸಿದರು.

"ಯಾವಾಗ ಬಂದಿರಿ ಇಲ್ಲಿಗೆ?"

"ಸ್ವಲ್ಪ ದಿನಗಳಾದವು."

ಆಕೆ ಸರಳೆಯ ಕಡೆ ನೋಡಿ "ಸರಳಾ ಅಲ್ವೇ ? ಹುಷಾರಾಗಿದೀಯಾಮ್ಮಾ ?"—ಎಂದರು.

"ಹೂಂ."

"ಕುಕ್ಕೆ ಕದ್ದಿರುವ ಹಾಗಿದೆ."

ಸರಳೆ ಕೈಲಿ ಹಿಡಿದಿದ್ದ ಕುಕ್ಕೆಯನ್ನು ತಿರುಗಿಸುತ್ತಾ ಹೇಳಿದಳು

"ಇಲ್ಲರೀ. ಈಗ ಕೊಂಡುಕೊಂಡೆವು."

"ಸರಿ. ಆದರೆ ಕುಕ್ಕೆ ಕದ್ದಿರುವ ಹಾಗಿದೆ."

"ಖಂಡಿತ ಇಲ್ಲರಿ. ಎಂಟಾಣೆ ಒಂದು ಕುಕ್ಕೆಗೆ—ಬೇಕಾದರೆ ನಮ್ಮ ಚಿಕ್ಕಮ್ಮನ್ನ ಕೇಳಿ."

ಸರಳೆಯ ಮಾತು ಮುಗಿಯುವಷ್ಟರಲ್ಲಿ ಪಂಕಜಮ್ಮ, ಅವರ ಗೆಳತಿ

ಜೋರಾಗಿ ನಗತೊಡಗಿದರು. ಸರಳೆ, ಅರುಂಧತಿ, ವಾಸು ಯಾವುದೂ ತಿಳಿಯದೆ ಬೆಪ್ಪಾಗಿ ನಿಂತರು.

ನಕ್ಕು ಸಾಕಾದ ಮೇಲೆ ಪಂಕಜಮ್ಮ ಹೇಳಿದರು

“ಸರಳಾ, ಕುಕ್ಕೆಕದ್ದಿರೋದು ಎಂದರೆ ಅಕ್ಷರಶಃ ಕುಕ್ಕೆ ಕದ್ದಿರುವುದು ಎಂದರ್ಥವಲ್ಲ, ಅದರ ಅರ್ಥ ಬೇರೆ.”

“ಏನು ಹಾಗಂದರೆ?”—ಅರುಂಧತಿ ಕೇಳಿದಳು.

“ಅಂದರೆ....ಅಂದರೆ ನೇರವಾಗಿ ನೀನು ತಾಯಿಯಾಗ್ತೀಯಾ ಎಂದು ಕೇಳುವ ಬದಲು ಹೀಗೆ ಬಳಸಾಗಿ ‘ಕುಕ್ಕೆ ಕದ್ದಿದೀಯಾ’ ಎಂದು ಕೇಳುವ ಸಂಪ್ರದಾಯವಿದೆ.”

ಪಂಕಜಮ್ಮನ ವಿವರಣೆ ಕೇಳಿದಮೇಲೆ ಸರಳೆಗೂ ನಗು ಬಂತು.

“ದಿನವಾಯಿತೇ?”

ಸರಳೆ ಮೋರೆ ತಿರುಗಿಸಿ ಎತ್ತಲೋ ನೋಡುತ್ತಾ ನಿಂತಳು.

“ಇನ್ನೂ ಇಲ್ಲಮ್ಮ. ನಾಳೆಗೆ ಆರು ತುಂಬಿ ಏಳಕ್ಕೆ ಬೀಳುತ್ತದೆ”—ಪಂಕಜಮ್ಮ ಹೇಳಿದರು.

ಆಕೆ ಸ್ವಲ್ಪ ಹೊತ್ತು ಮಾತನಾಡುತ್ತಾ ನಿಂತಿದ್ದು ನಂತರ ಹೊರಟು ಹೋದರು.

ವ್ಯಾಪಾರವೆಲ್ಲ ಮುಗಿದು ಕಾರಿನೊಳಗೆ ಕುಳಿತ ಮೇಲೆ ಸರಳೆ ಪಂಕಜಮ್ಮನ ಗೆಳತಿಯ ಮೇಲೆ ಸಿಡುಗುಟ್ಟಿದಳು.

“ಅದೇನು ದಿನವಾಯಿತೇ ಎಂದು ಕೇಳ್ತಾರೆ? ಅಷ್ಟೂ ಆಕೆಗೆ ಗೊತ್ತಾಗೋದಿಲ್ಲವೇ ? ನನ್ನ ನೋಡಿದರೆ ದಿನವಾದವರ ಹಾಗೆ ಕಾಣಿಸುತ್ತೀನೆಯೇ ? ಥೂ ಏನು ಹೆಂಗಸರೋಪ್ಪ....”

“ಹಾಗೆಂದು ಇನ್ನೊಂದು ಸಲ ಹೇಳು ಸರಳಾ”—ವಾಸು ಕೇಳಿಕೊಂಡ

“ಏನೆಂದು ಹೇಳಬೇಕು?”

“ಥೂ ಹಾಳು ಹೆಂಗಸರೊಂತ....”

“ಹೋಗಿ ಹೋಗಿ”—ಎಂದಳು ಸರಳಾ.

ಎಲ್ಲರೂ ಮನೆಗೆ ಬರುವಷ್ಟರಲ್ಲಿ ಊರಿನಿಂದ ತಮ್ಮಯ್ಯ, ರಂಗಸ್ವಾಮಿಯವರು ಬಂದಿದ್ದರು. ತಮ್ಮಯ್ಯನವರು ಬರುವಾಗ್ಗೆ ಹಳ್ಳಿಯಿಂದ ಕೆಲಸಕ್ಕೆ ಜೊತೆಗಿರಲೆಂದು ಮತ್ತೊಬ್ಬಾಕೆಯನ್ನು ಕರೆದುಕೊಂಡು ಬಂದಿದ್ದರು. ಆಕೆ ಸರಳೆಯನ್ನು ನೋಡಿ

"ದಿನವಾಯಿತೇ?"—ಎಂದರು.

ಸರಳೆಗೆ ಅವರನ್ನು ಹಿಡಿದು ಹೊಡೆದುಬಿಡುವಷ್ಟು ಕೋಪ ಬಂತು.

ರಂಗಮ್ಮನವರಿಗೆ ಆಕೆಯ ಮಾತು ಹಿಡಿಸಲಿಲ್ಲ. ಆಕೆ ಕೊಂಚ ಅಸಮಾಧಾನದಿಂದ "ಇಲ್ಲ. ಎಲ್ಲಿ ಬಂತು? ನಾಳೆಗೆ ಆರು ತುಂಬಿ ಏಳು"—ಎಂದರು.

ಸೊಂಪಾಗಿ ಬೆಳೆಯುತ್ತಿರುವ ತಮ್ಮ ಮೊಮ್ಮಗನಿಗೆ ಆಕೆ ಕಣ್ಣು ಹಾಕಿದಳೆಂದು ರಂಗಮ್ಮನ ಜೀವ ತಳಮಳಿಸಿತು. ರಾತ್ರಿ ಎಲ್ಲರೂ ಮಲಗಿದ ಮೇಲೆ ರಂಗಮ್ಮ ಸರಳೆಯನ್ನು ಗುಟ್ಟಾಗಿ ಒಳಗೆ ಕರೆದು ದೃಷ್ಟಿ ನೀವಳಿಸಿ, ಲಟಿಕೆ ಮುರಿದರು.

ಸೀಮಂತದ ಸಲುವಾಗಿ ಹುರುಕಲು ತಯಾರಾದ ಕೂಡಲೇ ಸರಳೆಗೆ ಯಾವಾಗಲೂ ಹುರುಕಲನ್ನು ಕುರುಕುತ್ತಿರುವುದೇ ಕೆಲಸವಾಯಿತು.

"ನೀನೇ ಹೀಗೆ ಹುರುಕಲೆಲ್ಲಾ ತಿಂದು ಮುಗಿಸಿಬಿಟ್ಟರೆ ಬರೋರಿಗೆ ಏನು ಕೊಡುವುದು?"—ಎಂದು ವಾಸು ಸರಳೆಯನ್ನು ರೇಗಿಸುತ್ತಿದ್ದ.

ಸೀಮಂತದ ದಿನ ಬಂದಿತು. ಆ ದಿನ ಬೆಳಗ್ಗೆ ಪಂಕಜಮ್ಮ ಸರಳೆಗೆ ಎಣ್ಣೆಯ ನೀರು ಹಾಕಿದರು. ಫಲಪೂಜೆಯ ನಂತರ ಪುರೋಹಿತರಿಗೆ, ದೇವರಿಗೆ, ಮನೆಯ ಹಿರಿಯರಿಗೆ ಸರಳಾ ನಮಸ್ಕರಿಸಿದಳು-ರಂಗಮ್ಮನವರು ಹೇಳಿದ ಮೇಲೆ.

"ವಾಸುವಿಗೂ ನಮಸ್ಕಾರ ಮಾಡು"—ಎಂದರು ಚಿಕ್ಕಮ್ಮ. ಚಾಪೆಯ ಮೇಲೆ ಕುಳಿತಿದ್ದ ವಾಸು ಎರಡು ಕಾಲುಗಳನ್ನೂ ನೀಡಿ, ಟವಲಿನಿಂದ ಕಾಲನ್ನೊಮ್ಮೆ ಒರೆಸಿಕೊಂಡು

"ಮಾಡು ನಮಸ್ಕಾರ. ಜೀವನದಲ್ಲಿ ಒಂದು ಬಾರಿಯಾದರೂ ನಿನ್ನಿಂದ ನಮಸ್ಕರಿಸಿಕೊಳ್ಳೋಣ"—ಎಂದ.

ಸುತ್ತಲಿದ್ದವರು ಗೊಳ್ಳನೆ ನಕ್ಕರು.

ಸರಳೆ ವಾಸುವಿಗೆ ಕೈ ಜೋಡಿಸಿ 'ನಮಸ್ತೆ' ಎಂದು ಹೇಳಿ ನಂತರ ಅವನನ್ನು ಅಣಕಿಸಿ ಹೊರಟುಹೋದಳು.

ಮೊದಲು ಹಿರಿಯರೆನಿಸಿಕೊಂಡಿದ್ದ ಐದು ಜನ ಮುತ್ತೈದೆಯರಿಗೆ ಬಳೆ ತೊಡಿಸಿದ ನಂತರ ಬಳೆಗಾರ ಸರಳೆಯ ಒಂದು ಕೈಗೆ ಐದು ಹಸಿರು ಬಳೆಗಳನ್ನೂ, ಮತ್ತೊಂದು ಕೈಗೆ ಏಳು ಬಳೆಗಳನ್ನೂ ತೊಡಿಸಿದ. ನಂತರ ಸರಳೆ ಬಳೆಯ ದಿಂಡುಗಳಿಗೆ ಅರಿಶಿನ, ಕುಂಕುಮ, ಹೂವು ಹಾಕಿ ಪೂಜೆ

ಮಾಡಿದಳು. ಫಲತಾಂಬೂಲ ಪಡೆದು ಬಳೆಗಾರ ಹೊರಟುಹೋದ.

ಮಧ್ಯಾಹ್ನದ ಊಟಕ್ಕೆ ಆಮಂತ್ರಿತರು ಬರತೊಡಗಿದರು. ಪಂಕಜಮ್ಮ ಸರಳೆಯನ್ನು ಬಲವಂತ ಮಾಡಿ ಮೊದಲನೆಯ ಪಂಕ್ತಿಗೇ ಕೂರಿಸಿದರು.

"ಆಮೇಲೆ ನಿನ್ನ ಮಗ ಹಸಿವಿನಿಂದ ನೊಂದುಕೊಳ್ಳಬಾರದಮ್ಮ. ಮೊದಲು ನೀನು ಕುಳಿತುಬಿಡು"—ಎಂದರಾಕೆ.

ಸರಳೆಗೂ ಹೆಚ್ಚು ಉಪಚಾರ ಬೇಕಿರಲಿಲ್ಲ.

ಸರಳೆ ರಾತ್ರಿಯ ಆರತಿಗೆ ವಾಸು ತನಗೆ ಉಡುಗೊರೆಯಾಗಿತ್ತಿದ್ದ ನೀಲಗಪ್ಪಿನ ಸೀರೆಯನ್ನು ಧರಿಸಿದ್ದಳು. ಅವಳ ಮುಂದೆ ಸಾಲಾಗಿ ತಟ್ಟೆಗಳಲ್ಲಿ ಹಣ್ಣುಗಳು, ತಿಂಡಿಗಳನ್ನು ಜೋಡಿಸಿಡಲಾಗಿತ್ತು.

ವಾಸು ಸರಳೆಯನ್ನು ರೇಗಿಸಿದ "ನಾನು ಬೇಕಾದರೆ ತಿಂಡಿ, ಹಣ್ಣಿಗೆ ಕಾವಲಾಗಿ ಇಲ್ಲೇ ಕುಳಿತುಕೊಳ್ಳುತ್ತೇನೆ. ಇಲ್ಲದೇ ಹೋದರೆ ಸುಮ್ಮನೆ ಕುಳಿತುಕೊಳ್ಳಲು ಬೇಜಾರು ಎನ್ನುತ್ತಾ ಸರಳೆ ಎಲ್ಲವನ್ನೂ ಮುಗಿಸಿಬಿಡುತ್ತಾಳೆ."

"ಹೋಗೋ, ನೀನೇನು ಸದಾ ಹೆಂಗಸರ ಮಧ್ಯೆ ಬಂದು ಬಾಯಿ ಹಾಕುತ್ತೀಯ"—ಎಂದು ರಂಗಮ್ಮನವರಿಂದ ಬೈಸಿಕೊಂಡು ವಾಸು ಹೊರಗೆ ಹೋದ.

ರಾತ್ರಿಯ ಆರತಿಯ ಸಡಗರ ಮುಗಿಯುವ ವೇಳೆಗೆ ವಾಸು, ತಮ್ಮಯ್ಯ, ರಂಗಸ್ವಾಮಿ, ಸರೋಜಮ್ಮನ ಯಜಮಾನರು ಮನೆಗೆ ಬಂದರು.

ರಾತ್ರಿ ರೂಮಿನೊಳಗೆ ಬಂದವಳೇ ಸರಳಾ ಉಡುಪು ಸಹ ಬದಲಿಸದೇ "ಸಾಕಾಗಿ ಹೋಯ್ತು" ಎಂದಳು.

"ಏನು ಕಡಿದಿದ್ದಕ್ಕೆ?"—ಎಂದ ವಾಸು.

"ಸಂಜೆ ಆರು ಗಂಟೆಯಿಂದ ರಾತ್ರಿ ಒಂಭತ್ತು ಗಂಟೆಯವರೆವಿಗೆ ಒಂದೇ ಸಮ ಕುಳಿತು ಸಾಕಾಗಿ ಹೋಯಿತು."

ಸರಳೆ ಆಯಾಸದಿಂದ ಮಲಗಿದ್ದಳು. ವಾಸುವಿಗೆ ಅವಳ ಬಳಲಿದ ಮುಖ ನೋಡಿ 'ಪಾಪ' ಎನಿಸಿತು. ಅವಳ ಮುಖ ಯೋಚನೆಯಿಂದ ತುಂಬಿತ್ತು.

"ಏನು ಯೋಚನೆ ಮಾಡ್ತಿದೀಯಾ ಸರಳಾ?"

"ಏನಿಲ್ಲ. ಈ ಸಲ ನನಗೆ ನಾಲ್ಕು ಸೀರೆಗಳು, ಲೆಕ್ಕವಿಲ್ಲದಷ್ಟು ಖಣಗಳು ಸಿಕ್ಕಿವೆ. ಹೀಗಾಗುವುದರಲ್ಲೂ ಇಷ್ಟೊಂದು ಪ್ರಯೋಜನವಿದೆ

ಎಂದು ನನಗೆ ತಿಳಿದಿರಲಿಲ್ಲ. ಪ್ರತಿ ಸಲ ಹೀಗಾದಾಗಲೂ ಸೀರೆಗಳು ಬಂದರೆ ಎಷ್ಟು ಚೆನ್ನಾಗಿರುತ್ತದೆ, ಅಲ್ಲವೇ?"

"ಸರಳಾ, ನೀನು ಹೆಂಗಸೂ ಎಂದರೆ ಹೆಂಗಸು"—ಎಂದ ವಾಸು ನಗುತ್ತಾ.

ಸರಳೆ ವಾಸುವಿನ ಮಾತಿಗೆ ಉತ್ತರ ಕೊಡದೆ ತನ್ನ ಮಾತನ್ನು ಮತ್ತೆ ಹೇಳಿದಳು.

"ಪ್ರತಿ ಸಲವೂ ಹೀಗೇ ಸೀರೆಗಳು ಬಂದರೆ ಎಷ್ಟು ಚೆನ್ನ!"

"ಅಂದರೆ ಹೀಗೆ ಇನ್ನೂ ಕೆಲವು ಬಾರಿ ಆಗುವ ಉದ್ದೇಶ ನಿನಗಿದೆ ಎಂದಾಯಿತು."

ಸರಳೆ ದೊಡ್ಡದಾಗಿ ಉಸಿರುಬಿಟ್ಟು "ಅಯ್ಯೋ, ಒಂದೇ ಸಲಕ್ಕೆ ನನಗೆ ಬೇಜಾರಾಯಿತು. ಸಧ್ಯ! ಈ ಸಲ ಪ್ರೈ ಕಳೆದು ಎಂದಿಗೆ ನಾನು ಪ್ರೈ ಹಗುರ ಮಾಡಿಕೊಳ್ಳುತ್ತೇನೋ ಎನಿಸಿಬಿಟ್ಟಿದೆ. ಕೆಲವರಂತೂ ಸ್ವಲ್ಪವೂ ಬೇಸರವಿಲ್ಲದೆ ಅದು ಹೇಗೆ ವರ್ಷಕ್ಕೊಂದು ಸಲ ತಪ್ಪದೇ ತಾಯಿಯರಾಗುತ್ತಾರೋ ಆ ಪರಮಾತ್ಮನೇ ಬಲ್ಲ" ಎಂದಳು.

ಸರಳೆಗೆ ಬಳೆ ತೊಡಿಸಿದ ನಾಲ್ಕು ದಿನಗಳ ನಂತರ ಚಿಕ್ಕಮ್ಮ ಊರಿಗೆ ಹೊರಟರು ಆಕೆ ಹೊರಡುವಾಗ ನಾಲ್ಕು ದಿನಗಳ ಮಟ್ಟಿಗಾದರೂ ಸರಳೆಯನ್ನು ತಮ್ಮೊಡನೆ ಕರೆದೊಯ್ಯಲು ಆಸೆ ಪಟ್ಟರು.

ವಾಸು ಖಂಡಿತವಾಗಿ 'ಸರಳೆಯನ್ನು ಎಲ್ಲಿಯೂ ಕಳುಹಿಸುವುದಿಲ್ಲ' ಎಂದುಬಿಟ್ಟ. ಆ ವಿಷಯಕ್ಕೆ ವಾಸುವಿಗೆ, ಪಂಕಜಮ್ಮನಿಗೆ ಕೊಂಚ ಮಾತು ಕತೆಯಾಯಿತು.

ಪಂಕಜಮ್ಮ "ವಾಸೂ, ನ್ಯಾಯವಾಗಿ ನೋಡಿದರೆ ನಮ್ಮ ಮನೆಯಲ್ಲಿ ಬಾಣಂತನವಾಗಬೇಕು. ನಾವಿರುವುದು ಸಣ್ಣ ಊರಿನಲ್ಲಿ ಎಂದು ಹೆದರಿ ನಾನು ಸುಮ್ಮನಾದೆ. ಸರಳೆ ನನ್ನೊಡನೆ ನಾಲ್ಕು ದಿನಗಳಾದರೂ ಇದ್ದು ಹೋಗಲಿ" ಎಂದರು.

"ಬೇಡ ಚಿಕ್ಕಮ್ಮ. ಆಮೇಲೆ ಬೇಕಾದರೆ ಸರಳೆಯನ್ನೂ, ಮಗುವನ್ನೂ ಒಂದು ತಿಂಗಳು ಇಟ್ಟುಕೊಂಡಿದ್ದು ಕಳುಹಿಸುವಿರಂತೆ. ಆದರೆ ಈಗ ಅವಳನ್ನು ಎಲ್ಲಿಗೂ ಕಳುಹಿಸುವ ಧೈರ್ಯ ನನಗಿಲ್ಲ"—ಎಂದ ವಾಸು.

"ಹೋಗಲಿ, ನನಗೆ ಟೆಲಿಗ್ರಾಂ ಕೊಡು ಆಗಲಾದರೂ ಬರುತ್ತೇನೆ ಆಸ್ಪತ್ರೆಗೆ, ಮನೆಗೆ ರಂಗಮ್ಮನವರೊಬ್ಬರೇ ಎಷ್ಟೊಂದು ತಿರುಗಾಡಿಯಾರು?"

"ಆಗಲಿ. ಅದನ್ನು ನೀವು ಹೇಳದಿದ್ದರೂ ನಾನು ಟೆಲಿಗ್ರಾಂ. ಕಳುಹಿಸುತ್ತಿದ್ದೆ" ಎಂದ ವಾಸು.

ಪಂಕಜಮ್ಮನವರು ಕೊಂಚ ಅಸಮಾಧಾನದಿಂದಲೇ ಹೊರಟು ಹೋದರು. ಸರಳೆ ಅವರಿಗೆ ವಿಧವಿಧವಾಗಿ ಸಮಾಧಾನ ಮಾಡಿ

"ಚಿಕ್ಕಮ್ಮ, ನಾನು ಎಲ್ಲಿದ್ದರೇನು. ಒಟ್ಟಿನಲ್ಲಿ ನನಗೆ ಒಳ್ಳೆಯದಾಗಬೇಕೆಂದು ನೀವು ಬಯಸುವವರಲ್ಲವೇ? ಆಮೇಲೆ ಮಗುವಿನೊಡನೆ ಖಂಡಿತ ಬರುತ್ತೇನೆ" ಎಂದಳು.

ಆದರೂ ಅಕೆಗೆ ಸಮಾಧಾನವಿರಲಿಲ್ಲ.

ಚಿಕ್ಕಮ್ಮ ಹೊರಟು ನಿಂತಾಗ ಸರಳೆ ಕಣ್ಣಿನಲ್ಲಿ ನೀರು ತಂದುಕೊಂಡು "ಟೆಲಿಗ್ರಾಂ ಕೊಟ್ಟಾಗ ಖಂಡಿತ ಬನ್ನಿ ಚಿಕ್ಕಮ್ಮ"—ಎಂದಳು. ಸರಳೆಯ ಕಣ್ಣೀರು ಕಂಡು ಚಿಕ್ಕಮ್ಮ ಕರಗಿ ಹೋದರು ಅವರು ಅನೇಕ ರೀತಿಯಿಂದ ಸರಳೆಯನ್ನು ಸಂತಯಿಸಿ. ತಾವು ಖಂಡಿತ ಮತ್ತೆ ಬರುವುದಾಗಿ ವಾಗ್ದಾನ ಮಾಡಿದ ಮೇಲೆ ಸರಳೆ ಸುಮ್ಮನಾದಳು.

ವಾಸುವೇ ಚಿಕ್ಕಮ್ಮನನ್ನು ಕಳುಹಿಸಿಕೊಟ್ಟು ಮನೆಗೆ ಬಂದ. ಅವನು ರೂಮಿಗೆ ಬಂದಾಗ ಸರಳೆ ಮಂಚದ ಮೇಲೆ ಕುಳಿತು ಗೋಡೆಯ ಮೇಲಿದ್ದ ಸುಂದರಿಯಾದ ನಟಿಯೊಬ್ಬಳ ಕ್ಯಾಲೆಂಡರನ್ನು ತದೇಕಚಿತ್ತದಿಂದ ನೋಡುತ್ತಿದ್ದಳು.

ಗೋಡೆಯ ತುಂಬಾ ಸುಂದರವಾದ ನಟನಟಿಯರ, ಪ್ರಕೃತಿ ಸೌಂದರ್ಯದ ಚಿತ್ರಗಳು ಕಂಗೊಳಿಸುತ್ತಿದ್ದವು ಯಾವಾಗಲೂ ಸುಂದರವಾದ ಮುಖ. ಸುಂದರವಾದ ಚಿತ್ರಗಳನ್ನು ಸರಳೆ ನೋಡುತ್ತಿರಲಿ, ಸುತ್ತಮುತ್ತಲಿನ ಸೌಂದರ್ಯ ಅವಳ ಮಗುವಿನ ಮೇಲೆ ಪರಿಣಾಮವನ್ನುಂಟು ಮಾಡಲಿ ಎಂಬ ಉದ್ದೇಶದಿಂದ ವಾಸು ಅನೇಕ ಚಿತ್ರಗಳನ್ನು ಕೊಂಡು ತಂದು ಗೋಡೆಯನ್ನು ಅಲಂಕರಿಸಿದ್ದ.

ಸರಳೆಗಾಗಿ ತಂದ ಪುಸ್ತಕಗಳನ್ನು ವಾಸು ತಾನೂ ಆಸಕ್ತಿಯಿಂದ ಓದಿ ಆಗಾಗ್ಗೆ ಸರಳೆಗೆ ಸಲಹೆ ಕೊಡುತ್ತಿದ್ದ.

ಯಾರಾದರೂ ಖಾಯಿಲೆಯ ವಿಷಯ, ಸಾವು, ಕೊಲೆ, ಭೂತಪ್ರೇತಗಳು, ಕಳ್ಳತನ ಮುಂತಾದವುಗಳ ವಿಷಯ ಮಾತನಾಡಿದರೆ ಸರಳೆ ಕೂಡಲೇ ಆ ಸ್ಥಳ ಬಿಟ್ಟು ಹೊರಟುಬಿಡಬೇಕೆಂದು ವಾಸು ಹೇಳಿದ್ದ. ಸರಳೆ ಅವನ ಮಾತನ್ನು ಅಕ್ಷರಶಃ ಪಾಲಿಸುತ್ತಿದ್ದಳು.

ಕಷ್ಟವಾದ ಹೆರಿಗೆ ಆಪರೇಷನ್, ಮಕ್ಕಳ ಸಾವು, ಇವುಗಳ ವಿಷಯ ಒಮ್ಮೊಮ್ಮೆ ಹಿರಿಯರು ತೆಗೆದರೆ ಸರಳೆ ಭೀತಿಯಿಂದ ಆ ಸ್ಥಳ ಬಿಟ್ಟೋಡುತ್ತಿದ್ದಳು.

ವಾಸು ಒಳಗೆ ಬಂದುದನ್ನು ನೋಡಿ ಸರಳೆಗೆ ಮತ್ತೆ ಅಳು ಉಕ್ಕಿ ಬಂತು. ಸಂತಯಿಸಲು ವಾಸು ಇರುವಾಗ ಸರಳೆ ಅಳುವನ್ನು ಯಾವ ರೀತಿಯಿಂದಲೂ ತಡೆಗಟ್ಟಲಿಲ್ಲ

"ಬಿಡು ಸರಳಾ. ಇಷ್ಟು ಅಳಬಾರದು ನೀನು. ಆಮೇಲೆ ಮಗೂನ ಕರೆದುಕೊಂಡು ಹೋಗುವಿಯಂತೆ" — ಎಂದ ವಾಸು.

"ಅಲ್ಲಾ ನನ್ನ ಅದೃಷ್ಟ ಕೆಟ್ಟದು. ಇಷ್ಟು ದಿನಗಳವರೆವಿಗೆ ಇಲ್ಲಿಯೇ ಇದ್ದ ಚಿಕ್ಕಪ್ಪನಿಗೆ ಈ ಸಮಯದಲ್ಲಿ ಬೇರೆ ಊರಿಗೆ ವರ್ಗವಾಗಬೇಕೆ? ಪಾಪ, ಚಿಕ್ಕಮ್ಮ ಎಷ್ಟೋ ಆಸೆಯಿಂದ ಇದ್ದರು"—ಎಂದು ಸರಳೆ ಬಿಕ್ಕಳಿಸಿದಳು.

"ನೀನು ಅಳಬಾರದು. ಎಲ್ಲಿ ನಕ್ಕುಬಿಡು. ಹೂಂ ನಗು ಮತ್ತೆ"— ಎನ್ನುತ್ತಾ ವಾಸು ಸರಳೆಯನ್ನು ನಗಿಸಿದ.

ಮಳೆಯನಂತರ ಹೊಂಬಿಸಿಲಿನಲ್ಲಿ ಮೂಡಿದ ಕಾಮನಬಿಲ್ಲಿನಂತಿತ್ತು —ಸರಳೆಯ ನಗು.

"ಹಾಗೆ ಜಾಣೆ."

"ಸರಳಾ, ಮಗೂಗೆ "ಎಂದು ವಾಸು ಪ್ರಾರಂಭಿಸಿದ.

"ಅಯ್ಯೋ,ಹೋಗಿ. ಏನು ಮಗುವೋ? ನನಗಂತೂ ತುಂಬಾ ಬೇಜಾರಾಗಿ ಹೋಗಿದೆ. ಈ ಸಲ ಖಂಡಿತ ನಾನು ಆಪರೇಷನ್ ಮಾಡಿಸಿಕೊಂಡು ಬಿಡ್ತೀನಿ. ಇನ್ನೂ ಎಷ್ಟು ದಿವಸಾರೀ, ಹೇಳಿ?"—ಎಂದಳು ಸರಳಾ.

"ಇನ್ನು ಎರಡು ತಿಂಗಳು. ಅಷ್ಟೆ."

"ನೀವೇನೋ ಸಲೀಸಾಗಿ ಹೇಳ್ತೀರಿ. ಆದರೆ ಅದರಕಷ್ಟ ನಿಮಗೇನು ಗೊತ್ತು ? ಈಗಂತೂ ವಿಧಿಯಿಲ್ಲ.ನಾನೇ ಹೊತ್ತುಕೊಳ್ಳಬೇಕು. ಈ ಹಾಳು ಗಂಡಸರು...."

ವಿಷಯ ಬಹಳ ಪ್ರಮಾದದ ಮಟ್ಟಕ್ಕೇಳುತ್ತಿದೆಯೆನಿಸಿ ವಾಸು ಜಾಗರೂಕನಾದ.

"ಸರಳಾ, ಎಲ್ಲಿಗಾದರೂ ಹೋಗೋಣವೇನು?"

"ಎಲ್ಲಿಗೂ ಬೇಡ. ನನಗಂತೂ ಸಾಕಾಗಿ ಹೋಗಿದೆ. ಇನ್ನೆರಡು ತಿಂಗಳು ನೀವೇ ನಿಮ್ಮ ಮಗನ್ನ ನಿಮ್ಮ ಹತ್ತಿರ ಇಟ್ಟುಕೊಳ್ಳಿ. ನನಗ್ಯಾಕೋ ಬೇಜಾರು. ಒಂದು ಕಡೆ ಹೋಗೋಕಿಲ್ಲ, ಒಂದುಕಡೆ ಬರೋಕಿಲ್ಲ...."

ವಾಸು ಸರಳೆಯ ಎರಡು ಕೆನ್ನೆಗಳನ್ನೂ ಹಿಡಿದು ಅವಳ ಮುಖವನ್ನು ತನ್ನಕಡೆಗೆ ತಿರುಗಿಸಿಕೊಂಡ.

"ಸರಳಾ, ಏನು ಮಾತನಾಡ್ತಿದೀಯ್ಯಾ? ಎಚ್ಚರವಾಗಿದೀಯಾ?"

"ಬಿಡಿ ನನ್ನ."

"ಸರಳಾ, ಕೇಳಿಲ್ಲಿ ಚಿನ್ನ, ಇನ್ನೆರಡು ತಿಂಗಳು ಮಾತ್ರ ಅಷ್ಟೆ. ಇಷ್ಟು ದಿನ ಸರಿಯಾಗಿದ್ದೆ ಈಗೇಕೆ ಹೀಗೆ ಮಾಡ್ತೀಯಾ ? ನಾನು ನಿನ್ನ ಪ್ರೀತಿಸು ತ್ತೀನಿ ಎನ್ನುವ ವಿಷಯ ನಿನಗೆ ತಿಳಿಯದೆ?"

"ನೀವು ನನ್ನನ್ನು ಪ್ರೀತಿಸುವುದಿಲ್ಲ"—ಸರಳಾ ಕಡ್ಡಿ ಎರಡು ತುಂಡಾ ದಂತೆ ನುಡಿದ್ದಳು.

"ಮತ್ತೆ ಯಾರನ್ನ ಪ್ರೀತಿಸುತ್ತೀನಿ ? ಹೇಳು?"

"ಅರುಂಧತೀನ ಅವಳಿಗಾದರೆ ಒಳ್ಳೆಯ ಫಿಗರ್ ಇದೆ."

"ಛೀ. ನನ್ನ ಸರಳೆಯಮುಂದೆ ಅವಳೆಲ್ಲಿ ? ಹುರುಳಿಲ್ಲದ ಆರೋಪಣೆ ನಿನ್ನದು. ನಿನಗೂ ಗೊತ್ತು ಸತ್ಯಾಂಶ. ಯಾಕೆ ನನ್ನ ಹಿಂಸೆ ಮಾಡ್ತೀಯಾ?"

ವಾಸುವಿನ ದನಿಯಿಂದ ಸರಳಾ ಎಚ್ಚರಗೊಂಡು

"ಬೇಜಾರು ಮಾಡಿಕೊಳ್ಳಬೇಡಿ. ಒಂದೊಂದು ಸಲ ಹೀಗೆ ಆಡಿ ಬಿಡುತ್ತೇನೆ"—ಎಂದಳು.

"ಮಗ ಬಂದ ಮೇಲೆ ಎಲ್ಲ ಸರಿಹೋಗುತ್ತದೆ"—ವಾಸು ಸರಳೆ ಯನ್ನು ಗೇಲಿಮಾಡಿದ.

"ಮಗನೋ, ಮಗಳೋ ನಿಮಗೆ ಹೇಗೆ ಗೊತ್ತು?"

"ಏನೋ ಮಗನೇ ಇರಬಹುದು"—ವಾಸುವಿಗೇನೋ ತನ್ನಮೊದಲ ಮಗು ಗಂಡಾಗಲಿ ಎಂದು ಆಸೆಯಿತ್ತು.

"ನನಗನಿಸುತ್ತದೆ—ಮಗಳೆಂದು"—ಸರಳೆ ಹೇಳಿದಳು.

"ಹೇಗೆ ಹೇಳ್ತೀಯಾ?"

ಸರಳೆ ಮೊದಲು ನಾಚಿದಳು. ವಾಸು ಒತ್ತಾಯಪಡಿಸಿದ ನಂತರ ಅವಳು ಹೇಳಿದಳು

"ಹೆಣ್ಣು ಮಗುವಾಗುವುದಾದರೆ ತಾಯಿಯಾಗುವಾಕೆ ತುಂಬಾ

ಬಿಳಿಚಿಕೊಂಡು. ದಪ್ಪಗೆ, ಗುಂಡಗೆ ಆಗುತ್ತಾಳಂತೆ...."

"ನೀನು ದಪ್ಪಗೆ, ಗುಂಡಗಾಗಿದೀಯ. ಆದರೆ ಬಿಳಿಚಿಕೊಂಡಿಲ್ಲ. ಬದಲು ಕೆಂಪಗೆ ಟೊಮೆಟೋ ಹಣ್ಣಿನ ಹಾಗಾಗಿದೀಯ."

"ಏನಿಲ್ಲ"

"ಕನ್ನಡಿ ನೋಡಿಕೋ."

"ಇರಲಿ. ಆಮೇಲೆ ಅಗ ತಾಯಿಯಾಗುವವಳಿಗೆ ಅಲಂಕಾರದಲ್ಲಿ ತುಂಬಾ ಶ್ರದ್ಧೆ ಇರುತ್ತದೆಯಂತೆ"

"ನಿನಗೆ ಯಾವತ್ತು ಅಲಂಕಾರದಲ್ಲಿ ಶ್ರದ್ಧೆ ಇರಲಿಲ್ಲ?"

"ನೀವು ಎಗ್ಸಾಮಿನರ್ಸ್ ಮೀಟಿಂಗಿಗೆ ಮೈಸೂರಿಗೆ ಹೋದಾಗ ಎರಡು ದಿನ ನನಗೆ ಅಲಂಕಾರದಲ್ಲಿ ಶ್ರದ್ಧೆ ಇರಲಿಲ್ಲ."

"ಅಯ್ಯೋ ಪಾಪ? ಸತೀ ಸಾವಿತ್ರಿ ನಿನ್ನಮುಂದೆ ಯಾಕೆ ಹೇಳು?" —ವಾಸು ಸುಳ್ಳು ಪರಿತಾಪ ಪಟ್ಟ.

"ನಿಮ್ಮ ಕನಿಕರವೇನೂ ನನಗೆ ಬೇಡ"—ಎಂದಳು ಸರಳಾ.

"ಸರಳಾ ಮಗಳಾದರೆ ಏನು ಹೆಸರಿಡೋಣ ?" ವಾಸು ಕುತೂಹಲದಿಂದ ಕೇಳಿದ.

"ಯಾವುದೋ ಒಂದು ಹೆಸರು"—ಎಂದಳು ಸರಳಾ.

"ಹೇಳು ಸರಳಾ."

"ಆಮೇಲೆ ನೀವು ಆ ಹೆಸರನ್ನು ಬೇಡ ಎನ್ನಬಾರದು."

"ಇಲ್ಲ. ನಿನ್ನ ಮಗಳಿಗೆ ಹೆಸರಿಡುವುದರಲ್ಲಿ ನನಗಿಂತಲೂ ನಿನಗೆ ಹೆಚ್ಚು ಅಧಿಕಾರವಿದೆ."

"ಈ ಗಂಡಸರು ಹೀಗೆ ಮಾತನಾಡಿಯೇ ತಮ್ಮ ಕಾರ್ಯವನ್ನು ಉಪಾಯವಾಗಿ ಸಾಧಿಸಿಬಿಡುತ್ತಾರೆ. ಈ ಗಂಡಸು ಜಾತಿ ತನ್ನ ಕಾರ್ಯ ಸಾಧನೆಗಾಗಿ..."

"ಸರಳಾ, ಗಂಡಸರ ಮೇಲೆ ಕೃಪೆಯಿಡು. ಹೀಗೆ ಅವರನ್ನು ಥಳಿಸ ಬೇಡ."

"ಹುಂ. ಹೋಗಲಿ. ಹೆಣ್ಣು ಮಗುವಾದರೆ 'ವಸಂತಿ' ಎಂದು ಹೆಸರು ಇಡಲು ನಿಶ್ಚಯಿಸಿದ್ದೇನೆ."

"ಚೆನ್ನಾಗಿದೆ ಹೆಸರು. ನಮ್ಮ ದಾಂಪತ್ಯ ಜೀವನದಲ್ಲಿ ವಸಂತಮಾಸ ಕಾಲಿರಿಸಿದುದರ ಸೂಚನೆ ಅವಳಿಂದ ಮೊದಲಾಯಿತು. ಆ ಹೆಸರೇ ಇರಲಿ"

—ವಾಸು ಸರಳೆ ಸೂಚಿಸಿದ ಹೆಸರನ್ನು ಒಪ್ಪಿಕೊಂಡ.

"ಗಂಡು ಮಗುವಾದರೆ ಏನು ಹೆಸರಿಡೋಣ?" ಸರಳೆ ವಾಸುವನ್ನು ಕೇಳಿದಳು.

"ವಸಂತ."

"ಗಂಡು ಮಗುವಿಗಿಡಲು ಆ ಹೆಸರು ತುಂಬಾ ಕೋಮಲವಾದುದು. ಮಗುವಾಗಿರುವಾಗ, ಹಾಲುಕೆನ್ನೆ ಇರುವಾಗ, ಹೊಳಪುಗಣ್ಣು ಇರುವಾಗ, ಹವಳದ ತುಟಿ ಇರುವಾಗ, ಹೂವಿನಂತಹ ದುಂಡುದುಂಡಾದ ಮೃದು ಮೈಯಿರುವಾಗ ವಸಂತ ಎನ್ನುವ ಹೆಸರು ಗಂಡು ಮಗುವಿಗೆ ಒಪ್ಪಬಹುದು. ಆದರೆ ಅದೇ ಮಗು ಬೆಳೆದು ತರುಣನಾದಾಗ, ಧ್ವನಿಯೊಡೆದು ಗಡುಸಾದಾಗ, ಕೆನ್ನೆ ಒರಟಾಗಿ ಹಸಿರುಗಟ್ಟಿದಾಗ, ಕೈಕಾಲುಗಳು ದೆಬ್ಬೆದೆಬ್ಬೆ ಆದಾಗ ಆ ಹೆಸರು ಗಂಡಸಿಗೆ ಕೊಂಚವೂ ಒಪ್ಪುವುದಿಲ್ಲ. ಮಾಧವೀ ಲತೆಯನ್ನು...."

"ಮಾಧವೀ ಲತೆ ಎಂದರೆ?"

"ಜಾಜಿ ಬಳ್ಳಿ. ಅದನ್ನು ಕುಂಬಳದಬಳ್ಳಿ ಎಂದು ಕರೆದರೆ ಸೊಗಸೋ?"

"ಸರಳಾ, ನಿನ್ನ ಕಲ್ಪನೆ ಅಗಾಧವಾದುದು. ನಾನು ಕೇವಲ ಅಜ್ಞ"

"ನಾಟಕ ಸಾಕೂರೀ."

"ಗಂಡುಮಗುವಾದರೆ ಏನು ಹೆಸರಿಡೋಣ ? ನೀನೇ ಹೇಳಿಬಿಡು."

"ಸಿನಿಮಾ ನಟರ ಹೆಸರು ಬೇಡ."

"ಆಯಿತು."

"ಬಂಗಾಳೀ ಹೆಸರುಗಳು ಬೇಡ."

"ಒಪ್ಪಿದೆ."

"ಶ್ರೀನಾಥ ಅಥವಾ ಶ್ರೀಕಾಂತ—ಈ ಎರಡು ಹೆಸರುಗಳಲ್ಲಿ ಯಾವುದಾದರೂ ಒಂದು ಹೆಸರಿಡೋಣ."

"ಶ್ರೀಕಾಂತ ಎನ್ನುವುದು ಬಂಗಾಳಿ ಹೆಸರು ಕಣೇ."

"ಏನಲ್ಲ. ಶ್ರೀ ಎಂದರೆ ಲಕ್ಷ್ಮೀ. ಕಾಂತ ಎಂದರೆ ಪತಿ. ನಾರಾಯಣನ ಹೆಸರದು. ಇವೆರಡರಲ್ಲಿ ನೀವು ಯಾವುದು ಇಷ್ಟಪಡುತ್ತೀರಿ?"

"ನನಗೇನೋ ಶ್ರೀಕಾಂತ. ಎನ್ನುವ ಹೆಸರು ಚೆನ್ನಾಗಿದೆ" ಎಂದ ವಾಸು.

ಅಲ್ಲಿಗೆ ಅವರು ಹುಟ್ಟದಿದ್ದ ಮಗುವಿನ ನಾಮಕರಣವನ್ನು ಮಾಡಿ ಮುಗಿಸಿ ಒಂದು ದೊಡ್ಡ ಹೊರೆಯನ್ನು ಇಳಿಸಿಕೊಂಡರು.

* * *

ಏಳು ತಿಂಗಳು ತುಂಬಿದ ನಂತರ ಸರಳೆ ಹೊರಗೆ ಹೋಗಬಾರದೆಂದು ರಂಗಮ್ಮ ಸೊಸೆಗೆ ಕಟ್ಟಪ್ಪಣೆ ಮಾಡಿದ್ದರು. ಸ್ವಲ್ಪ ಆಡಂಬರವಾಗಿ ಕಾಣಿಸುತ್ತಿದ್ದ ಸೊಸೆಯನ್ನು ಎಲ್ಲರೂ 'ದಿನ ತುಂಬಿತೇ' ಎಂದು ಕೇಳುತ್ತಿದ್ದ ರೀತಿ ಅವರ ಪಾಲಿಗೆ ಕಿರಿಕಿರಿಯಾಗಿತ್ತು.

'ಎಂಟನೆಯ ತಿಂಗಳು ಸುಖವಾಗಿ ದಾಟಿಬಿಟ್ಟರೆ ಸಾಕು ದೇವರೆ' ಎಂದು ಅವರು ಹಗಲಿರುಳೂ ದೇವರನ್ನು ಪ್ರಾರ್ಥಿಸುತ್ತಿದ್ದರು. ಎಂಟನೆಯ ತಿಂಗಳಿನಲ್ಲಿ ಹುಟ್ಟಿದ ಮಗು ಬದುಕುವುದಿಲ್ಲವೆಂಬುದೇ ಅವರ ಭಯಕ್ಕೆ ಕಾರಣವಾಗಿತ್ತು.

ಯಾವಾಗಲೂ ಕೊಂಚ ಗಡಿಬಿಡಿಯಿಂದ, ಆತುರದಿಂದ ಓಡಾಡುವ ಸೊಸೆಗೆ ಅವರು ಆಗಾಗ್ಗೆ ಎಚ್ಚರಿಕೆ ಕೊಡುತ್ತಲೇ ಇದ್ದರು—

"ಸರಳಾ ಬಚ್ಚಲು ಮನೆಯ ಬಚ್ಚಲಿನಲ್ಲಿ ಹುಷಾರಾಗಿ ಕಾಲಿಡು. ಮೆಟ್ಟಿಲಿಳಿಯುವಾಗ ಜೋಕೆ. ರಾತ್ರಿ ಏಳಬೇಕಾದರೆ ಟಾರ್ಚು ಹತ್ತಿರ ಇಟ್ಟು ಕೊಂಡಿದ್ದು ನಂತರ ಸ್ವಿಚ್ಚು ಹಾಕು. ಕತ್ತಲಲ್ಲಿ ತಡವರಿಸುತ್ತಾ ದೀಪ ಹಾಕಲು ಹೋಗಬೇಡ."

ಸರಳೆ ಅತ್ತೆಯ ಎಲ್ಲ ಮಾತುಗಳಿಗೂ ತಲೆ ಅಲುಗಿಸುತ್ತಿದ್ದಳು.

ಎಂಟನೆಯ ತಿಂಗಳಿನಲ್ಲಿ ಡಾಕ್ಟರ ಸಲಹೆಯಂತೆ ಸರಳೆ ಆಸ್ಪತ್ರೆಗೆ ಹೋದಾಗ ಅವರು ಸರಳೆಯನ್ನು ಪರೀಕ್ಷಿಸಿ

"ಇನ್ನು ಎಲ್ಲ ಬಗೆಯ ಟಾನಿಕ್, ಔಷಧಿಗಳನ್ನು ನಿಲ್ಲಿಸಿಬಿಡಿ. ಸಾಕು" —ಎಂದರು.

"ಯಾಕೆ ಡಾಕ್ಟರ್?" - ಎಂದಳು ಸರಳಾ

"ನಿಮ್ಮ ಮಗ ಅವನ ವಯಸ್ಸಿಗೆ ಸರಿಯಾಗಿ ಬೆಳೆದಿದ್ದಾನೆ. ಸಾಕು ಇನ್ನು ಟಾನಿಕ್ಕು."

"ಡಾಕ್ಟರ್...."

"ಏನಮ್ಮ."

"ನನಗೆ ಅವಳಿ ಜವಳಿ ಮಕ್ಕಳಿವೆಯೇನೋ ಎನಿಸುತ್ತದೆ."

"ಯಾಕೆ?"

"ಈಗ್ಗೆ ಸುಮಾರು ಎರಡು ತಿಂಗಳಿಗೆ ಹಿಂದಿನಿಂದಲೂ ನನ್ನ ನೋಡಿದವರೆಲ್ಲಾ ದಿನವಾಯಿತೇ ಎನ್ನುತ್ತಿದ್ದಾರೆ. ಆದುದರಿಂದ ಕೇಳಿದೆ."

ಡಾಕ್ಟರು ನಕ್ಕು ಹೇಳಿದರು "ಛೇ, ನಿನ್ನಮಗ ಚೆನ್ನಾಗಿ ಬೆಳೆದಿದ್ದಾನೆ ಅಷ್ಟೆ. ಏನೂ ಹೆದರಿಕೆಯಿಲ್ಲ."

ಸರಳಾ ಸಮಾಧಾನಗೊಂಡಳು.

"ನಾನು ಮತ್ತೆ ಯಾವಾಗ ಬರಲಿ?"

"ಪುನಃ ನೀನು ಇಲ್ಲಿಗೆ ಬರಬೇಕಾದಾಗ ಬಾ. ಅದುವರೆವಿಗೂ ಬರ ಬೇಕಾಗಿಲ್ಲ. ಚೀಟಿಯಲ್ಲಿ ನಾನು ಆಸ್ಪತ್ರೆಯು, ಹಾಗೂ ಮನೆಯು ಫೋನ್ ನಂಬರ್ ಕೊಟ್ಟಿರುತ್ತೇನೆ. ರಾತ್ರಿ ಬರಬೇಕಾದರೆ ಮನೆಗೆ ಫೋನ್ ಮಾಡಿ ಆಸ್ಪತ್ರೆಗೆ ಬನ್ನಿ. ಅಷ್ಟರಲ್ಲಿ ನಾನೂ ಬಂದಿರುತ್ತೇನೆ."

"ಆಗಲಿ. ಆದರೆ...."

"ಏನು?"

"ನನಗೆ ಹೆದರಿಕೆ—ಪ್ರಸವ ವೇದನೆಯದು."

ಡಾಕ್ಟರು ಜೋರಾಗಿ ನಕ್ಕು ಸರಳೆಯ ಭುಜತಟ್ಟಿ

"ಪ್ರತಿಯೊಬ್ಬ ಹೆಂಗಸೂ ಅನುಭವಿಸಬೇಕಾದುದು ಈ ನೋವು. ಹೆದರಿಕೊಳ್ಳಬೇಡ" ಎಂದರು.

"ನನಗೆ ನೋವಿನ ಪ್ರಾರಂಭದಲ್ಲೇ ಸಿಸೇರಿಯನ್ ಮಾಡಿ ಮಗು ತೆಗೆದುಬಿಡಿ ಡಾಕ್ಟರ್. ಆ ನೋವು ನಾನು ಅನುಭವಿಸಲಾರೆ."

"ಸಾಧ್ಯವಿಲ್ಲ ಸರಳಾ. ನೀನು ಎಲ್ಲರೀತಿಯಿಂದಲೂ ಆರೋಗ್ಯವಾಗಿರು ವಾಗ ನಿನಗೆ ನಾವು ಸಿಸೇರಿಯನ್ ಖಂಡಿತ ಮಾಡುವುದಿಲ್ಲ. ನಿಸರ್ಗ ನಮ್ಮೊಡನೆ ಸಹಕರಿಸದಿದ್ದಾಗ ಮಾತ್ರ ನಾವು ಶಸ್ತ್ರಚಿಕಿತ್ಸೆ ಮಾಡುತ್ತೇವೆ."

"ನನಗೆ ಆಗೋಲ್ಲ ಡಾಕ್ಟರ್. ಆ ಗಳಿಗೆಯನ್ನು ನಾನು ಎದುರಿಸಲಾರೆ. ಕ್ಲೋರೋಫಾರಂ ಕೊಟ್ಟು ಜ್ಞಾನ ತಪ್ಪಿಸಿಯಾದರೂ ಆ ನೋವಿನ ಅನುಭವ ನನಗಾಗದ ಹಾಗೆ ಮಾಡಿ. ಇಷ್ಟು ದಿನ ಧೈರ್ಯವಾಗಿದ್ದೆ. ಆದರೆ ಈಗ ಗಳಿಗೆ ಹತ್ತಿರವಾಗುತ್ತಿದ್ದ ಹಾಗೆ ನನಗೆ ಹೆದರಿಕೆಯಾಗುತ್ತಿದೆ."

ಸರಳೆ ಹೆದರಿದಷ್ಟೂ ಡಾಕ್ಟರು ನಕ್ಕರು.

"ಕ್ಲೋರೋಫಾರಂ ! ಆಹಾ....ಸರಳಾ ನೀನು ವಿದ್ಯಾವತಿ, ಜಾಣೆ ಎಂದು ನಾನು ತಿಳಿದಿದ್ದೆ. ನಿನ್ನಪ್ರಯತ್ನ ಹಾಗೂ ಮಗುವಿನಪ್ರಯತ್ನದಿಂದ ನೀನು ತಾಯಿಯಾಗಬೇಕು. ನೀನು ಕ್ಲೋರೋಫಾರಂನಿಂದ ಜ್ಞಾನ ತಪ್ಪಿ ಮರದ ಕೊರಡಿನ ಹಾಗೆ ಮಲಗಿಬಿಟ್ಟರೆ ಪ್ರಯತ್ನವೇನು ಮಾಡುತ್ತೀಯ?"

"ಡಾಕ್ಟರ್ ದಯವಿಟ್ಟು...."

"ಗಾಬರಿಯಾಗಬೇಡ. ಆ ಗಳಿಗೆ ಬಂದಾಗ ನೋಡೋಣ"

ಸರಳೆ ಆ ಮಾತುಗಳನ್ನೇ ನಂಬಿ ಹೊರಗೆ ಬಂದಳು.

ದಿನಗಳೆದಂತೆ ಸರಳೆಯ ಆಲಸ್ಯ ಹೆಚ್ಚಾಯಿತು. ಅವಳು ಯಾವಾಗಲೂ ಬೇಸರದಿಂದ ಕೈಲೊಂದು ಪುಸ್ತಕಹಿಡಿದು ಕುಳಿತುಕೊಳ್ಳುತ್ತಿದ್ದಳು. ಈಚೆಗೆ ಅವಳಿಗೆ ನೆಲದ ಮೇಲೆ ಕುಳಿತುಕೊಳ್ಳುವ ಅಭ್ಯಾಸವೇ ತಪ್ಪಿಹೋಗಿತ್ತು.

"ಅಯ್ಯೋ, ನನ್ನ ಕೈಲಾಗುವುದಿಲ್ಲಾಂದ್ರೆ—ನೆಲದ ಮೇಲೆ ಕುಳಿತು ಊಟಮಾಡುವುದು. ಆಮೇಲೆ ಮೇಲೇಳಬೇಕಾದರೆ ತಿಂದದ್ದನ್ನವೆಲ್ಲಾ ಬಾಯಿಗೇ ಬರುತ್ತದೆ"—ಎಂದು ಒಮ್ಮೆ ಸರಳಾ ಹೇಳಿದಾಗ ವಾಸು ನಿಂತ ಕಾಲಿನ ಮೇಲೆ ಊಟದ ಮೇಜೊಂದನ್ನು ಕೊಂಡು ತರಲು ತಯಾರಿದ್ದ. ಆದರೆ ಸರಳೆಯೇ ವಾಸುವಿಗೆ

"ಅಷ್ಟು ದುಡುಕಬೇಡಿ. ಅಮ್ಮ ತುಂಬಾ ಮಡಿ. ಅವರಿಗೆ ಮೇಜಿನ ಮೇಲೆ ಊಟ ಮಾಡುವುದೆಂದರಾಗದು" ಎಂದು ಹೇಳಿ ವಾಸುವನ್ನು ತಡೆದಳು.

ಸುಮಾರು ಎರಡು ತಿಂಗಳಿಂದಲೂ ಆಸ್ಪತ್ರೆಯ ಹೊರತಾಗಿ ಎಲ್ಲಿಯೂ ಹೋಗೇ ಹೋಗದ ಸರಳೆಯ ಪಾಲಿಗೆ ಮನೆ ಸೆರೆಮನೆಯಾಗಿ ಬಿಟ್ಟಿತು.

ಅರುಂಧತಿ ಯಾವ ಗಳಿಗೆಯಲ್ಲಾದರೂ ಕಾರು ತೆಗೆದುಕೊಂಡು ಬರಲು ತಯಾರಿದ್ದಳು. ತಾನು ಊರಿನಲ್ಲಿದ್ದರೆ ಪಂಡಿತ ತನ್ನಿಂದ ಕಿಂಚಿತ್ ಸಹಾಯವನ್ನು ಪಡೆದು ತನ್ನನ್ನು ಗೌರವಿಸಬೇಕೆಂದು ರಾಜಗೋಪಾಲ ವಾಸುವನ್ನು ಕೇಳಿಕೊಂಡಿದ್ದ.

ಆದರೆ ಸರಳೆಯೇ ಇನ್ನೂ ತಯಾರಿರಲಿಲ್ಲ.

ಡಾಕ್ಟರು ಕೊಟ್ಟಿದ್ದ ವಾಯಿದೆಯೂ ಮೀರಿ ನಾಲ್ಕಾರು ದಿನಗಳಾದವು. ಸರಳೆಯ ಮನೆಯವರೆಲ್ಲಾ ಆತಂಕ, ಕಳವಳದಿಂದ ಕಾಲಕಳೆದರು.

ನೆಂಟರಿಷ್ಟರು, ಬಂಧುಗಳು, ಗೆಳತಿಯರು ಎಲ್ಲರೂ ಸರಳೆಯನ್ನು ನೋಡಿ "ಇನ್ನೂ ಮನ್ಲೇ ಇದೀಯಾ ? ಆಸ್ಪತ್ರೆಗೆ ಹೋಗಲಿಲ್ಲವೇ?"—ಎಂದರು.

ಸರಳೆಯಾದರೂ ಏನು ಉತ್ತರ ಹೇಳಿಯಾಳು?

ಅಲ್ಲಿಂದ ಒಬ್ಬೊಬ್ಬರೂ ತಮ್ಮ ತಮ್ಮ ಅನುಭವಗಳನ್ನು ಕುರಿತು ಸರಳೆಗೆ ರಸವತ್ತಾಗಿ ಬಣ್ಣಿಸಿದರು.

ಸರಳೆಯ ಸೋದರತ್ತೆ "ಹೌದಮ್ಮ, ನಮ್ಮ ರಾಜೂನ ನಾನು ಹನ್ನೊಂದು ತಿಂಗಳು ಹೊತ್ತಿದ್ದೆ. ಕೆಲವುಸಲ ಹಾಗಾಗಿ ಬಿಡುತ್ತದೆ. ಏನು ಮಾಡುವುದು?"—ಎಂದರು.

ಸರೋಜಮ್ಮ "ನಮ್ಮ ದೂರದ ನೆಂಟರಲ್ಲಿ ಯಾರೋ ಒಬ್ಬಾಕೆ ಇಪ್ಪತ್ತೇಳು ತಿಂಗಳು ಮಗುವನ್ನು ಹೊತ್ತಿದ್ದು ನಂತರ ಹೆಣ್ಣು ಮಗುವಿನ ತಾಯಿಯಾದರಂತೆ"—ಎಂದರು.

ಅವರ ಮಾತನ್ನು ಕೇಳಿ ಸರಳೆಯ ಹೃದಯ ನಡುಗಿತು.

"ಏನು ಗತಿ ಅತ್ತಿಗೆ? ನನಗೂ ಹಾಗಾಗಿ ಬಿಟ್ಟರೆ? ನನಗೇನೋ ಹುಟ್ಟಿದಾಗಿನಿಂದಲೂ ಈ ಸ್ಥಿತಿಯಲ್ಲೇ ಇದೀನೇನೋ ಎನಿಸಿಬಿಟ್ಟಿದೆ ಎಂದಿಗೆ ನಾನು ಬಿಡುವಾಗಿ ಓಡಾಡಿಯೇನೋ ಎನಿಸುತ್ತದೆ"—ಎಂದಳು ಸರಳಾ.

"ಕೆಲವರಿಗೆ ಒಂದು ವರ್ಷದ ನಂತರ ಮಗುವಾಗುತ್ತದೆಯಂತೆ"—ಎಂದರು ಮತ್ತೊಬ್ಬರು.

"ಅವಳನ್ನ ಹೆದರಿಸಬೇಡಿ ಬಹುಶಃ ಅವಳಿಗೆ ಹೆಣ್ಣು ಮಗುವಾಗ ಬಹುದು. ಆದುದರಿಂದಲೇ ಇಷ್ಟುದಿನ ಮಗೂನ ಹೊತ್ತಿದಾಳೆ"—ಎಂದು ರಂಗಮ್ಮ ಎಲ್ಲರನ್ನೂ ಸಮಾಧಾನಗೊಳಿಸಿದರೂ ಅವರಿಗೂ ಮನಸ್ಸಿನಲ್ಲಿ ಆತಂಕವಿತ್ತು.

ಒಂದು ರಾತ್ರಿ ಸರಳೆ ನೋವಿನಿಂದ ಎಚ್ಚರಗೊಂಡಳು. ನರವೊಂದು ಸಣ್ಣದಾಗಿ ಒಳಗೊಳಗೇ ನೋಸೆದಾಡುತ್ತಿದ್ದುದರ ಅನುಭವವಾಯಿತು ಅವಳಿಗೆ.

ಅವಳು ಅಲ್ಲಿಯೇ ಮಲಗಿದ್ದ ವಾಸುವಿಗೆ "ರೀ" ಎಂದಳು.

ಆತಂಕದಿಂದ ವಾಸುವಿಗಂತೂ ಈಚೀಚೆಗೆ ನಿದ್ದೆಯೇ ಬರುತ್ತಿರಲಿಲ್ಲ. ಆದುದರಿಂದ ಸರಳಾ ಕರೆದ ಕೂಡಲೇ ಅವನು ಗಾಬರಿಯಿಂದ ಎದ್ದು ಕುಳಿತ.

"ಯಾಕೋ ಹುಷಾರಿಲ್ಲಾ ರೀ"—ಎಂದಳು ಸರಳಾ.

ವಾಸು ಎದ್ದು ದೀಪ ಹಾಕಿದ. ಸರಳೆ ಹಾಸಿಗೆಯ ಮೇಲೆ ಕುಳಿತಿದ್ದಳು.

"ಟ್ಯಾಕ್ಸಿ ತರಲೇನು?"

"ಹೇಗೆ ಹೇಳಲಿ?"

"ಅಕ್ಕನ ಮನೆಗೆ ಹೋಗಿ ಕಾರು ತರಿಸುತ್ತೇನೆ" ಎನ್ನುತ್ತಾ ವಾಸು ಉಡುಪಿನಲ್ಲಿ ಕೊಂಚ ಸುಧಾರಣೆ ಮಾಡಿಕೊಂಡು ಹೋಗಿ ತಾಯಿಯನ್ನ

ಎಬ್ಬಿಸಿದ.

ರಂಗಮ್ಮನವರು ಎದ್ದು ಬಂದು ಸರಳೆಯ ಹತ್ತಿರ ಕೂತುಕೊಂಡರು. ವಾಸು ಅಕ್ಕನ ಮನೆಗೆ ಧಾವಿಸಿದ. ವಾಸು ಭಾವನನ್ನು ಅಳಿಯನ ಕಾರಿನಲ್ಲಿ ಗಡಿಬಿಡಿಯಿಂದ ಮನೆಗೆ ಬಂದ

ದಾರಿಯುದ್ದಕ್ಕೂ ವಾಸುವಿಗಾದ ಆತಂಕ ಅಸಾಧ್ಯ.

"ಏನು ಗತಿ ಭಾವ? ನನಗ್ಯಾಕೋ ಕೈಕಾಲೆಲ್ಲಾ ನಡುಗುತ್ತಿದೆ. ಈ ಬಾರಿ ಸರಳೆ ಉಳಿದುಬಿಟ್ಟರೆ ಸಾಕು. ಇನ್ನು ಎಂದೆಂದಿಗೂ ಅವಳಿಗೆ ಕಷ್ಟ ಕೊಡೋದಿಲ್ಲ ಭಾವ, ಏನು ಗತಿ?"

ಎಂಟು ಹತ್ತು ಮಕ್ಕಳ ತಂದೆಯಾಗಿದ್ದ ಆ ಭಾವನಿಗೆ ವಾಸುವಿನ ಹೆದರಿಕೆ ನೋಡಿ ನಗುಬಂತು ಅವರು ಕಿರುನಗೆ ಬೀರಿ

"ವಾಸಣ್ಣಾ, ಅರುಂಧತಿ ಹುಟ್ಟುವಾಗ ನನಗೂ ಹೀಗೆ ಎನಿಸಿತ್ತು. ಆದರೆ ಆಮೇಲೆ ಸಲೀಸಾಗಿ ಹೋಯಿತು. ಹೆರಿಗೆ ನೋವಿನಿಂದ ಒದ್ದಾಡುತ್ತಿದ್ದ ನಿಮ್ಮ ಅಕ್ಕನನ್ನು ಆಸ್ಪತ್ರೆಯಲ್ಲಿ ಬಿಟ್ಟುಬಂದು ನಾನು ಸುಖವಾಗಿ ಮನೆಯಲ್ಲಿ ಮಲಗಿ ನಿದ್ದೆ ಮಾಡಿದ್ದೇನೆ"—ಎಂದರು.

"ಭಾವ, ನನ್ನ ಕೈಲಾಗೋದಿಲ್ಲ. ಯಾಕೋ ಹೆದರಿಕೆ."

ವಾಸು ಸೂಕ್ಷ್ಮವಾಗಿ ನಡುಗುತ್ತಿದ್ದುದನ್ನು ಭಾವ ಗಮನಿಸಿದರು.

ಅವರು ಮನೆ ಸೇರಿದಾಗ ಸರಳೆ ಶಾಂತವಾಗಿ ಮಲಗಿ ನಿದ್ರಿಸುತ್ತಿದ್ದಳು. ಅಳಿಯ, ಮಗನನ್ನು ನೋಡಿ ರಂಗಮ್ಮ ಬಾಯಿಯ ಮೇಲೆ ಕೈಯಿಟ್ಟು ಸನ್ನೆ ಮಾಡಿ ಅವರನ್ನು ಆಚೆಗೆ ಕರೆದುಕೊಂಡು ಹೋಗಿ

"ಇದೇ ತಾನೆ ನಿದ್ದೆ ಮಾಡೋಕೆ ಶುರುಮಾಡಿದಳು. ಬಹುಶಃ 'ಹುಸಿ ಎಚ್ಚರಿಕೆ' ಇರಬೇಕು. ಏನಾದರಾಗಲಿ ನೀವು ಇಲ್ಲೇ ಮಲಗಿರಿ"—ಎಂದಾಕೆ ಅಳಿಯನಿಗೆ ಬಿನ್ನವಿಸಿಕೊಂಡರು.

ತಂದೆ, ತಾಯಿ, ಮಗ, ಅಳಿಯ ರಾತ್ರಿ ಜಾಗರಣೆ ಮಾಡಿದಾಗ ಸರಳೆ ನಿರಾತಂಕವಾಗಿ ಮಲಗಿ ನಿದ್ರಿಸಿದಳು.

ಮಾರನೆಯ ದಿನ ಬೆಳಗ್ಗೆ ರಂಗಮ್ಮ ಸರಳೆಯನ್ನು ಅಳಿಯನ ಕಾರಿನಲ್ಲಿ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಡಾಕ್ಟರು ಆಕೆಯನ್ನು ಪರೀಕ್ಷಿಸಿ

ಬರೀ 'ಹುಸಿ ಎಚ್ಚರಿಕೆ' ಅಷ್ಟೆ. ವಾಯಿದೆ ಕಳೆದಿದ್ದರೂ ಯಾಕೆ ಹೀಗೆ ತಡವಾಗ್ತಿದೆ? ಪರೀಕ್ಷೆ ಮಾಡಲು ಕೈಯಿರಿಸಿದರೆ ಕುಣಿದಾಡುತ್ತಾನೆ. ಯಾಕಪ್ಪಾ ಹೀಗೆ ಫೀಮು ನಿಧಾನ ಮಾಡ್ತಿದೀಯಾ?"—ಎಂದರು.

ಅವರ ಮಾತು ಕೇಳಿ ಸರಳೆ ನಕ್ಕಳು.

"ಡಾಕ್ಟರ್, ನೀವು ಏನೂ ಮಾಡೋಕೆ ಆಗೋದಿಲ್ಲವೇ ?"

"ಛೇ ಛೇ....ಗಿಡದ ಮೇಲಿನ ಕಾಯಿ ತಾನಾಗಿಯೇ ಹಣ್ಣಾಗಿ ಉದುರಿದರೇ ಸೊಗಸು. ನಾವು ಅದನ್ನು ಮೊದಲೇ ಕಿತ್ತು ಅಡಿ ಹಾಕಿದರೆ ಏನು ಚೆನ್ನ?"

"ಈಗೇನು ಮಾಡಲಿ ?"

"ಮನೆಗೆ ಹೋಗಿ ಚೆನ್ನಾಗಿ ಉಂಡು, ತಿಂದು ಮಲಗಿ"—ಎನ್ನುತ್ತಾ ಆಕೆ ಸರಳೆಯ ಬೆನ್ನುತಟ್ಟಿ ಕಳುಹಿಸಿದರು.

ಮೊಮ್ಮಗನ ಮೊಂಡತನದಿಂದ ರಂಗಮ್ಮನವರು ಗಾಬರಿಯಾದರು. ಆಕೆ ವಾಸುವಿಗೆ

"ಲೋ ವಾಸು, 'ಇವನು' ಮೊಂಡತನದಲ್ಲಿ ನಿನ್ನನ್ನೂ ಮೀರಿಸಿದ್ದಾನೆ ಕಣೋ"—ಎಂದರು.

ಆಕೆ ಜೀವ ನಿಲ್ಲದೆ ಹತ್ತಿರದಲ್ಲಿಯೇ ಇದ್ದ ಜೋಯಿಸರ ಬಳಿಗೆ ಸರಳೆ, ವಾಸುವಿನ ಜಾತಕಗಳನ್ನು ತೆಗೆದುಕೊಂಡು ಹೋದರು. ಆತ ಬಹಳ ಹೊತ್ತು ಗುಣಾಕಾರ ಹಾಕಿ

"ಕೆಲವು ಗ್ರಹಗಳು ತಡೆಯನ್ನುಂಟುಮಾಡಿವೆ. ನಾನೊಂದು ಅರಿಶಿನದ ದಾರ ಮಂತ್ರಿಸಿ ಕೊಡುತ್ತೇನೆ. ಅದನ್ನು ನೀವು ಹುಡುಗಿಯ ಬಲಗೈಗೆ ಕಟ್ಟಿ. ದಾರವನ್ನು ಕಟ್ಟುವಾಗ ಹುಡುಗಿಯನ್ನು ಪೂರ್ವದಿಕ್ಕಿಗೆದುರಾಗಿ ಕೂರಿಸಿ ಕಟ್ಟಿ"—ಎಂದರು.

ರಂಗಮ್ಮ ದಾರವನ್ನು ಬಹಳ ಭಯ, ಭಕ್ತಿಯಿಂದ ತಂದು ಸರಳೆಯ ಬಲಗೈಗೆ ಕಟ್ಟಿದರು.

ಸರಳೆಯ ಕೈಗೆ ದಾರ ಕಟ್ಟಿ ಒಂದು ವಾರವಾದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಸರಳೆಯಂತೂ ಆ 'ಗಳಿಗೆ'ಯನ್ನು ಎದುರಿಸಲು ಹಿಂಜರಿಯುತ್ತಿದ್ದರೂ ಅಸಹನೆಯಿಂದ ಕುದಿಯುತ್ತಿದ್ದಳು.

ಒಮ್ಮೆ ರಂಗಮ್ಮನವರು ಊಟದ ಸಮಯದಲ್ಲಿ "ಸರಳಾ, ಊಟಕ್ಕೆ ಬಾ"—ಎಂದರು.

"ನಾನು ಬರೋದಿಲ್ಲ"—ಎಂದಳು ಸರಳೆ.

"ಯಾಕೆ ಹಸಿವಾಗಿಲ್ಲವೆ?"–ಆಕೆ ಎದ್ದು ಸರಳೆಯ ಬಳಿಗೆ ಬಂದರು.

"ಹಸಿವಾಗಿದೆ. ಆದರೂ ನಾನು ಊಟ ಮಾಡೋದಿಲ್ಲ."

"ಯಾಕೆ?"

"ನಿಮ್ಮ ಮೊಮ್ಮಗನಿಗೆ ಹೀಗೆ ಹೊಟ್ಟೆಗೆ ಹಾಕದೆ ಉಪವಾಸ ಕೆಡವ್ತೀನಿ. ಆಗಲಾದರೂ ಅವನು ಹೆದರಿಕೊಂಡು ಓಡಿ ಬರುತ್ತಾ ನೇನೋ ನೋಡೋಣ."

ರಂಗಮ್ಮನಿಗೆ ಸೊಸೆಯ ಮಾತು ಕೇಳಿ ನಗು ಬಂತು.

"ವಾಸು, ಕೇಳ್ತಿದೀಯೇನೋ ನಿನ್ನ ಹೆಂಡತಿಯ ಮಾತನ್ನ?"— ಎಂದಾಕೆ ಮಗನನ್ನು ಕೂಗಿದರು

"ಏನಂತೆ?"—ಎನ್ನುತ್ತಾ ವಾಸು ಹೊರಗೆ ಬಂದ.

"ನಿಮ್ಮ ಮಗನಿಗೆ ಅಚ್ಚುಕಟ್ಟಾಗಿ ಊಟ, ತಿಂಡಿ, ಹಾಲು, ಹಣ್ಣು ಎಲ್ಲಾ ಸರಬರಾಜಾಗುತ್ತಿದೆ. ಆದುದರಿಂದ ಅವನು ಹೊರಗೆ ಬರೋಕೆ ಇಷ್ಟ ಪಡುವುದಿಲ್ಲ. ನಾನು ಉಪವಾಸವಿದ್ದು ಅವನನ್ನು ಗೋಳಾಡಿಸು ತ್ತೇನೆ. ಆಗ ತಾನಾಗಿಯೇ ಬರುತ್ತಾನೆ."

ರಂಗಮ್ಮ, ವಾಸು ಇಬ್ಬರೂ ಸೇರಿ ಕೊನೆಗೆ ಸರಳೆಯನ್ನು ಸಮಾ ಧಾನಗೊಳಿಸಿ ಊಟಕ್ಕೆ ಕರೆದೊಯ್ದರು. ಸರಳೆ ಎಂದಿಗಿಂತ ಒಂದು ತುತ್ತು ಹೆಚ್ಚಾಗಿಯೇ ಉಂಡು ಶಾಂತಳಾದಳು.

ದಿನ ದಿನಕ್ಕೆ ಸರಳೆಯ ಸಹನೆಯ ಕಟ್ಟೆ ಸಡಿಲವಾಗುತ್ತಾ ಬಂತು. ಅವಳು ಪ್ರತಿದಿನವೂ ವಾಸು, ರಂಗಮ್ಮನವರೆದುರಿಗೆ ಗಲಾಟೆ ಮಾಡು ತ್ತಿದ್ದಳು

"ನಾನು ಊಟ ಮಾಡೋದಿಲ್ಲ. ತಿಂಡಿ ತಿನ್ನುವುದಿಲ್ಲ. ಅವನು ಹುಟ್ಟಲಿ—ಈಗ ನನಗೆ ಹಿಂಸೆ ಮಾಡಿದ ಹಾಗಲ್ಲ. ಅವನನ್ನು ಚೆನ್ನಾಗಿ ಕಿರುಗುಟ್ಟಿಸುತ್ತೇನೆ. ಸಾಕು ಹೆಣ್ಣು ಜನ್ಮ. ಪುಣ್ಯಾತ್ಮರು ಏಳನೇ ತಿಂಗಳ ನಲ್ಲೇ ಮೈಭಾರ ಕಳೆದುಕೊಳ್ಳುತ್ತಾರೆ. ನನ್ನ ಅದೃಷ್ಟವೇ ಹೀಗೆ...." ಎಂದು ಅವಳು ಗೊಣಗುತ್ತಿದ್ದಳು. ಸರಳೆಗೆ ದಿನ ತುಂಬಿದ ಮೇಲೆ ಮತ್ತೆ ಬಂದಿದ್ದ ಪಂಕಜಮ್ಮನಿಗೂ ಸರಳೆಯನ್ನು ಸಮಾಧಾನ ಮಾಡಿ ಸಾಕಾಗಿತ್ತು.

"ಬೇಜಾರು ಪಟ್ಟುಕೊಳ್ಳಬೇಡ ಸರಳಾ. ಏನು ಮಾಡೋದು?"— ಎಂದಾಕೆ ಪ್ರತಿದಿನವೂ ಸರಳೆಗೆ ಹೇಳುತ್ತಿದ್ದರು.

ಒಂಭತ್ತೂವರೆ ತಿಂಗಳಿನ ಹಿಂದೆ ಅಣು ಮಾತ್ರವಾಗಿ, ಕಣ್ಣಿಗೆ ಕಾಣಿಸದವನಾಗಿ ಸರಳೆಯನ್ನು ಆಶ್ರಯಿಸಿದ 'ವ್ಯಕ್ತಿ' ಎಷ್ಟು ದಿನವೆಂದು ಸರಳೆಯ ಬೈಗುಳ, ಗೊಣಗಾಟ, ಕೋಪ ತಾಪ ಕೇಳಿಯಾನು?

ಕೊನೆಗೊಂದು ದಿನ ಆತ ಸೆರೆಮನೆಯಿಂದ ಬಿಡುಗಡೆ ಬೇಡಿದ. ಕೈದಿ ತನ್ನ ಸೆರೆಮನೆಯ ಕಬ್ಬಿಣದ ಕಂಬಿಯನ್ನು ಹಿಡಿದು ಜಗ್ಗಿಸಿ ಬಿಡುಗಡೆಗಾಗಿ ಯತ್ನಿಸುವಂತೆ ಆತ ಸರಳೆಯ ಬೆನ್ನೆಲುಬನ್ನು ಹಿಡಿದು ನಿಧಾನವಾಗಿ ಕುಲುಕ ತೊಡಗಿದ.

ಆದೇ ತಾನೇ ಬೆಳಗಿನ ಊಟವನ್ನು ಮುಗಿಸಿ ಮಲಗಿದ್ದ ಸರಳೆಗೆ ಹೊಡೆದು ಎಬ್ಬಿಸಿದಂತಾಯಿತು. ಸರಳಾ ಧಿಗ್ಗನೆದ್ದು ಹಾಸಿಗೆಯ ಮೇಲೆ ಕುಳಿತುಕೊಂಡಳು.

ಆತ ಬಿಡುಗಡೆಗಾಗಿ ಅವಳನ್ನು ನಿಧಾನವಾಗಿ ಇಬ್ಭಾಗ ಮಾಡುತ್ತಿದ್ದ

"ಚಿಕ್ಕಮ್ಮಾ" ಎಂದು ಕೂಗಿದಳು ಸರಳಾ.

"ಏನು?"—ಎನ್ನುತ್ತಾ ಆಕೆ, ರಂಗಮ್ಮ ಧಾವಿಸಿ ಬಂದರು.

"ಆಸ್ಪತ್ರೆಗೆ ಹೋಗೋಣ."

"ನಿಜವಾಗಲೂ ಹೋಗಲೇಬೇಕೋ? ಅಥವಾ ಆ ಸಲದ ಹಾಗೆ ಹುಸಿ ಎಚ್ಚರಿಕೆಯೋ?"

"ಆ ಸಲದ ಹಾಗಲ್ಲ. ಅಯ್ಯೋ ಚಿಕ್ಕಮ್ಮಾ, ನನ್ನ ಕೈಲಿ ಆಗುವುದಿಲ್ಲ". ಸರಳೆ ನರಳಿದಳು.

ತಮ್ಮಯ್ಯನವರು ವಾಸುವನ್ನು ಕರೆಯಲು ಕಾಲೇಜಿಗೆ ಓಡಿದರು. ಇಪ್ಪತ್ತು ನಿಮಿಷಗಳಲ್ಲಿ ವಾಸು ಮನೆಗೆ ಬಂದ

ಹಾಸಿಗೆಯ ಮೇಲೆ ನೋವಿನಿಂದ ಮುಖ ಹಿಂಡುತ್ತಾ ಕುಳಿತಿದ್ದ ಸರಳೆಯನ್ನು ನೋಡಿ ಅವನು ಶಿಲಾಪ್ರತಿಮೆಯಂತೆ ನಿಂತುಬಿಟ್ಟ.

ಅವಳ ನಗು, ಮಾತು, ಕತೆ ಎಲ್ಲಿ?

ಬಿಚ್ಚಿದ ತಲೆಗೂದಲು, ಬೆವರುತ್ತಿದ್ದ ಮುಖ, ಅದುರುತ್ತಿದ್ದ ತುಟಿಗಳು, ಹೊರಳಾಡುತ್ತಿದ್ದ ದೇಹ....

ವಾಸು ಸರಳೆಗಿಂತಲೂ ಕಂಗೆಟ್ಟ. ಅವನು ಕೂಡಲೇ ಹಿಂದಿನ ಸಾಲಿನ ಮನೆಯಲ್ಲಿದ್ದ ಎಂಜಿನೀಯರ ಮನೆಗೆ ಓಡಿದ-ವೈದ್ಯರಿಗೆ ಫೋನುಮಾಡಲು.

ವಾಸು ಆತುರದಿಂದ ವೈದ್ಯರಿಗೆ ಫೋನು ಮಾಡಿದ. ಎರಡು ನಿಮಿಷಗಳ ನಂತರ ಅವನಿಗೆ ಸಿಕ್ಕಿ ಫೋನಿನಲ್ಲಿ ಮಾತನಾಡಿದರು.

"ಹೆಸರು?"

"ವಾಸು"—ವಾಸು ಆತುರವಾಗಿ ಹೇಳಿದ.

"ನಿಮ್ಮದಲ್ಲ. ನಿಮ್ಮಾಕೆಯದು?"

"ಸರಳಾ."

"ನನಗೇ ಆ ಕೇಸು ತಗೊಳ್ಳಲು ಹೇಳಿದ್ದರು. ಅಲ್ಲವೇ?"

"ಹೌದು."

"ನೋವು ಎಷ್ಟು ಹೊತ್ತಿಗೊಂದು ಸಲ ಬರುತ್ತಿದೆ?"

ನೋವು ಬರಲು ಹೊತ್ತು ಬೇರೆ ಇದೆಯೇ?

"ತಿಳಿಯದು ವಿಚಾರಿಸುತ್ತೇನೆ."

"ಆಗಲಿ ಅರ್ಧಗಂಟೆಗೊಂದು ಸಲ ನೋವು ಬರುತ್ತಿದ್ದರೆ ಈಗಲೆ ಕರೆದುಕೊಂಡು ಬಂದು ಸೇರಿಸಿ ಬಿಡಿ"—ವೈದ್ಯರು ಶಾಂತವಾದ ದನಿಯಲ್ಲಿ ಹೇಳಿದರು.

"ಅರ್ಧಗಂಟೆಗೊಂದು ಸಲ ನೋವು ಬರುವವರೆವಿಗೆ ಆಕೆಯನ್ನು ನಿಮ್ಮಲ್ಲಿಗೆ ಕರೆದುಕೊಂಡು ಬರುವುದು ಬೇಡವೇ?"

"ಬೇಡ"—ಎನ್ನುತ್ತಾ ಆಕೆ ರಿಸೀವರನ್ನು ಕೆಳಗಿಟ್ಟರು.

ವಾಸು ಅಸಹನೆಯಿಂದ, ಕೋಪದಿಂದ ಕುದ್ದು ಹೋದ. ಸರಳೆ ಅಲ್ಲಿ ನೋವಿನಿಂದ ಸಾಯುತ್ತಿರುವಾಗ ಈ ವೈದ್ಯರು ಎಷ್ಟು ಶಾಂತವಾಗಿ ಈಗಲೇ ಕರೆದುಕೊಂಡು ಬರುವುದು ಬೇಡವೆನ್ನುತ್ತಿದ್ದಾರೆ!

ಮನುಷ್ಯರ ದೇಹಕ್ಕೆ, ಜೀವಕ್ಕೆ ಅವರ ದೃಷ್ಟಿಯಲ್ಲಿ ಬೆಲೆಯೇ ಇಲ್ಲವೇನೋ?

ವಾಸು ಮನೆಗೋಡಿ ಬಂದ ಸರಳೆಗಿಂತಲೂ ಅವನೇ ಹೆಚ್ಚಾಗಿ ಬೆವರುತ್ತಿದ್ದ. ಅವನ ಹೃದಯ ಡಬ ಡಬ ಎಂದು ಬಡಿದುಕೊಳ್ಳುತ್ತಿತ್ತು.

ಮನೆಯಲ್ಲಿ ಏನು ಸುದ್ದಿ ಕಾದಿದೆಯೋ? ತನ್ನ ಸರಳೆ ಜೀವಂತಳಾಗಿರುವಳೋ, ಇಲ್ಲವೋ?

ವಾಸು ಏದುಸಿರು ಬಿಡುತ್ತಾ ಒಳಗೆ ಬಂದ. ಮನೆ ಶಾಂತವಾಗಿತ್ತು. ತಾನು ಮನೆಯಿಂದ ಹೊರಟಾಗ ನೋವಿನಿಂದ ನರಳುತ್ತಿದ್ದ ಸರಳೆ ಈಗ ಹಾಯಾಗಿ ಮಲಗಿ ನಿದ್ರಿಸುತ್ತಿದ್ದಳು. ಅವಳ ಪಕ್ಕದಲ್ಲಿ ಪಂಕಜಮ್ಮ ಕುಳಿತಿದ್ದರು. ವಾಸು ಕೈಸನ್ನೆ ಮಾಡಿ ಆಕೆಯನ್ನು ಹೊರಗೆ ಕರೆದು ವೈದ್ಯರು ಹೇಳಿದುದನ್ನು ತಿಳಿಸಿದ.

"ಇದೇ ಈಗ ಮಲಗಿದಳು. ನೋಡೋಣ. ವಾಸೂ, ನೀನೇ ಯಾಕಪ್ಪ ಇಷ್ಟೊಂದು ಹೆದರಿ ಕಂಗಾಲಾಗಿದೀಯ"—ಎನ್ನುತ್ತಾ ಆಕೆ ಸರಳೆಗಾಗಿ ಮಾಡಿರಿಸಿದ ಕಾಫಿಯನ್ನು ವಾಸುವಿಗೆ ತಂದುಕೊಟ್ಟರು.

ವಾಸು ಒಂದೇ ಗುಟುಕಿಗೆ ಕಾಫಿಯನ್ನು ಹೀರಿ ಕುರ್ಚಿಯ ಮೇಲೆ ಒರಗಿದ.

ಈ ಬಗೆಯ ಆತಂಕದಿಂದ ಸಾಯುವುದಕ್ಕಿಂತಲೂ ಸ್ವತಃ ನಾವೇ ಏನನ್ನಾದರೂ ಅನುಭವಿಸುವುದು ಸುಲಭ—ಎಂದುಕೊಂಡ ವಾಸು.

ಒಂದು ಗಂಟೆಯ ನಂತರ ಸರಳೆ ಮತ್ತೆ ಪೆಟ್ಟು ತಿಂದವಳಂತೆ ಮಲಿದ್ದಳು. ಹತ್ತು ನಿಮಿಷಗಳ ಸತತ ನೋವನ್ನು ಅನುಭವಿಸಿದ ನಂತರ ಅವಳು ಶಾಂತಳಾದಳು.

"ಏನಾದರಾಗಲಿ, ಆಸ್ಪತ್ರೆಗೆ ಹೊರಡುವ ತಯಾರಿ ನಡೆಸಿದ್ದ ರಾದೀತು"–ಎನ್ನುತ್ತ ಪಂಕಜಮ್ಮ ರಂಗಮ್ಮ ತಮಗೆ ಬೇಕಾದುದನ್ನೆಲಾ ಚೀಲಕ್ಕೆ ಹಾಕಿದರು.

ಸರಳೆಯೂ ತಯಾರಿ ನಡೆಸಿದಳು.

ಕನ್ನಡಿಯ ಮುಂದೆ ಕುಳಿತು ಓರಣವಾಗಿ ತಲೆ ಬಾಚಿಕೊಂಡು, ಸ್ನೋ ಪೌಡರು, ಕಪ್ಪು-ಇವುಗಳಿಂದ ಶೃಂಗರಿಸಿಕೊಂಡಳು. ಜಡೆಗೆ ಹೂ ಮುಡಿದು, ಅದು ಸೊಟ್ಟಾಯಿತೆಂದು ಮತ್ತೆ ಸರಿಯಾಗಿ ಮುಡಿದು ಕೊಂಡಳು ಸರಳಾ.

"ಚಿಕ್ಕಮ್ಮ, ಬೇರೆ ಸೀರೆ—ರೇಶ್ಮೆಯದು ಉಡಲೇ?—" ಎಂದವಳು ಕೇಳಿದಾಗ ಚಿಕ್ಕಮ್ಮನಿಗೆ ನಗು ತಡೆಯಲಾಗಲಿಲ್ಲ.

"ಬೇಡ ಸರಳಾ, ಅಲ್ಲಿ ನಿನಗೆ ಹೇಗಿದ್ದರೂ ಬೇರೆಯ ಉಡುಪು ಕೊಡುತ್ತಾರೆ. ಯಾವುದೂ ಬೇಡ"—ಎಂದರಾಕೆ.

"ಈ ಸೀರೆ ಕೊಳೆಯಾಗಿದೆ ಚಿಕ್ಕಮ್ಮಾ. ಇದರಲ್ಲಿ ನಾನು ಹೇಗೆ ಬರಲಿ...." ಎನ್ನುತ್ತಿದ್ದಂತೆ ಸರಳೆ ನೋವಿನಿಂದ ಮುಖ ಹಿಂಡಿ ಕುಸಿದು ಕುಳಿತಳು.

ತಮ್ಮಯ್ಯನವರು ಅರುಂಧತಿಯೊಡನೆ ಕಾರಿನಲ್ಲಿ ಬಂದಾಗ ಸರಳೆ ಕ್ಷೀಣವಾದ ದನಿಯಲ್ಲಿ ಚೀರುತ್ತಿದ್ದಳು. ವಾಸುವಂತೂ ಎರಡು ಕಿವಿಗೂ ಬೆರಳಿಟ್ಟುಕೊಂಡು ಪಂಜರದೊಳಗಿನ ಪ್ರಾಣಿಯಂತೆ ಓಡಾಡುತ್ತಿದ್ದ.

ಸರಳೆಯನ್ನೂ, ಅವಳ ಸ್ಥಿತಿಯನ್ನೂ ನೋಡಿ ಅರುಂಧತಿ ಕೂಡಲೇ ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿದಳು—ತಾನು ಎಂದೆಂದಿಗೂ ಅವಿವಾಹಿತ ಳಾಗಿಯೇ ಉಳಿಯುವುದಾಗಿ.

ತಮ್ಮಯ್ಯನವರನ್ನು ಮನೆಯ ಕಾವಲಿಗಿರಿಸಿ, ಉಳಿದವರೆಲ್ಲಾ ಆಸ್ಪತ್ರೆಗೆ ಹೊರಟರು. ವಾಸು ಆಸ್ಪತ್ರೆಗೆ ಹೊರಡಲಾರ, ಹೋಗದಿರಲಾರ.

ಕೊನೆಗೆ ರಂಗಮ್ಮನೇ ಅವನನ್ನೂ ಹೊರಡಿಸಿದರು.

"ನೀನೂ ಹತ್ತಿರವಿದ್ದರೆ ಸರಳೆಗೆ ಎಷ್ಟೋ ಧೈರ್ಯವಿರುತ್ತದೆ. ಬಾ" —ಎಂದಾಕೆ ಅವನನ್ನು ಕರೆದಾಗ

"ಅವನಿಗೆ ಧೈರ್ಯ ಸರಳೆಯೇ ಹೇಳಬೇಕು"—ಎಂದು ಪಂಕಜಮ್ಮ ನಕ್ಕರು.

ಕಾರು ಆಸ್ಪತ್ರೆಯ ಕಾಂಪೌಂಡಿನೊಳಗೆ ಬಂದ ಕೂಡಲೇ ಮುಂದಿದ್ದ ಸೀಟಿನಿಂದ ವಾಸು ಹಿಂತಿರುಗಿ ಸರಳೆಯ ಮುಖವನ್ನು ನೋಡಿ ನಕ್ಕ. ಸರಳೆ ಆ ನೋವಿನಲ್ಲೂ ಮಂದಹಾಸ ಬೀರಿದಳು.

ಸರಳೆಯನ್ನು ಮೊದಲಿನಿಂದಲೂ ನೋಡಿಕೊಳ್ಳುತ್ತಿದ್ದ ವೈದ್ಯರು ಸ್ವತಃ ಬಂದು ಅವಳನ್ನು ಅಡ್ಮಿಟ್ ಮಾಡಿಕೊಂಡರು. ಸರಳೆಯನ್ನು ಒಳಗೊಯ್ದು ಪರೀಕ್ಷಿಸಿ ಹೊರಗೆ ನಿಂತಿದ್ದ ಗುಂಪಿಗೆ

"ಬೆಳಗಿನ ಜಾವ ನಾಲ್ಕು ಗಂಟೆಯವರೆವಿಗೆ ಹೆರಿಗೆಯಾಗುವ ಹಾಗೆ ಕಾಣುವುದಿಲ್ಲ. ಎಲ್ಲರೂ ಮನೆಗೆ ಹೋಗಿ. ಹುಡುಗಿಯ ತಾಯಿಯೊಬ್ಬರು ಇಲ್ಲಿದ್ದರೆ ಸಾಕು"—ಎಂದು ಹೇಳಿ ಹೊರಟುಹೋದರು.

ಅರ್ಧಗಂಟೆಯ ಚರ್ಚೆಯ ನಂತರ ವಾಸು, ಪಂಕಜಮ್ಮ ಅಲ್ಲಿಯೇ ಉಳಿದರು. ಅರುಂಧತಿ ರಂಗಮ್ಮನವರನ್ನು ಮನೆಯಲ್ಲಿ ಬಿಟ್ಟು ರಾತ್ರಿ ಹತ್ತು ಗಂಟೆಯ ವೇಳೆಗೆ ತಾನು ಅನ್ನ ತರುವುದಾಗಿ ಹೇಳಿ ಹೋದಳು.

ಡಾಕ್ಟರ ಹಿಂದಿನಿಂದ ಸರಳೆಯೂ ಎದ್ದು ಹೊರಗೆ ಬಂದು ಬೆಂಚಿನ ಮೇಲೆ ಕುಳಿತಳು. ಪಂಕಜಮ್ಮ ಸರಳೆಗೂ, ಸರಳೆ ವಾಸುವಿಗೂ ಧೈರ್ಯ ತುಂಬುತ್ತಾ ಕುಳಿತರು.

ವಾಸುವಿನ ಕೈಗಡಿಯಾರದ ಮುಳ್ಳುಗಳು ಮುಂದಕ್ಕೆ ಚಲಿಸುತ್ತಿದ್ದವು.

ರಾತ್ರಿ ಹತ್ತುಗಂಟೆಯ ವೇಳೆಗೆ ಸರಳೆಯ ನೋವು ಅಧಿಕವಾಯಿತು. ನರ್ಸೊಬ್ಬಳು ಹೊರಗೆ ಬಂದು ಸರಳೆಯ ತೋಳು ಹಿಡಿದು ಒಳಗೆ ಕರೆದೊಯ್ದಳು.

"ಅವರು ಯಾರು?"—ಎಂದಳು ನರ್ಸ್.

"ಆಕೆ ನನ್ನ ತಾಯಿ. ಅವರು ನಮ್ಮವರು" - ಎಂದಳು ಸರಳಾ - ಹೆಮ್ಮೆಯಿಂದ.

ಹತ್ತೂಕಾಲು ಗಂಟೆಗೆ ರಾಜಗೋಪಾಲ ಆಸ್ಪತ್ರೆಗೆ ಧಾವಿಸಿ ಬಂದ. ಅವನೊಡನೆ ರುಕ್ಕಮ್ಮನೂ ಬಂದಿದ್ದರು.

"ಹೇಗಿದಾಳೆ ಸರಳಾ?"—ರುಕ್ಕಮ್ಮ ಕೇಳಿದರು.

"ಹಾಗೇ ಇದಾಳೆ. ಪರೀಕ್ಷೆ ಮಾಡೋಕೆ ಒಳಗೆ ಕರೆದುಕೊಂಡು ಹೋಗಿದ್ದಾರೆ. ಅರ್ಧ ಗಂಟೆಗೊಂದು ಸಲ ನೋವು ಬರ್‍ತಿದೆ"—ಎಂದರು ಪಂಕಜಮ್ಮ.

"ನಾನು ಹೊಡ್ಡ ಡಾಕ್ಟರನ್ನು ನೋಡಿ ಬರುತ್ತೇನೆ"—ಎನ್ನುತ್ತಾ ವಾಸು ಎದ್ದು ಹೋದ. ಅವನು ಹೋದ ಐದು ನಿಮಿಷಗಳಲ್ಲಿ ಅರುಂಧತಿ, ಅವಳ ತಂದೆ ಸರಳೆಗೆ ಊಟ ತಂದರು.

ರಾಜಗೋಪಾಲ ವರಾಂಡದಲ್ಲಿದ್ದ ಕಂಭವೊಂದನ್ನೊರಗಿ ಹಿಮ್ಮೊಗ ನಾಗಿ ನಿಂತಿದ್ದ. ನಸುಕತ್ತಲಿನಲ್ಲಿ ಅರುಂಧತಿ ಅವನ ಬಳಿ ಹೋಗಿ

"ವಾಸೂ ಕೊಂಚ ತಡವಾಯಿತು. ಊಟ ತಂದಿದೀನಿ. ಸರಳಾ ಎಲ್ಲಿ?"—ಎಂದಳು.

ರಾಜಗೋಪಾಲ ಗಕ್ಕನೆ ತಿರುಗಿ ಅರುಂಧತಿಯನ್ನು ನೋಡಿದ. ಅಪರಿಚಿತನನ್ನು ನೋಡಿ ಅರುಂಧತಿ ಎರಡು ಹೆಜ್ಜೆ ಹಿಂದೆ ಸರಿದು

"ತಿಳಿಯಲಿಲ್ಲ.ಕ್ಷಮಿಸಿ" - ಎಂದವಳೇ ಪಂಕಜಮ್ಮನ ಕಡೆ ನಡೆದಳು. ಅವಳ ಜಡೆ ಭಾರದಿಂದ ತೂಗಾಡಿತು. ಸೆರಗು ಹಾರಾಡಿತು. ಒಡತಿ ಮುಂದಕ್ಕೆ ಸರಿದರೂ ಅವಳು ಮುಡಿದಿದ್ದ ಹೂವಿನ ಸುಗಂಧ ಮತ್ತೆ ರಾಜ ಗೋಪಾಲನ ಹತ್ತಿರಕ್ಕೋಡಿತು. ರಾಜಗೋಪಾಲ ತನ್ನಿಂದ ದೂರ ಸರಿದು ಹೋದ ಅರುಂಧತಿಯನ್ನೇ ನೋಡಿದ.

ಅರುಂಧತಿ ಪಂಕಜಮ್ಮನ ಬಳಿ ನಿಂತು ಊಟ ತಂದಿರುವುದಾಗಿ ಹೇಳಿದಳು. ಪಂಕಜಮ್ಮ ವಾರ್ಡಿನ ಬಾಗಿಲಿನಲ್ಲಿ ನಿಂತು ಸರಳೆಗೆ ಹೇಳಿ ಕಳುಹಿಸಿದರು. ಒಳಗಿನಿಂದ ಸರಳೆ ತನಗೆ ಊಟ ಬೇಕಿಲ್ಲವೆಂದು ಉತ್ತರ ಕಳುಹಿಸಿದಳು.

"ಸ್ವಲ್ಪ ತಿನ್ನಮ್ಮ"—ಎಂದರು ಪಂಕಜಮ್ಮ—ವಾರ್ಡಿನ ಬಾಗಿಲಿನಲ್ಲಿ ನಿಂತು.

"ಬೇಡ ಚಿಕ್ಕಮ್ಮ. ಹೇಗಿದ್ದರೂ ಸಾಯುತ್ತೇನೆ. ಊಟ ಬೇಡ."

"ಸ್ವಲ್ಪ ತಗೋ ಸರಳಾ"—ರಾಜಗೋಪಾಲನ ಒತ್ತಾಯ.

ಸರಳೆ ಎದ್ದು ನಿಧಾನವಾಗಿ ಹೊರಗೆ ಬಂದಳು. ಚೈತನ್ಯವೇ ಮೂರ್ತಿವೆತ್ತಂತಿದ್ದ ಸರಳೆ ಅರೆಪ್ರೇತವಾಗಿದ್ದಳು. ಅವಳ ಕಣ್ಣಿನ ಸುತ್ತ ಕಪ್ಪು ಉಂಗುರದ ಬಳಸು ಬಂದಿತ್ತು.

"ಯಾವಾಗ ಬಂದೆ ರಾಜೂ?"—ಸರಳೆ ಕೇಳಿದಳು.

"ಈಗ ಬಂದೆ, ಸ್ವಲ್ಪ ತಿನ್ನು ಸರಳಾ."

ಸರಳೆ ಮಾತನಾಡಲಿಲ್ಲ. ಅರುಂಧತಿ ಟಿಫಿನ್ ಕ್ಯಾರಿಯರ್ ಬಿಚ್ಚಿ ಸ್ಟೀಲಿನ ತಟ್ಟೆಗೆ ಕಲೆಸಿದ ಅನ್ನವನ್ನು ಹಾಕಿ ಚಮಚೆಯನ್ನು ಸರಳೆಯ ಕೈಗೆ ಕೊಟ್ಟಳು. ಸರಳೆ ನಾಲ್ಕಾರು ಚಮಚ ಊಟ ಮಾಡಿ,

"ಅಂದ ಹಾಗೆ ರಾಜೂ, ನಿನಗೆ ಅರುಂಧತಿಯ ಪರಿಚಯವಿಲ್ಲ, ಅಲ್ಲವೇ? ಇವಳು 'ಅವರ' ಅಕ್ಕನ ಮಗಳು. ಪದವೀಧರೆ. ಇವನು ರಾಜೂ—ನಮ್ಮ ಸೋದರತ್ತೆಯ ಮಗ"—ಎಂದಳು.

ನೋವಿನಿಂದಾಗಿ ಸರಳೆಗೆ ತಿನ್ನುವುದಾಗಲಿಲ್ಲ. ಅವಳು ಅರ್ಧ ಊಟದಲ್ಲಿ ಕೈ ತೊಳೆದಳು. ನರ್ಸ್ ಬಂದು ಸರಳೆಯನ್ನು ಒಳಕ್ಕೆ ಕರೆದುಕೊಂಡು ಹೋದಳು.

ಕಾಲುಗಂಟೆಯ ನಂತರ ಪಂಕಜಮ್ಮ ಎಲ್ಲರಿಗೂ "ನಾನು, ವಾಸು ಇರುತ್ತೇವೆ. ನೀವೆಲ್ಲರೂ ಮನೆಗೆ ಹೋಗಿ"—ಎಂದರು.

ರಾಜಗೋಪಾಲ ಅರುಂಧತಿಯ ತಂದೆಯನ್ನು ಕೇಳಿದ "ಬೇಕಾದರೆ ನಿಮ್ಮನ್ನು ಮನೆಯ ಬಳಿ ಇಳಿಸಿ ಹೋಗುತ್ತೇನೆ."

"ಬೇಡ. ನಾವು ಕಾರು ತಂದಿದ್ದೇವೆ"—ಎಂದರಾತ.

"ಒಳ್ಳೆಯದು"—ಎನ್ನುತ್ತಾ ರಾಜಗೋಪಾಲ ತಂದೆ, ಮಗಳೊಡನೆ ಹೆಜ್ಜೆ ಹಾಕಿದ

ಹೊರಗೆ ಕಾರಿನೊಳಗಿನ ದೀಪ ಹಾಕಿ ಅರುಂಧತಿ ಕಾರಿನ ಸ್ಟೀರಿಂಗ್ ವ್ಹೀಲನ್ನು ಕೈಗೆ ತೆಗೆದುಕೊಂಡಳು. ರಾಜಗೋಪಾಲ ಅವಳ ಕಡೆ ನೋಡಿದ. ಅವಳ ಮುಖ ಒಂದು ಪಕ್ಕದಿಂದ ಅವನಿಗೆ ಕಾಣಿಸಿತು. ಅರುಂಧತಿಯ ತಂದೆ "ಗುಡ್ ನೈಟ್"—ಎಂದರು.

ಅರುಂಧತಿಯ ಕಾರು ಕತ್ತಲೆಯಲ್ಲಿ ಕರಗಿತು.

"ಯಾರೋ ಆ ಹುಡುಗಿ?"-ಎಂದು ಮಗನನ್ನು ಕೇಳಿದರು ರುಕ್ಕಮ್ಮ.

"ವಾಸುವಿನ ಅಕ್ಕನ ಮಗಳಂತೆ."

ಏನನ್ನೋ ಹೇಳಲು ಹೊರಟ ರುಕ್ಕಮ್ಮ ನಾಲಿಗೆಯ ತುದಿಯಲ್ಲಿದ್ದ ಮಾತನ್ನು ಕಷ್ಟಪಟ್ಟು ನುಂಗಿಕೊಂಡರು.

ವಾಸುವಿನೊಡನೆ ಸರಳೆಯ ವೈದ್ಯರೂ ಹನ್ನೆರಡು ಗಂಟೆಯ ವೇಳೆಗೆ ವಾರ್ಡಿನ ಬಳಿಗೆ ಬಂದಾಗ ಸರಳೆಯ ಚೀರಾಟ ವಾರ್ಡಿನ ತುಂಬಾ ಪ್ರತಿ

ಧ್ವನಿಸುತ್ತಿತ್ತು.

ವಾಸು ಮತ್ತೆ ಕಿವಿಗಳನ್ನು ಮುಚ್ಚಿಕೊಂಡು ಡಾಕ್ಟರ ಕಡೆ ತಿರುಗಿ "ಡಾಕ್ಟರ್, ಅವಳಿಗೆ ನೋವಿನ ಅರಿವಾಗದ ಹಾಗೆ ಏನಾದರೂ ಮಾಡಿ. ಅವಳು ನೋವು ಸಹಿಸಲಾರಳು"—ಎಂದ.

ಹೊಸದಾಗಿ ತಂದೆಯಾಗಲಿರುವವನ ಆತಂಕ ನೋಡಿ ಆಕೆ ಉತ್ತರ ಕೊಡದೆ ನಕ್ಕರು.

"ಡಾಕ್ಟರ್, ಏನಾದರೂ ಮಾಡಿ"—ವಾಸು ಅಂಗಲಾಚಿದ.

"ನೀವು ಮನೆಗೆ ಹೋಗಿ ನಿದ್ರಿಸಬಾರದೇಕೆ?"—ಆಕೆ ಆತನಿಗೆ ಸಲಹೆ ಕೊಟ್ಟರು.

ಮನೆ! ನಿದ್ದೆ!!

ಎಂತಹ ಕಟುಕಿಯಿರಬೇಕು ಈಕೆ-ಎಂದುಕೊಂಡ ವಾಸು. ನೋವು, ಸಾವು, ದುಃಖ ಕಂಡು ಕಂಡು ಬಹುಶಃ ಈಕೆ ಹೃದಯಹೀನೆಯಾಗಿರ ಬಹುದು ಡಾಕ್ಟರಿಗೆ ಮನುಷ್ಯತ್ವವೇ ಇರುವುದಿಲ್ಲವೇನೋ?

"ಸಾಧ್ಯವಿಲ್ಲ ಡಾಕ್ಟರ್ ನನ್ನಿಂದ ಸಾಧ್ಯವಿಲ್ಲ."

"ಬೇಕಾದರೆ ನಿದ್ದೆಯ ಮಾತ್ರೆ ಕೊಡುತ್ತೇನೆ."

"ನನ್ನಿಂದಾಗದು ಡಾಕ್ಟರ್. ಖಂಡಿತ ಸಾಧ್ಯವಿಲ್ಲ"

ವಾಸು ಸೂಕ್ಷ್ಮವಾಗಿ ನಡುಗುತ್ತಿದ್ದುದನ್ನು ಆಕೆ ಗಮನಿಸಿದರು.

"ಏನೂ ಆಗೋಲ್ಲ ಭಯ ಬೇಡ. ಆಕೆಗೆ ಸರಿಯಾಗಿ ಹೆರಿಗೆ ಆಗುತ್ತದೆ. ಮಗು ಕೊಂಚ ಚೆನ್ನಾಗಿ ಬೆಳೆದಿದೆ ಆದರೆ ಭಯ ಬೇಡ"—ಎಂದವರೇ ಅವರು ವಾರ್ಡಿನೊಳಗೆ ಹೋದರು.

ಸರಳೆಯ ಚೀತ್ಕಾರ ಕೇಳಲಾರದೇ ವಾಸು ಹೊರಗೋಡಿದ. ಆಸ್ಪತ್ರೆಯ ಕಾಂಪೌಂಡಿನಲ್ಲಿ ಅವನು ಹುಚ್ಚನಂತೆ ಅಲೆದಾಡಿದ.

ಮುಂಜಾನೆಯ ನಸುಬೆಳಕು ಪೂರ್ವದಿಕ್ಕಿನಲ್ಲಿ ಕಾಣಿಸಿಕೊಂಡಾಗ ವಾಸು ಕಳ್ಳನಂತೆ ಮತ್ತೆ ಒಳಗೆ ಬಂದ.

ಬಾಗಿಲಿನಲ್ಲಿಯೇ ಮಗುವೊಂದು ಚೀರಿ ಚೀರಿ ಅಳುತ್ತಿದ್ದ ಸದ್ದು ಕೇಳಿಸಿತು. ಅವನು ಪ್ರಶ್ನಾರ್ಥಕವಾಗಿ ಪಂಕಜಮ್ಮನ ಮುಖ ನೋಡಿದ. ಆಕೆಯ ಮುಖದ ಮೇಲೆ ನಗು ಕುಣಿಯುತ್ತಿತ್ತು.

"ವಾಸೂ, ಇದೇ ತಾನೇ ಹೆರಿಗೆಯಾಯಿತು"—ಎಂದರು ಪಂಕಜಮ್ಮ—ಹಿಗ್ಗಿನಿಂದ.

"ಆದರೆ ಮಗೂನ ಯಾಕೆ ಅಷ್ಟು ಅಳಿಸುತ್ತಾರೆ?"—ಎಂದು ವಾಸು ಮುಜುಗರ ಪಟ್ಟುಕೊಂಡ.

ಪಂಕಜಮ್ಮ ಅದಕ್ಕೆ ಏನು ಉತ್ತರ ಹೇಳಿಯಾರು? ಅವರು ಮುಗುಳ್ನಕ್ಕು ಸುಮ್ಮನಾದರು.

ವೈದ್ಯರು ಹೊರಗೆ ಬಂದು ವಾಸುವಿನ ಕಡೆ ತಿರುಗಿ "ಕಂಗ್ರಾಚುಲೇಷನ್ಸ್, ನಿಮ್ಮ ಮಗ ಒಂಭತ್ತೂವರೆ ಪೌಂಡಿದ್ದಾನೆ. ಇನ್ನು ಒಂದು ಗಂಟೆಯ ನಂತರ ತಾಯಿ, ಮಗೂನ ವಾರ್ಡಿಗೆ ಕಳಿಸುತ್ತಾರೆ. ಆಗ ನೀವು ಅವರನ್ನು ನೋಡಬಹುದು"—ಎಂದು ಹೇಳಿ ಹೊರಟುಹೋದರು.

ಪಂಕಜಮ್ಮ ಸೆರಗಿನಿಂದ ಕಣ್ಣೊರೆಸಿಕೊಂಡರು. ವಾಸು ಕುಣಿತದ ನಡಿಗೆಯಲ್ಲಿ ಮನೆಗೆ ಹೊರಟ. ಆಸ್ಪತ್ರೆಗೆ ಮತ್ತೆ ಬರುವಾಗ ವಾಸು ತನ್ನೊಡನೆ ಒಂದು ಹಿಂಡು ಬಳಗವನ್ನೇ ಕರೆದು ತಂದಿದ್ದ.

ಸರಳೆಯನ್ನು ಆದೇ ತಾನೆ ತಂದು ವಾರ್ಡಿನಲ್ಲಿ ಮಲಗಿಸಿದ್ದರು. ಸರಳೆಯ ಮಗನನ್ನು ಪಕ್ಕದಲ್ಲಿದ್ದ ಕಬ್ಬಿಣದ ತೊಟ್ಟಿಲಿನಲ್ಲಿ ಮಲಗಿಸಿದ್ದರು.

ಸರಳಾ ತನ್ನ ಹಾಸಿಗೆಯ ಸುತ್ತಲೂ ನಿಂತಿದ್ದ ಬಳಗವನ್ನೂ, ವಾಸುವನ್ನೂ ನೋಡಿ

"ಬಂದವಳು ವಸಂತಿಯಲ್ಲ. ಶ್ರೀಕಾಂತ"—ಎಂದಳು.

ವಾಸು ಅತ್ಯಂತ ತೃಪ್ತಿಯಿಂದ ಸರಳೆಯ ಮುಖ ನೋಡಿ ನಕ್ಕ.

"ರಾಜೂ, ನನ್ನ ಮಗಳನ್ನು ನೀನು ಮದುವೆಯಾಗಲಾರೆ. ಶ್ರೀಕಾಂತ ನಿನಗೆ ನಿರಾಶೆ ಮಾಡಿಬಿಟ್ಟ"—ಎಂದಳು ಸರಳೆ.

ಪಂಕಜಮ್ಮ ನಸುನಕ್ಕು "ಚಿಂತೆಯಿಲ್ಲ. ನಿನ್ನ ಮಗನಿಗೆ ಅವನ ಮಗಳನ್ನು ತಂದುಕೊಂಡು ಮದುವೆ ಮಾಡಿಕೊಂಡರಾಯಿತು"—ಎಂದರು.

"ನಮಗೆಲ್ಲಿ ಸಾರ್ ಸ್ವೀಟ್ಸ್?" ಎನ್ನುತ್ತಾ, ಚೆಲುವೆಯಾದ ನರ್ಸೊಬ್ಬಳು ವಾಸುವಿನ ಹತ್ತಿರ ನಿಂತು ನಗೆಯಾಡಿದಳು.

ಕೂಡಲೇ ವಾಸು ತನ್ನ ಕೈಲಿರಿಸಿಕೊಂಡಿದ್ದ ಚೀಲದೊಳಗೆ ಕೈಹಾಕಿ ಒಂದು ಬೊಗಸೆಯ ತುಂಬಾ ಫೇಡಾ ತೆಗೆದು ಅವಳ ಕೈಯ್ಯಲ್ಲಿರಿಸಿದ.

ಮಗ ಬಂದ ಸಂಭ್ರಮದಲ್ಲಿ ಮುದ್ದಾದ ನರ್ಸೊಬ್ಬಳೊಡನೆ ವಾಸು ನಗುನಗುತ್ತಾ ಮಾತನಾಡಿದ ಮಹಾಪರಾಧವನ್ನು ಸರಳೆ ಉದಾರ ಮನಸ್ಸಿನಿಂದ ಮನ್ನಿಸಿದಳು.

ವಾಸು ಅರುಂಧತಿಯೊಡನೆ ಹಾಗೆ ಮಾತನಾಡಿದ್ದರೂ ಸರಳೆ ಅವ

ನನ್ನು ಕ್ಷಮಿಸುವಷ್ಟು ವಿಶಾಲ ಮನೋಭಾವವುಳ್ಳವಳಾಗಿದ್ದಳು.

ಅರುಂಧತಿಯ ನೆನಪಾದ ಕೂಡಲೇ ಸರಳೆ ಅವಳ ಕಡೆ ನೋಡಿದಳು. ಆದರೆ ಅರುಂಧತಿಗೆ ಸರಳೆ, ವಾಸುವಿನ ಮೇಲೀಗ ಮನವಿರಲಿಲ್ಲ. ಅವಳು, ಯಾರದೋ ಕಣ್ಣನೋಟ ತಪ್ಪಿಸುವವಳಂತೆ ಕಿಟಿಕಿಯಿಂದ ಹೊರಗೆನೋಡು ತ್ತಿದ್ದಳು. ಅವಳ ಕಿವಿಗಳು ಕೆಂಪಾಗಿದ್ದವು.

ಅರುಂಧತಿ ಸಹ ಸರಳೆಯ ಕಣ್ಣಿಗೆ ಚೆಲುವಾಗಿ ಕಂಡಳು. ಪಂಕಜವು ತೊಟ್ಟಿಲಿನಿಂದ ಮಗುವನ್ನು ಎತ್ತಿ ಎಲ್ಲರಿಗೂ ತೋರಿಸಿದಳು.

ಕೆಂಪು ಕೋಮಲದೇಹ, ದಪ್ಪತಲೆ, ತಲೆಯಮೇಲೆ ಅಲ್ಲೊಂದು ಇಲ್ಲೊಂದು ಕೂದಲು, ಪುಟ್ಟ ಬಾಯಿ, ಬಿಗಿ ಹಿಡಿದ ಕೈ, ಉದ್ದವಾದ ಕೈಕಾಲುಗಳು, ಸರಳೆಯದೇ ಮೂಗು....

"ಮೂಗೇನೋ ಸರಳೆಯದು. ನಾಲಿಗೆ ಮಾತ್ರ ಅವಳದರ ಹಾಗಿಲ್ಲ ದಿದ್ದರೆ ಸಾಕು"—ಎಂದ ವಾಸು.

ಸರಳೆ ನಸುನಕ್ಕಳು.

ವಾಸು ಮುಂದೆಬಂದು ಮಗುವಿನ ಹೂಗನ್ನುಹಿಡಿದು ಮೃದುವಾಗಿ ಕುಲುಕಿದ. ಮಗು ಸರಳೆಯಂತೆಯೇ ತಪ್ಪದೇ ಮೂರು ಸಲ ಸೀನಿತು.

"ಸರಳಾ, ಮಗು ನಿನ್ನದೇ. ಅದರಲ್ಲಿ ಸಂಶಯವಿಲ್ಲ"—ಎಂದ ವಾಸು. ಸರಳಾಕುಮಾರ ಎಚ್ಚರಗೊಂಡು ಚೀರಲು ಮೊದಲಿಟ್ಟ.

"ಗಂಟಲೂ ನಿನ್ನದೆ, ಸಂಶಯವಿಲ್ಲ"—ಎಂದ ಮತ್ತೆ ವಾಸು.

ಅದಕ್ಕೂ ಸರಳೆಯ ಉತ್ತರ—ನಗು.

ಅರುಂಧತಿಯ ಕಾರಿದ್ದುದರಿಂದ ಮನೆಯಿಂದ ಆಸ್ಪತ್ರೆಗೆ, ಆಸ್ಪತ್ರೆ ಯಿಂದ ಮನೆಗೆ ಓಡಾಡುವವರಿಗೆ ಯಾವ ರೀತಿಯಿಂದಲೂ ಕಷ್ಟವಾಗಲಿಲ್ಲ. ಅರುಂಧತಿಯತಂದೆ ಕಾರನ್ನು ಸರಳೆಯ ಉಪಯೋಗಕ್ಕಿರಲೆಂದು ಸಂಪೂರ್ಣ ತಾವು ಅದನ್ನು ಮಗಳಿಗೊಪ್ಪಿಸಿ, ಆಫೀಸಿಗೆ ನಡೆದುಕೊಂಡು ಹೋಗು ತ್ತಿದ್ದರು.

ತಾಯಿಗೆ ಪಥ್ಯದ ಊಟ, ಮಗುವಿಗೆ ಬೇಕಾದ ಬಟ್ಟೆ ಬರೆ ಎಲ್ಲವನ್ನೂ ಅರುಂಧತಿ ತಂದು ಕೊಡುತ್ತಿದ್ದಳು. ಆಗಾಗ್ಗೆ ವಾಸು ಅವಳೊಡನೆ ಕಾಣಿಸಿ ಕೊಂಡರೂ ಅದೇಕೋ ಸರಳೆಗೆ ಮುನ್ನಿನಂತೆ ಮತ್ಸರ ಉಂಟಾಗುತ್ತಿರಲಿಲ್ಲ.

ಅವಳ ಒಲವು, ಲಕ್ಷ್ಯ, ಶ್ರದ್ಧೆ, ಆಸಕ್ತಿ ಎಲ್ಲವೂ ಈಗ ಎರಡು ಭಾಗ ವಾಗಿ ಹೋಗಿದ್ದಂತೆ ತೋರುತ್ತಿತ್ತು. ವಾಸು ಈಗ ಅವಳಿಗೆ ಬೆಳೆದಮಗುವಿ ನಂತೆ ತೋರುತ್ತಿದ್ದ. ಅವನನ್ನು ನೋಡಿಕೊಳ್ಳುವುದರ ಅಗತ್ಯ ಈಗ

ಸರಳೆಗೆ ಕಂಡು ಬರಲಿಲ್ಲ. ಆದರೆ ಪಾಪ ಶ್ರೀಕಾಂತ? ಒಲವಿನೊಡನೆ ಕನಿಕರವೂ ಸೇರಿಕೊಂಡು ಸರಳೆ ತನ್ನದೆಲ್ಲವನ್ನೂ ಶ್ರೀಕಾಂತನಿಗೆ ಮೀಸಲಾಗಿರಿಸಿದಳು.

ಮೊದಲು ಸರಳೆ ರಾಜಗೋಪಾಲನಲ್ಲಿ ಅಭಿಮಾನವಿಟ್ಟಿದ್ದಳು. ಆಗಲೂ ವಾಸು ಒಂದು ಬಗೆಯ ಅಸೂಯೆಯಿಂದ ಸಂಕಟಪಡುತ್ತಿದ್ದ. ಈಗಲೂ ಅವನು ಸರಳೆಯಿಂದ ಸ್ವಲ್ಪಮಟ್ಟಿಗೆ ವಂಚಿತನಾಗಿದ್ದ.

ಸರಳೆಯನ್ನು ಎಲ್ಲರಿಂದಲೂ ದೂರ ಸರಿಸಿ ಶ್ರೀಕಾಂತ ಅವಳನ್ನು ತನ್ನ ಹತ್ತಿರಕ್ಕೆಳೆದುಕೊಂಡಿದ್ದ.

ಈಗ ಸರಳೆ ಕ್ಷಣ ಕ್ಷಣಕ್ಕೂ ಮೊದಲಿನಂತೆ ವಾಸುವಿನ ಪ್ರತಿಕ್ರಿಯೆ, ಚಲನ ವಲನಗಳನ್ನು ಕಾಯುತ್ತಾ ಕುಳಿತುಕೊಳ್ಳುತ್ತಿರಲಿಲ್ಲ.

ಶ್ರೀ ಕಾಂತ ಮಲಗಿದನೇ? ಶ್ರೀಕಾಂತ ಹಾಲು ಕುಡಿದನೇ? ತೊಟ್ಟಿಲಿಗೆ ಸೊಳ್ಳೆಪರದೆ ಇಳಿಬಿಟ್ಟಿದಾರೋ, ಇಲ್ಲವೋ? ಹಾಲಿನ ಸೀಸೆ ಚೊಕ್ಕಟವಾಗಿ ತೊಳೆದಿಲ್ಲ. ಶ್ರೀಕಾಂತ ಇವತ್ತು ನಿದ್ರಿಸಿದ್ದು ಸಾಲದು, ಕೊಂಚ ರಚ್ಚೆ ಮಾಡಿದ, ಹಾಲು ಸರಿಯಾಗಿ ಕುಡಿಯಲಿಲ್ಲ....

ಒಂದೇ, ಎರಡೇ ಅವಳ ಯೋಚನೆಗಳು? ಈ ಬಗೆಯವು ನೂರಾರು.

ಶ್ರೀಕಾಂತ ಅವಳ ಪಾಲಿಗೆ ಬೇರೊಂದು ವಿಶ್ವವೇ ಆಗಿದ್ದ.

ಅವಳ ಏಕಾಗ್ರತೆ ನೋಡಿ ವಾಸು ರೇಗಿಸುತ್ತಿದ್ದ

"ಸರಳಾ, ಶ್ರೀಕಾಂತನಿಗೆ ಇವತ್ತು ಹಾಲು ಹಾಕಬೇಡ."

"ಯಾಕೆ?"

"ಅವನು ಹುಟ್ಟಿದ ಮೇಲೆ ಚೆನ್ನಾಗಿ ಗೋಳಾಡಿಸಿ ಬಿಡುತ್ತೇನೆ ಎಂದು ಹೇಳುತ್ತಿದ್ದೆಯಲ್ಲಾ ಅದನ್ನು ಜ್ಞಾಪಿಸಿದೆ."

ಸರಳಾ ನಸುನಕ್ಕಳು.

ಈಗ ಅವಳು ಮೊದಲಿನಂತೆ ಮಾತಿಗೆ ಮಾತು ಜೋಡಿಸುತ್ತಿರಲಿಲ್ಲ. ಬದಲು ಅವಳು ನಗುತ್ತಿದ್ದಳು. ಇದುವರೆವಿಗೂ ಹುಡುಗಿಯಾಗಿದ್ದವಳು ಒಮ್ಮೆಗೇ ಹೆಂಗಸಾಗಿ ಬಿಟ್ಟಿದ್ದಳು. ಸರಳೆ ನೂರಕ್ಕೆ ನೂರು ಭಾಗ ಶ್ರೀಕಾಂತನ ತಾಯಿಯಾಗಿದ್ದಳು.

ಆಕೆ ಹಠಾತ್ತಾಗಿ ಇಷ್ಟೊಂದು ಬದಲಾವಣೆಯಾದದ್ದು ವಾಸುವಿಗೆ ಸೋಜಿಗದ ಸಂಗತಿಯಾಗಿತ್ತು. ಅವನಿಗೆ ತನ್ನ ಹೆಂಡತಿ ಸರಳೆಯ ಪರಿಚಯವಿತ್ತೇ ಹೊರತಾಗಿ ಶ್ರೀಕಾಂತನ ತಾಯಿಯ ಪರಿಚಯವಿರಲಿಲ್ಲ

ಅವನು ಕ್ರಮೇಣ ಅವಳ ಪರಿಚಯ, ಅವಳ ಮಗನ ಪರಿಚಯ ಮಾಡಿಕೊಂಡು ಇಬ್ಬರಿಗೂ ಹೊಂದಿಕೊಂಡು ಸಂಸಾರ ಸಾಗಿಸಬೇಕಾಗಿತ್ತು.

ಹತ್ತು ದಿನಗಳ ನಂತರ ಸರಳೆ ಮಗನೊಡನೆ ಮನೆಗೆ ಹಿಂದಿರುಗಿ ಬಂದಳು.

ತಾಯಿ, ಮಗುವಿಗೆ ನೀರು ಹಾಕಿ ಪಂಕಜಮ್ಮ, ರಂಗಮ್ಮ, ಸರೋಜಮ್ಮ ಎಲ್ಲರೂ ಒಳಗೆ ನಾಮಕರಣದ ಸಿದ್ಧತೆಯಲ್ಲಿದ್ದರು.

ರಾಜಗೋಪಾಲ ಒಳಗೆ ಬಂದ.

ರೂಮಿನತುಂಬಾ ಹಾಲುಮಡ್ಡಿ, ಸಾಂಬ್ರಾಣಿಯ ವಾಸನೆ ತುಂಬಿತ್ತು ಸರಳೆ ತಲೆಗೂದಲನ್ನು ಹರವಿ ಒಣಗಿಸಿಕೊಳ್ಳುತ್ತಿದ್ದಳು. ಕೆನ್ನೆಯ ತುಂಬಾ ಅರಿಶಿನ, ಹಣೆಯ ಮೇಲೆ ಅಗಲವಾದ ಕುಂಕುಮ, ತಾಂಬೂಲದಿಂದ ಕೆಂಪಾಗ ತುಟಿ, ಕಾಡಿಗೆಗಣ್ಣಿನ ಸರಳೆ ರಾಜಗೋಪಾಲನಿಗೂ ಹೊಸಬಳಂತೆಯೇ ಕಂಡಳು.

"ಬಾ ರಾಜು"—ಎಂದಳು ಸರಳೆ.

"ಏನಂತಾನೆ ಮಗ?"– ಅವನು ಕೇಳಿದ.

"ನಿನ್ನ ಮಗಳಿಗಾಗಿ ಕಾದು ಕುಳಿತಿದ್ದಾನೆ."

"ನಿಜವಾಗಿ?"

"ಹೌದು."

"ಈ ವಿಷಯ ಯಾರಿಗೂ ತಿಳಿಸುವುದಕ್ಕೆ ಮುಂಚೆ ನಿನಗೆ ತಿಳಿಸಬೇಕೆನ್ನಿಸಿತು. ಮೊದಲು ನಿನಗೆ ಹೇಳಿ ಅನಂತರ ಎಲ್ಲರಿಗೂ ಹೇಳುತ್ತೇನೆ. ನಾನು ಮದುವೆಯಾಗಬೇಕೆಂದಿದ್ದೇನೆ."

ಮಂದಹಾಸ ಸರಳೆಯ ಮುಖವನ್ನು ಬೆಳಗಿಸಿತು.

"ಯಾರು ಆ ಪುಣ್ಯಶಾಲಿನಿ?"—ಸರಳೆಗೆ ಸಂಶಯ ಬಂದರೂ ಕುತೂಹಲದಿಂದ ಕೇಳಿದಳು.

"ಅವಳನ್ನು ತೋರಿಸುತ್ತೇನೆ" – ಎನ್ನುತ್ತಾ ರಾಜಗೋಪಾಲ ಹೊರಗೋಡಿದ. ನಾಲ್ಕೈದು ನಿಮಿಷಗಳಲ್ಲಿ ನಾಚಿಕೆಯಿಂದ ಕೆಂಪೇರಿದ ಹುಡುಗಿಯೊಬ್ಬಳ ಕೈ ಹಿಡಿದೆಳೆದುಕೊಂಡು ಬಂದು ಸರಳೆಯ ಮುಂದೆ ನಿಲ್ಲಿಸಿ

"ನೀನೊಬ್ಬಳು ಅತ್ತಿಗೆ ಬೇಕೆನ್ನುತ್ತಿದ್ದೆಯಲ್ಲಾ, ಇದೋ ಇವಳೇ ನಿನ್ನ ಅತ್ತಿಗೆಯಾಗುವಾಕೆ. ಒಪ್ಪಿಗೆಯೇ?"—ಎಂದ ರಾಜಗೋಪಾಲ.

"ಅರುಂಧತಿ!"

"ಹೂಂ, ಅರುಂಧತಿ. ನಮ್ಮ ಮಗಳೇ ನಿಮ್ಮ ಸೊಸೆ. ನೆನಪಿರಲಿ"—ಎನ್ನುತ್ತಾ ರಾಜಗೋಪಾಲ ಅವಳ ನೀಳವಾದ ಜಡೆಯನ್ನು ತನ್ನ ಕೊರಳಿಗೆ ಸುತ್ತಿಕೊಳ್ಳುತ್ತಾ ಹೇಳಿದ.

ಅರುಂಧತಿ ಬಾಗಿಸಿದ ತಲೆ ಮೇಲೆತ್ತಲಿಲ್ಲ ಅವಳು ತನ್ನ ಜಡೆಯನ್ನು ಅವನಿಂದ ಬಿಡಿಸಿಕೊಳ್ಳುವ ಪ್ರಯತ್ನವಲ್ಲಿದ್ದಳು.

"ಯಾಕೆ ಬಿಡಿಸಿಕೊಳ್ಳುತ್ತೀರಾ? ಎಂದಿದ್ದರೂ ನನಗೆ ಗಂಟು ಬಿದ್ದಿದ್ದೇ ಈ ಜಡೆ. ಜೀವನ ಬೇಸರವಾದರೆ ಇದರಿಂದಲೇ ಉರುಲು ಹಾಕಿಕೊಂಡರೂ ಆದೀತು"

ಅರುಂಧತಿ ಥಟ್ಟನೆ ತಲೆ ಎತ್ತಿ ಅವನಕಡೆ ನೋಡಿದಳು. ಅವಳ ಕಣ್ಣುಗಳಲ್ಲಿದ್ದ ಆಕ್ಷೇಪಣೆ ನೋಡಿ ರಾಜಗೋಪಾಲ ಮೃದುವಾಗಿ ನಕ್ಕ. ಆದರೆ ಜಡೆಯನ್ನು ತನ್ನ ಕೊರಳಿಗೆ ಸುತ್ತಿಕೊಳ್ಳುವುದನ್ನು ನಿಲ್ಲಿಸಲಿಲ್ಲ.

ಇದರಿಂದಾಗಿ ಅರುಂಧತಿ ಅನಿವಾರ್ಯವಾಗಿ ರಾಜಗೋಪಾಲನಬಳಿಗೆ ಕೆಂಪೇರಿದ ಮುಖದೊಡನೆ ಕೊಸರಾಡುತ್ತಾ ಸರಿದು ಬರುತ್ತಿದ್ದಳು.

ಸರಳೆಗೆ ಅವಳ ಸಂಕಟ ಅರ್ಥವಾಯಿತು. ಅವಳು "ರಾಜೂ, ಇಲ್ಲಿ ನೀವಿಬ್ಬರೇ ಇಲ್ಲ. ನಾನೂ ಇದ್ದೇನೆ. ಎಚ್ಚರಿಕೆ!"—ಎಂದಳು.

"ನೀನಿದ್ದರೇನಂತೆ. ನಿನ್ನೆದುರಿಗೆ ನನಗೆಂತಹ ನಾಚಿಕೆ"—ಎಂದ ರಾಜಗೋಪಾಲ

"ಥೂ ನೀನು ಕೆಟ್ಟೆ. ಆ ಹಾಳು ಆಂಗ್ಲೋ ಇಂಡಿಯನ್ ಏರ್ ಹೋಸ್ಟೆಸ್‌ಗಳೊಡನೆ ಸೇರಿ...."

"ಪ್ಲೀಸ್ ಸರಳಾ, ಆಮೇಲೆ ಈಕೆ ನನ್ನ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಬಿಡುತ್ತಾಳೆ. ಈಗಲೇ ನನ್ನ ಗುಣಗಾನ ಮಾಡಬೇಡ. ನಾನು ಈಕೆಯ ಕತ್ತಿಗೆ ತಾಳಿ ಬಿಗಿದು, ನನ್ನ ಕತ್ತಿಗೆ ಜಡೆ ಬಿಗಿದುಕೊಳ್ಳುತ್ತೇನೆ. ಆಮೇಲೆ ನನ್ನ ಪುರಾಣ ಹೇಳುವಿಯಂತೆ. ಬಹಳ ಕಷ್ಟಪಟ್ಟು ಈ ಹುಡುಗೀನ ಮದುವೆಗೆ ಒಪ್ಪಿಸಿದೀನಿ"—ಎಂದ.

"ನೀನು ಹಾಳಾದೆ"—ಎಂದು ಸರಳಾ ಮುದ್ದಿನಿಂದ ಅವನನ್ನು ಬೈದಳು.

"ಸರಳಾ, ಒಂದು ಗೇಗೆ ಹೊರಗೆ ಹೋಗ್ತೀಯಾ? ಅಥವಾ ನೀನೇನೂ ಮೈಂಡ್ ಮಾಡುವುದಿಲ್ಲವೆಂದರೆ ನಾವೂ ಮೈಂಡ್ ಮಾಡುವುದಿಲ್ಲ. ನನಗೀಗ ಒಂದು ಮುತ್ತು ಅತ್ಯವಶ್ಯಕವಾಗಿ ಬೇಕಾಗಿದೆ."

"ನೀನು ಹಾಳಾದೆ"—ಎಂದು ನಕ್ಕಳು ಸರಳೆ.

ಅಷ್ಟರಲ್ಲಿ ಶ್ರೀಕಾಂತ ಎದ್ದು ಅಳತೊಡಗಿದ. ರಾಜಗೋಪಾಲನ ಗಮನ ಕೊಂಚ ಮಗುವಿನ ಕಡೆ ಸರಿಯುತ್ತಲೇ ಅರುಂಧತಿ ತನ್ನ ಜಡೆಯನ್ನು ಬಿಡಿಸಿಕೊಂಡು ಹೊರಗೋಡಿದಳು.

"ಸರಳಾ, ನನ್ನ ಅಳಿಯನ್ನ ಚೆನ್ನಾಗಿ ನೋಡಿಕೋಮ್ಮ. ಅವನನ್ನು ಅಳಿಸಬೇಡ"—ಎಂದ ರಾಜಗೋಪಾಲ.

ಸರಳೆ ನಸುನಕ್ಕಳು.

"ನೀನೊಂದು ಕತೆ ಬರೀತಿದಿ ಅಲ್ಲಾ?" ಅವನು ತುಂಬು ನಗೆಯೊಡನೆ ಕೇಳಿದ.

"ಹೂಂ."

"ಬರೆದಾಯಿತೇ?"

"ಹೂಂ."

"ಕತೆ ಚೆನ್ನಾಗಿದೆಯೋ?"

"ಓಹೋ ಅದು ನನ್ನ ಮಹಾಕೃತಿ. ಅದರಲ್ಲಿ ಯಾವ ಸಂಶಯವೂ ಇಲ್ಲ"—ಎಂದಳು ಸರಳೆ.

ಆ ಎರಡು ನಿಮಿಷಗಳ ಕಾಲ ಸರಳೆಗೆ ಶ್ರೀಕಾಂತನ ಅಳು ಕೇಳಿಸಲಿಲ್ಲ. ಅವಳು ರಾಜಗೋಪಾಲನ ಹರ್ಷವನ್ನು ಹಂಚಿಕೊಳ್ಳುವುದರಲ್ಲಿ ಮಗ್ನಳಾಗಿದ್ದಳು.

ಆದರೆ ಶ್ರೀಕಾಂತ ತಾಯಿಯ ಗಮನವನ್ನು ಸೆಳೆಯುವವನಂತೆ ಗಟ್ಟಿಯಾಗಿ ಎರಡುಸಲ ಸೀನಿದ.

ಎಲ್ಲ ತಾಯಿಯರಂತೆ ಸರಳೆ ತಟ್ಟನೆ "ಶತಾಯುಸ್, ಪೂರ್ಣಾಯುಸ್"—ಎಂದಳು.



# ತ್ರಿವೇಣಿಯವರ ಕೃತಿಗಳು

## ಕಾದಂಬರಿಗಳು

ಹೂವು ಹಣ್ಣು
ಅಪಸ್ವರ
ಸೋತು ಗೆದ್ದವಳು
ಬೆಕ್ಕಿನ ಕಣ್ಣು
ದೂರದ ಬೆಟ್ಟ
ಮೊದಲ ಹೆಜ್ಜೆ
ಕೀಲುಗೊಂಬೆ
ಅಪಜಯ
ಕಂಕಣ
ಮುಚ್ಚಿದ ಬಾಗಿಲು

ಬಾನು ಬೆಳಗಿತು
ಮುಕ್ತಿ
ಹೃದಯಗೀತ
ಅವಳ ಮನೆ
ತಾವರೆಯ ಕೊಳ
ವಸಂತಗಾನ
ಕಾಶೀಯಾತ್ರೆ
ಶರಪಂಜರ
ಹಣ್ಣೆಲೆ ಚಿಗುರಿದಾಗ
ಅವಳ ಮಗಳು

ಬೆಳ್ಳಿಮೋಡ

## ಸಣ್ಣಕತೆಗಳು

ಹೆಂಡತಿಯ ಹೆಸರು
ಎರಡು ಮನಸ್ಸು
ಸಮಸ್ಯೆಯ ಮಗು

ಬೆಲೆ : ರೂ 15-00